ಭಾನುವಾರ, ಆಗಸ್ಟ್ 24, 2025 | ಬೆಂಗಳೂರು | ₹ 7.00 | ಸಂಪುಟ 78 | ಸಂಚಿಕೆ 235 | ಪುಟ 16

• www.prajavani.net prajavani.net prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ



ಐಐಟಿ ವಿಶ್ಲೇಷಣೆ ಯಶಸ್ವಿ

ಬಾಂಬೆ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ (ಐಐಟಿ) ವಿದ್ಯಾರ್ಥಿಗಳು ಚಂದ್ರಯಾನ–2 ಕಾರ್ಯಕ್ರಮದಿಂದ ಲಭ್ಯವಾದ ದತ್ತಾಂಶ ಬಳಸಿ, ಚಂದ್ರನ ಮೇಲ್ಮೈ ರಚನೆಯ ರಾಸಾಯನಿಕ ವಿಶ್ಲೇಷಣೆ ರಚಿಸುವಲ್ಲಿ ಯಶಸ್ವಿಯಾಗಿದ್ದಾರೆ



ವಾಂಖೆಡೆಯಲ್ಲಿ ಸನ್ನಿ ಪ್ರತಿಮೆ

ಮುಂಬೈನ ವಾಂಖೆಡೆ ಕ್ರೀಡಾಂಗಣದಲ್ಲಿ ಶನಿವಾರ ಉದ್ಘಾಟಿಸಲಾದ 'ಎಂ.ಸಿ.ಎ – ಶರದ್ ಪವಾರ್ ಕ್ರಿಕೆಟ್ ವಸ್ತುಸಂಗ್ರಹಾಲಯ'ದಲ್ಲಿ ಸುನಿಲ್ ಗಾವಸ್ಕರ್ ಅವರ ಪ್ರತಿಮೆ ಅನಾವರಣಗೊಂಡಿತು

'ಸಂಖ್ಯೆ ಇಲ್ಲಿ ಅಪ್ರಸ್ತುತ' 7

ಅಲೆಮಾರಿ ಮುಖಂಡರು–ಸಿ.ಎಂ ಚರ್ಚೆ ವಿಫಲ 4

ಕರ್ನಾಟಕ– ಗೋವಾ ನಡುವೆ ದರದಲ್ಲಿ ಭಾರಿ ವ್ಯತ್ಯಾಸ

ಮದ್ಯ ಅಕ್ರಮ ಸಾಗಣೆ ನಿರಂತರ

ಒಳನೋಟ

• ಸಂತೋಷ ಈ. ಚಿನಗುಡಿ

ಬೆಳಗಾವಿ: ಮಧ್ಯರಾತ್ರಿ 2 ಗಂಟೆಗೆ ಗ್ಯಾಂಗ್‌ವಾಡಿ ಪ್ರದೇಶಕ್ಕೆ ಹೊರಟೆವು. ಕಿರಿದಾದ ರಸ್ತೆ. ಮನೆ ಮುಂದೆ ಕುಳಿತಿದ್ದ ವ್ಯಕ್ತಿಯೊಬ್ಬ ಹುಬ್ಬು ಹಾರಿಸಿ 'ಮಾಲ್' ಬೇಕಾ ಎಂಬಂತೆ ಕೇಳಿದ. ಗೊತ್ತಿದ್ದವರಿಗೆ ಮಾತ್ರ ಅರ್ಥವಾಗುವ ಸನ್ನೆ ಅದು. 'ಯಾವುದಿದೆ' ಎಂದು ಕೇಳಿದೆ. ಯಾವುದು ಬೇಕಾದರೂ ಸಿಗುತ್ತದೆ. ಐನೂರು ರೂಪಾಯಿ ಎಕ್ಸ್ಟ್ರಾ ಅಂದ...

ಅಲ್ಲಿಂದ ತುಸು ಮುಂದಕ್ಕೆ ಸಾಗಿದಾಗ ಮತ್ತೆ ನಾಲ್ವರು ಬೈಕಿಗೆ ಮುತ್ತಿಕೊಂಡರು. 'ಕುಟ್ಲ ಪಾಹಿಜೆ (ಯಾವುದು ಬೇಕು)' ಎಂದು ಮರಾಠಿಯಲ್ಲಿ ಕೇಳಿದರು. 'ಕುಟ್ಲಕುಟ್ಲ ಹೈ (ಯಾವುದ್ಯಾವುದು ಇದೆ)' ಎಂದು ಕೇಳಿದೆ. ಅಷ್ಟರಲ್ಲಿ ಬಾಲಕನೊಬ್ಬ ವಿವಿಧ ಬ್ರ್ಯಾಂಡಿನ ನಾಲ್ಕು ಬಾಟಲಿ ತಂದ. ಅಂದಾಜು 14 ವರ್ಷ ವಯಸ್ಸಿನವ, ಬ್ರ್ಯಾಂಡಿನ ಹೆಸರು ಹಾಗೂ ದರ ಹೇಳಿದ. ದುಬಾರಿ ಎಂದು ನೆಪಹೇಳಿ ಮುಂದಕ್ಕೆ ಸಾಗಿದೆವು...

ತುಸು ಮುಂದೆ ಸಾಗಿ ಎಡಕ್ಕೆ ತಿರುಗಿದಾಗ ಐವರು ಯುವಕರಿದ್ದ ಕಾರು ನಿಂತಿತ್ತು. ವ್ಯಕ್ತಿಯೊಬ್ಬ ಮದ್ಯದ ಬಾಕ್ಸುಗಳನ್ನು ಕಾರಿಗೆ ತುಂಬುತ್ತಿದ್ದ.ನಮ್ಮ ಬೈಕು ಹತ್ತಿರ ಹೋಗುತ್ತಿದ್ದಂತೆಯೇ ಕಾರಿನ ಬಲ್ಬು ಆರಿಸಿದರು.

6



ಬೆಳಗಾವಿ ತಾಲ್ಲೂಕಿನ ಕಾಕತಿ ಬಳಿ ಲಾರಿಯೊಂದರಲ್ಲಿ ಪತ್ತೆಯಾದ, ಅಕ್ರಮವಾಗಿ ಸಾಗಣೆಯಾಗುತ್ತಿದ್ದ ಮದ್ಯ (ಸಂಗ್ರಹ ಚಿತ್ರ)

'ಪಂಚ ಗ್ಯಾರಂಟಿ' ಯೋಜನೆಗಳಿಂದ ಮದ್ಯೋದ್ಯಮದ ಮೇಲೆ ಹೊರೆ ಹೆಚ್ಚಾಗಿದೆ. ಇದಕ್ಕೆ ಹಣ ಹೊಂದಿಸಲು ಅಬಕಾರಿ ಉದ್ಯಮದ ಮೇಲೆ ಬರೆ ಎಳೆಯಲಾಗಿದೆ. ಇದು ಅಡ್ಡದಾರಿಗೆ ಆಸ್ಪದ ನೀಡುತ್ತದೆ

ಗುರುಸ್ವಾಮಿ, ಅಧ್ಯಕ್ಷ, ಫೆಡರೇಷನ್ ಆಫ್ ವೈನ್ ಮರ್ಚಂಟ್ಸ್ ಅಸೋಸಿಯೇಷನ್

ಶಿಕ್ಷೆ ಪ್ರಮಾಣ ಏನು?

ಮದ್ಯ ಅಕ್ರಮ ಸಾಗಣೆ ಅಪರಾಧ ಸಾಬೀತಾದರೆ ಗರಿಷ್ಠ 5 ವರ್ಷಗಳವರೆಗೆ ಜೈಲು ಶಿಕ್ಷೆ ಇದೆ. ಬಹಳಷ್ಟು ಪ್ರಕರಣ ಅಕ್ರಮ ಮದ್ಯ ವಶಪಡಿಸಿಕೊಂಡು ದಂಡ ಹಾಕಲು ಮಾತ್ರ ಸೀಮಿತವಾಗಿದೆ. 'ಸಿಆರ್‌ಪಿಸಿ 41(ಎ)' ಪ್ರಕಾರ, ಐದು ವರ್ಷಗಳವರೆಗೆ ಶಿಕ್ಷೆ ಆಗುವಂಥ ಪ್ರಕರಣಗಳಲ್ಲಿ ಮಾತ್ರ ಆರೋಪಿ ಬಂಧನಕ್ಕೆ ಅವಕಾಶವಿದೆ. ಅದಕ್ಕಿಂತ ಕಡಿಮೆ ಶಿಕ್ಷೆ ಆಗುವಂಥ ಪ್ರಕರಣವಿದ್ದರೆ ಜಾಮೀನು ಸಿಗುವ ಸಾಧ್ಯತೆ ಇದೆ. ಕಾನೂನು ಸಡಿಲವಾದುದು ಕಾರಣ ಎನ್ನುತ್ತಾರೆ ನಿವೃತ್ತ ಅಧಿಕಾರಿಯೊಬ್ಬರು.

ಧರ್ಮಸ್ಥಳ: ದೂರುದಾರ ಸೆರೆ

ಮೃತದೇಹಗಳನ್ನು ಹೂತು ಹಾಕಲಾಗಿದೆ ಎಂದು ಆರೋಪಿಸಲಾದ ಪ್ರಕರಣ

• ಪ್ರವೀಣ್ ಕುಮಾರ್ ಪಿ.ವಿ

ಮಂಗಳೂರು: ಧರ್ಮಸ್ಥಳ ಗ್ರಾಮದಲ್ಲಿ ನಡೆದಿದೆ ಎನ್ನಲಾದ ಅಪರಾಧ ಕೃತ್ಯಗಳಿಗೆ ಸಂಬಂಧಿಸಿದ ಪ್ರಕರಣದ ತನಿಖೆ ನಡೆಸುತ್ತಿರುವ ವಿಶೇಷ ತನಿಖಾ ತಂಡ (ಎಸ್‌ಐಟಿ), ಸಾಕ್ಷಿ ದೂರುದಾರನನ್ನು ಬಂಧಿಸಿದೆ.

ಬೆಳ್ತಂಗಡಿಯ ಜೆಎಂಎಫ್‌ಸಿ ನ್ಯಾಯಾಲಯ ಅವರನ್ನು 12 ದಿನ ಎಸ್‌ಐಟಿ ವಶಕ್ಕೆ ಶನಿವಾರ ಒಪ್ಪಿಸಿದೆ.

'ಹೂತಿದ್ದ ಮೃತದೇಹವನ್ನು ಅಗೆದು ತೆಗೆದಿದ್ದಾಗಿ ಹೇಳಿದ್ದ ಸಾಕ್ಷಿ ದೂರುದಾರ, ತಲೆಬುರುಡೆ ಹಾಜರು ಪಡಿಸಿದ್ದರು. ಈ ಬಗ್ಗೆ ಎಸ್‌ಐಟಿ ಅಧಿಕಾರಿಗಳು ಶುಕ್ರವಾರ ವಿಚಾರಣೆಗೆ ಒಳಪಡಿಸಿದಾಗ, 'ತಂದು ಒಪ್ಪಿಸಿದ್ದ ತಲೆಬುರುಡೆ ನಾನು ಹೂತು ಹಾಕಿದ್ದ ಮೃತದೇಹದ್ದಲ್ಲ' ಎಂದು ಹೇಳಿದ್ದರು. ಸುಳ್ಳು ಹೇಳಿದ್ದನ್ನು ಒಪ್ಪಿಕೊಂಡ ಬಳಿಕ ಎಸ್‌ಐಟಿ ಅಧಿಕಾರಿಗಳು ಅವರನ್ನು ವಶಕ್ಕೆ ಪಡೆದು, ತಡರಾತ್ರಿಯವರೆಗೆ ತೀವ್ರವಾಗಿ ವಿಚಾರಣೆಗೊಳಪಡಿಸಿದರು' ಎಂದು ಮೂಲಗಳು ತಿಳಿಸಿವೆ.

ಶನಿವಾರ ಬೆಳಿಗ್ಗೆ ಅವರನ್ನು ಬಂಧಿಸಿದ ಅಧಿಕಾರಿಗಳು ವೈದ್ಯಕೀಯ ಪರೀಕ್ಷೆಗೆ ಒಳಪಡಿಸಿ, ಬೆಳ್ತಂಗಡಿಯ ಹೆಚ್ಚುವರಿ ಜೆಎಂಎಫ್‌ಸಿ ನ್ಯಾಯಾಧೀಶರಾದ ವಿಜಯೇಂದ್ರ ಟಿ.ಎಚ್. ಅವರ ಎದುರು ಹಾಜರು ಪಡಿಸಿದರು.

4

ಮುಖ್ಯಾಂಶಗಳು

- ತಂದೊಪ್ಪಿಸಿದ ತಲೆಬುರುಡೆ ತಾನು ಹೂತ ಮೃತದೇಹದ್ದಲ್ಲ ಎಂದ ಸಾಕ್ಷಿ ದೂರುದಾರ
- ಸೆ.3ರವರೆಗೆ ಎಸ್‌ಐಟಿ ಕಸ್ಟಡಿಯಲ್ಲಿ ಇರಲಿದ್ದಾನೆ ಸಾಕ್ಷಿ ದೂರುದಾರ



ಸಾಕ್ಷಿ ದೂರುದಾರನನ್ನು ಬೆಳ್ತಂಗಡಿಯ ನ್ಯಾಯಾಲಯಕ್ಕೆ ಶನಿವಾರ ಹಾಜರುಪಡಿಸಿದ ಬಳಿಕ ಎಸ್‌ಐಟಿ ಅಧಿಕಾರಿಗಳು ತಮ್ಮ ಕಚೇರಿಗೆ ಕರೆದೊಯ್ದರು

ಪ್ರಜಾವಾಣಿ ಚಿತ್ರ : ಫಕ್ರುದ್ದೀನ್ ಎಚ್

'ರಕ್ಷಣೆ ಮುಂದುವರಿಕೆ'

'ಸದ್ಯಕ್ಕೆ ನಾವು ಸಾಕ್ಷಿ ದೂರುದಾರ ತಂದೊಪ್ಪಿಸಿರುವ ತಲೆಬುರುಡೆಯ ಬಗ್ಗೆ ಹೆಚ್ಚಿನ ಮಾಹಿತಿ ಕಲೆಹಾಕುವುದಕ್ಕೆ ಸೀಮಿತವಾಗಿ ಬಂಧಿಸಿದ್ದೇವೆ. ಅವರು ಇದುವರೆಗೆ ತೋರಿಸಿದ ಜಾಗಗಳಲ್ಲಿ ನಡೆಸಿದ ಶೋಧಕ್ಕೆ ಸಂಬಂಧಿಸಿದ ತನಿಖೆ ಮುಂದುವರಿಯಲಿದೆ' ಎಂದು ಎಸ್‌ಐಟಿ ಮೂಲಗಳು ತಿಳಿಸಿವೆ.

'ಸಾಕ್ಷಿ ದೂರುದಾರನಿಗೆ ಸಾಕ್ಷಿ ಸಂರಕ್ಷಣಾ ಕಾಯ್ದೆಯಡಿ ನೀಡಲಾಗಿರುವ ರಕ್ಷಣೆ ಈಗಲೂ ಮುಂದುವರಿದಿದೆ. ಹಾಗಾಗಿ ಅವರ ಗುರುತನ್ನು ಈಗಲೂ ಬಹಿರಂಗಪಡಿಸುವಂತಿಲ್ಲ' ಎಂದು ಮೂಲಗಳು ತಿಳಿಸಿವೆ.

ಸತ್ಯ ಹೊರಗೆ ಬರುತ್ತಿದೆ. ಎಲ್ಲವನ್ನೂ ತೊಳೆದಿಟ್ಟಂತಾಗಿದೆ. ಬಹಳ ಸಂತೋಷವಾಯಿತು. ಜನರ ಅಭಿಮಾನ, ಪ್ರೀತಿ ವಿಶ್ವಾಸ ಹೀಗೆಯೇ ಇರಲಿ. ಎಲ್ಲರಿಗೂ ಧನ್ಯವಾದ

ವೀರೇಂದ್ರ ಹೆಗ್ಗಡೆ, ಧರ್ಮಾಧಿಕಾರಿ, ಧರ್ಮಸ್ಥಳ ಕ್ಷೇತ್ರ

ತಿಮರೋಡಿಗೆ ಜಾಮೀನು

ಉಡುಪಿ: ಸೌಜನ್ಯಾ ಪರ ಹೋರಾಟಗಾರ ಮಹೇಶ್ ಶೆಟ್ಟಿ ತಿಮರೋಡಿ ಅವರಿಗೆ ಉಡುಪಿಯ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿ ಅವರ ನ್ಯಾಯಾಲಯ ಶನಿವಾರ ಷರತ್ತುಬದ್ಧ ಜಾಮೀನು ಮಂಜೂರು ಮಾಡಿದೆ.

ತಿಮರೋಡಿ ಪರ ವಕೀಲ ವಿಜಯ್ ವಾಸು ಪೂಜಾರಿ ವಾದ ಮಂಡಿಸಿ, 'ಕಕ್ಷಿದಾರ ಹಿಂದೂ ಪರ ಮುಖಂಡರಾಗಿದ್ದು, ಅನ್ಯಧರ್ಮದ ಬಗ್ಗೆ ಮಾತನಾಡಿಲ್ಲ. ದಾಖಲಿಸಿರುವ ಸೆಕ್ಷನ್‌ಗಳು ಈ ಪ್ರಕರಣಕ್ಕೆ ಅನ್ವಯಿಸವು. ತಿಮರೋಡಿ ಅವರು ಮಾತಿನಿಂದ ರಾಜ್ಯದ ಎಲ್ಲೂ ಶಾಂತಿಭಂಗ ಉಂಟಾಗಿಲ್ಲ' ಎಂದರು.

ಸರ್ಕಾರಿ ವಕೀಲ ಪ್ರಕಾಶ್ಚಂದ್ರ ಶೆಟ್ಟಿ ಮಾರ್ಗದರ್ಶನದಲ್ಲಿ ವಕೀಲೆ ಮೋಹಿನಿ ಆಕ್ಷೇಪಣೆ ಸಲ್ಲಿಸಿದರು.

ಆರೋಪಿಯನ್ನು ಪೊಲೀಸ್ ಕಸ್ಟಡಿಗೆ ನೀಡುವಂತೆ ತನಿಖಾಧಿಕಾರಿ ಅಶೋಕ್ ಮಾಲಭಾಗಿ ಅವರು ಕೋರಿದರು.

4

ಅನಿಲ್ ಅಂಬಾನಿ ವಿರುದ್ಧ ಎಫ್‌ಐಆರ್



ನವದೆಹಲಿ (ಪಿಟಿಐ): ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾಗೆ (ಎಸ್‌ಬಿಐ) ಸುಮಾರು ₹2,929.05 ಕೋಟಿ ನಷ್ಟ ಉಂಟುಮಾಡಿ ವಂಚಿಸಿದ ಆರೋಪದ ಮೇಲೆ ರಿಲಯನ್ಸ್ ಕಮ್ಯುನಿಕೇಷನ್ಸ್ ಮತ್ತು ಅದರ ನಿರ್ದೇಶಕ ಅನಿಲ್ ಅಂಬಾನಿ ವಿರುದ್ಧ ಸಿಬಿಐ ಎಫ್‌ಐಆರ್ ದಾಖಲಿಸಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಸ್ಟೇಟ್ ಬ್ಯಾಂಕ್ ಇಂಡಿಯಾ ಜೂನ್ 13ರಂದು ನೀಡಿದ ದೂರಿನ ಆಧಾರದಲ್ಲಿ, ಮುಂಬೈನಲ್ಲಿರುವ ಅನಿಲ್ ಅಂಬಾನಿ ಅವರ ನಿವಾಸ ಹಾಗೂ ಆರ್‌ಸಿಒಎಂಗೆ (ಆರ್‌ಕಾಂ) ಸಂಬಂಧಿಸಿದ ಸ್ಥಳಗಳಲ್ಲಿ ಸಿಬಿಐ ಶನಿವಾರ ಶೋಧ ನಡೆಸಿತು ಎಂದು ಅವರು ತಿಳಿಸಿದರು.

ಕ್ರಿಮಿನಲ್ ಪಿತೂರಿ, ವಂಚನೆ ಆರೋಪಗಳ ಮೇಲೆ ಅನಿಲ್ ಅಂಬಾನಿ ವಿರುದ್ಧ ಪ್ರಕರಣ ದಾಖಲಿಸಲಾಗಿದೆ ಎಂದು ಸಿಬಿಐ ಹೇಳಿಕೆಯಲ್ಲಿ ತಿಳಿಸಿದೆ.

ಆರ್‌ಕಾಂ ಕಂಪನಿಯು ಅಸಲು ಮತ್ತು ಬಡ್ಡಿಯ ಸಹಿತ ₹2,227.64 ಕೋಟಿಯನ್ನು ಎಸ್‌ಬಿಐಗೆ ಪಾವತಿ ಮಾಡಬೇಕಿದೆ. ಇದರ ಜೊತೆಗೆ ಬ್ಯಾಂಕ್ ಗ್ಯಾರಂಟಿ ಆಧಾರದಲ್ಲಿ ಪಡೆದ ₹786.52 ಕೋಟಿ ಹಣವನ್ನೂ ಪಾವತಿಸಬೇಕಿದೆ. ಆರ್‌ಕಾಂ 2016ರಲ್ಲಿ ಕಾರ್ಪೊರೇಟ್ ದಿವಾಳಿ ಪ್ರಕ್ರಿಯೆಗೆ ಒಳಪಟ್ಟಿದೆ.

ಅಮೆರಿಕಕ್ಕೆ ಕೆಲ ಅಂಚೆ ಸೇವೆ ಅಮಾನತು

ನವದೆಹಲಿ: ಅಂಚೆ ಇಲಾಖೆಯು ಅಮೆರಿಕಕ್ಕೆ ಕೆಲವು ವಸ್ತುಗಳ ರವಾನೆ ಸೇವೆಯನ್ನು ಅಮಾನತಿನಲ್ಲಿ ಇರಿಸಿದೆ. ಅಮೆರಿಕದ ಸೀಮಾಸುಂಕ ಇಲಾಖೆಯು ಹೊರಡಿಸಿರುವ ಹೊಸ ನಿಯಮಗಳ ಬಗ್ಗೆ ಸ್ಪಷ್ಟತೆ ಇಲ್ಲದ ಕಾರಣ ಅಮೆರಿಕಕ್ಕೆ ತೆರಳುವ ವಿಮಾನಗಳು ವಸ್ತುಗಳನ್ನು ಒಯ್ಯಲು ಒಪ್ಪುತ್ತಿಲ್ಲ. ಹೀಗಾಗಿ ಈ ನಿರ್ಧಾರ ಕೈಗೊಳ್ಳಲಾಗಿದೆ ಎಂದು ಹೇಳಲಾಗಿದೆ.

8

ಚಿನಕುರುಳಿ ಪ್ರಕಾಶ್ ಶೆಟ್ಟಿ



₹25ಕೋಟಿಗೂ ಹೆಚ್ಚು ಮೊತ್ತದ ಸ್ವತ್ತು ಇ.ಡಿ ವಶಕ್ಕೆ

ಬೆಟ್ಟಿಂಗ್: ಕೈ ಶಾಸಕ ಬಂಧನ

ಪ್ರಜಾವಾಣಿ ವಾರ್ತೆ



ಕೆ.ಸಿ.ವೀರೇಂದ್ರ

ಬೆಂಗಳೂರು: ಅಕ್ರಮವಾಗಿ ಆನ್‌ಲೈನ್ ಮತ್ತು ಆಫ್‌ಲೈನ್ ಬೆಟ್ಟಿಂಗ್ ನಡೆಸಿದ ಪ್ರಕರಣದಲ್ಲಿ ದಾಳಿ ನಡೆಸಿದ ಜಾರಿ ನಿರ್ದೇಶನಾಲಯದ ಅಧಿಕಾರಿಗಳು, ಚಿತ್ರದುರ್ಗ ಕ್ಷೇತ್ರದ ಕಾಂಗ್ರೆಸ್ ಶಾಸಕ ಕೆ.ಸಿ. ವೀರೇಂದ್ರ (ಪಪ್ಪಿ) ಅವರ ಮನೆ ಮತ್ತು ಕ್ಯಾಸಿನೊಗಳಲ್ಲಿ ₹12 ಕೋಟಿ ನಗದು ಸೇರಿ ₹25 ಕೋಟಿಗೂ ಹೆಚ್ಚು ಮೊತ್ತದ ಸ್ವತ್ತುಗಳನ್ನು ವಶಕ್ಕೆ ಪಡೆದಿದ್ದಾರೆ.

ಬೆಟ್ಟಿಂಗ್ ಸಂಬಂಧ ಹಣ ಅಕ್ರಮ ವರ್ಗಾವಣೆ ಕಾಯ್ದೆಯ ವಿವಿಧ ಸೆಕ್ಷನ್‌ಗಳ ಅಡಿಯಲ್ಲಿ ವೀರೇಂದ್ರ ಮತ್ತು ಅವರ ಕ್ಯಾಸಿನೊಗಳ ವಿರುದ್ಧ ಜಾರಿ ನಿರ್ದೇಶನಾಲಯದ (ಇ.ಡಿ) ಅಧಿಕಾರಿಗಳು ಪ್ರಕರಣ ದಾಖಲಿಸಿಕೊಂಡಿದ್ದರು. ಬೆಂಗಳೂರು, ಚಿತ್ರದುರ್ಗ, ಹುಬ್ಬಳ್ಳಿ, ಗೋವಾ, ಮುಂಬೈ, ಜೋಧಪುರ, ಗ್ಯಾಂಗ್ಟಕ್ ಸೇರಿ ದೇಶದ 31 ಸ್ಥಳಗಳಲ್ಲಿ ಶುಕ್ರವಾರ ದಾಳಿ ನಡೆಸಿದ್ದರು. ದಾಳಿ ವೇಳೆ ಪತ್ತೆಯಾದ ಅಪಾರ ಪ್ರಮಾಣದ ನಗದು, ಚಿನ್ನಾಭರಣ, ಕಾರುಗಳ ಒಟ್ಟು ಮೌಲ್ಯ ₹25 ಕೋಟಿಯಷ್ಟಾಗುತ್ತದೆ

6



ಗೋವಾದ ಕ್ಯಾಸಿನೊದಲ್ಲಿ ಪತ್ತೆಯಾದ ಅಪಾರ ಮೊತ್ತದ ನಗದು

₹12 ಕೋಟಿ ವೀರೇಂದ್ರ ಮನೆ ಮತ್ತು ಕ್ಯಾಸಿನೊಗಳಲ್ಲಿ ವಶಕ್ಕೆ ಪಡೆಯಲಾದ ನಗದು

₹1 ಕೋಟಿ ಮೌಲ್ಯದ ವಿದೇಶಿ ಕರೆನ್ಸಿಗಳು

₹6 ಕೋಟಿ ಮೌಲ್ಯದ ಚಿನ್ನಾಭರಣ

₹10 ಕೆ.ಜಿ. ಬೆಳ್ಳಿಯ ವಸ್ತುಗಳು

17 ಬ್ಯಾಂಕ್ ಖಾತೆಗಳ ವಿವರ

4 ಬ್ಯಾಂಕ್ ಲಾಕರ್‌ಗಳ ವಿವರ

4 ಐಷಾರಾಮಿ ಕಾರುಗಳು. ವೀರೇಂದ್ರ ಅವರ ಅಭಿಮಾನಿಗಳ ಇನ್‌ಸ್ಟಾಗ್ರಾಂ ಪೋಸ್ಟ್‌ಗಳನ್ನು ಆಧರಿಸಿ ಈ ಕಾರುಗಳನ್ನು ಪತ್ತೆ ಮಾಡಲಾಗಿದೆ

- ಐರೋಪ್ಯ ರಾಷ್ಟ್ರಗಳು ಮತ್ತು ಅಮೆರಿಕದ ಹಲವು ಕ್ಯಾಸಿನೊಗಳ ಸದಸ್ಯತ್ವ ಕಾರ್ಡ್‌ಗಳು ಪತ್ತೆ
- 40ಕ್ಕೂ ಹೆಚ್ಚು ಡೆಬಿಟ್ ಕಾರ್ಡ್‌ಗಳು ಮತ್ತು ವಿದೇಶಗಳಲ್ಲಿನ ಪಂಚತಾರಾ ಹೋಟೆಲ್‌ಗಳ ಸದಸ್ಯತ್ವ ಕಾರ್ಡ್‌ಗಳ ವಶ

ಹವಾಮಾನ ಮುನ್ಸೂಚನೆ: ನಗರದಲ್ಲಿ ಮೋಡ ಕವಿದ ವಾತಾವರಣ ಇರಲಿದ್ದು, ಮಳೆಯಾಗುವ ಸಾಧ್ಯತೆ ಇದೆ

ಮೆಟ್ರೊದಲ್ಲಿ ತಾಯಿಯಿಂದ ಬೇರ್ಪಟ್ಟ ಮಗು: ಆತಂಕ

ಬೆಂಗಳೂರು: ನಮ್ಮ ಮೆಟ್ರೊ ನೇರಳೆ ಮಾರ್ಗದಲ್ಲಿ ಶನಿವಾರ ತಾಯಿಯಿಂದ ಮಗು ಬೇರ್ಪಟ್ಟಿದ್ದರಿಂದ ಸ್ವಲ್ಪ ಕಾಲ ಆತಂಕದ ಸನ್ನಿವೇಶ ಸೃಷ್ಟಿಯಾಯಿತು. ಆ ನಂತರ ಮಗು ಸುರಕ್ಷಿತವಾಗಿ ತಾಯಿ ಮಡಿಲನ್ನು ಸೇರಿತು.

ಮೈಸೂರು ರಸ್ತೆ ಕಡೆಯಿಂದ ತಾಯಿ ಮತ್ತು ಸುಮಾರು 5 ವರ್ಷದ ಮಗು ಮಧ್ಯಾಹ್ನ 1.30ರ ಸುಮಾರಿಗೆ ಮೆಟ್ರೊ ಹತ್ತಿದ್ದರು. ಮಾಗಡಿ ರಸ್ತೆಯಲ್ಲಿ ಇಳಿಯಬೇಕಿತ್ತು. ಮಾಗಡಿ ರಸ್ತೆ ನಿಲ್ದಾಣದಲ್ಲಿ ಮೆಟ್ರೊ ನಿಂತಾಗ ಹತ್ತುವವರು ಒಮ್ಮೆಲೇ ನುಗ್ಗಿದ್ದರಿಂದ ತಾಯಿ ಇಳಿದು ಮಗು ಇಳಿಯುವ ಮೊದಲೇ ಮೆಟ್ರೊ ಬಾಗಿಲು ಮುಚ್ಚಿ ಮುಂದಕ್ಕೆ ಚಲಿಸಿತು. ಮಗು ಜೋರಾಗಿ ಅಳತೊಡಗಿತು. 'ಮಗುವನ್ನು ಮುಂದಿನ ನಿಲ್ದಾಣದಲ್ಲಿ ಇಳಿಸುತ್ತೇವೆ, ಬನ್ನಿ' ಎಂದು ಪ್ರಯಾಣಿಕರು ತಾಯಿಗೆ ಸೂಚನೆ ನೀಡಿದರು.

'ತಾಯಿಯಿಂದ ಬೇರ್ಪಟ್ಟ ಮಗು ಜೋರಾಗಿ ಅಳತೊಡಗಿದಾಗ, ಸಹ ಪ್ರಯಾಣಿಕರು ಸಮಾಧಾನ ಪಡಿಸಿದರು. ಕ್ರಾಂತಿವೀರ ಸಂಗೊಳ್ಳಿರಾಯಣ್ಣ ನಿಲ್ದಾಣದಲ್ಲಿ ಯುವಕನೊಬ್ಬ ಮಗುವಿನೊಂದಿಗೆ ಇಳಿದು, ಅಲ್ಲಿದ್ದ ಮೆಟ್ರೊ ಸಿಬ್ಬಂದಿಗೆ ಮಾಹಿತಿ ನೀಡಿದರು. ಮಗುವಿನ ಕುತ್ತಿಗೆಯಲ್ಲಿದ್ದ ಗುರುತಿನ ಚೀಟಿಯಲ್ಲಿ ಮೊಬೈಲ್ ನಂಬರ್ ಇದ್ದರೂ ಆ ನಂಬರ್‌ಗೆ ಕರೆ ಮಾಡಿದಾಗ ಯಾರೂ ಸ್ವೀಕರಿಸಲಿಲ್ಲ. ತಾಯಿ ಬರುವವರೆಗೆ ಕಾದು ಮಗುವನ್ನು ಸುರಕ್ಷಿತವಾಗಿ ಅವರಿಗೆ ಮುಟ್ಟಿಸಿದರು' ಎಂದು ಮೆಟ್ರೊ ಪ್ರಯಾಣಿಕರೊಬ್ಬರು ತಿಳಿಸಿದರು.

'ಮಗು ಸುರಕ್ಷಿತವಾಗಿ ತಾಯಿಯನ್ನು ಸೇರಿಕೊಂಡಿದೆ' ಎಂದು ನಮ್ಮ ಮೆಟ್ರೊ ಅಧಿಕಾರಿಗಳು ಸ್ಪಷ್ಟಪಡಿಸಿದರು.

₹16 ಲಕ್ಷ ಕಳೆದುಕೊಂಡ ಟೆಕಿ

ವೈಟ್‌ಫೀಲ್ಡ್ ಸೈಬರ್ ಠಾಣೆಯಲ್ಲಿ ಎಫ್‌ಐಆರ್ • ಹೂಡಿಕೆ ಹೆಸರಿನಲ್ಲಿ ವಂಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹೂಡಿಕೆ ಹೆಸರಿನಲ್ಲಿ ಟೆಕಿಯೊಬ್ಬರಿಗೆ ₹16 ಲಕ್ಷ ವಂಚಿಸಲಾಗಿದ್ದು, ಈ ಸಂಬಂಧ ವೈಟ್‌ಫೀಲ್ಡ್ ಸೈಬರ್ ಅಪರಾಧ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ.

ಮಹದೇವಪುರದ ನಿವಾಸಿ, ಟೆಕಿ ಎಸ್.ಸಂತೋಷ್ ಅವರು ನೀಡಿದ ದೂರು ಆಧರಿಸಿ, ಮಾಹಿತಿ ತಂತ್ರಜ್ಞಾನ ಕಾಯ್ದೆ ಸೆಕ್ಷನ್ 66(ಡಿ) ಹಾಗೂ ಭಾರತೀಯ ನ್ಯಾಯ ಸಂಹಿತೆ ಸೆಕ್ಷನ್ 318(4) ಹಾಗೂ 319(2)ರ ಅಡಿ ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸಲಾಗುತ್ತಿದೆ ಎಂದು ಸೈಬರ್ ಠಾಣೆಯ ಪೊಲೀಸರು ಹೇಳಿದರು.

ದೂರುದಾರರ ವಾಟ್ಸ್‌ಆ್ಯಪ್ ಸಂಖ್ಯೆಗೆ ಹೂಡಿಕೆ ಸಂಬಂಧ ಸಂದೇಶವೊಂದು ಬಂದಿತ್ತು. ಅದಾದ ಮೇಲೆ ಅಮೀರ್ ಸಿಂಗ್, ರಾಯನ್ ಹಾಗೂ ಲತಿಕಾ ಎಂಬುವವರು ಕರೆ ಮಾಡಿ ಪರಿಚಯಿಸಿಕೊಂಡಿದ್ದರು. 'ವ್ಯಾಲಿಯಂಟ್ ಆ್ಯಪ್' ಡೌನ್‌ಲೋಡ್ ಮಾಡಿಕೊಂಡು ಹಣ ಹೂಡಿಕೆ ಮಾಡಿದರೆ ಹೆಚ್ಚಿನ ಲಾಭ ದೊರೆಯಲಿದೆ ಎಂಬುದಾಗಿ ನಂಬಿಸಿದ್ದರು.

ಅವರ ಮಾತು ನಂಬಿದ್ದ ಸಂತೋಷ್ ಆರಂಭದಲ್ಲಿ ₹75 ಸಾವಿರ ಹೂಡಿಕೆ ಮಾಡಿದ್ದರು. ಈ ಹಣಕ್ಕೆ ವಂಚಕರು ಲಾಭಾಂಶ ನೀಡಿದ್ದರು. ಅದಾದ ಮೇಲೆ ಮೂರು ಖಾತೆಗಳಿಂದ ₹24.85 ಲಕ್ಷ ಹೂಡಿಕೆ ಮಾಡಿದ್ದರು. ಆ ಹಣಕ್ಕೆ ₹8.82 ಲಕ್ಷ ಲಾಭಾಂಶವನ್ನು ನೀಡಿದ್ದರು. ಅದಾದ ಮೇಲೆ ₹16 ಲಕ್ಷ ವಾಪಸ್ ನೀಡಿಲ್ಲ ಎಂದು ಎಫ್‌ಐಆರ್‌ನಲ್ಲಿ ಉಲ್ಲೇಖಿಸಲಾಗಿದೆ.

ಸರ ಕಳ್ಳತನ: ಮೂವರ ಬಂಧನ

ಎಚ್‌ಆರ್‌ಬಿಆರ್ ಲೇಔಟ್‌ನ ರಸ್ತೆ ಬದಿಯಲ್ಲಿ ಗೃಹಿಣಿಯ ಮಾಂಗಲ್ಯದ ಸರ ಕಸಿದು ಪರಾರಿಯಾಗಿದ್ದ ಮೂವರನ್ನು ಬಾಣಸವಾಡಿ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಮಾರತ್‌ಹಳ್ಳಿ ನಿವಾಸಿಗಳಾದ ಅಲ್ತಾಫ್ (22), ಶ್ರೀವರ್ಧನ್ (22) ಹಾಗೂ ಹರೀಶ್‌ಕುಮಾರ್ (23) ಬಂಧಿತರು. ಆರೋಪಿಗಳಿಂದ 57.28 ಗ್ರಾಂ ಚಿನ್ನದ ಮಾಂಗಲ್ಯ ಸರವನ್ನು ಜಪ್ತಿ ಮಾಡಲಾಗಿದೆ. ಚಿನ್ನದ ಸರದ ಮೌಲ್ಯ ₹5.70 ಲಕ್ಷವೆಂದು ಅಂದಾಜಿಸಲಾಗಿದೆ ಎಂದು ಪೊಲೀಸರು ಹೇಳಿದರು.

ಎಚ್‌ಆರ್‌ಬಿಆರ್ ಲೇಔಟ್‌ನ ಎಂಟನೇ ಕ್ರಾಸ್‌ನಲ್ಲಿ ಜುಲೈ 12ರ ರಾತ್ರಿ ಮಹಿಳೆಯೊಬ್ಬರು ನಡೆದು ಹೋಗುತ್ತಿದ್ದರು. ಆಗ ಬೈಕ್‌ನಲ್ಲಿ ಬಂದ ಮೂವರು ಚಿನ್ನದ ಸರವನ್ನು ಕಸಿದು ಪರಾರಿ ಆಗಿದ್ದರು. ಮಹಿಳೆ ನೀಡಿದ ದೂರು ಆಧರಿಸಿ ಮೂವರನ್ನು ಬಂಧಿಸಲಾಯಿತು ಎಂದು ಪೊಲೀಸರು ಹೇಳಿದರು.

ಮಾರತ್‌ಹಳ್ಳಿ ರಾಮಾಂಜನೇಯ ಲೇಔಟ್ ಪೇಯಿಂಗ್ ಗೆಸ್ಟ್ ಎದುರು ಮೂವರನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಲಾಯಿತು. ವಿಚಾರಣೆ ವೇಳೆ ಸರ ಕಳ್ಳತನ ಮಾಡಿರುವುದಾಗಿ ತಪ್ಪೊಪ್ಪಿಕೊಂಡಿದ್ದಾರೆ ಎಂದು ಪೊಲೀಸರು ಹೇಳಿದರು.

ಕದ್ದ ಚಿನ್ನದ ಸರವನ್ನು ಆರೋಪಿಗಳು ಆಂಧ್ರಪ್ರದೇಶಕ್ಕೆ ಕೊಂಡೊಯ್ದು ಮದನಪಲ್ಲಿಯಲ್ಲಿರುವ ಮುತ್ತೂಟ್ ಫೈನಾನ್ಸ್‌ನಲ್ಲಿ ಅಡಮಾನ ಇಟ್ಟಿದ್ದರು. ಅದನ್ನು ವಶಕ್ಕೆ ಪಡೆದುಕೊಳ್ಳಲಾಗಿದೆ ಎಂದು ಮೂಲಗಳು ತಿಳಿಸಿವೆ.

ಬಾಡಿಗೆ ಬೈಕ್‌ನಲ್ಲಿ ಬಂದು ಕೃತ್ಯ: ಸರ ಅಪಹರಣಕ್ಕೆ ಆರೋಪಿಗಳು ಬಾಡಿಗೆಯ ಬೈಕ್ ಹಾಗೂ ಸ್ಕೂಟಿ ಬಳಸಿಕೊಳ್ಳುತ್ತಿದ್ದರು. ಸ್ಕೂಟಿ ಹಾಗೂ ಬೈಕ್ ಜಪ್ತಿ ಮಾಡಲಾಗಿದೆ ಎಂದು ಪೊಲೀಸರು ಹೇಳಿದರು.

ಲಾಲ್‌ಬಾಗ್ ಕೆರೆಯಲ್ಲಿ ಮಹಿಳೆಯ ಮೃತದೇಹ ಪತ್ತೆ

ಪ್ರಜಾವಾಣಿ ವಾರ್ತೆ

ಅಪರಾಧ ಸುದ್ದಿ

ಬೆಂಗಳೂರು: ನಗರದ ಲಾಲ್‌ಬಾಗ್‌ನ ಕೆರೆಯಲ್ಲಿ ಮಹಿಳೆಯ ಮೃತದೇಹ ಪತ್ತೆಯಾಗಿದ್ದು, ಆತ್ಮಹತ್ಯೆಯ ಶಂಕೆ ವ್ಯಕ್ತವಾಗಿದೆ.

ಶನಿವಾರ ಬೆಳಿಗ್ಗೆ 6.30ರ ಸುಮಾರಿಗೆ ವಾಯುವಿಹಾರಕ್ಕೆ ತೆರಳಿದ್ದವರು, ಕೆರೆಯಲ್ಲಿ ಮೃತದೇಹ ಇರುವುದನ್ನು ಗಮನಿಸಿ ಮಾಹಿತಿ ನೀಡಿದ್ದರು. ಸ್ಥಳಕ್ಕೆ ತೆರಳಿ ಪರಿಶೀಲನೆ ನಡೆಸಿ, ಮೃತದೇಹವನ್ನು ಮೇಲಕ್ಕೆ ತರಲಾಯಿತು. ಆತ್ಮಹತ್ಯೆ ಮಾಡಿಕೊಂಡ ಮಹಿಳೆಯ ವಯಸ್ಸು 45 ವರ್ಷವೆಂದು ಅಂದಾಜಿಸಲಾಗಿದೆ. ಗುರುತು ಪತ್ತೆಯಾಗಿಲ್ಲ ಎಂದು ಪೊಲೀಸರು ತಿಳಿಸಿದರು.

'ಮಹಿಳೆಯ ದೇಹದ ಮೇಲೆ ಚಿಕಿತ್ಸೆ ಪಡೆಯುತ್ತಿದ್ದ ಗುರುತು ಪತ್ತೆಯಾಗಿವೆ. ಆಸ್ಪತ್ರೆಯಿಂದ ತಪ್ಪಿಸಿಕೊಂಡು ಬಂದು ಕೆರೆಗೆ ಹಾರಿ ಆತ್ಮಹತ್ಯೆ ಮಾಡಿಕೊಂಡಂತೆ ಕಾಣಿಸುತ್ತಿದೆ. ತನಿಖೆ ಮುಂದುವರಿಸಲಾಗಿದೆ' ಎಂದು ಪೊಲೀಸರು ಹೇಳಿದರು. ಸಿದ್ದಾಪುರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.



ನಗರದ ತರಳಬಾಳು ಕೇಂದ್ರದಲ್ಲಿ ಕನ್ನಡ ಸಾಹಿತ್ಯ ಪರಿಷತ್ ದಾವಣಗೆರೆ ಜಿಲ್ಲಾ ಘಟಕ ಹಾಗೂ ಶರಣ ಮಾಗನೂರು ಬಸಪ್ಪ ಪ್ರತಿಷ್ಠಾನದಿಂದ ಶನಿವಾರ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಸಿರಿಗೆರೆಯ ತರಳಬಾಳು ಮಠದ ಶಿವಮೂರ್ತಿ ಶಿವಾಚಾರ್ಯ ಸ್ವಾಮೀಜಿ ಅವರು ನಿವೃತ್ತ ನ್ಯಾಯಮೂರ್ತಿ ಶಿವರಾಜ ಪಾಟೀಲ ಅವರಿಗೆ 'ಆರೂಢ ದಾಸೋಹಿ ಶರಣ ಮಾಗನೂರು ಬಸಪ್ಪ' ಪ್ರಶಸ್ತಿ ಪ್ರದಾನ ಮಾಡಿದರು. ಪ್ರತಿಷ್ಠಾನದ ಅಧ್ಯಕ್ಷ ಸಂಗಮೇಶ್ವರ ಗೌಡ, ಕಸಾಪ ದಾವಣಗೆರೆ ಜಿಲ್ಲಾ ಘಟಕದ ಅಧ್ಯಕ್ಷ ಬಿ.ವಾಮದೇವಪ್ಪ, ಹಂಪಿ ಕನ್ನಡ ವಿಶ್ವವಿದ್ಯಾಲಯದ ವಿಶ್ರಾಂತ ಕುಲಪತಿ ಪ್ರೊ.ಎ.ಮುರಿಗೆಪ್ಪ, ಅನ್ನಪೂರ್ಣ ಶಿವರಾಜ ಪಾಟೀಲ, ಹಂಪಿ ಕನ್ನಡ ವಿಶ್ವವಿದ್ಯಾಲಯದ ಮೌಲ್ಯಮಾಪನ ವಿಭಾಗದ ಕುಲಸಚಿವ ಅಮರೇಶ್ ಯತಗಲ್, ಶಿಕ್ಷಣ ತಜ್ಞ ಎಚ್.ವಿ.ವಾಮದೇವಪ್ಪ ಹಾಗೂ ಇನ್ನಿತರರು ಉಪಸ್ಥಿತರಿದ್ದರು

'ವಚನ ಬಿತ್ತನೆ ಒಳ್ಳೆಯ ಕೆಲಸ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಶ್ರಾವಣ ಮಾಸದ ಪ್ರಯುಕ್ತ ಮಕ್ಕಳಲ್ಲಿ ವಚನ ಬಿತ್ತನೆ ನಡೆಸಿರುವುದು ಸಾರ್ಥಕ ಕಾರ್ಯ' ಎಂದು ವಚನ ತತ್ವ ಚಿಂತಕ ಮಹಾಂತೇಶ ಬಿರಾದಾರ ಶ್ಲಾಘಿಸಿದರು.

ವಚನಜ್ಯೋತಿ ಬಳಗ ವಿಜಯನಗರದಲ್ಲಿ ಆಯೋಜಿಸಿದ್ದ ವಚನ ಶ್ರಾವಣ ಸಮಾರೋಪದಲ್ಲಿ ಅವರು ಮಾತನಾಡಿದರು.

ಶಾಲೆಗಳಲ್ಲಿಯೇ ವಚನ ಶ್ರಾವಣ ನಡೆಸಿ ಅವುಗಳ ಅರ್ಥವನ್ನು ಮನದಟ್ಟು ಮಾಡಿಕೊಟ್ಟಿರುವುದರಿಂದ ವಿದ್ಯಾರ್ಥಿಗಳು ಸುಂದರ ಬದುಕನ್ನು ರೂಪಿಸಿಕೊಳ್ಳಲು ಅನುಕೂಲ ಆಗುತ್ತದೆ. ಕರ್ನಾಟಕದಾದ್ಯಂತ ವಚನ ಶ್ರಾವಣ ನಡೆಯಬೇಕಿದೆ ಎಂದು ಆಶಯ ವ್ಯಕ್ತಪಡಿಸಿದರು.

ಮೆಸ್ಕಾಂ ಪ್ರಧಾನ ವ್ಯವಸ್ಥಾಪಕ ಬಿ.ಎಸ್. ಮಂಜುನಾಥಸ್ವಾಮಿ ಮಾತನಾಡಿ, 'ವಚನಗಳ ತಿರುಳು ಮಕ್ಕಳ ಮನ ಮುಟ್ಟಿದರೆ ಅದರ ವ್ಯಾಪಕತೆ ಬಹು ದೊಡ್ಡದಾಗಿ ಬೆಳೆದು ಒಳ್ಳೆಯ ಸಮಾಜ ನಿರ್ಮಾಣವಾಗುತ್ತದೆ. ಬಸವಣ್ಣ ಬಯಸಿದ ಕಲ್ಯಾಣ ರಾಜ್ಯಕ್ಕೆ ವಚನ ಶ್ರಾವಣ ಮುನ್ನುಡಿಯಾಗಿದೆ' ಎಂದರು.

ವಚನಜ್ಯೋತಿ ಬಳಗದ ಅಧ್ಯಕ್ಷ ಪಿನಾಕಪಾಣಿ ಮಾತನಾಡಿ, 'ಕನ್ನಡ ನಾಡಿನಲ್ಲಿ ವಿಚಾರ ಕ್ರಾಂತಿಯನ್ನು ಬಿತ್ತಿ, ವರ್ಣ ಭೇದವನ್ನು ನಿರ್ಮೂಲನಗೈದು, ಸ್ತ್ರೀಗೆ ಸಮಾನತೆ ನೀಡಿ ಕಾಯಕದ ಮಹಾಮಂತ್ರವನ್ನು ಉಸುರಿ, ದಾಸೋಹ ಪ್ರೇಮವನ್ನು ಹರಡಿ, ತಿಳಿಗನ್ನಡದಲ್ಲಿ ವಚನಗಳನ್ನು ನೀಡಿದ ಮಹಾತ್ಮ ಬಸವಣ್ಣ, ಅವರ ಸಂದೇಶವನ್ನು ಶ್ರಾವಣ ಮಾಸದಲ್ಲಿ ವಚನ ಶ್ರಾವಣದ ಮೂಲಕ ಮೂವತ್ತಾರು ಅಂಗಳಗಳಲ್ಲಿ ನಡೆಸಿ ಮೌಢ್ಯಾಚರಣೆಗಳ ವಿರುದ್ಧ ಜಾಗೃತಿ ಮೂಡಿಸಲಾಗಿದೆ' ಎಂದು ತಿಳಿಸಿದರು.

ಗುರುವಣ್ಣದೇವರ ಮಠದ ನಂಜುಂಡ ಸ್ವಾಮೀಜಿ ಅಧ್ಯಕ್ಷತೆ ವಹಿಸಿದ್ದರು. ಬಸವ ಸಮಿತಿಯ ಹಿರಿಯ ಉಪಾಧ್ಯಕ್ಷ ಪ್ರಭುದೇವ ಚಿಗಟೇರಿ, ಮಾಜಿ ಮೇಯರ್ ಗಂಗಾಂಬಿಕೆ ಮಲ್ಲಿಕಾರ್ಜುನ್, ಬಳಗದ ಗೌರವಾಧ್ಯಕ್ಷ ಮಹೇಶ ಬೆಲ್ಲದ, ಕಾರ್ಯಾಧ್ಯಕ್ಷ ಗುರುಪ್ರಸಾದ ಕುಚ್ಚಂಗಿ, ಪ್ರಧಾನ ಕಾರ್ಯದರ್ಶಿ ಪ್ರಭು ಇಸುವನಹಳ್ಳಿ, ಉಪಾಧ್ಯಕ್ಷ ಮುನಿರಾಜಪ್ಪ ಇದ್ದರು.



ವಚನಜ್ಯೋತಿ ಬಳಗ ಆಯೋಜಿಸಿದ್ದ ವಚನ ಶ್ರಾವಣ ಕಾರ್ಯಕ್ರಮದ ಸಮಾರೋಪದಲ್ಲಿ ಬಸವಣ್ಣನವರ ಪುತ್ಥಳಿಗೆ ಪುಷ್ಪಾರ್ಚನೆ ಮಾಡಲಾಯಿತು

ಗಾಂಜಾ ಮಾರಾಟ: 6 ಮಂದಿ ಸೆರೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಜೆ.ಸಿ. ನಗರ ಹಾಗೂ ಮಲ್ಲೇಶ್ವರ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಗಾಂಜಾ ಮಾರಾಟ ಮಾಡುತ್ತಿದ್ದ ಆರು ಮಂದಿಯನ್ನು ಬಂಧಿಸಿರುವ ಪೊಲೀಸರು, ₹1.60 ಲಕ್ಷ ಮೌಲ್ಯದ ಗಾಂಜಾ ವಶಪಡಿಸಿಕೊಂಡಿದ್ದಾರೆ.

ಗಾಂಜಾ ಸಂಗ್ರಹಿಸಿಕೊಂಡು ನಿರ್ಜನ ಪ್ರದೇಶದಲ್ಲಿ ಮಾರಾಟ ಮಾಡುತ್ತಿದ್ದ ಮೂವರನ್ನು ಜೆ.ಸಿ.ನಗರ ಠಾಣೆಯ ಪೊಲೀಸರು ಬಂಧಿಸಿದ್ದಾರೆ. ಬಂಧಿತರಿಂದ ₹1 ಲಕ್ಷ ಮೌಲ್ಯದ ಗಾಂಜಾ ಜಪ್ತಿ ಮಾಡಿಕೊಂಡಿದ್ದಾರೆ.

ಮತ್ತೊಂದು ಪ್ರಕರಣದಲ್ಲಿ ಮಲ್ಲೇಶ್ವರ ಠಾಣೆಯ ಪೊಲೀಸರು ಇಬ್ಬರನ್ನು ಬಂಧಿಸಿದ್ದಾರೆ. ಬಂಧಿತರಿಂದ 1 ಕೆ.ಜಿ 850 ಗ್ರಾಂ ಗಾಂಜಾ ಜಪ್ತಿ ಮಾಡಿದ್ದಾರೆ.

ರೇಣುಕಸ್ವಾಮಿ ಕೊಲೆ ಪ್ರಕರಣ: ವಿಚಾರಣೆ

ಬೆಂಗಳೂರು: ರೇಣುಕಸ್ವಾಮಿ ಕೊಲೆ ಪ್ರಕರಣದಲ್ಲಿ ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹದಲ್ಲಿ ನ್ಯಾಯಾಂಗ ಬಂಧನದಲ್ಲಿರುವ ನಟ ದರ್ಶನ್, ಪವಿತ್ರಾಗೌಡ ಸೇರಿ 7 ಆರೋಪಿಗಳು ವಿಡಿಯೊ ಕಾನ್ಫರೆನ್ಸ್ ಮೂಲಕ ಶನಿವಾರ ವಿಚಾರಣೆಗೆ ಹಾಜರಾದರು.

ದರ್ಶನ್ ಹಾಗೂ ಇತರರನ್ನು ರಾಜ್ಯದ ವಿವಿಧ ಕಾರಾಗೃಹಗಳಿಗೆ ಸ್ಥಳಾಂತರಿಸಬೇಕೆಂದು ಪ್ರಾಸಿಕ್ಯೂಷನ್ ಪರ ವಕೀಲರು ಸಲ್ಲಿಸಿದ್ದ ಅರ್ಜಿಯ ವಿಚಾರಣೆಯನ್ನು ನ್ಯಾಯಾಲಯ ನಡೆಸಿತು. ಆರೋಪಿ ಪ್ರದೂಷ್ ರಾವ್ ಆಕ್ಷೇಪಣಾ ಅರ್ಜಿ ಸಲ್ಲಿಸಿದರೆ, ಉಳಿದ ಆರೋಪಿಗಳು ತಕರಾರು ಅರ್ಜಿ ಸಲ್ಲಿಸಲು ಕಾಲಾವಕಾಶ ಕೇಳಿದರು. ಕಾಲಾವಕಾಶ ನೀಡಿದ ನ್ಯಾಯಾಲಯವು, ಆ.30ಕ್ಕೆ ವಿಚಾರಣೆ ಮುಂದೂಡಿತು.

ಕೋಲ್ಕತ್ತ ರೇಸ್

ಪ್ರೈಡ್ ಪ್ರಿನ್ಸ್ ಗೆಲ್ಲುವ ನಿರೀಕ್ಷೆ

ಡಾ. ಎಸ್.ಆರ್.ಕ್ಯಾಪ್ಟನ್ ಸಲ್ವಾರ್ ಭಾನುವಾರದ ಪುಣೆ ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು, ಪ್ರೈಡ್ ಪ್ರಿನ್ಸ್ ಈ ರೇಸ್‌ನಲ್ಲಿ ಗೆಲ್ಲುವ ನಿರೀಕ್ಷೆಯಿದೆ. ಮಧ್ಯಾಹ್ನ 1:25ಕ್ಕೆ ಪ್ರಾರಂಭವಾಗಲಿರುವ ದಿನದ ಏಳು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿವೆ:

1ನೇ ರೇಸ್: ಬೊಹಿಮಿಯನ್ ರಾಪ್ಸೋಡಿ 1, ಗೋಲ್ಡನ್ ರೂಲ್ 7, ಅನನ್ಯ 2
2ನೇ ರೇಸ್: ಮಿಡ್‌ನೈಟ್ ಎಕ್ಸ್‌ಪ್ರೆಸ್ 3, ವೆಸ್ಟರ್ನ್ ಸ್ಟಾರ್ 5, ಲಾರ್ಡ್ ಎಪಿಕ್ 2
3ನೇ ರೇಸ್: ಸೂಪರ್‌ಸ್ಟಾರ್ 5, ಕಿಮಿಕೊ 2, ಡಾಕ್ಟರ್ ಡಾಲಿ 4
4ನೇ ರೇಸ್: ವಿಂಗ್ಸ್ ಆಫ್ ಫ್ಯೂರಿ 6, ಕಂಜೂರರ್ 11, ಆಲ್ ಫಾರ್ ಲವ್ 7
5ನೇ ರೇಸ್: ಕಿಂಗ್ಸ್ ಗ್ಯಾಂಬಿಟ್ 2, ಗನ್‌ಸ್ಮೋಕ್ 1, ಡಾನ್ ಜೂಲಿಯೊ 6
6ನೇ ರೇಸ್: ಪ್ರೈಡ್ ಪ್ರಿನ್ಸ್ 2, ಸಿಂಗರ್ ಸಾರ್ಜೆಂಟ್ 7, ಕ್ರಿಸ್ಟೊಫಲ್ 6
7ನೇ ರೇಸ್: ಅಜೂರ್ 3, ಜೆಂಡಾಯ 1, ಸರ್ರಿಯಾಲಿಸ್ಟ್ 2

ಉತ್ತಮ ಬೆಟ್: ಬೊಹಿಮಿಯನ್ ರಾಪ್ಸೋಡಿ

ಜಾಕ್‌ಪಾಟ್‌ಗೆ	ಟ್ರಿಬಲ್
3,4,5,6,7	4,5,6

ಮೌಂಟ್ ಕಾರ್ಮೆಲ್ ಕಾಲೇಜಿನಲ್ಲಿ ಕಿರುಕುಳ ಆರೋಪ

ವಸ್ತ್ರ ಸಂಹಿತೆ ವಿರುದ್ಧ ವಿದ್ಯಾರ್ಥಿಗಳ ಅಭಿಯಾನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಸ್ತ್ರ ಸಂಹಿತೆ ಜಾರಿ ಹಾಗೂ ವಿದ್ಯಾರ್ಥಿ ಸಂಘದ ಚುನಾವಣೆಯನ್ನು ರದ್ದುಗೊಳಿಸಿರುವ ಕ್ರಮವನ್ನು ಖಂಡಿಸಿ ನಗರದ ಮೌಂಟ್ ಕಾರ್ಮೆಲ್ ಕಾಲೇಜಿನ ವಿದ್ಯಾರ್ಥಿಗಳು ಸಾಮಾಜಿಕ ಮಾಧ್ಯಮಗಳ ಮೂಲಕ ಕಾಲೇಜು ಆಡಳಿತ ಮಂಡಳಿಯ ವಿರುದ್ಧ ಅಭಿಯಾನ ಆರಂಭಿಸಿದ್ದಾರೆ.

ಶಿಸ್ತು ಪಾಲನೆಯ ಹೆಸರಿನಲ್ಲಿ ಕಾಲೇಜು ಆಡಳಿತ ಮಂಡಳಿಯವರು ಪದವಿ ಹಾಗೂ ಸ್ನಾತಕೋತ್ತರ ಪದವೀಧರರಿಗೆ ಕಿರುಕುಳ ನೀಡುತ್ತಿದ್ದಾರೆ ಎಂದು ಸಾಮಾಜಿಕ ಜಾಲತಾಣಗಳಲ್ಲಿ ಬರೆದಿದ್ದಾರೆ.

‘ಶೈಕ್ಷಣಿಕ ವರ್ಷ ಆರಂಭದ ದಿನವೇ ಆಡಳಿತ ಮಂಡಳಿಯವರು ವಿದ್ಯಾರ್ಥಿ ವಿರೋಧಿ ನೀತಿ ಜಾರಿ ಮಾಡಿದ್ದಾರೆ’ ಎಂದು ವಿದ್ಯಾರ್ಥಿಯೊಬ್ಬ ಬರೆದುಕೊಂಡಿದ್ದಾನೆ.

ಇನ್ನೊಬ್ಬ ವಿದ್ಯಾರ್ಥಿ, ‘ನಾವು ಉನ್ನತ ಶಿಕ್ಷಣ ಪಡೆಯುತ್ತಿದ್ದರೂ, ಶಾಲಾ ಮಕ್ಕಳಂತೆ ನಡೆಸಿಕೊಳ್ಳುತ್ತಿದ್ದಾರೆ’ ಎಂದು ಪೋಸ್ಟ್ ಮಾಡಿದ್ದಾನೆ. ಗೇಟ್ ಪ್ರವೇಶಿಸುವ ಸಂದರ್ಭದಲ್ಲಿ ಪರಿಶೀಲನಾ ಕ್ರಮವು ಕಿರಿಕಿರಿ ಉಂಟು ಮಾಡುತ್ತಿದೆ ಎಂದು ಕೆಲವರು ಬರೆದಿದ್ದಾರೆ. ‘ಬೆಳಿಗ್ಗೆ ಕಾಲೇಜು ಆವರಣ ಪ್ರವೇಶಿಸಿದರೆ ಮತ್ತೆ ಸಂಜೆಯೇ ಹೊರಕ್ಕೆ ಬರಬೇಕಿದೆ. ಕೆಲವು ಸಮಸ್ಯೆಗಳನ್ನು ಪರಿಹರಿಸಿಕೊಳ್ಳಲು ವಿದ್ಯಾರ್ಥಿ ಸಂಘ ಅಗತ್ಯವಿತ್ತು. ಆದರೆ, ಸಂಘದ ಚುನಾವಣೆಯನ್ನು ರದ್ದು ಮಾಡಲಾಗಿದೆ’ ಎಂದು ಪೋಸ್ಟ್‌ನಲ್ಲಿ ಉಲ್ಲೇಖಿಸಿದ್ದಾರೆ.

‘ಶೈಕ್ಷಣಿಕ ಭಾಗವಾಗಿ ವಸ್ತ್ರ ಸಂಹಿತೆಯನ್ನು ಅಳವಡಿಕೆ ಮಾಡಿಕೊಳ್ಳಲಾಗಿತ್ತು. ಈ ನಿಯಮ ಪಾಲನೆ ಮಾಡುವಂತೆ ವಿದ್ಯಾರ್ಥಿಗಳ ಪೋಷಕರಿಗೂ ತಿಳಿಸಲಾಗಿತ್ತು. ಬೇರೆ ಸಂಸ್ಥೆಗಳಿಗೆ ಹೋಲಿಸಿದರೆ ನಮ್ಮಲ್ಲಿ ಕೆಲವು ನಿಯಮಗಳನ್ನು ಸಡಿಲಿಕೆ ಮಾಡಲಾಗಿದೆ.

ಸಾಮಾಜಿಕ ಮಾಧ್ಯಮದಲ್ಲಿ ಪೋಸ್ಟ್ ಮಾಡುತ್ತಿರುವವರು ನಮ್ಮ ವಿದ್ಯಾರ್ಥಿಗಳೇ ಎಂಬುದು ಖಚಿತವಿಲ್ಲ. ಯಾರೂ ನನ್ನ ಬಳಿ ಮನವಿ ಮಾಡಿಲ್ಲ’ ಎಂದು ಕಾಲೇಜಿನ ಪ್ರಾಂಶುಪಾಲರು ಪ್ರತಿಕ್ರಿಯಿಸಿದ್ದಾರೆ.

ರೌಂಡ್ ಹಾಗೂ ವಿನೆಕ್ ಟಿ–ಶರ್ಟ್, ಬೇರೆ ಬೇರೆ ಬರಹವುಳ್ಳ ಬಟ್ಟೆಗಳು, ಕಾರ್ಗೊ ಪ್ಯಾಂಟ್ಸ್, ಚಪ್ಪಲಿ ಹಾಕಿಕೊಂಡು ಬರುವುದನ್ನು ನಿರ್ಬಂಧಿಸಲಾಗಿದೆ. ಇದು ವಿದ್ಯಾರ್ಥಿಗಳ ಆಕ್ರೋಶಕ್ಕೆ ಕಾರಣವಾಗಿದೆ.



ಘಟಿಕೋತ್ಸವದಲ್ಲಿ ಪದವಿ ಪ್ರದಾನ ಮಾಡಲಾಯಿತು. ಎಂ. ಗಿರೀಶ್ ಚಂದ್ರ, ಕೆ.ಆರ್ ಪರಮಹಂಸ, ಕೆ. ಗೀತಾ ಪರಮಹಂಸ, ಎಸ್ ಕರುಣಾಕರ, ಸೌಮ್ಯ ಉಪಸ್ಥಿತರಿದ್ದರು

‘ದೇಶಕ್ಕಾಗಿ ಯುವ ಜನರು ಶ್ರಮಿಸಲಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ದೇಶದ ಭವಿಷ್ಯ ಯುವಜನರ ಕೈಯಲ್ಲಿದ್ದು, ದೇಶ ಕಟ್ಟಲು ನಿಜವಾದ ಎಂಜಿನಿಯರ್‌ಗಳ ಅಗತ್ಯವಿದೆ’ ಎಂದು ಟಾಟಾ ರಿಸರ್ಚ್, ಟಾಟಾ ಕನ್ಸಲ್ಟನ್ಸಿ ಸರ್ವಿಸಸ್‌ನ (ಟಿಸಿಎಸ್) ಮುಖ್ಯ ವಿಜ್ಞಾನಿ ಎಂ. ಗಿರೀಶ್ ಚಂದ್ರ ಅಭಿಮತ ವ್ಯಕ್ತಪಡಿಸಿದರು.

ಕನಕಪುರ ರಸ್ತೆಯಲಿರುವ ಸಿಟಿ ಎಂಜಿನಿಯರಿಂಗ್ ಕಾಲೇಜು ಶನಿವಾರ ಹಮ್ಮಿಕೊಂಡಿದ್ದ ಘಟಿಕೋತ್ಸವದಲ್ಲಿ 250 ವಿದ್ಯಾರ್ಥಿಗಳಿಗೆ ಪದವಿ ಪ್ರದಾನ ಮಾಡಲಾಯಿತು. ಘಟಿಕೋತ್ಸವ ಭಾಷಣ ಮಾಡಿದ ಅವರು, ‘ವಿದ್ಯಾರ್ಥಿಗಳಿಗೆ ಜ್ಞಾನ ಆಧಾರಿತ ಶಿಕ್ಷಣ ನೀಡಬೇಕು. ಎಂಜಿನಿಯರಿಂಗ್, ವಿಜ್ಞಾನ, ಗಣಿತ ಸೇರಿದಂತೆ ವಿವಿಧ ಕ್ಷೇತ್ರಗಳ ಬಗ್ಗೆಯೂ ತಿಳಿದುಕೊಳ್ಳಬೇಕು. ಕಲಿಕೆ ನಿರಂತರವಾದ ಪ್ರಕ್ರಿಯೆಯಾಗಿದೆ. ಶಿಕ್ಷಣ ಸಂಸ್ಥೆಗಳಿಂದ ಹೊರ ಬರುತ್ತಿರುವ ಪದವೀಧರರು, ಕಂಪನಿಗಳ ನಿರೀಕ್ಷೆಯನ್ನು ಪೂರೈಸುತ್ತಿಲ್ಲ. ಹೀಗಾಗಿ, ಅವರಿಗೆ ಹೆಚ್ಚಿನ ಕೌಶಲ ಮತ್ತು ತರಬೇತಿ ನೀಡಬೇಕಿದೆ’ ಎಂದು ಹೇಳಿದರು.

ಎಎಂಸಿ, ಸಿಟಿ, ಕೇಂಬ್ರಿಜ್ ಮತ್ತು ಬ್ರೂಕ್ಲಿನ್ ಸಂಸ್ಥೆಗಳ ಅಧ್ಯಕ್ಷ ಕೆ.ಆರ್. ಪರಮಹಂಸ, ಉಪಾಧ್ಯಕ್ಷೆ ಕೆ. ಗೀತಾ ಪರಮಹಂಸ, ಕಾಲೇಜಿನ ಪ್ರಾಂಶುಪಾಲ ಎಸ್. ಕರುಣಾಕರ ಮತ್ತು ಮುಖ್ಯಸ್ಥೆ ಸೌಮ್ಯ ಉಪಸ್ಥಿತರಿದ್ದರು.

₹4.18 ಕೋಟಿ ದಂಡ ಪಾವತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಂಚಾರ ನಿಯಮ ಉಲ್ಲಂಘನೆ ಪ್ರಕರಣಗಳನ್ನು ಇತ್ಯರ್ಥಪಡಿಸಿಕೊಳ್ಳಲು ಶೇ 50ರಷ್ಟು ರಿಯಾಯಿತಿಯಡಿ ದಂಡ ಪಾವತಿಸಲು ವಾಹನಗಳ ಮಾಲೀಕರಿಗೆ ರಾಜ್ಯ ಸರ್ಕಾರವು ಅವಕಾಶ ಕಲ್ಪಿಸಿದ್ದು, ಮೊದಲ ದಿನವಾದ ಶನಿವಾರ ₹4.18 ಕೋಟಿ ದಂಡ ಪಾವತಿಯಾಗಿದೆ. 1,48,747 ಪ್ರಕರಣಗಳು ನಗರದಲ್ಲಿ ಇತ್ಯರ್ಥವಾಗಿವೆ ಎಂದು ಸಂಚಾರ ಪೊಲೀಸರು ಹೇಳಿದರು.

ಸೆಪ್ಟೆಂಬರ್ 12ರವರೆಗೆ ದಂಡ ಪಾವತಿಸಲು ಅವಕಾಶವಿದೆ. ಬಿಟಿಪಿ ಅಸ್ತ್ರಂ, ಕರ್ನಾಟಕ ರಾಜ್ಯ ಪೊಲೀಸ್(ಕೆಎಸ್‌ಪಿ) ಆ್ಯಪ್, ಬೆಂಗಳೂರು ಸಂಚಾರ ಪೊಲೀಸ್ ಅಥವಾ ಕರ್ನಾಟಕ ಒನ್ ವೆಬ್‌ಸೈಟ್‌ನಲ್ಲಿ ವಾಹನದ ನೋಂದಣಿ ಸಂಖ್ಯೆ ನಮೂದಿಸಿ ಸಂಚಾರ ಉಲ್ಲಂಘನೆ ಪ್ರಕರಣಗಳನ್ನು ತಿಳಿದುಕೊಳ್ಳಬಹುದು. ಬಳಿಕ, ಪಾವತಿಸಲು ಇಚ್ಛಿಸುವ ದಂಡದ ಮೊತ್ತವನ್ನು ಆಯ್ಕೆ ಮಾಡಿದರೆ, ರಿಯಾಯಿತಿ ಮೊತ್ತದ ಪಾವತಿಯ ಆಯ್ಕೆ ಲಭ್ಯವಾಗುತ್ತದೆ. ನಂತರ, ದಂಡದ ಮೊತ್ತ ಪಾವತಿಸಬಹುದು ಎಂದು ಸಂಚಾರ ಪೊಲೀಸರು ಹೇಳಿದರು.

ಮೌಲ್ಯವರ್ಧಿತ ಉತ್ಪನ್ನಗಳ ಆಕರ್ಷಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನುಗ್ಗೆ ಸೊಪ್ಪಿನ ಚಟ್ನಿ ಪುಡಿ, ಹಲಸು, ಮಾವು ಮತ್ತು ಬೆಟ್ಟದ ನೆಲ್ಲಿ ಜಾಮ್, ಹಲಸಿನ ಉಪ್ಪಿನ ಕಾಯಿ, ಆಲಂಕಾರಿಕ ಮೀನುಗಳು ಸೇರಿದಂತೆ ಮೌಲ್ಯವರ್ಧಿತ ಉತ್ಪನ್ನಗಳು ರೈತ ಸಂತೆಯಲ್ಲಿ ಸಾರ್ವಜನಿಕರನ್ನು ಸೆಳೆದವು.



ಶನಿವಾರ ನಡೆದ ರೈತ ಸಂತೆಯಲ್ಲಿ ಸಾರ್ವಜನಿಕರು ತರಕಾರಿ ಖರೀದಿಸಿದರು

ಜಿಕೆವಿಕೆ ಆವರಣದಲ್ಲಿ ಬೆಂಗಳೂರು ಕೃಷಿ ವಿಶ್ವವಿದ್ಯಾಲಯ ಶನಿವಾರ ರೈತ ಸಂತೆ ಆಯೋಜಿಸಿತ್ತು. ಹೂವು, ಹಣ್ಣು, ತೆಂಗಿನಕಾಯಿ, ತರಕಾರಿ ಮಾರಾಟ ಜೋರಾಗಿತ್ತು. ಮಾಲೂರಿನ ‘ಅಮೃತ್ ಆಹಾರ ಉತ್ಪನ್ನಗಳು’ ಸ್ವಸಹಾಯ ಸಂಘದ ಚರಿ ಮಿಲೆಟ್ ಮಾಲ್ಟ್ ಉತ್ಪನ್ನ ಗ್ರಾಹಕರನ್ನು ಸೆಳೆಯಿತು.

ಕೊಯ್ಲೋತ್ತರ ಎಂಜಿನಿಯರಿಂಗ್ ಮತ್ತು ತಂತ್ರಜ್ಞಾನ ಯೋಜನೆಯ ಅಡಿಯಲ್ಲಿ ಸಿರಿಧಾನ್ಯಗಳಿಂದ ಹರಳು ಮಾಡುವ ಯಂತ್ರ, ಮುಸುಕಿನ ಜೋಳದ ತೆನೆಗಳಿಂದ ಕಾಳು ಬಿಡಿಸುವ ಯಂತ್ರ ಮತ್ತು ಹರಳು ಹೊಟ್ಟು ತೆಗೆಯುವ ಯಂತ್ರಗಳು ಆಕರ್ಷಣೆಯಾಗಿದ್ದವು. ಮಕ್ಕಳು ಎತ್ತಿನ ಬಂಡಿಯ ಸವಾರಿ ಮಾಡಿದರು. ಸಂತೆಯ ಅಂಗಳದಲ್ಲಿ ವಿವಿಧ ಜಾನುವಾರುಗಳು ಗಮನ ಸೆಳೆದವು.

ಬೆಂಗಳೂರು ವಿಶ್ವವಿದ್ಯಾಲಯ ಅಭಿವೃದ್ಧಿಪಡಿಸಿದ ಬಿತ್ತನೆ ಬೀಜಗಳು, ಸಿರಿಧಾನ್ಯಗಳ ಮೌಲ್ಯವರ್ಧಿತ ಉತ್ಪನ್ನಗಳು, ಸಾವಯವ ಉತ್ಪನ್ನಗಳು, ವಿವಿಧ ಸಸ್ಯಾಭಿವೃದ್ಧಿ ಸಾಮಗ್ರಿಗಳು, ಪ್ರಮುಖವಾಗಿ ತೋಟಗಾರಿಕಾ ಬೆಳೆಗಳಾದ ಮಾವು, ನೇರಳೆ, ಹಲಸು, ಸುಗಂಧ ಮತ್ತು ಔಷಧೀಯ ಸಸ್ಯಗಳು, ಜೈವಿಕ ಗೊಬ್ಬರ ಕೃಷಿ ಯಂತ್ರೋಪಕರಣಗಳ ಖರೀದಿಗೆ ಅವಕಾಶ ನೀಡಲಾಗಿತ್ತು.

ಬೆಂಗಳೂರು ಕೃಷಿ ವಿಶ್ವ ವಿದ್ಯಾಲಯದ ಕುಲಪತಿ ಎಸ್.ವಿ. ಸುರೇಶ್ ರೈತ ಸಂತೆ ಉದ್ಘಾಟಿಸಿದರು.

ನೆಲಮಂಗಲದಿಂದ ಧರ್ಮಸ್ಥಳ ಯಾತ್ರೆ ಆರಂಭ

ನೆಲಮಂಗಲ: ಸೌಜನ್ಯಾ ಕೊಲೆ ವಿಚಾರ ಹಾಗೂ ಧರ್ಮಸ್ಥಳ ಕ್ಷೇತ್ರದ ಬಗ್ಗೆ ನಡೆಯುತ್ತಿರುವ ಅಪಪ್ರಚಾರ ಖಂಡಿಸಿ ಕಾಂಗ್ರೆಸ್ ವತಿಯಿಂದ ಶಾಸಕ ಎನ್. ಶ್ರೀನಿವಾಸ್ ನೇತೃತ್ವದಲ್ಲಿ 300ಕ್ಕೂ ಹೆಚ್ಚು ಕಾರುಗಳಲ್ಲಿ ಧರ್ಮಸ್ಥಳಕ್ಕೆ ಯಾತ್ರೆ ಕೈಗೊಳ್ಳಲಾಯಿತು.

ಪಟ್ಟಣದ ಅಂಬೇಡ್ಕರ್ ಕ್ರೀಡಾಂಗಣದಿಂದ ಮಧ್ಯಾಹ್ನ ಯಾತ್ರೆ ಹೊರಟಿತು. ಕಂಬಾಳು, ಜಗ್ಗಣ್ಣಯ್ಯ, ಬಂಡೆಮಠ ಹಾಗೂ ವಿವಿಧ ಮಠಾಧೀಶರು ಸಹ ಯಾತ್ರೆಯಲ್ಲಿ ಪಾಲ್ಗೊಂಡಿದ್ದರು. ಕಾರ್ಯಕರ್ತರು ಕೇಸರಿ ಶಾಲು ಹಾಕಿಕೊಂಡಿದ್ದು ವಿಶೇಷವಾಗಿತ್ತು.

ಈ ವೇಳೆ ಮಾತನಾಡಿದ ಶಾಸಕ ಎನ್.ಶ್ರೀನಿವಾಸ್, ‘ಸರ್ಕಾರ ಧರ್ಮಸ್ಥಳದ ಪರವಾಗಿದೆ. ಕ್ಷೇತ್ರದ ಬಗ್ಗೆ ನಡೆಯುತ್ತಿರುವ ಅಪಪ್ರಚಾರಕ್ಕೆ ಕಡಿವಾಣ ಹಾಕಲು ತನಿಖೆ ಕೈಗೊಳ್ಳಲಾಗಿದೆ. ಸತ್ಯ ಹೊರಬರಲಿದೆ. ಯಾವುದೇ ಶಕ್ತಿಗಳಿಂದಲೂ ಧರ್ಮಕ್ಷೇತ್ರವನ್ನು ಹಾಳು ಮಾಡಲು ಸಾಧ್ಯವಿಲ್ಲ ಎಂದರು.

ಮುಖಂಡ ಪೇಂಟ್ ಮಂಜುನಾಥ್ ಅವರು ಎರಡು ಲಾರಿಗಳಲ್ಲಿ ದವಸ ಧಾನ್ಯ, ಎಣ್ಣೆ, ಬೆಲ್ಲ, ತರಕಾರಿಗಳನ್ನು ಧರ್ಮಸ್ಥಳಕ್ಕೆ ಕೊಂಡೊಯ್ದರು. ಯೋಜನಾ ಪ್ರಾಧಿಕಾರದ ಅಧ್ಯಕ್ಷ ಎಂ.ನಾರಾಯಣಗೌಡ, ಸದಸ್ಯ ಬಿ.ಜಿ. ವಾಸು, ನಗರಸಭೆ ಅಧ್ಯಕ್ಷ ಎನ್.ಗಣೇಶ್, ಉಪಾಧ್ಯಕ್ಷ ಆನಂದ್, ಸ್ಥಾಯಿ ಸಮಿತಿ ಅಧ್ಯಕ್ಷ ಪದ್ಮನಾಭ್, ಮುಖಂಡ ಎಂ.ಕೆ. ನಾಗರಾಜು ಇದ್ದರು.

ನಿಧನ ವಾರ್ತೆ

ಗಂಗಾಧರ ಜಗತೇರಿ



ಬೆಂಗಳೂರು: ನಿವೃತ್ತ ವೈದ್ಯಾಧಿಕಾರಿ ಗಂಗಾಧರ ಜಗತೇರಿ (62) ನಗರದ ಸಂಪಂಗಿರಾಮ ನಗರದಲ್ಲಿ ಶುಕ್ರವಾರ ಅನಾರೋಗ್ಯದಿಂದ ನಿಧನರಾದರು.

ಗಂಗಾಧರ ಜಗತೇರಿ ಅವರು ವೈದ್ಯಕೀಯ ಶಿಕ್ಷಣ ಪಡೆದಿದ್ದ ಹುಬ್ಬಳ್ಳಿಯ ಕರ್ನಾಟಕ ಮೆಡಿಕಲ್ ಕಾಲೇಜಿಗೆ ದಾನಪತ್ರ ಬರೆದಿದ್ದು, ಅವರ ಇಚ್ಛೆಯಂತೆ ಮೃತದೇಹವನ್ನು ಮೆಡಿಕಲ್ ಕಾಲೇಜಿಗೆ ನೀಡಲಾಗಿದೆ ಎಂದು ಕುಟುಂಬದವರು ತಿಳಿಸಿದ್ದಾರೆ. ಅವರಿಗೆ ಪತ್ನಿ, ಇಬ್ಬರು ಪುತ್ರರು ಇದ್ದಾರೆ.

ಪ್ರಜಾವಾಣಿ ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: classifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331





REAL ESTATE SELLING

Sites

Anjanapura

BDA SITE FOR SALE Anjanapura 2nd Block 40x60 East facing 80 feet Road parallel, Contact: 9845535348

Banashankari

"BANASHANKARI 1ST STAGE 40x60 BDA old demolition House close to 50 feet Road & Vidyapeeta Circle, Semi-commercial 40 feet Road. "Sri.Ganesh Estate" 9845286505"

BANASHANKARI 6TH Stage, VISHWESHRAIAH LAYOUT, BDA SITES 50X80, 40X60, 30X40, 20X30 Buying/ Selling, Immediate Settlement. 9845675290 9845446826.

BDA SITES Available @ Banashankari 6th Stage all Blocks 20x30, 30x40, 40x60 50x80 In Good Location Contact: 99722-06988

AVAILABLE BANSHANKARI 6TH STAGE 6TH BLOCK 20×30 #971 W/F 68 LAKHS CONTACT OWNER 8050908920/ 9986866661

BDA AUCTION SITE SALE 3250 Sqft NORTH WEST CORNER BANSASHANKARI 6th STAGE 4th B Block Call 9008444779

AVAILABLE,WANTED BDA SITES Banashankari 6th Stg,Anjanapura Visweswaraiah Layout, 50x80,40x60,30x40,20x30, Value Properties Call Raju 9901315949,9731814437

Hebbal

MSR NORTH CITY 2600 Sft North / West Corner Excellent Location For Sale Call: 9341260828

Kanakapura Road

"BUYING AND SELLING Residential/ Commercial/ Industrial/ Agriculture Sites, Buildings, Lands, Only Genuine Buyers & Sellers Call: "Sri.Ganesh Estates" 9845286505"

K R Puram

SALE: CORNER 3 sides roads, 60x80 compounded A and E Khata, RIFCO Shantineketan Layout, 3rd/ 4th Main, Medahalli, K.R Puram G.N Properties 9845044179

Kempegowda Layout

KEMPEGOWDA LAYOUT, Commercial/Residential BDA Site for Sale 20x30, 30x40, 40x60, 50x80 Contact Kumar 9945119449

Vidyaranyapura

2600 SQFT AND 1200 SQFT SITES SALE WITH COMPOUND, SHED, ELECTRICITY, BBMP E-AASTHI, KHATHA 9035883017

CONSTRUCTION MATERIALS FOR SALE

Large quantity of used construction materials in good conditions. Such as Shuttering Plate, Jacks, Spans, Cuplock Staging and Machinery such as Mixer Machine, DG Sets, Winch and Hoist etc,. for sale.

Contact: 6360605636 / 9845042781

WANTED

8 to 12 acres land for immediate purchase in Kanakapura Road for a leading Institution.

Call: 95130 55893

Malleshwaram

MALLESHWARAM 40X80 site for sale with building North facing 5th Cross Maruthi Extension Near Malleshwaram Railway Station Call 8660065216

Nagarabhavi

"NAGARABHAVI NEAR Deepa Complex 40x60 East & Vishveshwaraiah 6th Block 40x60 South 40 feet Road. 9448432633"

Out-Station

PENUKONDA NEAR KIA Car Factory, Madakasira Highway 50x100 (4 SITES) Residential Converted, Gated Community 400/- Psqft: 8310681025

Rajarajeshwari Nagar

SALE 18X40 East facing Site at R.R.Nagar Near Global Academy, Clear titles. Owner. 9900276199.

RMV

2800 SQFT SOCIETY SITE WITH BBMP E-AASTHI KHATHA, WITH COMPOUND WALL ETC. 4 CRORES: 9035883017

Sadashiva Nagar

WANTED 40X60/ 50X80 Residential/ Commercial/ Tenanted Commercial Buildings in Bangalore Central Areas. Owners-Please Call:Niti Estates 9900001973 'The-Real Estate Professionals'

Uttarahalli

UTTARAHALLI PLOT SALE 55x65 BBMP A Khatha North Facing, Corner & Lake View. Rs.15,000/-sft. Call: 6362348146.

Vishweshwariah Layout

DIRECT OWNER Commercial 30x40, 40x60, 50x80 Vishweshwaraiah Layout Kempegowda Layout Near RTO Office: 9620696913/9880781399

BUYING/ SELLING 20x30, 30x40, 40x60, 50x80 BDA Sites VISHVESHWARAIAH LAYOUT, KEMPEGOWDA LAYOUT, BANASHANKARI 6th Stage. Contact: 8892901567

"VISHVESWARAIAH 8TH BLOCK 40x52 East facing Site for sale Raghavendra Layout Conversion E-Katha Near NPS School Muddinaplya Circle. Contact: 7892224597"

"50X80 EAST FACING 60 FEET ROAD NEAR PROPOSED BDA COMPLEX 6TH BLOCK VISHVESHWARAIAH LAYOUT- 9845143579"

"VISHVESWARAIAH 6TH-BLOCK 60ft Road 50x80 South facing Commercial Property with 75 Squares Building. 9845500019/ 7019314962"

BUYING/ SELLING 20x30, 30x40, 40x60, 50x80 BDA Sites VISHVESHWARAIAH LAYOUT, KEMPEGOWDA LAYOUT, Contact: 9035470616

BDA-SITE FOR-SALE 30x40 East Facing at Sir.M Vishveshwaraiya Layout 1st & 3rd Block Good Location Call:7676900174 6363496142

J P Nagar

SALE BDA 40x60 WEST FACING JP NAGAR 9TH PHASE, 3RD BLOCK. FOR PRICE CONTACT: 7022435107

Kengeri Satellite Town

30X40 E/F BBMP 'A' Khata site Sale KENGERI SATELLITE TOWN, Arunachalam Layout,Clear Title.₹.9500/-. 9742681666/ 9886634578

House

Basaweshwaranagar

SALE INDEPENDENT 5BHK GROUND 2BHK FIRST FLOOR 3BHK 3 CAR-PARK A KHATHA 2 Crore: 9035883017

Jayanagar

FOR SALE IN Jayanagar, Bangalore-Two Story House with Site Area of 1290sqft, North Facing,Walking distance to Jayanagar 4th Block Complex, Excellent Location in Calm Residential Area. Clear tittles Call-9341226696

Shivajinagar And Around

800 SQFT DUPLEX HOUSE SALE VACANT POSITION LOCATED GANGENAHALLI WITH EASTHI KHATHA 56 LAKHS 9035883017

Sanjaynagar

NAGASHETTIHALLI-SANJAYNAGAR HOUSE for Sale 30X45 South Face G +1 Brokers excuse 9880886377

Bapujinagar

20X30 WEST G+3 Building 4Houses North & Shop, Bapujinagar, Kavika Layout, Mysoreroad, E-Katha 1.10L Owner 9739957911

Moodalpalya

15X40 SOUTH G+2 Building 5 Houses, East Door, SVG Nagar, Moodalapalya, E-Katha 85L Owner 9740073482

Flat

Hebbal

4BR FURNISHED Flat sale Siroya Environ Anandnagar Hebbal Bengaluru. East facing, Vaastu, 7th floor, 2867sft, price 3.4cr Call 9480198200

Seshadripuram

1 BHK flat, North east facing, near to Chaitanya School. Safe residential locality, all amenities nearby. Call 9663587845

Kanakapura Road

SALE OF FLATS Close to Silk Institute Metro & Nice Road Flats with Feel of A Villa 3 BHK starts from 1.25Cr. Private Varanda Space, RERA APPROVED, 100%Vastu Compliant Homes, Balinese Theme Land Space, with 60+Amenities. Call: 9743859000.

Nagarabhavi

FLATS FOR-SALE @ Nagarabhavi Chandra Layout 2 & 3BHK Ready to Move In Good Location Call:9538472420 9845066608

Uttarahalli

3 BHK FLAT FOR SALE 1350 Sqft. North Facing, Nearby Arehalli Arch, UTTARAHALLI Kengeri Main Road. Call 7760019494

Agricultural Land Converted

Jigani

50 ACRES Converted, Ready for Registration, Sale at JIGANI, 3.5cr./Acre, registered Owner:9980577227. Brokers Excuse.

Agricultural Land

Mysore Road

"SALE 15 Guntas Land Close Village 11 KM From Bidadi Towards Kankapura ₹45 Lakhs. 9845178335"

Commercial Land

Mysore

2 ACRES Commercial land available for JV. Suitable for Apartment and 4 Star Hotel plus Office Spaces. On Mysore Express Highway near Mysore Contact Owner 9741019028

Farm House/ Land/ Resorts

Devanahalli

SALE 9250 sqft industrial DC converted land Rate 3000 sq.ft Davenahalli cargo road near aerospace industrial land 6362964507, 9972417196

Out-Station

27 ACRES land for sale in Sira Taluk, 141 KM FROM BANGALORE, 1 KM FROM NH48 (BANGALORE-MUMBAI) GENUINE BUYERS CALL 9845397798

Industrial & Factory

Tumkur Road

SALE, 2.24 Acres Land near Nelamangala Suitable for Warehouse, Industry, Residencial, School, Resorts. 9141326819, 9880462738

Residential/ Commercial

Outer Ring Road

ORR (MAGADI Rd-Tumkur Rd) facing corner site 2,800 Sqft near Pipeline-Chowdeshwarinagar @ Rs. 22,000 call: 9980555558

Nagasandra

FOR SALE- Area- 13068.sft Residential Land for sale in Nagasandra Main Road towards Nelakadaranahalli. Call: 9071153337.

REAL ESTATE BUYING

Industrial & Factory

Tumkur Road

"WANTED KIADB 20,000 Sqft Industrial Shed/ space at Vasanthanarasapura Industrial Area, 1st Phase, Tumkur. 9008725029"

Sites

Banashankari

BDA SITES WANTED ARKAVATHY ANJANAPURA BANASHANKRI 6TH STAGE VISHWESHWARAIAH KEMPEGOWDA ANY BDA LAYOUT: 9845062822/ 8660751654

BDA-SITES WANTED @ Banashankari 6th Stage Any Block Vishweshwaraiah Layout 30x40, 40x60, 50x80 Sattlement Immediately Contact: 98455-55666

Multiple Locations

WANTED BDA SITES Anjanapura- Arkavathi Banashankari 6th.Stage, Vishweswaraiah, Kempegowda, Dr.Shivaramkaranth Layout. Contact: SAPTHAGIRI. 9036360366.

Vishweshwariah Layout

BUYING/ SELLING 20x30,30x40,40x60 50x80 BDA sites at VISHVESHWARAIAH LAYOUT, BSK 6th-stage. Contact: 9844533371/ 9341733480

BUILDERS ESSENTIAL

Water Proofing

LEAKAGE... LEAKAGE... Old/New Building, Sump, Bathroom, Wallcrack, Skylight, Terrace Waterproofing done by New Technology- 9880916988

RENTAL PROPERTIES

Accommodation Available

Commercial

RENT 1350 Sqft Ground Floor Malleshwaram 11th Cross, Suitable for Showroom, Bank: 9945656569/ 9341271837/ 9845015030

COMMERCIAL PREMISES For rent on 9th Floor, Mittal Tower 445 sqft, Contact:- 7208012111/ 8892051858.

Flats

FOUR BEDROOM Fully AirConditioned Rs100000 monthly rent maintenance extra South Facing Vastu Whatsapp 98452-28595

Industrial And Factory

AVAILABLE FOR rent. Built to suit Warehouse in 2acres site in Aerospace Industrial park near Devanahalli Airport. Arun 9945699789.

House

RENT: HANUMANTNAGAR, One BHK House, Attached Bath, Ist Floor, Semi-furnished, Contact: OWNER: 78925-30410/ 94488-09902.

RENT: GIRINAGAR: 2 BHK, Puja Room, Dining, Hall. Ist Floor, with amenities OWNER: 78925-30410/ 94488-09902.

JOB OPPORTUNITIES

General

REPUTED DISGNOSTICS at Tumkur Road required Marketing person, Receptionist and other Diagnostics staffs. Interested candidates call 63649-35735

Teachers/ Professors

HARWARD INTERNATIONAL SCHOOL CBSE Affiliation No.830335. Dasanapura, Tumkur Road, Bangalore North 562123, WANTED TGT & PGT for SOCIAL, HINDI, COMPUTER SCIENCE, PRO & MARKETING EXECUTIVE (MBA). Please send CV to: infoharwardints@gmail.com Mobile: 9880112833 9945230286

WANTED COMPUTER TEACHER 1st to 10th Std Male or Femlae State Syllabus New Carmel English School, Divanarapalya, Yeshwanthpur, Bangalore. Mob:- 9379191544.

OTHERS

For Sale

FOR SALE in excellent condition used restaurant kitchen equipment's Koriyan finish counters furniture's 8095666666

BUSINESS

Business to Business

Business

JV OPPORTUNITY in Bangalore for Customized Bungalow Projects with Architects, Layout Owners, and Builders. 8698483277.

Finance

LOANS AVAILABLE Mortgage purchase construction Residential commercial project Corporate N.P, CIBIL Properties in Karnataka. Contact:- 7019460997.

Business Offers

Distributors

WANTED FOR Any Distributor For New startup Business as Partnership startup Business please Call:9000 182908

Finance

LOANS ON property (with/without income, anywhere, any property) Schools, Trust, Real Estate, Agri, Sick Units, Startsups, any business, projects, NPA. All type of funds. Cibil no issues, Low interest, Long term. Conditions apply*. (Freelancers, DSA, Mediators, referral welcome- good income). Ct:9019388175

General

WE HAVE buyers for well-established Schools and colleges in Bangalore. If the next generation is not interested & No one to support you, sell the business & retire peacefully. Arun 9845077299.

LAND FOR Lease in Tumkur. 6567 Sq.Ft near Bangalore-Pune Highway (Ring Road). For Parcel Hubs, Warehouses, or Industrial Use. Ph 7892071566

EDUCATIONAL

Admission

METRO IIE ACADEMY Offers TMIIE (Diploma) AMIIE (B.Tech) Approved by MHRD Govt. Of India: 9341273990

JOIN IMMEDIATELY 10th 12th NPTT Diploma B.Tech LLB B.Com BBA BHM M.Com MBA E-MBA 9341273990

STEP INTO Health Care Leadership Join PGDHM Govt. Of India Certified One Year Course: 9341273990

MATRIMONIAL

Grooms Wanted

Hindu

GROOM WANTED
Alliance invited for our daughter, 30 yrs, 5'4", Hindu, Tamil, SC AD, well-educated, working as Senior Software Consultant in reputed MNC, Bangalore. Seeking well-qualified, professionally settled groom from a respectable family.
Contact :- 9980212013
sundaram1465@yahoo.com

Muslim

Wanted Groom
Sunni Muslim |1997| Bangalore Beautiful, well-cultured girl from an affluent business family. Only daughter. Looking for a well-settled, educated, and religious match.
9164400029

AUTOMOTIVE

Four Wheelers Selling

General Motors/ Chevrolet

SALE 15 years old two school TTs in good condition sparingly used Contact 6362964507, 9972417196

PERSONAL

Change of Name

CHANGE OF NAME
I, Meena Anand Dodamani W/o Ramesh Varadha Rajan A, resident of 182/S, 3rd B Cross Road, 2nd Main Road, Domlur Layout, Bengaluru- 560071, have changed my name to MEENA ANAND DODMANI vide affidavit dated 23-08-2025 before notary C.V.Earappa, Bengaluru. Henceforth I shall be called as Meena Anand Dodmani only.

ಚಿಟಿಕೆ ಸುದ್ದಿ

ಆ.30ಕ್ಕೆ ಮೂರು ಪುಸ್ತಕ ಜನಾರ್ಪಣೆ

ರಾಜರಾಜೇಶ್ವರಿ ನಗರ: ನೇತಾಜಿ ಸುಭಾಷ್ ಚಂದ್ರ ಬೋಸ್ ಅವರ 'ಒಂದು ಅಪೂರ್ವ ಆತ್ಮಕಥೆ', 'ಭಾರತೀಯ ಹೋರಾಟ' ಹಾಗೂ 'ಅಸಾಮಾನ್ಯ ದಿನಚರಿ' ಎಂಬ ಪುಸ್ತಕಗಳು ಆಗಸ್ಟ್ 30ರಂದು ಜನಾರ್ಪಣೆಯಾಗಲಿವೆ ಎಂದು ನೇತಾಜಿ ಸುಭಾಷ್ ಚಂದ್ರ ಬೋಸ್ ಟ್ರಸ್ಟ್ ಅಧ್ಯಕ್ಷರೂ ಆಗಿರುವ ಕೆಪಿಸಿಸಿ ಪ್ರಧಾನ ಕಾರ್ಯದರ್ಶಿ ಎಂ. ರಾಜ್ ಕುಮಾರ್ ತಿಳಿಸಿದರು.

ಸುಭಾಷ್ ಚಂದ್ರ ಬೋಸ್ ಟ್ರಸ್ಟ್ ರಾಜರಾಜೇಶ್ವರಿನಗರ, ಸನ್ ಸ್ಟಾರ್ ಪಬ್ಲಿಷರ್ಸ್ ವತಿಯಿಂದ ಪ್ರೊ.ಕೆ.ಈ. ರಾಧಾಕೃಷ್ಣ ಅನುವಾದಿಸಿರುವ ಮೂರು ಪುಸ್ತಕಗಳನ್ನು ಪುರಭವನದಲ್ಲಿ ನಡೆಯುವ ಸಮಾರಂಭದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಜನಾರ್ಪಣೆ ಮಾಡುವರು.

ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅಧ್ಯಕ್ಷತೆ ವಹಿಸಲಿದ್ದು, ಗೃಹ ಸಚಿವ ಜಿ.ಪರಮೇಶ್ವರ, ಸಚಿವ ಡಾ.ಎಚ್.ಸಿ. ಮಹದೇವಪ್ಪ, ಸುಭಾಷ್ ಚಂದ್ರ ಬೋಸ್ ಅವರ ಮೊಮ್ಮಗ, ಲೇಖಕ ಪ್ರೊ.ಸುಮಂತ್ರ ಬೋಸ್, ನಿವೃತ್ತ ಉಪ ದಂಡನಾಯಕ ರಮೇಶ್ ಹಲಗಲಿ, ಉದ್ಯಮಿ ರೊನಾಲ್ಡ್ ಕೊಲಾಸೋ, ಟ್ರಸ್ಟ್ ಪ್ರಧಾನ ಕಾರ್ಯದರ್ಶಿ ಜೆ.ಆರ್. ಶಿವಶಂಕರ್ ಭಾಗವಹಿಸುವರು.

78 ಸ್ಕೈವಾಕ್ ನಿರ್ಮಿಸಲು ಪ್ರಸ್ತಾವ

ಬಿಬಿಎಂಪಿಗೆ ಪತ್ರ ಬರೆದ ನಗರ ಸಂಚಾರ ವಿಭಾಗದ ಜಂಟಿ ಪೊಲೀಸ್ ಕಮಿಷನರ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಪ್ರಮುಖ ರಸ್ತೆಗಳಲ್ಲಿ ಇನ್ನೂ 78 ಸ್ಕೈವಾಕ್ ನಿರ್ಮಾಣ ಮಾಡುವಂತೆ ಕೋರಿ ಬಿಬಿಎಂಪಿಗೆ ನಗರ ಸಂಚಾರ ಪೊಲೀಸರು ಪತ್ರ ಬರೆದಿದ್ದಾರೆ.

ನಗರದ ವಿವಿಧ ಜಂಕ್ಷನ್‌ಗಳಲ್ಲಿ ಪ್ರಸ್ತುತ 82 ಸ್ಥಳಗಳಲ್ಲಿ ಸ್ಕೈವಾಕ್‌ಗಳಿವೆ. ಅವುಗಳ ಸಂಖ್ಯೆಯನ್ನು ಹೆಚ್ಚಿಸುವಂತೆ ಕೋರಿ ನಗರ ಸಂಚಾರ ವಿಭಾಗದ ಜಂಟಿ ಪೊಲೀಸ್ ಕಮಿಷನರ್ ಕಾರ್ತಿಕ್ ರೆಡ್ಡಿ ಅವರು ಬಿಬಿಎಂಪಿ ಕಮಿಷನರ್ ಎಂ.ಮಹೇಶ್ವರ್ ರಾವ್ ಅವರಿಗೆ ಪತ್ರ ಬರೆದಿದ್ದಾರೆ ಎಂದು ಗೊತ್ತಾಗಿದೆ.

ಪ್ರಮುಖ ರಸ್ತೆ, ಜಂಕ್ಷನ್‌ಗಳಲ್ಲಿ ಸ್ಕೈವಾಕ್‌ಗಳು ಇಲ್ಲ. ಇದರಿಂದ ಸಾವು–ನೋವು ಸಂಭವಿಸುತ್ತಿದೆ. ಕಳೆದ ಮೂರು ವರ್ಷಗಳಲ್ಲಿ ರಸ್ತೆದಾಟುವ ಸಂದರ್ಭದಲ್ಲಿ ಸಂಭವಿಸಿದ ಅವಘಡದಲ್ಲಿ 768 ಪಾದಚಾರಿಗಳು ಮೃತಪಟ್ಟಿದ್ದಾರೆ ಎಂದು ಸಂಚಾರ ವಿಭಾಗದ ಪೊಲೀಸರು ಹೇಳಿದರು.

'ದಟ್ಟಣೆ ಹಾಗೂ ರಸ್ತೆದಾಟುವ ಪಾದಚಾರಿಗಳ ಸಂಖ್ಯೆಯನ್ನು ಆಧರಿಸಿ 78 ಸ್ಥಳಗಳನ್ನು ಗುರುತಿಸಲಾಗಿದೆ. ಬಳ್ಳಾರಿ ರಸ್ತೆಯ ಏಳು, ಹಳೇ ಮದ್ರಾಸ್ ರಸ್ತೆಯ ಆರು ಸ್ಥಳಗಳಲ್ಲಿ ಸ್ಕೈವಾಕ್ ನಿರ್ಮಿಸುವ ಅಗತ್ಯವಿದೆ' ಎಂದು ಕಾರ್ತಿಕ್ ರೆಡ್ಡಿ ಹೇಳಿದರು.

'ಕೆಲವು ಜಂಕ್ಷನ್‌ಗಳಲ್ಲಿ ಸದಾ ವಿಪರೀತ ವಾಹನ ದಟ್ಟಣೆ ಇರುತ್ತದೆ. ಜೀಬ್ರಾ ಕ್ರಾಸಿಂಗ್ ವ್ಯವಸ್ಥೆ ಇದ್ದರೂ ಪಾದಚಾರಿಗಳು ರಸ್ತೆದಾಟಲು ಪರದಾಡುತ್ತಿದ್ದಾರೆ. ಅಲ್ಲದೇ ಪಾದಚಾರಿಗಳು ರಸ್ತೆದಾಟುವ ಸಂದರ್ಭದಲ್ಲೂ ವಾಹನ ದಟ್ಟಣೆ ಆಗುತ್ತಿದೆ. ಸ್ಕೈವಾಕ್ ನಿರ್ಮಿಸಿದರೆ ಸಮಸ್ಯೆಗೆ ಪರಿಹಾರ ಸಿಗಲಿದೆ' ಎಂದು ಸಂಚಾರ ಪೊಲೀಸರು ಹೇಳಿದರು.

'ಸಂಚಾರ ಪೊಲೀಸರಿಂದ ಪ್ರಸ್ತಾವ ಬಂದಿದ್ದು, ಕಾರ್ಯಸಾಧ್ಯತೆಯ ಬಗ್ಗೆ ಪರಿಶೀಲಿಸಲಾಗುತ್ತಿದೆ. ಬಿಬಿಎಂಪಿಯಿಂದ ಪ್ರತ್ಯೇಕ ಸರ್ವೆ ನಡೆಸಿ, ಸ್ಕೈವಾಕ್ ನಿರ್ಮಿಸುವ ಸ್ಥಳವನ್ನು ಗುರುತಿಸಲಾಗುವುದು' ಎಂದು ಬಿಬಿಎಂಪಿ ಅಧಿಕಾರಿಗಳು ತಿಳಿಸಿದರು.

ಕೆಲವು ಸ್ಥಳಗಳಲ್ಲಿರುವ ಸ್ಕೈವಾಕ್‌ಗಳನ್ನು ಪಾದಚಾರಿಗಳು ಬಳಕೆ ಮಾಡಿಕೊಳ್ಳುತ್ತಿಲ್ಲ. ಇನ್ನೂ ಕೆಲವು ಸ್ಕೈವಾಕ್‌ಗಳು ನಿರ್ವಹಣೆಯಿಲ್ಲದೇ ಸೊರಗಿವೆ. ಸ್ವಚ್ಛತೆ ಇಲ್ಲ. ಲಿಫ್ಟ್ ಕೆಟ್ಟು ಹೋಗಿವೆ. ಲಿಫ್ಟ್ ಕೆಟ್ಟು ಹೋಗಿದ್ದರಿಂದ ಪಾದಚಾರಿಗಳು-ಸ್ಕೈವಾಕ್‌ಗಳನ್ನು ಬಳಸುತ್ತಿಲ್ಲ' ಎಂದು ನಾಗರಿಕರು ದೂರಿದರು.

ಅಂಕಿ ಅಂಶಗಳು

82 ನಗರದಲ್ಲಿರುವ ಸ್ಕೈವಾಕ್‌ಗಳ ಸಂಖ್ಯೆ

63 ಪಿಪಿಪಿ ಮಾದರಿಯಲ್ಲಿ ಸ್ಕೈವಾಕ್ ನಿರ್ಮಾಣ

78 ಹೊಸದಾಗಿ ಸ್ಕೈವಾಕ್ ನಿರ್ಮಿಸಲು ಪ್ರಸ್ತಾವ



ಕೆಂಗೇರಿ ಸ್ಯಾಟಲೈಟ್ ಬಸ್ ನಿಲ್ದಾಣದ ಬಳಿಯಿರುವ ಸ್ಕೈವಾಕ್

'ಜಾಹೀರಾತು ಮೂಲಕ ಆದಾಯ'

'ನಗರದ ಹಲವು ಸ್ಥಳಗಳಲ್ಲಿ ಈಗಾಗಲೇ ನಿರ್ಮಿಸಿರುವ ಸ್ಕೈವಾಕ್‌ಗಳನ್ನು ಪಿಪಿಪಿ (ಸಾರ್ವಜನಿಕ ಖಾಸಗಿ ಸಹಭಾಗಿತ್ವ) ಮಾದರಿಯಲ್ಲಿ ನಿರ್ಮಿಸಲಾಗಿದೆ. ಮುಂದೆಯೂ ಇದೇ ಮಾದರಿಯಲ್ಲಿ ಸ್ಕೈವಾಕ್‌ಗಳನ್ನು ನಿರ್ಮಿಸುವ ಆಲೋಚನೆಯಿದೆ. ನಿರ್ಮಾಣಕ್ಕೆ ಮಾಡಲಾದ ವೆಚ್ಚವನ್ನು ಸ್ಕೈವಾಕ್‌ಗಳ ಮೇಲೆ ಪ್ರಕಟಿಸುವ ಜಾಹೀರಾತುಗಳ ಮೂಲಕ ಪಡೆದುಕೊಳ್ಳಬಹುದು' ಎಂದು ಮೂಲಗಳು ತಿಳಿಸಿವೆ.

ಯಾವ ರಸ್ತೆಗೆ ಎಷ್ಟು ಸ್ಕೈವಾಕ್ ಅಗತ್ಯ

ಹಳೇ ಮದ್ರಾಸ್ ರಸ್ತೆ	6
ಬೆಂಗಳೂರು– ಬಳ್ಳಾರಿ ರಸ್ತೆ (ಎನ್‌ಎಚ್ 44)	7
ಐಟಿಪಿಎಲ್ ಮುಖ್ಯ ರಸ್ತೆ	4
ಕನಕಪುರ ರಸ್ತೆ	3
ಹೊರವರ್ತುಲ ರಸ್ತೆ	6
ಮೈಸೂರು ರಸ್ತೆ	3
ತುಮಕೂರು ರಸ್ತೆ	3
ಹೆಸರಘಟ್ಟ ಮುಖ್ಯರಸ್ತೆ	3
ಸರ್ಜಾಪುರ ರಸ್ತೆ	3
ತುಮಕೂರು ರಸ್ತೆ	3
ಮೈಸೂರು ರಸ್ತೆ	3



ವಿಧಾನ ಪರಿಷತ್ ಸದಸ್ಯೆ ಮತ್ತು ನಟಿ ಉಮಾಶ್ರೀ ಅವರ ಏಕವ್ಯಕ್ತಿ ಅಭಿನಯದ 'ಶರ್ಮಿಷ್ಠೆ' ನಾಟಕವನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ, ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ವೀಕ್ಷಿಸಿದರು

'ಮಯೋಪಿಯಾ' ಹೆಚ್ಚಳ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಹೆಚ್ಚು ಸಮಯ ಡಿಜಿಟಲ್ ಸಾಧನಗಳ ಮುಂದೆ ಕಳೆಯುವುದರಿಂದ ಮಕ್ಕಳು, ಯುವಕರು ಮತ್ತು ಸಾಫ್ಟ್‌ವೇರ್ ಕ್ಷೇತ್ರದಲ್ಲಿನ (ಐಟಿ ಕಂಪನಿ) ಉದ್ಯೋಗಿಗಳಲ್ಲಿ ದೃಷ್ಟಿ ಸಮಸ್ಯೆಯು ಕಾಣಿಸಿಕೊಳ್ಳುತ್ತಿದ್ದು, 'ಮಯೋಪಿಯಾ' ಮತ್ತು 'ಆಸ್ಟಿಗ್ಮಾಟಿಸಂ' ಪ್ರಕರಣಗಳು ಹೆಚ್ಚುತ್ತಿವೆ' ಎಂದು ಡಾ. ಅಗರ್‌ವಾಲ್ಸ್ ಐ ಆಸ್ಪತ್ರೆ ತಿಳಿಸಿದೆ.

ಈ ಸಮಸ್ಯೆಯ ಚಿಕಿತ್ಸೆಗೆ ಸಂಬಂಧಿಸಿದಂತೆ ಆಸ್ಪತ್ರೆಯು ನಗರದಲ್ಲಿ 'ವೇವ್‌ಲೈಟ್ ಇಎಕ್ಸ್500 ಕಂಟೋರಾ ಎಕ್ಸಿಮರ್ ಲೇಸರ್' ಎಂಬ ಯಂತ್ರವನ್ನು ಬಿಡುಗಡೆ ಮಾಡಿದೆ. ಇದು ನಿಖರ ಮತ್ತು ಗ್ರಾಹಕೀಕೃತ ಚಿಕಿತ್ಸೆ ಒದಗಿಸಲು ಸಹಕಾರಿಯಾಗಿದೆ.

'ಡಿಜಿಟಲ್ ಪರದೆಯನ್ನು ನೋಡುವ ಸಮಯ ಹೆಚ್ಚುತ್ತಿರುವ ಜತೆಗೆ, ಹೊರಾಂಗಣ ಚಟುವಟಿಕೆ ಕಡಿಮೆ ಆಗುತ್ತಿದೆ. ಶೈಕ್ಷಣಿಕ ಒತ್ತಡವೂ ಮಕ್ಕಳಲ್ಲಿ ಹೆಚ್ಚುತ್ತಿದೆ. ಇದರಿಂದಾಗಿ ಮಯೋಪಿಯಾ ಪ್ರಕರಣಗಳು ಹೆಚ್ಚಳವಾಗುತ್ತಿವೆ. ಈ ಸಮಸ್ಯೆಯನ್ನು ಆರಂಭಿಕ ಹಂತದಲ್ಲಿಯೇ ಪತ್ತೆ ಮಾಡಿ, ಚಿಕಿತ್ಸೆ ಒದಗಿಸಬೇಕು' ಎಂದು ಡಾ. ಅಗರ್ವಾಲ್ಸ್ ಐ ಹಾಸ್ಪಿಟಲ್‌ನ ಕ್ಲಿನಿಕಲ್ ಸೇವೆಗಳ ಮುಖ್ಯಸ್ಥ ಡಾ. ಅಮೋದ್ ನಾಯಕ್ ತಿಳಿಸಿದ್ದಾರೆ.

'ನೌಕರರ ಹಿತಾಸಕ್ತಿ ಕಾಪಾಡಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಗ್ರೇಟರ್ ಬೆಂಗಳೂರು ಪ್ರಾಧಿಕಾರದ (ಜಿಬಿಎ) ಆಡಳಿತಕ್ಕೆ ವೃಂದ ಬಲ, ಮುಂಬಡ್ತಿ, ನೇಮಕಾತಿಗೆ ವಿಧಾನಗಳನ್ನು ರೂಪಿಸುವ ಸಂದರ್ಭದಲ್ಲಿ ಪ್ರಸ್ತುತ ಬಿಬಿಎಂಪಿಯಲ್ಲಿರುವ ಅಧಿಕಾರಿ ಮತ್ತು ನೌಕರರ ಹಿತ ಕಾಪಾಡಬೇಕು' ಎಂದು ಬಿಬಿಎಂಪಿ ಅಧಿಕಾರಿ ಮತ್ತು ನೌಕರರ ಕ್ಷೇಮಾಭಿವೃದ್ಧಿ ಸಂಘ ಮನವಿ ಮಾಡಿದೆ.

ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ನಗರಾಭಿವೃದ್ಧಿ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿಯವರಿಗೆ ಸಂಘದ ಅಧ್ಯಕ್ಷ ಎ. ಅಮೃತ್‌ರಾಜ್ ಅವರು ಪತ್ರ ಬರೆದು ಮನವಿ ಮಾಡಿಕೊಂಡಿದ್ದಾರೆ.

'ಗ್ರೇಟರ್ ಬೆಂಗಳೂರು ಪ್ರಾಧಿಕಾರ ರಚಿಸಿ ಪ್ರತ್ಯೇಕ ವೃಂದ ಮತ್ತು ನೇಮಕಾತಿ (ಸಿ ಆ್ಯಂಡ್ ಆರ್) ನಿಯಮಗಳನ್ನು ರಚಿಸುವವರೆಗೂ ಬಿಬಿಎಂಪಿಯ ಸಿ ಆ್ಯಂಡ್ ಆರ್ ನಿಯಮಗಳನ್ನೇ ಮುಂದುವರಿಸಬೇಕು' ಎಂದಿದ್ದಾರೆ.

'ಜಿಬಿಎಯಡಿ ಪಾಲಿಕೆಗಳನ್ನು ರಚಿಸಿ, ಎ ಮತ್ತು ಬಿ ದರ್ಜೆಯ ಕೆಲವು ಹುದ್ದೆಗಳಿಗೆ ನೇರ ನೇಮಕ ಮಾಡಿಕೊಂಡರೆ ಹಾಲಿ ಕಾರ್ಯನಿರ್ವಹಿಸುತ್ತಿರುವ ಅರ್ಹ ಅಧಿಕಾರಿ– ನೌಕರರು ಮುಂಬಡ್ತಿಯಿಂದ ವಂಚಿತರಾಗುತ್ತಾರೆ. ಒಟ್ಟು ಮಂಜೂರಾಗಿರುವ ಹಾಗೂ ಹೆಚ್ಚುವರಿಯಾಗಿ ಮಂಜೂರಾಗುವ ಉಪ ಆಯುಕ್ತರ ಹುದ್ದೆಗಳಲ್ಲಿ ಶೇಕಡ 60ರಷ್ಟನ್ನು ಪಾಲಿಕೆ ಅಧಿಕಾರಿಗಳಿಗೆ, ಶೇ 40ರಷ್ಟನ್ನು ಕೆಎಎಸ್–ಕೆಎಂಎಸ್ ವೃಂದದಿಂದ ಎರವಲು ಮೂಲಕ ಭರ್ತಿ ಮಾಡಬೇಕು' ಎಂದು ಕೋರಿದ್ದಾರೆ.

'ಸಹಾಯಕ ಆಯುಕ್ತರ ಎಲ್ಲ ಹುದ್ದೆಗಳನ್ನು ಪಾಲಿಕೆಯ ಅಧಿಕಾರಿಗಳಿಗೆ ಸಂಪೂರ್ಣವಾಗಿ ಮೀಸಲಿಡಬೇಕು. ಕಂದಾಯದ ಹೆಚ್ಚುವರಿ ಆಯುಕ್ತರ ಹುದ್ದೆ ಸೃಷ್ಟಿಸಿ, ಪಾಲಿಕೆಯ ಜಂಟಿ ಆಯುಕ್ತರಿಗೆ ಮುಂಬಡ್ತಿ ನೀಡಲು ಅವಕಾಶ ಕಲ್ಪಿಸಬೇಕು. ಸಹಾಯಕ ಕಂದಾಯ ಅಧಿಕಾರಿ, ಪರಿವೀಕ್ಷರ ಹುದ್ದೆಗಳನ್ನು ಈಗಿರುವ ಸಿ ಆ್ಯಂಡ್ ಆರ್ ನಿಯಮಗಳಂತೆ ಮುಂಬಡ್ತಿ ಮೂಲಕ ಭರ್ತಿ ಮಾಡಬೇಕು' ಎಂದು ಅಮೃತ್‌ರಾಜ್ ಮನವಿ ಮಾಡಿದ್ದಾರೆ.

'ಜಿಬಿಎಗೆ ಹೊಸದಾಗಿ ನಿಯಮಗಳನ್ನು ರೂಪಿಸುವ ಮುನ್ನ ಬಿಬಿಎಂಪಿ ಅಧಿಕಾರಿ ಮತ್ತು ನೌಕರರ ಕ್ಷೇಮಾಭಿವೃದ್ಧಿ ಸಂಘದ ಸದಸ್ಯರೊಂದಿಗೆ ಸಭೆ ನಡೆಸಬೇಕು' ಎಂದು ಕೋರಿದ್ದಾರೆ.

ಡಿಜೆ ನಿರ್ಬಂಧ ಪ್ರಶ್ನೆ: ಅರ್ಜಿ ವಜಾ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಗೌರಿ–ಗಣೇಶ ಹಬ್ಬ, ಈದ್ ಮಿಲಾದ್ ಮೆರವಣಿಗೆ ಮತ್ತು ಸಾರ್ವಜನಿಕ ಸಮಾರಂಭದಲ್ಲಿ ಡಿಜೆ (ಡಿಸ್ಕ್ ಜಾಕಿ–ಡಿಜಿಟಲ್ ಜಾಕಿ) ಹಾಗೂ ಸೌಂಡ್ ಸಿಸ್ಟಂ ಬಳಕೆ ನಿರ್ಬಂಧಿಸಿ ಬೆಂಗಳೂರು ಪೊಲೀಸರು ಹೊರಡಿಸಿದ್ದ ಸುತ್ತೋಲೆ ಪ್ರಶ್ನಿಸಲಾದ ಅರ್ಜಿಯನ್ನು ಹೈಕೋರ್ಟ್ ವಜಾಗೊಳಿಸಿದೆ.

ಇದೇ 14 ರಂದು ಬೆಂಗಳೂರು ಪಶ್ಚಿಮ ವಿಭಾಗದ ಜಂಟಿ ಆಯುಕ್ತ ಹೊರಡಿಸಿರುವ ಸುತ್ತೋಲೆ ಪ್ರಶ್ನಿಸಿ, 'ಕರ್ನಾಟಕ ಲಘು ಸಂಗೀತ ಮತ್ತು ಸಾಂಸ್ಕೃತಿಕ ಕಲಾವಿದರ ಸಂಘಟನೆ' ಪದಾಧಿಕಾರಿಯಾದ ಚಾಮರಾಜಪೇಟೆಯ ಶಂಕರ್, ರಿಟ್ ಅರ್ಜಿ ಸಲ್ಲಿಸಿದ್ದರು.

ಮುಖ್ಯ ನ್ಯಾಯಮೂರ್ತಿ ವಿಭು ಬಖ್ರು ನೇತೃತ್ವದ ವಿಭಾಗೀಯ ನ್ಯಾಯಪೀಠ ಶನಿವಾರ ಈ ಅರ್ಜಿ ವಿಚಾರಣೆ ನಡೆಸಿ, 'ಸಾರ್ವಜನಿಕ ಕಾರ್ಯಕ್ರಮಗಳಲ್ಲಿ ಸೌಂಡ್ ಸಿಸ್ಟಂ ಮತ್ತು ಡಿಜೆ ನಿರ್ಬಂಧಿಸಿ ಬೆಂಗಳೂರು ಪೊಲೀಸರು ಹೊರಡಿಸಿರುವ ಸುತ್ತೋಲೆಯಲ್ಲಿ ಯಾವುದೇ ಲೋಪಗಳಿಲ್ಲ' ಎಂಬ ಅಭಿಪ್ರಾಯ ವ್ಯಕ್ತಪಡಿಸಿತು.

'ವಸತಿ ಪ್ರದೇಶದಲ್ಲಿ ಶಬ್ದದ ಮಟ್ಟ ಹಗಲಿನ ವೇಳೆ 55 ಡೆಸಿಬಲ್ ಮತ್ತು ರಾತ್ರಿ ವೇಳೆ 45 ಡೆಸಿಬಲ್ ಮಟ್ಟಕ್ಕೆ ನಿರ್ಬಂಧಿಸಲಾಗಿದೆ. ಆದ್ದರಿಂದ, ಸಾರ್ವಜನಿಕ ಡಿಜೆ ಮತ್ತು ಸೌಂಡ್ ಸಿಸ್ಟಂ ಬಳಕೆಯನ್ನು ಒಪ್ಪಿ-ಕೊಳ್ಳುವುದು ಈ ನ್ಯಾಯಾಲಯಕ್ಕೆ ಕಷ್ಟ' ಎಂದು ನ್ಯಾಯಪೀಠ ತಿಳಿಸಿತು.

ಆಕ್ಷೇಪ ಏನಿತ್ತು?: 'ಶಬ್ದ ಮಾಲಿನ್ಯ ನಿಯಮ-ಗಳು–2000ಕ್ಕೆ ಅನುಗುಣವಾಗಿ ಮಾರ್ಗದರ್ಶಿ ಸೂತ್ರ ಹೆಣೆಯುವುದನ್ನು ಬಿಟ್ಟು ಈ ರೀತಿ ವ್ಯಾಪಕ ಕಾರ್ಯಾದೇಶ ಹೊರಡಿಸಿರುವುದು ಸಾಂವಿಧಾನಿಕವಾಗಿ ಕೊಡಮಾಡಿರುವ ನಮ್ಮ ಮೂಲಭೂತ ಹಕ್ಕನ್ನು ಉಲ್ಲಂ-ಘಿಸಿದಂತಾಗುತ್ತದೆ. ಸೌಂಡ್ ಸಿಸ್ಟಂ ಉತ್ಪಾದನೆ ಮತ್ತು ಮಾರಾಟಕ್ಕೆ ಅವಕಾಶವಿದೆ. ಆದರೆ, ಬಳಕೆಯನ್ನು ನಿರ್ಬಂಧಿಸುವುದು ಸಮಂಜಸ ಕ್ರಮವಲ್ಲ' ಎಂದು ಅರ್ಜಿದಾರರು ಸುತ್ತೋಲೆಯನ್ನು ಆಕ್ಷೇಪಿಸಿದ್ದರು.

ಬಿಎಸ್‌ವೈ ವಿರುದ್ಧದ ಪೋಕ್ಸೊ ಪ್ರಕರಣ: ಸೆ.2ಕ್ಕೆ ಮುಂದೂಡಿಕೆ

'ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಅವರ ವಿರುದ್ಧ ದಾಖಲಾಗಿರುವ ಪೋಕ್ಸೊ ಪ್ರಕರಣದಲ್ಲಿ ಫಿರ್ಯಾದುದಾರ ಮಹಿಳೆ (ಈಗ ಬದುಕಿಲ್ಲ) ಡಿಜಿಪಿ, ಪೊಲೀಸ್ ಕಮಿಷನರ್, ಪತಿ, ಮಗ, ಸಂಬಂಧಿಗಳ ಮೇಲೂ ದೂರು ನೀಡಿದ್ದಾರೆ' ಎಂದು ಯಡಿಯೂರಪ್ಪ ಪರ ಹಿರಿಯ ವಕೀಲರು ಹೈಕೋರ್ಟ್‌ಗೆ ಪುನುರುಚ್ಚರಿಸಿದರು. ಪ್ರಕರಣ ರದ್ದುಕೋರಿ ಬಿ.ಎಸ್.ಯಡಿಯೂರಪ್ಪ ಸಲ್ಲಿಸಿರುವ ರಿಟ್ ಅರ್ಜಿಯನ್ನು ನ್ಯಾಯಮೂರ್ತಿ ಎಂ.ಐ.ಅರುಣ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಶನಿವಾರ ವಿಚಾರಣೆ ನಡೆಸಿತು. ವಿಚಾರಣೆ ವೇಳೆ ಯಡಿಯೂರಪ್ಪ ಪರ ಪದಾಂಕಿತ ಹಿರಿಯ ವಕೀಲ ಸಿ.ವಿ.ನಾಗೇಶ್ ವಾದ ಮಂಡಿಸಿ, 'ಫಿರ್ಯಾದು ನೀಡಿದ್ದ ಮಹಿಳೆಗೆ ಇಂತಹದೊಂದು ಹವ್ಯಾಸ ಇತ್ತು. ಹಲವರ ಮೇಲೆ ದೂರು ದಾಖಲಿಸಿದ್ದರು. ಈಗಾಗಲೇ ಇಂತಹ ಘಟನೆ ನಡೆದಿಲ್ಲವೆಂದು ಹೇಳಿದ ಸಾಕ್ಷಿಗಳೂ ಇದ್ದಾರೆ' ಎಂದು ಪ್ರತಿಪಾದಿಸಿದರು. ಕೆಲ ಕಾಲ ವಾದ ಆಲಿಸಿದ ನ್ಯಾಯಪೀಠ ಸೆಪ್ಟೆಂಬರ್ 2ಕ್ಕೆ ವಿಚಾರಣೆ ಮುಂದೂಡಿತು.

ಅರ್ಜಿ ಏನು?: 'ನನ್ನ ವಿರುದ್ಧ ವಿವಿಧ ಕಾಯ್ದೆಗಳಡಿ, 2025ರ ಫೆಬ್ರುವರಿ 28ರಂದು ಪೋಕ್ಸೊ ವಿಶೇಷ ನ್ಯಾಯಾಲಯ ಹೊರಡಿಸಿರುವ ದೋಷಾರೋಪ ಪಟ್ಟಿ ರದ್ದುಪಡಿಸಬೇಕು' ಎಂದು ಅರ್ಜಿಯಲ್ಲಿ ಕೋರಲಾಗಿದೆ. ಆರ್‌ಎಂವಿ 2ನೇ ಹಂತದಲ್ಲಿನ ಡಾಲರ್ಸ್ ಕಾಲೊನಿಯಲ್ಲಿರುವ ಯಡಿಯೂರಪ್ಪ ಅವರ 'ಧವಳಗಿರಿ' ನಿವಾಸದಲ್ಲಿ 2024ರ ಫೆಬ್ರುವರಿ 2ರಂದು ಬೆಳಗ್ಗೆ 11ರಿಂದ 11.30ರ ನಡುವೆ 'ಯಡಿಯೂರಪ್ಪ ಅವರು ಬಾಲಕಿಗೆ ಲೈಂಗಿಕ ಕಿರುಕುಳ ನೀಡಿದ್ದಾರೆ' ಎಂಬುದು ಆರೋಪ.

ಅಲೆಮಾರಿ ಮುಖಂಡರು–ಸಿ.ಎಂ ಚರ್ಚೆ ವಿಫಲ

ಶೇ 1ರಷ್ಟು ಒಳಮೀಸಲಾತಿಗೆ ಪಟ್ಟು • ಅಹೋರಾತ್ರಿ ಧರಣಿ ಮುಂದುವರಿಸಲು ಹೋರಾಟ ಸಮಿತಿ ನಿರ್ಧಾರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪ್ರತ್ಯೇಕ ಶೇಕಡ 1ರಷ್ಟು ಒಳ ಮೀಸಲಾತಿ ನೀಡಬೇಕೆಂಬ ಬೇಡಿಕೆ ಕುರಿತು 'ಪರಿಶಿಷ್ಟ ಜಾತಿಯ 59 ಸೂಕ್ಷ್ಮ, ಅತಿ ಸೂಕ್ಷ್ಮ ಅಲೆಮಾರಿಗಳ ಸಮುದಾಯಗಳ ಒಳ ಮೀಸಲಾತಿ ವಂಚಿತ ಹೋರಾಟ ಸಮಿತಿ' ಪದಾಧಿಕಾರಿಗಳು ಹಾಗೂ ಮುಖ್ಯಮಂತ್ರಿ ಸಿದ್ದರಾಮಯ್ಯ ನಡುವೆ ಶನಿವಾರ ನಡೆದ ಮಾತುಕತೆ ಫಲಪ್ರದವಾಗಿಲ್ಲ. ಹಾಗಾಗಿ ಅಹೋರಾತ್ರಿ ಧರಣಿ ಮುಂದುವರೆಸಲು ಹೋರಾಟ ಸಮಿತಿ ನಿರ್ಧರಿಸಿದೆ.

ನ್ಯಾಯಮೂರ್ತಿ ಎಚ್.ಎನ್. ನಾಗಮೋಹನ ದಾಸ್ ಆಯೋಗದ ಶಿಫಾರಸಿನಂತೆ ತಮ್ಮ ಸಮುದಾಯವನ್ನು 'ಪ್ರವರ್ಗ–ಎ' ನಲ್ಲಿಯೇ ಇರಿಸಿ ಶೇಕಡ 1ರಷ್ಟು ಒಳ ಮೀಸಲಾತಿ ನೀಡುವಂತೆ ಆಗ್ರಹಿಸಿ ಅಲೆಮಾರಿ ಸಮುದಾಯ ಸ್ವಾತಂತ್ರ್ಯ ಉದ್ಯಾನದಲ್ಲಿ ನಡೆಸುತ್ತಿರುವ ಅಹೋರಾತ್ರಿ ಧರಣಿ ಶನಿವಾರ ಮೂರನೇ ದಿನಕ್ಕೆ ಕಾಲಿರಿಸಿದೆ.

ಬೇಡಿಕೆ ಈಡೇರಿಕೆ ಕುರಿತು ಅಲೆಮಾರಿ ಮುಖಂಡರು ಹಾಗೂ ಸಿದ್ದರಾಮಯ್ಯ ನಡುವೆ ಚರ್ಚೆ



ಬೆಂಗಳೂರಿನ ಸ್ವಾತಂತ್ರ್ಯ ಉದ್ಯಾನದಲ್ಲಿ 'ಪರಿಶಿಷ್ಟ ಜಾತಿಯ 59 ಸೂಕ್ಷ್ಮ, ಅತಿ ಸೂಕ್ಷ್ಮ ಅಲೆಮಾರಿಗಳ ಸಮುದಾಯಗಳ ಒಳ ಮೀಸಲಾತಿ ವಂಚಿತ ಹೋರಾಟ ಸಮಿತಿ' ನೇತೃತ್ವದಲ್ಲಿ ಅಹೋರಾತ್ರಿ ಧರಣಿ ಮುಂದುವರೆದಿದೆ –ಪ್ರಜಾವಾಣಿ ಚಿತ್ರ

ನಡೆಯಿತು.

ಈ ವೇಳೆ ಮುಖಂಡರು, 'ದನಿ ಇಲ್ಲದ ಅಲೆಮಾರಿ ಸಮುದಾಯಗಳ ವಿಷಯದಲ್ಲಿ ಸೂಕ್ತ ನಿರ್ಧಾರ ತೆಗೆದುಕೊಂಡಿಲ್ಲ. ಅಲೆಮಾರಿಗಳನ್ನು ಬಂಜಾರ, ಭೋವಿ, ಕೊರಮ, ಕೊರಚ ಸಮುದಾಯಗಳ ಜೊತೆಗೆ ಸೇರಿಸಿ ಶೇಕಡ 5ರಷ್ಟು ಮೀಸಲಾತಿ ನಿಗದಿ ಮಾಡಿರುವುದರಿಂದ ಅಲೆಮಾರಿ ಸಮುದಾಯಗಳು ಶಾಶ್ವತವಾಗಿ ಮೀಸಲಾತಿಯಿಂದ ವಂಚಿತವಾಗಲಿವೆ. ಶಿಕ್ಷಣ ಸೇರಿ ಎಲ್ಲಾ ಕ್ಷೇತ್ರಗಳಲ್ಲೂ ಸಮುದಾಯ ಹಿಂದುಳಿದಿದೆ. ನಾಗಮೋಹನ ದಾಸ್ ವರದಿ ವೈಜ್ಞಾನಿಕವಾಗಿದ್ದು, ಅದರ ಶಿಫಾರಸಿನಂತೆ ಪ್ರತ್ಯೇಕ ಶೇಕಡ 1ರಷ್ಟು ಮೀಸಲಾತಿ ನೀಡಬೇಕು' ಎಂಬುದನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಗಮನಕ್ಕೆ ತಂದರು.

ಸಭೆಯಲ್ಲಿ ಮಾಜಿ ಸಚಿವ ಎಚ್.ಆಂಜನೇಯ, ಅಲೆಮಾರಿ ಸಮುದಾಯದ ಮುಖಂಡರಾದ ಅಂಬಣ್ಣ ಅರೋಲಿಕರ್, ಕವಿತಾ ಬಸವರಾಜು, ಶೇಷಪ್ಪ, ಸಣ್ಣ ಮಾರಪ್ಪ ಹಾಗೂ ಚಾವಡೆ ಲೋಕೇಶ್ ಪಾಲ್ಗೊಂಡಿದ್ದರು.

'59 ಜಾತಿಯವರಿಗೆ ವಿಶೇಷ ಪ್ಯಾಕೇಜ್ ಭರವಸೆ'

'ಎಲ್ಲರಿಗೂ ಸಾಮಾಜಿಕ ನ್ಯಾಯ ಕೊಡಬೇಕು. ಎಡಗೈ ಮತ್ತು ಬಲಗೈ ಸಮುದಾಯಕ್ಕೆ ತಲಾ ಶೇಕಡ 6ರಷ್ಟು ಒಳ ಮೀಸಲಾತಿ ನೀಡುವ ಬಗ್ಗೆ ಸಚಿವ ಸಂಪುಟ ಸಭೆಯಲ್ಲಿ ನಿರ್ಧಾರ ಆಗಿದೆ. ಹಾಗಾಗಿ ಹಿಂದೆ ಸರಿಯಲು ಆಗುವುದಿಲ್ಲ. ಮುಂದೆ ನ್ಯಾಯ ಒದಗಿಸಲಾಗುವುದು. 59 ಜಾತಿಗಳಿಗೆ ವಿಶೇಷ ಪ್ಯಾಕೇಜ್ ಮಾಡುವ ಬಗ್ಗೆ ಯೋಚನೆ ಮಾಡುತ್ತಿದ್ದೇವೆ. ಸ್ವಲ್ಪ ಕಾಲಾವಕಾಶ ಬೇಕು' ಎಂದು ಸಿದ್ದರಾಮಯ್ಯ ತಿಳಿಸಿದರು. ಹಾಗಾಗಿ ನಮಗೆ ನ್ಯಾಯ ಸಿಗುವವರೆಗೂ ಹೋರಾಟ ಮುಂದುವರೆಸಲು ನಿರ್ಧರಿಸಲಾಗಿದೆ' ಎಂದು ಅಲೆಮಾರಿ ಬುಡಕಟ್ಟು ಮಹಾಸಭಾ ರಾಜ್ಯ ಅಧ್ಯಕ್ಷ ಬಿ.ಎಲ್.ಹನುಮಂತಪ್ಪ ಅವರು 'ಪ್ರಜಾವಾಣಿ'ಗೆ ತಿಳಿಸಿದರು.

'ಎಸ್‌ಸಿ ಮೀಸಲಾತಿ ಶೇ18ಕ್ಕೆ ಹೆಚ್ಚಿಸಿ'

ಬಾಗಲಕೋಟೆ: 'ಪರಿಶಿಷ್ಟ ಜಾತಿ ಜನಸಂಖ್ಯೆ ರಾಜ್ಯದಲ್ಲಿ ಶೇ18ರಷ್ಟಿದ್ದು, ಮೀಸಲಾತಿ ಪ್ರಮಾಣವನ್ನೂ ಶೇ 18ಕ್ಕೆ ಹೆಚ್ಚಿಸಬೇಕು' ಎಂದು ಭೋವಿ ಗುರುಪೀಠದ ಇಮ್ಮಡಿ ಸಿದ್ಧರಾಮೇಶ್ವರ ಸ್ವಾಮೀಜಿ ಒತ್ತಾಯಿಸಿದರು.



ಇಮ್ಮಡಿ ಸಿದ್ಧರಾಮೇಶ್ವರ ಸ್ವಾಮೀಜಿ

'ಭೋವಿ, ಬಂಜಾರ, ಕೊರಮ, ಕೊರಚ ಜಾತಿಯವರು ಶೇ 5ರಷ್ಟು ಮತ್ತು ಅಲೆಮಾರಿಗಳು ಶೇ 1ರಷ್ಟು ಇದ್ದಾರೆ. ಆದ್ದರಿಂದ ಮೀಸಲಾತಿ ಹೆಚ್ಚಿಸಿ, ಎಲ್ಲ ಗುಂಪುಗಳಿಗೆ ಸಮನಾದ ಒಳಮೀಸಲಾತಿ ನೀಡಬೇಕು' ಎಂದು ಅವರು ಶನಿವಾರ ಪತ್ರಿಕಾಗೋಷ್ಠಿಯಲ್ಲಿ ಒತ್ತಾಯಿಸಿದರು.

'2011ರ ಜನಗಣತಿಯಲ್ಲಿ ಪರಿಶಿಷ್ಟ ಜಾತಿ ಜನಸಂಖ್ಯೆ ಕಡಿಮೆ ತೋರಿಸಲಾಗಿದೆ. ರಾಜ್ಯದಲ್ಲಿ ಶೇ 22ರಷ್ಟು ಜನಸಂಖ್ಯೆ ಹೆಚ್ಚಳವಾಗಿದ್ದು, ಪರಿಶಿಷ್ಟ ಜಾತಿ ಜನಸಂಖ್ಯೆ 1.22 ಕೋಟಿಯಿಂದ 1.35 ಕೋಟಿಯೊಳಗೆ ಇರಬೇಕಿತ್ತು. ಅಲೆಮಾರಿ, ಅರೆ ಅಲೆಮಾರಿಗಳನ್ನು ಕಡೆಗಣಿಸಲಾಗಿದೆ' ಎಂದರು.

'ಎಡಗೈ, ಬಲಗೈ ಸಂಘರ್ಷದಲ್ಲಿ ಧ್ವನಿ ಇಲ್ಲದ ಸಮಾಜಗಳಿಗೆ ಅನ್ಯಾಯವಾಗಿದೆ. ಸಮೀಕ್ಷೆಯಲ್ಲಿ ಅತ್ಯಂತ ಹಿಂದುಳಿದ ಎಂದು ಗುರುತಿಸಲಾದ 'ಸಿ' ಗುಂಪಿಗೆ ರೋಸ್ಟರ್ ಪದ್ಧತಿಯಲ್ಲಿ ಬಿಂದು '1' ನೀಡಬೇಕು. ವಿಮುಕ್ತ ಸಮುದಾಯ: ''ಸಿ' ಗುಂಪಿಗೆ ಅಸಾಂವಿಧಾನಿಕ ಪದ 'ಸ್ಪೃಶ್ಯ' ಬದಲಿಗೆ ರಾಷ್ಟ್ರೀಯ ಪರಿಶಿಷ್ಟ ಜಾತಿ ಆಯೋಗ ಗುರುತಿಸಿರುವಂತೆ 'ವಿಮುಕ್ತ ಸಮುದಾಯ' ಎಂದು ಗುರುತಿಸಬೇಕು' ಎಂದು ಆಗ್ರಹಿಸಿದರು.

ಸುದ್ದಿ 2 ನಿಮಿಷ


'ಲಿಂಗಾಯತ ಧರ್ಮ: ಕಾನೂನು ಮಾನ್ಯತೆ ಸಿಗಲಿ'

ಹುಬ್ಬಳ್ಳಿ: '12ನೇ ಶತಮಾನದಲ್ಲೇ ಹುಟ್ಟಿದ ಲಿಂಗಾಯತ ಧರ್ಮ ಈಗ ಸ್ವತಂತ್ರವಾಗಬೇಕಿಲ್ಲ. ಆದರೆ, ಕಾನೂನು ಮಾನ್ಯತೆ ಸಿಗಬೇಕಿದೆ' ಎಂದು ಸಾಣೇಹಳ್ಳಿ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮೀಜಿ ಹೇಳಿದರು.

ಲಿಂಗಾಯತ ಒಳಪಂಗಡಗಳ ಒಕ್ಕೂಟ ಶನಿವಾರ ಇಲ್ಲಿ ಏರ್ಪಡಿಸಿದ್ದ 'ಲಿಂಗಾಯತರಿಗೆ ಅಲ್ಪಸಂಖ್ಯಾತರ ಮಾನ್ಯತೆಗಾಗಿ ಹೋರಾಟ ವೇದಿಕೆ'ಯ ಉದ್ಘಾಟನಾ ಸಮಾರಂಭದಲ್ಲಿ ಅವರು, 'ಲಿಂಗಾಯತ ಸ್ವತಂತ್ರ ಧರ್ಮ. ಅದು ಹಿಂದೂ ಧರ್ಮದ ವ್ಯಾಪ್ತಿಗೆ ಬರುವುದಿಲ್ಲ. ಹಿಂದೂ ಎಂಬುದು ಧರ್ಮವಲ್ಲ' ಎಂದರು.

'ಹಿಂದುಳಿದ ವರ್ಗಗಳ ಆಯೋಗದ ಸಾಮಾಜಿಕ, ಶೈಕ್ಷಣಿಕ, ಆರ್ಥಿಕ ಸಮೀಕ್ಷೆ ಪ್ರಕಾರ, ಲಿಂಗಾಯತರ ಜನಸಂಖ್ಯೆ 60 ಲಕ್ಷ ಎಂದಿದೆ. ಎಚ್ಚೆತ್ತುಕೊಳ್ಳದಿದ್ದರೆ, ಅದು 30 ಲಕ್ಷಕ್ಕೆ ಇಳಿಯಲಿದೆ' ಎಂದರು.

'ಲಿಂಗಾಯತ ಎಂದು ಬರೆಸಿದರೆ ಸೌಲಭ್ಯ ಕಡಿಮೆಯಾಗಲಿವೆ ಎಂಬ ತಪ್ಪುಕಲ್ಪನೆ ವಿರುದ್ಧ ಜಾಗೃತಿ ಮೂಡಿಸಲು ಸೆ.1ರಿಂದ ಬಸವನ ಬಾಗೇವಾಡಿಯಿಂದ ಬಸವ ಸಂಸ್ಕೃತಿ ಅಭಿಯಾನ ಆರಂಭಿಸುತ್ತೇವೆ. ಬೆಂಗಳೂರಿನಲ್ಲಿ ಅ.5ರಂದು ಸಮಾರೋಪವಾಗಲಿದೆ' ಎಂದರು.



'ಜಾತಿ ಸಮೀಕ್ಷೆ ವೇಳೆ ಧರ್ಮದ ಕಾಲಂನಲ್ಲಿ ಲಿಂಗಾಯತ, ಜಾತಿ ಕಾಲಂನಲ್ಲಿ ಉಪ ಪಂಗಡ ನಮೂದಿಸಬೇಕು. ಹಿಂದೂ ಲಿಂಗಾಯತ, ವೀರಶೈವ ಲಿಂಗಾಯತ ಎಂದು ಬರೆಸಬಾರದು. ನಮ್ಮ ಧರ್ಮ ಲಿಂಗಾಯತ, ಧರ್ಮಗುರು ಬಸವಣ್ಣ, ಲಾಂಛನ ಇಷ್ಟಲಿಂಗ, ಧರ್ಮ ನೀತಿ ಸಂಹಿತೆ ಅಷ್ಟಾವರಣ, ಪಂಚಾಚಾರ, ಷಟ್‌ಸ್ಥಲ. ಸಮಾಜದ ಹಿರಿಯರು ಇದನ್ನು ಯುವಜನರಿಗೆ ತಿಳಿಸಬೇಕು' ಎಂದರು.

ಮುಸುಕುಧಾರಿ ಬಂಧನ ಹುಟ್ಟೂರಿನಲ್ಲಿ ಸಂತಸ

ಮಂಡ್ಯ: ಸಾಕ್ಷಿ ದೂರುದಾರ ಮುಸುಕುಧಾರಿ ಬಂಧನವಾಗುತ್ತಿದ್ದಂತೆ, ಆತನ ಹುಟ್ಟೂರು ಚಿಕ್ಕಬಳ್ಳಿ ಜನ ಸಂತಸ ವ್ಯಕ್ತಪಡಿಸಿದ್ದಾರೆ.

'ಧರ್ಮದ ವಿರುದ್ಧ ಆಪಾದನೆ ಮಾಡಿದವನಿಗೆ ತಕ್ಕ ಶಾಸ್ತಿಯಾಗಿದೆ. ಮಂಜುನಾಥಸ್ವಾಮಿ, ಖಾವಂದರಿಗೆ ಕಳಂಕ ತರಲು ಹೊರಟಿದ್ದವ ತಾನೇ ಬಲೆಗೆ ಬಿದ್ದಿದ್ದಾನೆ' ಎಂದು ಗ್ರಾಮಸ್ಥರು ಪ್ರತಿಕ್ರಿಯಿಸಿದರು.

'ಈತನ ಹಿಂದೆ ಇದ್ದು ಷಡ್ಯಂತ್ರ ರೂಪಿಸಿದವರಿಗೂ ತಕ್ಕ ಶಿಕ್ಷೆ ಆಗಬೇಕು. ಈತ ಮಂಜುನಾಥಸ್ವಾಮಿಯ ಭಕ್ತರ ಭಾವನೆಗೆ ಧಕ್ಕೆ ತಂದಿದ್ದಾನೆ. ಈತನ ಬಂಧನ ನಮ್ಮೆಲ್ಲರಿಗೂ ಸಂತಸ ತಂದಿದೆ' ಎಂದಿದ್ದಾರೆ.

ಮದ್ದೂರಿನಲ್ಲಿ ಆತನ ಜೊತೆ ಕೆಲಸ ಮಾಡಿದ್ದ ರಾಜೀವ್ ಎಂಬಾತ 'ಮುಸುಕುಧಾರಿ ಹೇಳಿರುವುದೆಲ್ಲ ಸುಳ್ಳು' ಎಂದು ಹೇಳಿಕೆ ನೀಡಿದ್ದ.

'ಧರ್ಮಸ್ಥಳದ ಕುರಿತ ಅನಾಮಿಕನ ದೂರಿಗೆ ಸರ್ಕಾರ ಪ್ರೋತ್ಸಾಹಿಸಿತು. ಈಗ ಬಂಧಿಸಿದೆ. ಷಡ್ಯಂತ್ರದ ಹಿಂದಿರುವವರನ್ನೂ ಬಂಧಿಸಬೇಕು' ಎಂದು ಮಾಜಿ ಸಚಿವ ಸಿ.ಎಸ್.ಪುಟ್ಟರಾಜು ಪ್ರತಿಕ್ರಿಯಿಸಿದ್ದಾರೆ.

ಜಲಾಶಯ	ಗರಿಷ್ಠ ಮಟ್ಟ (ಅಡಿಗಳಲ್ಲಿ)	ಇಂದಿನ ಮಟ್ಟ	ಒಳಹರಿವು (ಕ್ಯೂಸೆಕ್‌ಗಳಲ್ಲಿ)	ಹೊರಹರಿವು (ಕ್ಯೂಸೆಕ್‌ಗಳಲ್ಲಿ)
ಕೆ ಆರ್ ಎಸ್ *	124.80	123.72	14,258	14,069
ಹಾರಂಗಿ	2,859	2,857.61	3,097	2,250
ಕಬಿನಿ	2,284.00	2,283.82	5,870	6,650
ಹೇಮಾವತಿ	2,922	2,921.83	8,175	7,785
ಲಿಂಗನಮಕ್ಕಿ	1,819	1,816.90	11,739	7,766
ಸೂಪಾ (ಮೀ)	564	556.88	11,445	4,330
ಮಾಣಿ	595	592.75	659	0
ತುಂಗಭದ್ರಾ	1,633	1,625.23	55,393	28,711
ಮಲಪ್ರಭಾ	2,079.5	2,078.30	5,440	4,294
ಘಟಪ್ರಭಾ	2175	2,173.73	15,400	18,291
ಭದ್ರಾ *	186	184	6,215	6,215
ಆಲಮಟ್ಟಿ (ಮೀ)	519.6	517.94	245562	2,00,000
ನಾರಾಯಣಪುರ (ಮೀ)	492.25	490.35	220000	2,14,630

* ನೆಲಮಟ್ಟದಿಂದ

ಸತ್ಯ ಹೊರಬಂದಿದೆ; ಆರೋಪಿಗಳಿಗೆ ಕಠಿಣ ಶಿಕ್ಷೆ ನೀಡಬೇಕು: ಆರಗ ಜ್ಞಾನೇಂದ್ರ ಆಗ್ರಹ

ಧರ್ಮಸ್ಥಳ ಪ್ರಕರಣ: ಸರ್ಕಾರ ಕ್ಷಮೆ ಯಾಚಿಸಲಿ

ಪ್ರಜಾವಾಣಿ ವಾರ್ತೆ

ಉಜಿರೆ (ದಕ್ಷಿಣ ಕನ್ನಡ): 'ದೇವರ ಅನುಗ್ರಹದಿಂದ ಈಗ ಸತ್ಯ ಹೊರಬಂದಿದೆ. ಆರೋಪಿಗಳಿಗೆ ಕಠಿಣ ಶಿಕ್ಷೆ ಆಗಬೇಕು. ರಾಜ್ಯ ಸರ್ಕಾರ ಜನರ ಕ್ಷಮೆಯಾಚಿಸಬೇಕು' ಎಂದು ಬಿಜೆಪಿ ಶಾಸಕ ಆರಗ ಜ್ಞಾನೇಂದ್ರ ಹೇಳಿದರು.

ತೀರ್ಥಹಳ್ಳಿ ಕ್ಷೇತ್ರದಿಂದ ಶನಿವಾರ ಭಕ್ತರೊಂದಿಗೆ ಬಂದು ಧರ್ಮಸ್ಥಳ ಕ್ಷೇತ್ರದ ಧರ್ಮಾಧಿಕಾರಿ ಡಿ.ವೀರೇಂದ್ರ ಹೆಗ್ಗಡೆ ಅವರನ್ನು ಭೇಟಿಯಾಗಿ ಮಾತುಕತೆ ನಡೆಸಿದರು.

'ಬುರುಡೆ ಪ್ರಕರಣದಿಂದ ಕ್ಷೇತ್ರದ ಅಪಪ್ರಚಾರವಾಗಿದೆ. ಇದರಲ್ಲಿ ವಿಚಾರವಂತರು, ಎಡಪಂಥೀಯರ ಕೈವಾಡವಿದೆ. ಆರಂಭದಲ್ಲೆ ಸಾಕ್ಷಿ ದೂರುದಾರನ ಬಾಯಿ ಬಿಡಿಸಿದ್ದರೆ ಸತ್ಯ ತಿಳಿಯುತ್ತಿತ್ತು' ಎಂದರು.

ತೀರ್ಥಹಳ್ಳಿಯ ಪೂಜ್ಯಪಾದ ಚಿಕಿತ್ಸಾಲಯದ ಡಾ.ಜೀವಂಧರ ಕುಮಾರ್, ಮುಖಂಡ ನವೀನ್ ಇದ್ದರು.



ಶಾಸಕ ಆರಗ ಜ್ಞಾನೇಂದ್ರ ನೇತೃತ್ವದಲ್ಲಿ ಭಕ್ತರು, ಅಭಿಮಾನಿಗಳು ಶನಿವಾರ ಧರ್ಮಾಧಿಕಾರಿ ವೀರೇಂದ್ರ ಹೆಗ್ಗಡೆ ಅವರನ್ನು ಭೇಟಿಯಾದರು

'ಸೂತ್ರಧಾರಿಗಳನ್ನು ಬಂಧಿಸಿ'

'ಮುಸುಕುಧಾರಿ ಹೇಳಿರುವ ಸೂತ್ರಧಾರಿಗಳನ್ನು ತಕ್ಷಣ ಬಂಧಿಸಿ, ವಿಚಾರಣೆಗೆ ಒಳಪಡಿಸಬೇಕು. ಇಲ್ಲದಿದ್ದರೆ ಷಡ್ಯಂತ್ರದಲ್ಲಿ ಸರ್ಕಾರವೂ ಭಾಗಿಯಾಗಿದೆ ಎಂದು ಜನರು ಭಾವಿಸುತ್ತಾರೆ' ಎಂದು ಬಸವರಾಜ ಬೊಮ್ಮಾಯಿ ಹೇಳಿದ್ದಾರೆ.

ಧರ್ಮಸ್ಥಳದ ವಿಚಾರದಲ್ಲಿ ಎಸ್‌ಐಟಿ ಮೊದಲು ಮಾಡಬೇಕಿದ್ದ ಕೆಲಸವನ್ನು ಕೊನೆಯಲ್ಲಿ ಮಾಡುತ್ತಿದೆ. ದಕ್ಷ ಅಧಿಕಾರಿಗಳಿಗೆ ಮುಕ್ತ ಸ್ವಾತಂತ್ರ್ಯ ನೀಡಿರಲಿಲ್ಲ ಎನ್ನುವುದು ಸಾಬೀತಾಗಿದೆ ಎಂದಿದ್ದಾರೆ.

ಎನ್‌ಐಎ ತನಿಖೆಗೆ ಬಿಜೆಪಿ ಆಗ್ರಹ

ಬೆಂಗಳೂರು: ಧರ್ಮಸ್ಥಳ ಗ್ರಾಮದಲ್ಲಿ ಅಪರಾಧ ಕೃತ್ಯಗಳಿಗೆ ಸಂಬಂಧಿಸಿದ ಮೃತದೇಹಗಳನ್ನು ಹೂತು ಹಾಕಲಾಗಿದೆ ಎಂದು ಆರೋಪಿಸಲಾದ ಪ್ರಕರಣ ತಿರುವು ಪಡೆಯುತ್ತಿದ್ದಂತೆ, ಬಿಜೆಪಿ ನಾಯಕರು ರಾಜ್ಯ ಸರ್ಕಾರದ ವಿರುದ್ಧ ಟೀಕಾಪ್ರಹಾರ ಮಾಡಿದ್ದಾರೆ.

ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್. ಅಶೋಕ, ಸಂಸದ ಬಸವರಾಜ ಬೊಮ್ಮಾಯಿ ಅವರು ಎನ್‌ಐಎ ತನಿಖೆಗೆ ಒತ್ತಾಯಿಸಿದ್ದಾರೆ.

ಸುದ್ದಿಗೋಷ್ಠಿಯಲ್ಲಿ ಶನಿವಾರ ಮಾತನಾಡಿದ ಆರ್.ಅಶೋಕ, 'ದೂರುದಾರನ ಹಿನ್ನೆಲೆ ಪರಿಶೀಲಿಸದೆ ಎಸ್‌ಐಟಿ ರಚಿಸಿದ್ದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ತಪ್ಪು. ಮುಸುಕುಧಾರಿಯನ್ನು ಬಂಧಿಸಿದರೆ ಸಾಲದು, ಅವರ ಹಿಂದೆ ಇರುವವರನ್ನು ಪತ್ತೆ ಮಾಡಬೇಕು. ಪ್ರಗತಿಪರರು ಕರೆ ತಂದಿರುವ ಶಂಕೆ ಇದೆ. ಅದಕ್ಕಾಗಿ ಎಸ್‌ಐಟಿ ರಚಿಸಬೇಕು. ಅಪಪ್ರಚಾರಕ್ಕೆ ವಿದೇಶದಿಂದ ಹಣ ಬಂದಿರುವ ಸಾಧ್ಯತೆ ಇದೆ. ಹಾಗಾಗಿ, ರಾಷ್ಟ್ರೀಯ ತನಿಖಾ ಸಂಸ್ಥೆಗೆ ವಹಿಸಬೇಕು' ಎಂದು ಒತ್ತಾಯಿಸಿದರು.

'ಎಸ್‌ಐಟಿ ರಚಿಸುವ ಮೊದಲು ಮುಸುಕುಧಾರಿಯ ಪೂರ್ವಾಪರ ತಿಳಿದುಕೊಳ್ಳಬೇಕಿತ್ತು. ಸಿದ್ದರಾಮಯ್ಯ ಅವರು ಪ್ರಗತಿಪರರ ಮಾತು ಕೇಳಿಕೊಂಡು ಎಸ್‌ಐಟಿ ರಚಿಸಿದರು. ಸರ್ಕಾರಕ್ಕೆ ಕೋಟ್ಯಂತರ ರೂಪಾಯಿ ನಷ್ಟ ಮಾಡಿದ್ದಾರೆ. ಸರ್ಕಾರದ ತಪ್ಪು ಸಾಬೀತಾಗಿದೆ. ಈ ಹಣವನ್ನು ಕಾಂಗ್ರೆಸ್ ಭರಿಸಬೇಕು. ಈ ಘಟನೆಯಿಂದ ಭಕ್ತರು ಅನುಭವಿಸಿದ ನೋವು ಶಮನಗೊಳಿಸಲು ಸಾಧ್ಯವಿಲ್ಲ' ಎಂದರು.

'ಯೂಟ್ಯೂಬರ್ ಸಮೀರ್ ವಿಡಿಯೊ ಮಾಡಿ ಅಪಪ್ರಚಾರ ಮಾಡಿದ್ದಾನೆ. ಮೊದಲು ಆತನನ್ನು ಮೊದಲು ಬಂಧಿಸಬೇಕು. ಜಾಮೀನು ರದ್ದು ಮಾಡಲು ಮೇಲ್ಮನವಿ ಸಲ್ಲಿಸಬೇಕು' ಎಂದು ಆಗ್ರಹಿಸಿದರು.

> ಷಡ್ಯಂತ್ರ ಮಾಡಿದ ಎಲ್ಲರ ಮುಖವಾಡಗಳು ಬಯಲಾಗಬೇಕು. ಹಿಂದೂ ಧಾರ್ಮಿಕ ಶ್ರದ್ಧಾ ಕೇಂದ್ರವನ್ನು ಅಪವಿತ್ರಗೊಳಿಸಲು ಯತ್ನಿಸಿದವರ ವಿರುದ್ಧ ಕಠಿಣ ಕಾನೂನು ಕ್ರಮ ಜರುಗಿಸಬೇಕು
>
> **ಬಿ.ವೈ.ವಿಜಯೇಂದ್ರ,** ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ

ನಾವು ನ್ಯಾಯದ ಪರ– ಡಿಕೆಶಿ

ಬೆಂಗಳೂರು: 'ಧರ್ಮಸ್ಥಳ ವಿಚಾರದಲ್ಲಿ ನಾವು (ಸರ್ಕಾರ) ನ್ಯಾಯದ ಪರ. ಧರ್ಮದ ವಿಚಾರದಲ್ಲಿ ರಾಜಕಾರಣ ಮಾಡಬೇಡಿ ಎಂದಷ್ಟೇ ನಾವು ಹೇಳುತ್ತಿದ್ದೇವೆ' ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹೇಳಿದರು.

'ಧರ್ಮಸ್ಥಳ ಪ್ರಕರಣದಲ್ಲಿ ಬಿಜೆಪಿಯವರು ಇದುವರೆಗೆ ಅಡ್ಡಗೋಡೆ ಮೇಲೆ ದೀಪ ಇಟ್ಟಂತೆ ಮಾತನಾಡುತ್ತಿದ್ದರು. ನಾನು 'ಷಡ್ಯಂತ್ರ' ವಿಚಾರ ಪ್ರಸ್ತಾವ ಮಾಡಿದ ನಂತರ ಅವರು ಮಾತನಾಡುತ್ತಿದ್ದಾರೆ' ಎಂದರು.

'ಧರ್ಮಸ್ಥಳದ ಕುಟುಂಬದವರೇ ಬಂದು ಮುಖ್ಯಮಂತ್ರಿಯ ಬಳಿ, ಎಸ್‌ಐಟಿ ರಚಿಸಿರುವುದು ಒಳ್ಳೆಯ ಕೆಲಸ ಎಂದಿದ್ದಾರೆ. ತನಿಖೆ ನಡೆಯುತ್ತಿದೆ. ತಪ್ಪಿತಸ್ಥರು ಯಾರೇ ಇದ್ದರೂ ಸರ್ಕಾರ ಕ್ರಮ ತೆಗೆದುಕೊಳ್ಳಲಿದೆ ಎಂದು ಸದನದಲ್ಲಿಯೇ ಮುಖ್ಯಮಂತ್ರಿ ಮತ್ತು ಗೃಹ ಸಚಿವರು ಹೇಳಿದ್ದಾರೆ. ಕಾಂಗ್ರೆಸ್ ಶಾಸಕಾಂಗ ಪಕ್ಷದ ಸಭೆಯಲ್ಲಿಯೂ ಮುಖ್ಯಮಂತ್ರಿ ಈ ಬಗ್ಗೆ ತಿಳಿಸಿದ್ದಾರೆ' ಎಂದರು.

ಪಕ್ಷದ ರಾಜ್ಯ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲ ಜೊತೆ ಸಭೆ ನಡೆಸಿದ ಬಗ್ಗೆ ಕೇಳಿದಾಗ, 'ಸ್ಥಳೀಯ ಸಂಸ್ಥೆಗಳ ಚುನಾವಣೆಗೆ ತಯಾರಿ ನಡೆಸಬೇಕಲ್ಲವೇ? ಹೀಗಾಗಿ ಸಭೆ ಕರೆದು ಜವಾಬ್ದಾರಿ ಹಂಚಿಕೆ ಮಾಡುತ್ತಿದ್ದೇವೆ. ನ್ಯಾಯಾಲಯ ಚುನಾವಣೆ ನಡೆಸಿ ಎಂದ ಮೇಲೆ ಕಡೆಗಣಿಸಬಾರದಲ್ಲವೇ' ಎಂದರು.

ಡಿಕೆಶಿ ನೇತೃತ್ವದಲ್ಲಿ ಶಾಸಕರು ಬಿಹಾರಕ್ಕೆ: ಲೋಕಸಭೆ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಅವರ ನೇತೃತ್ವದಲ್ಲಿ ಬಿಹಾರದಲ್ಲಿ ಕಾಂಗ್ರೆಸ್ ಹಮ್ಮಿಕೊಂಡಿರುವ 'ಮತ ಜನಾಧಿಕಾರ ಯಾತ್ರೆ'ಯಲ್ಲಿ ಭಾಗವಹಿಸಲು ಡಿ.ಕೆ. ಶಿವಕುಮಾರ್ ನೇತೃತ್ವದಲ್ಲಿ ಕಾಂಗ್ರೆಸ್ ಶಾಸಕರು ಹಾಗೂ ನಾಯಕರು ವಿಶೇಷ ವಿಮಾನದಲ್ಲಿ ಬಿಹಾರಕ್ಕೆ ಶನಿವಾರ ತೆರಳಿದರು.

ಶಾಸಕರಾದ ಶ್ರೀನಿವಾಸ ಮಾನೆ, ಬಾಬಾಸಾಹೇಬ ಪಾಟೀಲ, ಆಸೀಫ್ ಸೇಠ್, ರಿಜ್ವಾನ್ ಅರ್ಷದ್, ಬಿ.ಎಂ. ನಾಗರಾಜ್, ನಯನಾ ಮೋಟಮ್ಮ, ಅಶೋಕ್ ಪಟ್ಟಣ, ಕೆ.ಎಂ. ಆನಂದ್, ವೇಣುಗೋಪಾಲ್ ನಾಯಕ್, ಬಸನಗೌಡ ಬಾದರ್ಲಿ, ರಾಷ್ಟ್ರೀಯ ಯುವ ಕಾಂಗ್ರೆಸ್ ನಿಕಟಪೂರ್ವ ಅಧ್ಯಕ್ಷ ಬಿ. ವಿ ಶ್ರೀನಿವಾಸ್, ರಾಜ್ಯ ಯುವ ಕಾಂಗ್ರೆಸ್ ಅಧ್ಯಕ್ಷ ಮಂಜುನಾಥ ಗೌಡ ತಂಡದಲ್ಲಿದ್ದರು.

'ಮುಖ್ಯಮಂತ್ರಿ ಇನ್ನೊಂದು ದಿನ ಬಿಹಾರಕ್ಕೆ ತೆರಳಲಿದ್ದಾರೆ' ಎಂದೂ ಶಿವಕುಮಾರ್ ತಿಳಿಸಿದರು.

'ಮುಂದಿನ ಕ್ರಮ ಎಸ್‌ಐಟಿ ನಿರ್ಧರಿಸಲಿದೆ'

ಉಡುಪಿ: 'ಧರ್ಮಸ್ಥಳ ಪ್ರಕರಣ ಕುರಿತು ಸಾಕ್ಷಿ ದೂರುದಾರನ ಬಂಧಿಸಿದ್ದು, ಮುಂದಿನ ಕ್ರಮ ಎಸ್‌ಐಟಿ ನಿರ್ಧರಿಸಲಿದೆ. ಸದ್ಯ ಹೆಚ್ಚಿನ ಮಾಹಿತಿ ನೀಡಲಾಗದು' ಎಂದು ಗೃಹಸಚಿವ ಜಿ. ಪರಮೇಶ್ವರ ಹೇಳಿದರು.

ಸುದ್ದಿಗಾರರ ಜೊತೆ ಶನಿವಾರ ಮಾತನಾಡಿದ ಅವರು, 'ಸುಜಾತ ಭಟ್ ವಿಚಾರ ಕೂಡ ತನಿಖೆಯಲ್ಲಿದೆ. ಈ ಕಾರಣಕ್ಕೆ ಯಾವುದೇ ಮಾಹಿತಿಯನ್ನು ಬಹಿರಂಗ ಪಡಿಸಲು ಸಾಧ್ಯವಿಲ್ಲ' ಎಂದರು.

ಮುಖ್ಯಮಂತ್ರಿ ವಿರುದ್ಧ ಶಾಸಕ ಹರೀಶ್ ಪೂಂಜ ಹೇಳಿಕೆಗೆ ಸಂಬಂಧಿಸಿ, 'ಪೂಂಜ ಅವರು 2023ರಲ್ಲಿ ಈ ಪ್ರಕರಣಕ್ಕೆ ತಡೆಯಾಜ್ಞೆ ತೆಗೆದುಕೊಂಡಿದ್ದಾರೆ. ಅದು, ತೆರವಾದರೆ ಕ್ರಮ ಕೈಗೊಳ್ಳಬಹುದು' ಎಂದರು.

ಸಿ.ಎಂಗೆ ತಿರುಗುಬಾಣ ಆಗಲಿದೆ: ಸೋಮಣ್ಣ

ತುಮಕೂರು: 'ಯಾರದೊ ಮಾತು ಕೇಳಿಕೊಂಡು ಎಸ್‌ಐಟಿ ತನಿಖೆಗೆ ಆದೇಶಿಸುವ ಪಾಪದ ಕೃತ್ಯಕ್ಕೆ ಸಿದ್ದರಾಮಯ್ಯ ಕೈ ಹಾಕಿದ್ದಾರೆ. ಈಗ ಸತ್ಯ ಬಯಲಾಗಿದೆ. ಬೆಲೆ ತೆರಬೇಕಾಗುತ್ತದೆ' ಎಂದು ರೈಲ್ವೆ ಖಾತೆ ರಾಜ್ಯ ಸಚಿವ ವಿ.ಸೋಮಣ್ಣ ಇಲ್ಲಿ ಶನಿವಾರ ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ಮುಖ್ಯಮಂತ್ರಿ, ಸಚಿವರು ಮೊದಲು ಧರ್ಮಸ್ಥಳಕ್ಕೆ ಹೋಗಿ ಮಂಜುನಾಥನ ದರ್ಶನ ಪಡೆದು ತಪ್ಪಾಯಿತು ಎಂದು ಕೇಳಿಕೊಂಡರೆ ಒಳ್ಳೆಯದಾಗುತ್ತದೆ. ಈಗ ತಪ್ಪಾಗಿ ನಡೆದುಕೊಂಡಿರುವುದು ಸರ್ಕಾರಕ್ಕೆ ಒಂದಿಲ್ಲೊಂದು ದಿನ ತಿರುಗುಬಾಣವಾಗಲಿದೆ' ಎಂದರು.

ಸಮೀರ್ ಮನೆಗೆ ನೋಟಿಸ್

ಪ್ರಜಾವಾಣಿ ವಾರ್ತೆ

ಬಳ್ಳಾರಿ: 'ದೂತ' ಯೂಟ್ಯೂಬ್ ಚಾನೆಲ್‌ನಲ್ಲಿ ಧರ್ಮಸ್ಥಳ ಕುರಿತ ವಿಡಿಯೊ ಪ್ರಸಾರ ಕುರಿತಂತೆ ಭಾನುವಾರ (ಆ.24) ಧರ್ಮಸ್ಥಳ ಠಾಣೆ ಅಥವಾ ಬೆಳ್ತಂಗಡಿ ಸರ್ಕಲ್ ಇನ್‌ಸ್ಪೆಕ್ಟರ್ ಕಚೇರಿಗೆ ಹಾಜರಾಗಲು ಯೂಟ್ಯೂಬರ್ ಸಮೀರ್ ಎಂ.ಡಿಗೆ ಸೂಚಿಸಲಾಗಿದೆ.


ಈ ಸಂಬಂಧ ಬಳ್ಳಾರಿಯ ಬಂಡಿಹಟ್ಟಿಯಲ್ಲಿ ಇರುವ ಸಮೀರ್ ಅವರ ಮನೆಗೆ ನೋಟಿಸ್ ಅಂಟಿಸಲಾಗಿದೆ. 'ಈ ಬಗ್ಗೆ ಜುಲೈ 12ರಂದು ಪ್ರಕರಣ ದಾಖಲಾಗಿದೆ. ಸಮೀರ್‌ಗೆ ಮೂರು ನೋಟಿಸ್ ನೀಡಲಾಗಿದೆ. ಆತ ವಿಚಾರಣೆಗೆ ಹಾಜರಾಗಿಲ್ಲ' ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ದಾಮೋದರ ಶೆಟ್ಟಿ, ಚಿನ್ನಪ್ಪ ಗೌಡಗೆ ಪ್ರಶಸ್ತಿ


ಪ್ರಜಾವಾಣಿ ವಾರ್ತೆ

ಮಂಗಳೂರು: ಸಾಹಿತಿ ಮತ್ತು ಸಹಕಾರಿ ಕ್ಷೇತ್ರದ ಮುಖಂಡರಾಗಿದ್ದ ಏರ್ಯ ಲಕ್ಷ್ಮೀನಾರಾಯಣ ಆಳ್ವ ಅವರ ಜನ್ಮಶತಮಾನೋತ್ಸವ ನೀಡುವ ಗೌರವ ಪ್ರಶಸ್ತಿಗೆ ಜಾನಪದ ವಿದ್ವಾಂಸ, ನಿವೃತ್ತ ಕುಲಪತಿ ಪ್ರೊ.ಕೆ. ಚಿನ್ನಪ್ಪ ಗೌಡ ಹಾಗೂ ಸಾಹಿತಿ, ರಂಗಕರ್ಮಿ ನಾ.ದಾಮೋದರ ಶೆಟ್ಟಿ ಆಯ್ಕೆಯಾಗಿದ್ದಾರೆ.

ಪ್ರಶಸ್ತಿ ತಲಾ ₹1 ಲಕ್ಷ ನಗದು ಒಳಗೊಂಡಿದೆ. ಆ.28ರಂದು ಬಂಟ್ವಾಳ ಬಳಿ 'ಏರ್ಯ ಬೀಡು'ವಿನಲ್ಲಿ ಪ್ರಶಸ್ತಿ ಪ್ರದಾನ ಸಮಾರಂಭ ನಡೆಯಲಿದೆ' ಎಂದು ಏರ್ಯ ಫೌಂಡೇಷನ್ ಅಧ್ಯಕ್ಷ ಏರ್ಯ ಬಾಲಕೃಷ್ಣ ಹೆಗ್ಡೆ ತಿಳಿಸಿದ್ದಾರೆ. ಸಾಹಿತಿ ಪ್ರೊ.ಹಂಪ ನಾಗರಾಜಯ್ಯ ಕಾರ್ಯಕ್ರಮದ ಅಧ್ಯಕ್ಷತೆ ವಹಿಸುವರು.




ಚಿನ್ನಪ್ಪ ಗೌಡ



ದಾಮೋದರ

ಶಿಕ್ಷಣ ಸಚಿವರ ಹೆಸರಲ್ಲಿ ವಂಚನೆಗೆ ಯತ್ನ ನಿವೃತ್ತ ತಹಶೀಲ್ದಾರ್ ಪುತ್ರ ಬಂಧನ

ಶಿವಮೊಗ್ಗ: ಶಿಕ್ಷಣ ಸಚಿವ ಮಧು ಬಂಗಾರಪ್ಪ ಅವರ 'ಆಪ್ತ ಸಹಾಯಕ' ಎಂದು ಹೇಳಿಕೊಂಡು, ವರ್ಗಾವಣೆ ಮಾಡಿಸುವುದಾಗಿ ಮತ್ತು ಸರ್ಕಾರಿ ಕೆಲಸ ಕೊಡಿಸುವುದಾಗಿ ಹೇಳಿ ಅಧಿಕಾರಿಗಳು ಹಾಗೂ ಸಾರ್ವಜನಿಕರನ್ನು ವಂಚಿಸುತ್ತಿದ್ದ ವ್ಯಕ್ತಿಯನ್ನು ಇಲ್ಲಿನ ಜಯನಗರ ಠಾಣೆ ಪೊಲೀಸರು ಶನಿವಾರ ಬಂಧಿಸಿದ್ದಾರೆ.



ಎಸ್.ವಿ.ಎನ್. ರಘುನಾಥ

ಮೈಸೂರಿನ ರಾಮಕೃಷ್ಣನಗರ ನಿವಾಸಿ, ನಿವೃತ್ತ ತಹಶೀಲ್ದಾರ್ ಪುತ್ರ ಎಸ್.ವಿ.ಎನ್.ರಘುನಾಥ (36) ಬಂಧಿತ.

ಈಚೆಗೆ ವರ್ಗಾವಣೆಗೊಂಡು ಸ್ಥಳ ನಿಯುಕ್ತಿಗೆ ಕಾಯುತ್ತಿದ್ದ ಶಿಕ್ಷಣ ಇಲಾಖೆಯ ಜಂಟಿ ನಿರ್ದೇಶಕಿಯೊಬ್ಬರನ್ನು ಸಂಪರ್ಕಿಸಿದ್ದ ರಘುನಾಥ, 'ತಾನು ಸಚಿವ ಮಧು ಬಂಗಾರಪ್ಪ ಅವರ ಸೊರಬದ ಗೃಹ ಕಚೇರಿಯಲ್ಲಿ ಆಪ್ತ ಸಹಾಯಕ' ಎಂದು ಪರಿಚಯಿಸಿಕೊಂಡಿದ್ದ. 'ಸ್ಥಳ ನಿಯುಕ್ತಿ ಮಾಡಿಸಿಕೊಡುವೆ' ಎಂದು ತಿಳಿಸಿ ಹಣಕ್ಕೆ ಬೇಡಿಕೆ ಇಟ್ಟಿದ್ದ. ಅನುಮಾನಗೊಂಡಿದ್ದ ಅಧಿಕಾರಿ ಸಚಿವರ ಕಚೇರಿಗೆ ಮಾಹಿತಿ ನೀಡಿದ್ದರು.

ನಂತರ ಸಚಿವರ ಸೂಚನೆ ಮೇರೆಗೆ ಯುವ ಕಾಂಗ್ರೆಸ್ ಮುಖಂಡ ಗಿರೀಶ್ ಇಲ್ಲಿನ ಜಯನಗರ ಠಾಣೆಯಲ್ಲಿ ದೂರು ದಾಖಲಿಸಿದ್ದರು.

ಸುಜಾತಾ ಭಟ್ ಮನೆಗೆ ಭದ್ರತೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಪುತ್ರಿ ಅನನ್ಯಾ ಭಟ್ 2003ರಲ್ಲಿ ಧರ್ಮಸ್ಥಳಕ್ಕೆ ಹೋಗಿದ್ದಾಗ ನಾಪತ್ತೆ ಆಗಿದ್ದಾಳೆ' ಎಂದು ವಿಶೇಷ ತನಿಖಾ ತಂಡಕ್ಕೆ (ಎಸ್‌ಐಟಿ) ದೂರು ನೀಡಿದ್ದ ಸುಜಾತಾ ಭಟ್ ಅವರ ಮನೆಗೆ ಪೊಲೀಸ್ ಭದ್ರತೆ ಒದಗಿಸಲಾಗಿದೆ. ಮನೆ ಬಳಿ ಬ್ಯಾರಿಕೇಡ್ ಅಳವಡಿಸಲಾಗಿದೆ.

ಪುತ್ರಿಯ ನಾಪತ್ತೆ ಪ್ರಕರಣಕ್ಕೆ ಸಂಬಂಧಿಸಿದಂತೆ ಸುಜಾತಾ ಭಟ್ ಅವರು ಗೊಂದಲದ ಹೇಳಿಕೆ ನೀಡುತ್ತಿರುವ ಪರಿಣಾಮ ಅವರ ಮನೆಗೆ ಮಾಧ್ಯಮ ಪ್ರತಿನಿಧಿಗಳು, ಯೂಟ್ಯೂಬರ್‌ಗಳು ಭೇಟಿ ನೀಡುತ್ತಿದ್ದಾರೆ.

'ನನಗೆ ಆರೋಗ್ಯ ಸರಿಯಿಲ್ಲ. ಬೆದರಿಕೆ ಇದೆ. ನನಗೆ ರಕ್ಷಣೆ ಕೊಡಿ. ಸಾರ್ವಜನಿಕರು ಮನೆಯತ್ತ ಬಾರದಂತೆ ನಿರ್ಬಂಧ ಹೇರಿ. ಮಾಧ್ಯಮದವರೂ ಮನೆಯ ಹತ್ತಿರ ಬಾರದಂತೆ ನೋಡಿಕೊಳ್ಳಿ' ಎಂದು ಸುಜಾತಾ ಅವರು ಮನವಿ ಮಾಡಿದ್ದರಿಂದ ಬನಶಂಕರಿ ಪೊಲೀಸರು ಭದ್ರತೆ ನೀಡಿದ್ದಾರೆ ಎಂಬುದು ಗೊತ್ತಾಗಿದೆ.

ಬನಶಂಕರಿ ಪೊಲೀಸ್ ಠಾಣಾ ವ್ಯಾಪ್ತಿಯ ಅಪಾರ್ಟ್‌ಮೆಂಟ್‌ವೊಂದರಲ್ಲಿ ಸುಜಾತಾ ಭಟ್ ಅವರು ಮೂರು ವರ್ಷಗಳಿಂದ ವಾಸಿಸುತ್ತಿದ್ದಾರೆ. ಕೆಲವು ದಿನಗಳ ಹಿಂದೆ ಧರ್ಮಸ್ಥಳಕ್ಕೆ ತೆರಳಿದ್ದ ಅವರು, ಎರಡು ದಿನಗಳ ಹಿಂದಷ್ಟೇ ನಗರಕ್ಕೆ ಬಂದು ಬನಶಂಕರಿಯ ಮನೆಯಲ್ಲಿ ವಾಸ್ತವ್ಯ ಮಾಡಿದ್ದಾರೆ.

ಈ ನಡುವೆ ವಿಚಾರಣೆಗೆ ಹಾಜರಾಗುವಂತೆ ಬಿಎನ್‌ಎಸ್ 131 ಸೆಕ್ಷನ್‌ನಡಿ ಸುಜಾತಾ ಅವರಿಗೆ ಎಸ್‌ಐಟಿ ನೋಟಿಸ್ ಜಾರಿ ಮಾಡಿದ್ದು, ಶೀಘ್ರದಲ್ಲೇ ವಿಚಾರಣೆ ನಡೆಸುವ ಸಾಧ್ಯತೆ ಇದೆ.

ಭಾರತೀಯ ನ್ಯಾಯ ಸಂಹಿತೆ (ಬಿಎನ್‌ಎಸ್) ಕಾಯ್ದೆ ಅನ್ವಯ ದೂರುದಾರರು ಅಥವಾ ಸಾಕ್ಷಿದಾರರು 60 ವರ್ಷಕ್ಕಿಂತ ಮೇಲ್ಪಟ್ಟಿದ್ದರೆ ಅಥವಾ 18 ವರ್ಷದ ಒಳಗಿನವರಾಗಿದ್ದರೆ ತನಿಖಾಧಿಕಾರಿಗಳೇ ಅವರ ನಿವಾಸಕ್ಕೆ ತೆರಳಿ ಹೇಳಿಕೆ ದಾಖಲಿಸಿಕೊಳ್ಳಲು ಅವಕಾಶ ಇದೆ. ಅನಾರೋಗ್ಯದ ಕಾರಣ ನೀಡಿ ಸುಜಾತಾ ಅವರು ಈ ಹಿಂದೆ ವಿಚಾರಣೆಗೆ ಗೈರಾಗಿದ್ದರು. ಪ್ರಕರಣದ ತನಿಖೆ ಚುರುಕಾಗಿದ್ದು, ಸದ್ಯದಲ್ಲೇ ಹೇಳಿಕೆ ದಾಖಲು ಮಾಡಿಕೊಳ್ಳಲಾಗುವುದು. ಸುಜಾತಾ ಭಟ್ ಅವರು ಮಾಧ್ಯಮಗಳ ಎದುರು ವಿಭಿನ್ನ ಹೇಳಿಕೆ ನೀಡಿದ್ದಾರೆ. ದೂರಿನಲ್ಲೇ ಬೇರೆ ರೀತಿಯಲ್ಲಿ ಉಲ್ಲೇಖಿಸಿದ್ದರು. ಎಲ್ಲವನ್ನೂ ಪರಿಶೀಲಿಸಲಾಗುವುದು' ಎಂದು ಮೂಲಗಳು ತಿಳಿಸಿವೆ.

'ಅನನ್ಯಾ ಭಟ್ ನನ್ನ ಮಗಳು ಅಲ್ಲ. ಈ ಬಗ್ಗೆ ಕಥೆ ಕಟ್ಟಿದ್ದೇನೆ' ಎಂದು ಹೇಳಿದ್ದರು. ಅದಾದ ಮೇಲೆ, 'ಅನನ್ಯಾ ನನ್ನ ಮಗಳು. ಕಾರಿನೊಳಗೆ ತುರುಕಿ ಸಂದರ್ಶನದ ವೇಳೆ ಬೆದರಿಸಿ ನನ್ನ ಕಡೆಯಿಂದ ಹೇಳಿಕೆ ಕೊಡಿಸಿದ್ದಾರೆ' ಎಂದು ಪ್ರತಿಕ್ರಿಯಿಸಿದ್ದರು.

ಮಹಿಳೆ ವಿರುದ್ಧ ತನಿಖೆಗೆ ಒತ್ತಾಯ

ಮಡಿಕೇರಿ: 'ನನ್ನ ತಂಗಿ ವಸಂತಿಯನ್ನು ನನ್ನ ಮಗಳು ಎಂದು ಹೇಳಿಕೊಂಡಿರುವ ಮಹಿಳೆಯನ್ನು ಕೂಡಲೇ ಬಂಧಿಸಬೇಕು' ಎಂದು ಇಲ್ಲಿನ ವಿರಾಜಪೇಟೆ ನಿವಾಸಿ ವಿಜಯ್ ಒತ್ತಾಯಿಸಿದ್ದಾರೆ.

ಶನಿವಾರ ಇಲ್ಲಿ ತಮ್ಮನ್ನು ಭೇಟಿಯಾದ ಸುದ್ದಿಗಾರರೊಂದಿಗೆ ಮಾತನಾಡಿ, 'ಮಹಿಳೆ ದೊಡ್ಡ ಷಡ್ಯಂತ್ರ ಮಾಡಿದಂತಿದೆ. ಹಲವು ಸಂಶಯಗಳು ಕಾಡುತ್ತಿವೆ. ತನಿಖೆ ನಡೆಸಬೇಕು' ಎಂದು ಆಗ್ರಹಿಸಿದರು.

'ಮಹಿಳೆ ತೋರಿಸಿದ ಚಿತ್ರದಲ್ಲಿರುವ ಯುವತಿ ನನ್ನ ತಂಗಿ ವಸಂತಿ ಎಂಬುದಕ್ಕೆ ನನ್ನ ಬಳಿ ಸಾಕಷ್ಟು ಆಧಾರಗಳಿವೆ' ಎಂದರು.

ಧರ್ಮಸ್ಥಳ: ದೂರುದಾರ ಸೆರೆ

ಒಂದನೇ ಪುಟದಿಂದ...

ಎಸ್‌ಐಟಿ ಕೋರಿಕೆಯಂತೆ ಕೋರ್ಟ್ ಅವರನ್ನು ಸೆ.3ರವರೆಗೆ ಎಸ್‌ಐಟಿ ವಶಕ್ಕೆ ನೀಡಿತು.

ನಂತರ ಅವರನ್ನು ಬೆಳ್ತಂಗಡಿಯ ಎಸ್‌ಐಟಿ ಕಚೇರಿಗೆ ಕರೆದೊಯ್ಯಲಾಯಿತು. ಎಸ್‌ಐಟಿ ಎಸ್ಪಿಗಳಾದ ಜಿತೇಂದ್ರ ಕುಮಾರ್ ದಯಾಮ ಹಾಗೂ ಸಿ.ಎ.ಸೈಮನ್ ಜೊತೆಯಲ್ಲಿದ್ದರು. ಕೋರ್ಟ್‌ಗೆ ಹಾಜರುಪಡಿಸಿದ ವೇಳೆ ಸಾಕ್ಷಿ ದೂರುದಾರನ ಮುಖಕ್ಕೆ ಬಟ್ಟೆಯ ಮುಸುಕು ಹಾಕಲಾಗಿತ್ತು.

'ಸಾಕ್ಷಿ ದೂರುದಾರ ತಾನು ತಂದೊಪ್ಪಿಸಿದ್ದ ತಲೆ ಬುರುಡೆಯ ಕುರಿತು ಸರಿಯಾದ ಮಾಹಿತಿ ನೀಡಿರಲಿಲ್ಲ. ವಿಚಾರಣೆ ನಡೆಸಿದಾಗ, 'ಅದು ತಾನು ಹೂತಿದ್ದ ಮೃತದೇಹದ ತಲೆ ಬುರುಡೆ ಅಲ್ಲ' ಎಂದು ಒಪ್ಪಿಕೊಂಡ. ಈ ಬಗ್ಗೆ ಹೆಚ್ಚಿನ ವಿಚಾರಣೆಗೆ ವಶಕ್ಕೆ ಒಪ್ಪಿಸುವಂತೆ ಕೋರಿದ್ದೆವು. ಆತ ಎಲ್ಲಿಂದ ತಲೆಬುರುಡೆ ತಂದ, ಅದರ ಪೂರ್ವಪರಗಳೇನು ಎಂಬ ಬಗ್ಗೆ ತನಿಖೆ ನಡೆಸಲಿದ್ದೇವೆ' ಎಂದು ಮೂಲಗಳು 'ಪ್ರಜಾವಾಣಿ'ಗೆ ತಿಳಿಸಿವೆ.

ಸಾಕ್ಷಿ ದೂರುದಾರ ಧರ್ಮಸ್ಥಳ ಗ್ರಾಮದಲ್ಲಿ ತೋರಿಸಿದ್ದ 18 ಜಾಗಗಳಲ್ಲಿ ಎಸ್‌ಐಟಿಯವರು 17 ಕಡೆ ನೆಲವನ್ನು ಅಗೆದು ಶೋಧ ನಡೆಸಿದ್ದರು. ಈ ಪೈಕಿ ಒಂದು ಜಾಗದಲ್ಲಿ ಹಾಗೂ ಒಂದು ಕಡೆ ನೆಲದ ಮೇಲೆ ಮೃತದೇಹದ ಅವಶೇಷ ಪತ್ತೆಯಾಗಿದ್ದವು. ಅವುಗಳನ್ನು ಎಸ್‌ಐಟಿಯವರು ವಿಶ್ಲೇಷಣೆಗಾಗಿ ವಿಧಿವಿಜ್ಞಾನ ಪ್ರಯೋಗಾಲಯಕ್ಕೆ ಕಳುಹಿಸಿದ್ದು, ಅವುಗಳ ವರದಿಯ ನಿರೀಕ್ಷೆಯಲ್ಲಿದ್ದಾರೆ.

ಧರ್ಮಸ್ಥಳ ಗ್ರಾಮ ಪಂಚಾಯಿತಿಯಲ್ಲಿ ಈ ಹಿಂದೆ ಕಾರ್ಯನಿರ್ವಹಿಸಿದ್ದ ಸಿಬ್ಬಂದಿ, ಸಾಕ್ಷಿ ದೂರುದಾರನ ಜೊತೆಗೆ ಮೃತದೇಹ ವಿಲೇವಾರಿ ಕಾರ್ಯದಲ್ಲಿ ಭಾಗಿಯಾಗಿದ್ದರು ಎನ್ನಲಾದ ಸ್ವಚ್ಛತಾ ಕಾರ್ಮಿಕರು, ಧರ್ಮಸ್ಥಳ ಗ್ರಾಮದಲ್ಲಿ ಈ ಹಿಂದೆ ಪತ್ತೆಯಾಗಿದ್ದ ಮೃತದೇಹಗಳ ಮರಣೋತ್ತರ ಪರೀಕ್ಷೆ ನಡೆಸಿದ್ದ ವೈದ್ಯರು ಮೊದಲಾದವರನ್ನು ಎಸ್‌ಐಟಿ ಇದುವರೆಗೆ ವಿಚಾರಣೆಗೆ ಒಳಪಡಿಸಿದೆ.

ಎಸ್‌ಐಟಿ ಪರ ಸರ್ಕಾರಿ ವಕೀಲ ದಿವ್ಯರಾಜ್ ಹೆಗ್ಡೆ ಪುತ್ತೂರು ವಾದ ಮಂಡಿಸಿದರು.

ಇದುವರೆಗೆ ಏನೇನಾಯಿತು?

'ಧರ್ಮಸ್ಥಳ ಗ್ರಾಮದಲ್ಲಿ ಹಿಂದಿನಿಂದ ಹಲವಾರು ಅಪರಾಧ ಕೃತ್ಯಗಳು ನಡೆದಿವೆ. ನನಗೆ ಜೀವಬೆದರಿಕೆ ಒಡ್ಡಿ, ಈ ಕೃತ್ಯಗಳ ಮೃತದೇಹಗಳನ್ನು ರಹಸ್ಯವಾಗಿ ವಿಲೇ ಮಾಡಿಸಿದ್ದಾರೆ' ಎಂದು ಸಾಕ್ಷಿ ದೂರುದಾರ ದಕ್ಷಿಣ ಕನ್ನಡ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕಚೇರಿ ಹಾಗೂ ಧರ್ಮಸ್ಥಳ ಠಾಣೆಗೆ ಜುಲೈ 3ರಂದು ದೂರು ನೀಡಿದ್ದ. ಈ ಬಗ್ಗೆ ಭಾರತೀಯ ನ್ಯಾಯ ಸಂಹಿತೆ ಸೆಕ್ಷನ್ 211 (ಎ) ಅಡಿಯಲ್ಲಿ ಜುಲೈ 4ರಂದು ಪ್ರಕರಣ ದಾಖಲಾಗಿತ್ತು.

ವಕೀಲರ ಜೊತೆ ಬೆಳ್ತಂಗಡಿ ಕೋರ್ಟ್‌ಗೆ ಜುಲೈ 11ರಂದು ಹಾಜರಾಗಿ ಹೇಳಿಕೆ ದಾಖಲಿಸಿದ್ದ. ಸಾಕ್ಷಿ ದೂರುದಾರನ ಆರೋಪಗಳ ಬಗ್ಗೆ ತನಿಖೆ ನಡೆಸಬೇಕು ಎಂಬ ಒತ್ತಡ ಆ ಬಳಿಕ ಹೆಚ್ಚಾಯಿತು. ರಾಜ್ಯ ಮಹಿಳಾ ಆಯೋಗವೂ ರಾಜ್ಯ ಸರ್ಕಾರಕ್ಕೆ ಪತ್ರ ಬರೆದಿತ್ತು. ಸರ್ಕಾರ ಆಂತರಿಕ ಭದ್ರತಾ ವಿಭಾಗದ ಪೊಲೀಸ್ ಮಹಾನಿರ್ದೇಶಕ ಪ್ರಣವ್ ಮೊಹಾಂತಿ ನೇತೃತ್ವದಲ್ಲಿ ಜುಲೈ 19ರಂದು ಎಸ್‌ಐಟಿಯನ್ನು ರಚಿಸಿ ಆದೇಶ ಮಾಡಿತ್ತು.

ಎಸ್‌ಐಟಿ ಅಧಿಕಾರಿಗಳು ಡಿಐಜಿ ಎಂ.ಎನ್.ಅನುಚೇತ್ ನೇತೃತ್ವದಲ್ಲಿ ಜುಲೈ 26 ಮತ್ತು 27ರಂದು ಸಾಕ್ಷಿದೂರು ದಾರನಿಂದ ಹೇಳಿಕೆ ದಾಖಲಿಸಿಕೊಂಡಿದ್ದರು.

ಧರ್ಮಸ್ಥಳದ ನೇತ್ರಾವತಿ ಸ್ನಾನಘಟ್ಟದ ಸಮೀಪ, ನದಿ ಪಕ್ಕದ ಕಾಡಿನಲ್ಲಿ 12 ಕಡೆ ಹಾಗೂ ಸ್ನಾನಘಟ್ಟದ ಪಕ್ಕದ ಬಯಲಿನ ಇನ್ನೊಂದು ಜಾಗ ಸೇರಿ ಒಟ್ಟು 13 ಜಾಗಗಳನ್ನು ಸಾಕ್ಷಿ ದೂರುದಾರ ತೋರಿಸಿ, ಅಲ್ಲಿ ಶವ ಹೂತಿದ್ದೆ ಎಂದು ಜುಲೈ 28ರಂದು ತಿಳಿಸಿದ್ದ.

ಜು 29ರಿಂದ ಅವಶೇಷಗಳಿಗಾಗಿ ಶೋಧ ಆರಂಭವಾಗಿತ್ತು. ಬಳಿಕ ಐದು ಹೊಸ ಜಾಗಗಳನ್ನು ಆತ ತೋರಿಸಿದ್ದ. ಪುತ್ತೂರು ಉಪವಿಭಾಗಾಧಿಕಾರಿ ಸ್ಟೆಲ್ಲಾ ವರ್ಗೀಸ್ ಹಾಗೂ ಎಸ್‌ಐಟಿ ಎಸ್‌ಪಿ ಜಿತೇಂದ್ರ ಕುಮಾರ್ ದಯಾಮ ಸಮ್ಮುಖದಲ್ಲಿ 17 ಕಡೆ ನೆಲ ಅಗೆದು ಅವಶೇಷಗಳಿಗಾಗಿ ಶೋಧ ನಡೆಸಲಾಗಿದೆ. ಅವುಗಳಲ್ಲಿ ಒಂದು ಕಡೆ ನೆಲದಡಿಯಲ್ಲಿ ಹಾಗೂ ಒಂದು ಕಡೆ ನೆಲದ ಮೇಲೆ ಮೃತದೇಹದ ಅವಶೇಷಗಳು ಸಿಕ್ಕಿವೆ.

ತಿಮರೋಡಿಗೆ ಜಾಮೀನು

ಒಂದನೇ ಪುಟದಿಂದ...

ಈ ವೇಳೆ ಆರೋಪಿಯನ್ನು ಒಂದು ಗಂಟೆಯ ಅವಧಿಯೊಳಗೆ ನ್ಯಾಯಾಲಯಕ್ಕೆ ಹಾಜರು ಪಡಿಸುವಂತೆ ನ್ಯಾಯಾಧೀಶರು ಸೂಚಿಸಿದರು.

ಬಳಿಕ ಬ್ರಹ್ಮಾವರ ಠಾಣೆಯ ಸಿಪಿಐ ಗೋಪಿಕೃಷ್ಣ ನೇತೃತ್ವದಲ್ಲಿ ಬಿಗಿ ಭದ್ರತೆಯಲ್ಲಿ ಮಧ್ಯಾಹ್ನ 1.30ರ ಸುಮಾರಿಗೆ ತಿಮರೋಡಿ ಅವರನ್ನು ಕೋರ್ಟ್‌ಗೆ ಹಾಜರು ಪಡಿಸಲಾಯಿತು. ನಂತರ ಪೋಲಿಸರು ಅವರನ್ನು ಮೂರು ಗಂಟೆ ವಶಕ್ಕೆ ಪಡೆದು, ಉಡುಪಿ ನಗರಠಾಣೆಗೆ ಕರೆದೊಯ್ದು ವಿಚಾರಣೆ ನಡೆಸಿದರು. ನ್ಯಾಯಾಲಯ ಪರಿಸರದಲ್ಲಿ ಮಹೇಶ್ ಶೆಟ್ಟಿ ತಿಮರೋಡಿ ಅವರ ಬೆಂಬಲಿಗರು ಸೇರಿದ್ದರು.



ಮಹೇಶ್ ಶೆಟ್ಟಿ ತಿಮರೋಡಿ

ಜಾಮೀನು ಲಭಿಸಿದ ಬಳಿಕ ಮಾತನಾಡಿದ ಮಹೇಶ್ ಶೆಟ್ಟಿ ತಿಮರೋಡಿ, 'ಉಡುಪಿ ಜಿಲ್ಲೆಯ ಎಲ್ಲಾ ವಕೀಲರು ದೇವತಾ ರೂಪದಲ್ಲಿ ಬಂದು ಜಾಮೀನು ಕೊಡಿಸಿದ್ದಾರೆ. ಅವರಿಗೆ ಅಭಿನಂದನೆಗಳು' ಎಂದರು.

ಮಹೇಶ್ ಶೆಟ್ಟಿ ಅವರನ್ನು ಶನಿವಾರ ರಾತ್ರಿ ಹಿರಿಯಡ್ಕ ಜೈಲಿನಿಂದ ಬಿಡುಗಡೆಗೊಳಿಸಲಾಯಿತು.

> 13 ವರ್ಷಗಳಿಂದ ಸೌಜನ್ಯಾ ಪರ ಹೋರಾಟ ಮಾಡಿದ ನ್ಯಾಯದ ಭಗೀರಥ ಮಹೇಶ್ ಶೆಟ್ಟಿ ತಿಮರೋಡಿ ಅವರಿಗೆ ಜಾಮೀನು ಲಭಿಸಿರುವುದು ಹೋರಾಟದ ಬಲ ಹೆಚ್ಚಿಸಿದೆ
>
> **ಗಿರೀಶ ಮಟ್ಟಣ್ಣನವರ,** ಸೌಜನ್ಯಾ ಪರ ಹೋರಾಟಗಾರ

'ಹೋರಾಟಕ್ಕೆ ಸಂದ ಜಯ'

'ತಿಮರೋಡಿ ಅವರ ಬಂಧನ ಕಾನೂನು ಬಾಹಿರವಾಗಿತ್ತು. ಜಾಮೀನು ದೊರೆತಿರುವುದು ಹೆಣ್ಣು ಮಗಳ ಪರವಾಗಿ ಮಾಡಿದ ಹೋರಾಟಕ್ಕೆ ಸಂದ ಜಯ. ಸೌಜನ್ಯಾ ಪ್ರಕರಣ, ಆನೆ ಮಾವುತ, ಆತನ ತಂಗಿ ಯಮುನಾ ಹತ್ಯೆ ಪ್ರಕರಣಗಳನ್ನು ಕೋರ್ಟ್ ಮನವರಿಕೆ ಮಾಡಿದ್ದೇವೆ' ಎಂದು ತಿಮರೋಡಿ ಪರ ವಕೀಲ ವಿಜಯ್ ವಾಸು ಪೂಜಾರಿ ತಿಳಿಸಿದರು.

'ಒಬ್ಬರ ಜಾಮೀನು ಮತ್ತು ₹20 ಸಾವಿರ ಬಾಂಡ್ ಪಡೆದು ಜಾಮೀನು ನೀಡಲಾಗಿದೆ. ಸಾಕ್ಷಿ ನಾಶ ಮಾಡಬಾರದು, ತನಿಖೆಗೆ ಸಹಕರಿಸಬೇಕು, ತನಿಖೆಗೆ ಕರೆದಾಗ ಹಾಜರಾಗಬೇಕು ಮೊದಲಾದ ಷರತ್ತುಗಳನ್ನು ನ್ಯಾಯಾಲಯ ವಿಧಿಸಿದೆ' ಎಂದೂ ವಿವರಿಸಿದರು.

'ವಿಜಯೋತ್ಸವ ಮಾಡಿ ಸಾರ್ವಜನಿಕರಿಗೆ ತೊಂದರೆ ಉಂಟು ಮಾಡಬಾರದು ಎಂದೂ ನ್ಯಾಯಾಧೀಶ ನಾಗೇಶ್ ಎನ್.ಎ. ಅವರು ಸೂಚಿಸಿದ್ದಾರೆ' ಎಂದರು.

ಚಟಿಕೆ ಸುದ್ದಿ

ಮಿಚ್ಛಾಮಿ ದುಕ್ಕಡಂ ಇದೇ 31ಕ್ಕೆ

ಬೆಂಗಳೂರು: ಮೇವಾಡ್ ಜೈನ್ ಮಿತ್ರ ಮಂಡಲದಿಂದ ಇದೇ 31ರಂದು ಅರಮನೆ ಮೈದಾನದ ಕಿಂಗ್ಸ್ ಕೋರ್ಟ್‌ನಲ್ಲಿ ಮಿಚ್ಛಾಮಿ ದುಕ್ಕಡಂ (ಕ್ಷಮೆ ದಿನ) ಆಯೋಜಿಸಿದೆ.

ಶನಿವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಮಂಡಲದ ಅಧ್ಯಕ್ಷ ಜೈನ್ ಗೌತಮ್ ಮಂಡೋತ್, 'ಈ ಕಾರ್ಯಕ್ರಮದಲ್ಲಿ ವಿಜಯ್ ಪ್ರಭಾಕರ್ ಸುರೀಶ್ವರ್ ಮಹಾರಾಜ್ ಸಾಹೇಬ್, ನರೇಶ್ ಮುನಿ, ಶಾಲಿಭದ್ರ ಮುನಿ, ವಸಂತ ಮುನಿ, ನಿರ್ಮಲಾ ಶ್ರೀಜಿ ಭಾಗವಹಿಸಲಿದ್ದಾರೆ ಎಂದು ತಿಳಿಸಿದರು.

ವಸತಿನಿಲಯ, ಪಿ.ಜಿ. ಸೌಲಭ್ಯಕ್ಕಾಗಿ ಅರ್ಜಿ ಆಹ್ವಾನ

ಬೆಂಗಳೂರು: ಅಖಿಲ ಭಾರತ ಕುರುಹಿನಶೆಟ್ಟಿ (ನೇಕಾರ) ವಿದ್ಯಾರ್ಥಿನಿ ನಿಲಯ ಚಾರಿಟಬಲ್ ಟ್ರಸ್ಟ್ ವತಿಯಿಂದ ಆರ್ಥಿಕವಾಗಿ ಹಿಂದುಳಿದ ನೇಕಾರ ಕುರುಹಿನಶೆಟ್ಟಿ ಜನಾಂಗದ ವಿದ್ಯಾರ್ಥಿನಿಯರಿಂದ ವಸತಿನಿಲಯ, ಪಿ.ಜಿ. ಸೌಲಭ್ಯಕ್ಕಾಗಿ ಅರ್ಜಿ ಆಹ್ವಾನಿಸಲಾಗಿದೆ.

ಪದವಿ, ಸ್ನಾತಕೋತ್ತರ ಪದವಿ ಓದುತ್ತಿರುವ ವಿದ್ಯಾರ್ಥಿನಿಯರು ಸೆಪ್ಟೆಂಬರ್ 30ರ ಒಳಗೆ ಅರ್ಜಿ ಸಲ್ಲಿಸಬಹುದು. ಊಟ, ವಸತಿಯ ವೆಚ್ಚವನ್ನು ಟ್ರಸ್ಟ್ ಒದಗಿಸಲಿದೆ.

ವಿಳಾಸ: ಅಖಿಲ ಭಾರತ ಕುರುಹಿನಶೆಟ್ಟಿ (ನೇಕಾರ) ವಿದ್ಯಾರ್ಥಿನಿ ನಿಲಯ ಚಾರಿಟಬಲ್ ಟ್ರಸ್ಟ್, ನಂ. 13 ಅಕ್ಷಯ, 3ನೇ ಮುಖ್ಯರಸ್ತೆ, 3ನೇ ಅಡ್ಡರಸ್ತೆ, ಶ್ರೀನಿಧಿ ಬಡಾವಣೆ, ಜೆ.ಪಿ. ನಗರ, 8ನೇ ಹಂತ, ಬೆಂಗಳೂರು–560062. ಮಾಹಿತಿಗೆ: 94803 53269/ 9448810266

ಗಣೇಶ ಉತ್ಸವ: ಸಿಂಧೂರ, ಧರ್ಮಸ್ಥಳದ 'ಥೀಮ್'

- ಮಾರುಕಟ್ಟೆಯಲ್ಲಿ ಗಣೇಶ ಮೂರ್ತಿಗಳ ವ್ಯಾಪಾರ ಭರಾಟೆ
- ಉತ್ಸವ ಸಮಿತಿಗಳಿಂದ ಭರದ ಸಿದ್ಧತೆ
- ವಿವಿಧ ಭಂಗಿಯ ಮೂರ್ತಿಗಳು


ಹನುಮಂತನಗರದ ಸುಂಕೇನಹಳ್ಳಿಯ ಗಣೇಶ ಭವನದ ಬಳಿಯ ಮಳಿಗೆಯೊಂದರಲ್ಲಿ ಮಣ್ಣಿನ ಗಣೇಶ ಮೂರ್ತಿಗೆ ಅಂತಿಮ ಸ್ಪರ್ಶ ನೀಡಿದ ಕಲಾವಿದ ಮೋಹನ್ ಕುಮಾರ್

● ವರುಣ ಹೆಗಡೆ

ಬೆಂಗಳೂರು: ವಿವಿಧ ಭಂಗಿಯಲ್ಲಿ ಕುಳಿತ ಗಣೇಶನ ಮೂರ್ತಿಗಳು ನಗರದ ವಿವಿಧೆಡೆ ರಾರಾಜಿಸುತ್ತಿದ್ದರೆ, 'ಆಪರೇಷನ್ ಸಿಂಧೂರ'ದ ಮಹತ್ವ ಹಾಗೂ 'ಧರ್ಮಸ್ಥಳದ ಮಹಾತ್ಮೆ' ಸಾರಲು ಗಣೇಶೋತ್ಸವ ಸಮಿತಿಗಳು ನಿರ್ಧರಿಸಿವೆ.

ನಗರದ ವಿವಿಧ ಸಾರ್ವಜನಿಕ ಸ್ಥಳಗಳಲ್ಲಿ ಪ್ರತಿ ವರ್ಷ ಗಣೇಶ ಮೂರ್ತಿಗಳನ್ನು ಪ್ರತಿಷ್ಠಾಪಿಸಿ, ಅದ್ದೂರಿಯಾಗಿ ಗಣೇಶೋತ್ಸವ ಆಚರಿಸಲಾಗುತ್ತಿದೆ. ಈ ವರ್ಷ ಮಾರುಕಟ್ಟೆಗೆ ತರಹೇವಾರಿ ಗಣೇಶ ಮೂರ್ತಿಗಳು ಬಂದಿದ್ದು, ವ್ಯಾಪಾರದ ಭರಾಟೆ ಜೋರಾಗಿದೆ. ಇನ್ನೊಂದೆಡೆ ಹೊಸ ಮತ್ತು ವಿಭಿನ್ನ ಥೀಮ್‌ಗಳನ್ನು ಪರಿಚಯಿಸುತ್ತಾ ಬಂದಿರುವ ಇಲ್ಲಿನ ಕೆಲ ಗಣೇಶ ಉತ್ಸವ ಸಮಿತಿಗಳು, ಈ ವರ್ಷ ಹೆಚ್ಚು ಸುದ್ದಿ ಮಾಡಿದ್ದ 'ಆಪರೇಷನ್ ಸಿಂಧೂರ' ಮತ್ತು ಧರ್ಮಸ್ಥಳವನ್ನು ವಿಷಯ ವಸ್ತುವಾಗಿ ಆಯ್ಕೆ ಮಾಡಿಕೊಳ್ಳಲು ಮುಂದಾಗಿವೆ. ಗಣೇಶನ ದರ್ಶನಕ್ಕೆ ಬಂದವರಿಗೆ ಪೋಸ್ಟರ್ ಸೇರಿ ವಿವಿಧ ಅಲಂಕಾರದ ಮೂಲಕ ಜಾಗೃತಿ ಮೂಡಿಸಲು ನಿರ್ಧರಿಸಿವೆ.

ಬೆಂಗಳೂರು ಮಹಾನಗರ ಗಣೇಶ ಉತ್ಸವ ಸಮಿತಿಯು 'ಆಪರೇಷನ್ ಸಿಂಧೂರ' ಹಾಗೂ ಧರ್ಮಸ್ಥಳವನ್ನು ವಿಷಯ ವಸ್ತುವಾಗಿ ಆಯ್ಕೆ ಮಾಡಿಕೊಳ್ಳಲು ಕರೆ ನೀಡಿದೆ. ಈ ಸಮಿತಿಯ ಅಡಿ ನಗರದಲ್ಲಿ 2,500 ಸಮಿತಿಗಳಿವೆ.

ಪ್ರತಿ ವರ್ಷ ಈ ಸಮಿತಿಗಳು ಗಣೇಶನ ಆರಾಧನೆ ಜತೆಗೆ ಒಂದೊಂದು ವಿಷಯವನ್ನು ಆಯ್ಕೆ ಮಾಡಿಕೊಂಡು, ಜನರನ್ನು ಸೆಳೆಯುತ್ತಿವೆ. ಕಳೆದ ವರ್ಷ ಅಯೋಧ್ಯೆಯ ರಾಮಮಂದಿರವನ್ನು ಕೆಲ ಸಮಿತಿಗಳು ವಿಷಯ ವಸ್ತುವಾಗಿ ಆಯ್ಕೆ ಮಾಡಿಕೊಂಡು, ರಾಮಮಂದಿರದ ಪ್ರತಿರೂಪ, ಶ್ರೀರಾಮನ ಬೃಹತ್ ಪೋಸ್ಟರ್‌ಗಳನ್ನು ಅಳವಡಿಸಿದ್ದವು. ತಿರುಪತಿ ಸೇರಿ ವಿವಿಧ ಧಾರ್ಮಿಕ ಸ್ಥಳಗಳನ್ನೂ ಥೀಮ್ ಆಗಿ ಆಯ್ಕೆ ಮಾಡಿಕೊಂಡು, ಭಕ್ತರನ್ನು ಸೆಳೆಯುವಲ್ಲಿ ಯಶಸ್ವಿಯಾಗಿದ್ದವು.

ಅರಿಶಿನ-ಕುಂಕುಮ: ಈ ವರ್ಷ ಭಯೋತ್ಪಾದಕರು ಪಹಲ್ಗಾಮ್‌ನಲ್ಲಿ ದಾಳಿ ನಡೆಸಿದ್ದರು. ಭಾರತೀಯ ಮಹಿಳೆಯರ ಸಿಂಧೂರ ಅಳಿಸಿದ ಉಗ್ರರ ಈ ದಾಳಿಗೆ ಪ್ರತಿಯಾಗಿ, ಭಾರತೀಯ ಸೈನಿಕರು 'ಆಪರೇಷನ್ ಸಿಂಧೂರ' ನಡೆಸಿದ್ದರು. ಈ ಯಶಸ್ವಿ ಕಾರ್ಯಾಚರಣೆ ಸ್ಮರಣಾರ್ಥ, ಉತ್ಸವದ ಅವಧಿಯಲ್ಲಿ ಗಣೇಶನ ದರ್ಶನಕ್ಕೆ ಬಂದ ಮಹಿಳೆಯರಿಗೆ ಅರಿಶಿನ-ಕುಂಕುಮ ನೀಡಲು ಬೆಂಗಳೂರು ಮಹಾನಗರ ಗಣೇಶ ಉತ್ಸವ ಸಮಿತಿ ಸೂಚಿಸಿದೆ.

'ಶ್ರದ್ಧಾ ಭಕ್ತಿ ಕೇಂದ್ರವಾದ ಧರ್ಮಸ್ಥಳದ ಬಗ್ಗೆ ಅಪಪ್ರಚಾರ ಮಾಡಲಾಗಿದೆ. ಜನರಲ್ಲಿನ ಗೊಂದಲ ಹೋಗಲಾಡಿಸಲು ಪೋಸ್ಟರ್ ಮತ್ತು ಬ್ಯಾನರ್‌ಗಳನ್ನು ಅಳವಡಿಸಲು ಸೂಚಿಸಿದ್ದೇವೆ. ಜನರಿಗೆ ಸತ್ಯ ದರ್ಶನವಾಗಬೇಕು. 'ಆಪರೇಷನ್ ಸಿಂಧೂರ' ಸ್ಮರಣಾರ್ಥ ತಾಯಂದಿರಿಗೆ ಅರಿಶಿನ-ಕುಂಕುಮ ನೀಡುವ ಕಾರ್ಯಕ್ರಮ ಹಮ್ಮಿಕೊಳ್ಳಲು ನಿರ್ದೇಶನ ನೀಡಲಾಗಿದೆ. ಆಯಾ ಸಮಿತಿಗಳು ತಮ್ಮ ಕಾರ್ಯವ್ಯಾಪ್ತಿಯಲ್ಲಿ ಕಾರ್ಯಕ್ರಮ ಹಾಗೂ ವಿವಿಧ ವಿಷಯ ವಸ್ತುಗಳ ಮೇಲೆ ಅಲಂಕಾರ ಮಾಡಲಿವೆ' ಎಂದು ಬೆಂಗಳೂರು ಮಹಾನಗರ ಗಣೇಶ ಉತ್ಸವ ಸಮಿತಿಯು ಪ್ರಧಾನ ಕಾರ್ಯದರ್ಶಿ ಪ್ರಕಾಶ್ ರಾಜು ತಿಳಿಸಿದರು.

> ದಾನಿಗಳ ಸಹಕಾರದಿಂದ ವಿದ್ಯಾರ್ಥಿಗಳೆಲ್ಲ ಸೇರಿ ಗಣಪತಿ ಪ್ರತಿಷ್ಠಾಪನೆ ಮಾಡುತ್ತಿದ್ದೇವೆ. ಪರಿಸರ ಈ ವರ್ಷದ ಥೀಮ್ ಆಗಿದ್ದು, ಕಳೆದ ವರ್ಷ ದೇವಾಲಯ ವಿಷಯವಸ್ತುವಾಗಿತ್ತು
> **ಧನುಷ್,** ವಿನಾಯಕಗೆಳೆಯರ ಬಳಗ, ಕದಿರೇನಹಳ್ಳಿ

> ದೊಡ್ಡ ಗಣೇಶ ಮೂರ್ತಿಗಳನ್ನು ತಿರುಪತಿಯಿಂದ, ಚಿಕ್ಕ ಮೂರ್ತಿಗಳನ್ನು ಗೋಕಾಕ್‌ನ ಕಣ್ಣೂರಿನಿಂದ ತರಿಸಿಕೊಳ್ಳುತ್ತಿದ್ದೇವೆ. ಮೂರ್ತಿ ಖರೀದಿಗೆ ಉತ್ತಮ ಸ್ಪಂದನೆ ವ್ಯಕ್ತವಾಗಿದೆ
> **ಸುಬ್ರಮಣಿ,** ದೊಡ್ಡಬಸವಣ್ಣರಸ್ತೆಯಲ್ಲಿನ ವ್ಯಾಪಾರಿ

> ಜೇಡಿ ಮಣ್ಣಿನ ಗಣಪತಿ ಮೂರ್ತಿಗೆ ಬೇಡಿಕೆಯಿದೆ. ವರ್ಷದಿಂದ ವರ್ಷಕ್ಕೆ ಮಾರಾಟ ಹೆಚ್ಚುತ್ತಿದ್ದು, ಮೂರ್ತಿಗಳಿಗೆ ನೈಸರ್ಗಿಕ ಬಣ್ಣವನ್ನು ಬಳಸಲಾಗುತ್ತಿದೆ
> **ಭಾಗ್ಯ ಶಿವಕುಮಾರ್,** ಕಲಾವಿದೆ, ಹನುಮಂತನಗರ

'ಆರ್‌ಸಿಬಿ ಕಪ್ ಗಣೇಶ'

ಯಶವಂತಪುರದ ಶ್ರೀ ಈಶಪುತ್ರ ಎಂಟರ್‌ಪ್ರೈಸಸ್ (ಎನ್‌ಆರ್ ಆರ್ಟ್ಸ್) ಯುವಕರ ತಂಡವು ಆರ್‌ಸಿಬಿ ಕಪ್ ಗೆದ್ದ ಗಣೇಶನನ್ನು ತಯಾರಿಸಿದೆ. ಆರ್‌ಸಿಬಿ ಕಪ್ ಮಾದರಿಯನ್ನು ಮೂಷಿಕ ಎತ್ತಿ ಹಿಡಿದಿದೆ. ದ್ರೌಪದಿಯ ಕರಗದ ರೂಪದ ಗಣೇಶನನ್ನೂ ನಿರ್ಮಿಸಲಾಗಿದೆ. ರಾಮಮಂದಿರದ ಮುಂದೆ ಕುಳಿತ ಗಣೇಶ, ಕುದುರೆ ಏರಿದ ಗಣೇಶ ಸೇರಿ ವಿವಿಧ ವಿನ್ಯಾಸದ ಆಕರ್ಷಕ ಮೂರ್ತಿಗಳು ಮಾರುಕಟ್ಟೆಗೆ ಬಂದಿವೆ. ಶಿವಗಣಪತಿ, ಕೃಷ್ಣಗಣೇಶ, ರಾಜ ದರ್ಬಾರ್ ಗಣಪ, ಅರ್ಧನಾರೀಶ್ವರ ಗಣಪ, ಕಮಲದ ಮೇಲೆ ಕುಳಿತ ಗಣೇಶ ಸೇರಿ ವಿವಿಧ ಗಣೇಶ ಮೂರ್ತಿಗಳನ್ನು ಮಾರಾಟಕ್ಕೆ ಇರಿಸಲಾಗಿದೆ.


ಬಸವನಗುಡಿ ಮುಖ್ಯ ರಸ್ತೆ ಬದಿಯಲ್ಲಿ ಗಣೇಶ ಮೂರ್ತಿಗಳನ್ನು ಸಾಲಾಗಿ ಜೋಡಿಸಿರುವ ದೃಶ್ಯ
– ಚಿತ್ರಗಳು/ರಂಜು ಪಿ.

ಪೇಪರ್ ಗಣೇಶ ಮೂರ್ತಿಗಳು

ಪ್ಲಾಸ್ಟರ್ ಆಫ್ ಪ್ಯಾರಿಸ್ (ಪಿಒಪಿ) ಗಣೇಶ ಮೂರ್ತಿಗಳನ್ನು ನಿಷೇಧಿಸಿರುವುದರಿಂದ, ಈ ಬಾರಿ ಮಾರುಕಟ್ಟೆಯಲ್ಲಿ ಪೇಪರ್ ಮತ್ತು ಜೇಡಿಮಣ್ಣು ಮಿಶ್ರಿತ ಗಣಪತಿ ಮೂರ್ತಿಗಳು ಕಾಣಸಿಗುತ್ತವೆ. ಅರ್ಧ ಅಡಿಯಿಂದ 14 ಅಡಿವರೆಗಿನ ಗಣೇಶ ಮೂರ್ತಿಗಳು ಮಾರುಕಟ್ಟೆಯಲ್ಲಿವೆ. ಮಾರಾಟಗಾರರು ತಮ್ಮ ವ್ಯಾಪಾರ ಕೇಂದ್ರಗಳ ಮುಂಭಾಗ 'ಪಿಒಪಿ ಗಣೇಶ ಮೂರ್ತಿಗಳನ್ನು ಮಾರಾಟ ಮಾಡುವುದಿಲ್ಲ' ಎಂದು ಬ್ಯಾನರ್ ಹಾಕಿಕೊಂಡಿದ್ದಾರೆ. ಫೈಬರ್ ಗಣೇಶ ಮೂರ್ತಿಗಳೂ ಮಾರುಕಟ್ಟೆಯಲ್ಲಿದ್ದು, ಮಾರಾಟಗಾರರು ಬಾಡಿಗೆಗೆ ನೀಡುತ್ತಿದ್ದಾರೆ.

'ಪೇಪರ್ ಗಣೇಶ ಮೂರ್ತಿಗಳು ಹಗುರವಾಗಿರಲಿದ್ದು, ನೀರಿನಲ್ಲಿಯೂ ಸುಲಭವಾಗಿ ಕರಗುತ್ತವೆ. ಸಾಗಾಟವೂ ಸುಲಭ. ಇವು ಪರಿಸರ ಸ್ನೇಹಿಯಾಗಿವೆ. ಹೈದರಾಬಾದ್, ತಮಿಳುನಾಡು ಸೇರಿ ವಿವಿಧೆಡೆಯಿಂದ ಮೂರ್ತಿಗಳು ಬರಲಿವೆ. ₹40 ಸಾವಿರದವರೆಗೂ ದರವಿದೆ' ಎಂದು ಆರ್.ವಿ. ರಸ್ತೆಯ ಗಣಪತಿ ಮೂರ್ತಿ ವ್ಯಾಪಾರಿಗಳು ತಿಳಿಸಿದರು.

ಚಿಕ್ಕ ಮೂರ್ತಿಗಳಿಗೆ ಬೇಡಿಕೆ

ಮನೆಗಳಲ್ಲಿ ಗಣಪತಿ ಪ್ರತಿಷ್ಠಾಪನೆ ಮಾಡುವವರ ಸಂಖ್ಯೆ ಹೆಚ್ಚುತ್ತಿರುವುದರಿಂದ, ಪರಿಸರ ಸ್ನೇಹಿ ಚಿಕ್ಕ ಮೂರ್ತಿಗಳಿಗೆ ಈ ವರ್ಷ ಬೇಡಿಕೆ ಹೆಚ್ಚಿದೆ.

ಅಪಾರ್ಟ್‌ಮೆಂಟ್‌ಗಳು, ಶಾಲಾ–ಕಾಲೇಜುಗಳು ಕೂಡ ಗಣಪತಿ ಮೂರ್ತಿಗಳನ್ನು ಕಾಯ್ದಿರಿಸಿಕೊಂಡಿವೆ. ಶಾಲೆಗಳು ಹೆಚ್ಚಾಗಿ ವಿದ್ಯಾ ಗಣಪತಿ ಮೂರ್ತಿಗಳನ್ನು ಖರೀದಿಸಿದರೆ, ಅಪಾರ್ಟ್‌ಮೆಂಟ್ ಕ್ಷೇಮಾಭಿವೃದ್ಧಿ ಸಂಘಗಳು ನೈಸರ್ಗಿಕ ಬಣ್ಣ ಬಳಸಿ ತಯಾರಿಸಿದ ಮೂರ್ತಿಗಳ ಖರೀದಿಗೆ ಆಸಕ್ತಿ ತೋರುತ್ತಿವೆ. ಮೂರ್ತಿಗಳಿಗೆ ₹100ರಿಂದ ₹5,000ದವರೆಗೆ ದರವಿದೆ.

ಬೈಕ್ ಟ್ಯಾಕ್ಸಿ ಸಮಸ್ಯೆ: ರಾಹುಲ್ ಗಾಂಧಿಗೆ ಮನವಿ

ಪ್ರಜಾವಾಣಿ ವಾರ್ತೆ

ನವದೆಹಲಿ: ಬೈಕ್ ಟ್ಯಾಕ್ಸಿ ನಿಷೇಧದಿಂದ ಕರ್ನಾಟಕದಲ್ಲಿ ಚಾಲಕರು ಎದುರಿಸುತ್ತಿರುವ ಸಂಕಷ್ಟ ನಿವಾರಿಸಲು ಮಧ್ಯ ಪ್ರವೇಶಿಸುವಂತೆ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರಿಗೆ ಕರ್ನಾಟಕ ಬೈಕ್ ಟ್ಯಾಕ್ಸಿ ಕಲ್ಯಾಣ ಸಂಘದ ಪದಾಧಿಕಾರಿಗಳು ಮನವಿ ಸಲ್ಲಿಸಿದ್ದಾರೆ.

ಟ್ಯಾಕ್ಸಿ ಸೇವೆ ಸ್ಥಗಿತದಿಂದ ರಾಜ್ಯದ ಲಕ್ಷಕ್ಕೂ ಹೆಚ್ಚು ಚಾಲಕರು ಹಾಗೂ ಕುಟುಂಬ ಸದಸ್ಯರು ಸಂಕಷ್ಟಕ್ಕೆ ಸಿಲುಕಿದ್ದಾರೆ. ಬೈಕ್ ಟ್ಯಾಕ್ಸಿ ಕಾರ್ಯಾಚರಣೆ ಸಂಬಂಧ ಸಮರ್ಪಕ ನೀತಿ ರೂಪಿಸಬೇಕು. ನೀತಿ ರೂಪಿಸುವವರೆಗೆ, ಕಾರ್ಮಿಕರ ವಿರುದ್ಧ ಕ್ರಮ ಕೈಗೊಳ್ಳದೆ ತಕ್ಷಣ ಸೇವೆ ಪುನರಾರಂಭಿಸಲು ಅವಕಾಶ ನೀಡಬೇಕು ಎಂದು ಒತ್ತಾಯಿಸಿದ್ದಾರೆ.


ಕರ್ನಾಟಕ ಪತ್ರಕರ್ತರ ಸಹಕಾರ ಸಂಘದ ವತಿಯಿಂದ ಪತ್ರಕರ್ತರ ಮಕ್ಕಳಿಗೆ ಪ್ರತಿಭಾ ಪುರಸ್ಕಾರ ನೀಡಲಾಯಿತು –ಪ್ರಜಾವಾಣಿ ಚಿತ್ರ

ಕರ್ನಾಟಕ ಪತ್ರಕರ್ತರ ಸಹಕಾರ ಸಂಘದ 75ನೇ ವರ್ಷದ ಕಾರ್ಯಕ್ರಮ

'ಸಕಾಲಕ್ಕೆ ಸಾಲ ಮರು ಪಾವತಿಸಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಾಲ ಪಡೆದವರು ಸಮಯಕ್ಕೆ ಸರಿಯಾಗಿ ಸಾಲ ಮರುಪಾವತಿಸದಿದ್ದರೆ ಸಹಕಾರಿ ಸಂಘಗಳು ಉಳಿಯುವುದಿಲ್ಲ ಎಂದು ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ಹೇಳಿದರು.

ಕರ್ನಾಟಕ ಪತ್ರಕರ್ತರ ಸಹಕಾರ ಸಂಘ ಶನಿವಾರ ಹಮ್ಮಿಕೊಂಡಿದ್ದ 75ನೇ ವರ್ಷದ 'ಅಮೃತ ಮಹೋತ್ಸವ' ಕಾರ್ಯಕ್ರಮದಲ್ಲಿ ಮಾತನಾಡಿದರು.

ಸಹಕಾರ ಸಂಘಗಳನ್ನು ಉಳಿಸಿಕೊಳ್ಳುವ ನಿಟ್ಟಿನಲ್ಲಿ ಹಣ ಮರುಪಾವತಿಯ ಬಗ್ಗೆಯೂ ಆಡಳಿತ ಮಂಡಳಿ ಕಟ್ಟುನಿಟ್ಟಿನ ವಸೂಲಿ ಕ್ರಮ ವಹಿಸಬೇಕು ಎಂದರು.

ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಮಾತನಾಡಿ, ಮಾನ್ಯತೆ ಹೊಂದಿರುವ ಪತ್ರಕರ್ತರಿಗೆ ಮಾತ್ರ ಮಾಧ್ಯಮ ಸಂಜೀವಿನಿ ಯೋಜನೆ ಸೌಲಭ್ಯ ಸಿಗುತ್ತಿದ್ದು, ಎಲ್ಲ ಅರ್ಹ ಪತ್ರಕರ್ತರಿಗೆ ಸಿಗುವ ನಿಟ್ಟಿನಲ್ಲಿ ಕ್ರಮ ವಹಿಸಲಾಗುವುದು. ಯೋಜನೆಯಲ್ಲಿನ ಕಠಿಣ ಷರತ್ತು ಸಡಿಲಿಸಿ, ಸರಳೀಕರಣ ಮಾಡುವ ಬಗ್ಗೆ ಮುಖ್ಯಮಂತ್ರಿ ಜತೆಗೆ ಚರ್ಚಿಸಲಾಗುವುದು ಎಂದು ಭರವಸೆ ನೀಡಿದರು.

ಮುಖ್ಯಮಂತ್ರಿ ಮಾಧ್ಯಮ ಸಲಹೆಗಾರ ಕೆ.ವಿ.ಪ್ರಭಾಕರ ಮಾತನಾಡಿ, ಪತ್ರಕರ್ತರನ್ನು ಕಂಡರೆ ರಾಷ್ಟ್ರೀಯ ಬ್ಯಾಂಕ್‌ಗಳಿಗೆ ಅಸಡ್ಡೆ. ಕೆಲವು ಸಲ ಸಾಲ ಕೊಡುವುದೇ ಇಲ್ಲ. ದೇಶದಲ್ಲಿ ನೋಟು ನಿಷೇಧಿಸಿದ್ದ ಸಂದರ್ಭದಲ್ಲಿ ಗ್ರಾಮೀಣ ಭಾಗದ ಜನರನ್ನು ಕಾಪಾಡಿದ್ದೇ ಸಹಕಾರ ಬ್ಯಾಂಕ್‌ಗಳು. ರಾಜ್ಯದಲ್ಲಿ ಅಂದಾಜು 569 ಪತ್ರಕರ್ತರಿಗೆ ಪಿಂಚಣಿ ಸಿಗುತ್ತಿದೆ. ಆದರೆ, ಕೆಲ ಕಠಿಣ ನಿಯಮದಿಂದ ಪಿಂಚಣಿ ಪಡೆಯಲು ಬಹುತೇಕ ಪತ್ರಕರ್ತರಿಗೆ ಸಾಧ್ಯವಾಗುತ್ತಿಲ್ಲ. ಹಾಗಾಗಿ, ನಿಯಮರಹಿತವಾಗಿ ಪತ್ರಕರ್ತರಿಗೆ ಪಿಂಚಣಿ ಸೌಲಭ್ಯ ಸಿಗುವಂತೆ ಮಾಡುವ ನಿಟ್ಟಿನಲ್ಲಿ ಮುಖ್ಯಮಂತ್ರಿ ಅವರ ಗಮನಕ್ಕೆ ತರಲಾಗುವುದು ಎಂದರು.

ಸಂಘದ ಸ್ಮರಣ ಸಂಚಿಕೆ ಬಿಡುಗಡೆ ಮಾಡಲಾಯಿತು. ಸಂಘದ ಏಳ್ಗೆಗೆ ಕೊಡುಗೆ ನೀಡಿದವರಿಗೆ ಸನ್ಮಾನ ಮತ್ತು ಸಾಧಕ ಮಕ್ಕಳಿಗೆ ಪ್ರತಿಭಾ ಪುರಸ್ಕಾರ ನೀಡಲಾಯಿತು. ಸಂಘದ ಅಧ್ಯಕ್ಷ ರಮೇಶ್ ಎಂ.ಪಾಳ್ಯ, ಉಪಾಧ್ಯಕ್ಷ ದೊಡ್ಡಬೊಮ್ಮಯ್ಯ, ಖಜಾಂಜಿ ಬಿ.ಎನ್. ಮೋಹನ್ ಕುಮಾರ್ ಹಾಜರಿದ್ದರು.

ಬೇಡಿಕೆಗಳ ಈಡೇರಿಕೆಗೆ ಮನವಿ

'ಸಮುದಾಯ ಮಾಧ್ಯಮ ಭವನ' ನಿರ್ಮಾಣಕ್ಕೆ ರಿಯಾಯಿತಿ ದರದಲ್ಲಿ ಸಿ.ಎ ನಿವೇಶನ ನೀಡಬೇಕು. ಗ್ರೇಟರ್ ಬೆಂಗಳೂರು ವ್ಯಾಪ್ತಿಯಲ್ಲಿ 'ಮಾಧ್ಯಮ ಗ್ರಾಮ' ನಿರ್ಮಾಣಕ್ಕೆ 10 ಎಕರೆ ಭೂಮಿ ಮಂಜೂರು ಮಾಡಬೇಕು. ಪತ್ರಕರ್ತರ ಪಿಂಚಣಿ ಯೋಜನೆಯ ನಿಯಮ ಸರಳೀಕರಣಗೊಳಿಸಬೇಕು. ಸಂಘದ ಉತ್ತೇಜನಕ್ಕೆ ₹10 ಕೋಟಿ ಬಡ್ಡಿ ರಹಿತ ಸಾಲ ನೀಡುವಂತೆ ಸರ್ಕಾರಕ್ಕೆ ಸಂಘದ ವತಿಯಿಂದ ಮನವಿ ಮಾಡಲಾಯಿತು.

'ಸವಾಲು ಎದುರಿಸಲು ಖಾಸಗಿ ವಿವಿಗಳು ಬದ್ಧ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಖಾಸಗಿ ವಿಶ್ವವಿದ್ಯಾಲಯಗಳು ಶೈಕ್ಷಣಿಕ, ಔದ್ಯೋಗಿಕ ಕ್ಷೇತ್ರವನ್ನು ಅಭಿವೃದ್ಧಿಪಡಿಸುವ ನಿಟ್ಟಿನಲ್ಲಿ ಕಾರ್ಯನಿರ್ವಹಿಸುತ್ತಿವೆ. 21ನೇ ಶತಮಾನದ ಸವಾಲುಗಳಿಗೆ ಭಾರತದ ಯುವ ಸಮುದಾಯವನ್ನು ರೂಪಿಸಲು ಬದ್ಧವಾಗಿವೆ' ಎಂದು ಸಿಎಂಆರ್ ವಿಶ್ವವಿದ್ಯಾಲಯ ಮತ್ತು ಸಿಎಂಆರ್ ಸಮೂಹ ಶಿಕ್ಷಣ ಸಂಸ್ಥೆಗಳ ಅಧ್ಯಕ್ಷ ಕೆ.ಸಿ. ರಾಮಮೂರ್ತಿ ಹೇಳಿದರು.

ಬಾಗಲೂರಿನಲ್ಲಿರುವ ಲೇಕ್ ಸೈಡ್ ಕ್ಯಾಂಪಸ್ ಸಭಾಂಗಣದಲ್ಲಿ ಶನಿವಾರ ಸಿಎಂಆರ್ ವಿಶ್ವವಿದ್ಯಾಲಯ ಹಾಗೂ ಕರ್ನಾಟಕದ ವಿಶ್ರಾಂತ ಕುಲಪತಿಗಳ ವೇದಿಕೆ (ಎಫ್‌ವಿಸಿಕೆ) ಆಯೋಜಿಸಿದ್ದ 'ಕರ್ನಾಟಕದಲ್ಲಿ ಖಾಸಗಿ ವಿಶ್ವವಿದ್ಯಾಲಯಗಳ ಕಾರ್ಯನಿರ್ವಹಣೆ' ಒಂದು ದಿನದ ವಿಚಾರ ಸಂಕಿರಣದಲ್ಲಿ ಅವರು ಮಾತನಾಡಿದರು.

'ಖಾಸಗಿ ವಿಶ್ವವಿದ್ಯಾಲಯಗಳನ್ನು ಬಲಪಡಿಸಲು, ವಿಶ್ವಾಸಾರ್ಹತೆ ಹೆಚ್ಚಿಸಲು, ಪೂರ್ಣ ಸಾಮರ್ಥ್ಯದಿಂದ ಕಾರ್ಯನಿರ್ವಹಿಸಲು ಅನುವು ಮಾಡಿಕೊಡಬೇಕು. ಅದಕ್ಕೆ ಬೇಕಾದ ರಚನಾತ್ಮಕ ಮಾರ್ಗವನ್ನು ತಯಾರಿಸಿಕೊಳ್ಳಬೇಕು' ಎಂದು ಅವರು ತಿಳಿಸಿದರು.

ಎಫ್‌ವಿಸಿಕೆ ಅಧ್ಯಕ್ಷ ಎಸ್. ಚಂದ್ರಶೇಖರ್ ಶೆಟ್ಟಿ ಉದ್ಘಾಟಿಸಿದರು. ಕಾರ್ಯದರ್ಶಿ ಎಚ್. ಮಹೇಶಪ್ಪ ಪ್ರಾಸ್ತಾವಿಕವಾಗಿ ಮಾತನಾಡಿದರು. ಸಿಎಂಆರ್ ವಿಶ್ವವಿದ್ಯಾಲಯದ ಕುಲಪತಿ ಎಚ್. ಬಿ. ರಾಘವೇಂದ್ರ, ಸಿಎಂಆರ್ ವಿಶ್ವವಿದ್ಯಾಲಯದ ಸಹಕುಲಾಧಿಪತಿ ಪ್ರವೀಣ್ ಆರ್., ಕುಲಸಚಿವ ಧನಂಜಯ ಎಂ. ಉಪಸ್ಥಿತರಿದ್ದರು.



'ಕರ್ನಾಟಕದಲ್ಲಿ ಖಾಸಗಿ ವಿಶ್ವವಿದ್ಯಾಲಯಗಳ ಕಾರ್ಯನಿರ್ವಹಣೆ' ವಿಚಾರ ಸಂಕಿರಣದಲ್ಲಿ ಎಸ್. ಚಂದ್ರಶೇಖರ್ ಶೆಟ್ಟಿ ಮಾತನಾಡಿದರು

ಚಿತ್ರಾವಳಿ



ಕರ್ನಾಟಕ ಪ್ರಗತಿಪರ ಸಹಕಾರಿಗಳ ವೇದಿಕೆ, ಶ್ರೀ ತ್ಯಾಗರಾಜ ಕೋ–ಆಪರೇಟಿವ್ ಬ್ಯಾಂಕ್‌ನ ಸಹಯೋಗದಲ್ಲಿ ಶನಿವಾರ ಆಯೋಜಿಸಿದ್ದ 'ರಾಷ್ಟ್ರೀಯ ಸಹಕಾರ ನೀತಿ–2025' ಕಾರ್ಯಾಗಾರ, ಸಂವಾದದಲ್ಲಿ ವೇದಿಕೆಯ ಅಧ್ಯಕ್ಷ ಬಸವೇಗೌಡ, ಬ್ಯಾಂಕ್‌ನ ಅಧ್ಯಕ್ಷ ಎಂ.ಆರ್. ವೆಂಕಟೇಶ್, ವೇದಿಕೆಯ ಕಾರ್ಯದರ್ಶಿ ಶಶಿಧರ ಎಲೆ, ಗುರುಸ್ವಾಮಿ, ನಾಗರಾಜಯ್ಯ, ಅಶ್ವತ್ಥಯ್ಯ, ಮಹಾಮಂಡಳದ ನಿರ್ದೇಶಕರಾದ ಭೂಕಾಂತ್ ಉಪಸ್ಥಿತರಿದ್ದರು


ಎಸ್.ಕೆ. ಗಾರ್ಡನ್ ಎಸ್‌ಸಿ. ಕಾಲೊನಿಯಲ್ಲಿ ನಿರ್ಮಿಸಿರುವ ಪೌರಕಾರ್ಮಿಕರ ವಿಶ್ರಾಂತಿ ಕಟ್ಟಡವನ್ನು ಶಾಸಕ ಎ.ಸಿ. ಶ್ರೀನಿವಾಸ್ ಉದ್ಘಾಟಿಸಿದರು. ಬಿಬಿಎಂಪಿ ಕಾರ್ಯಪಾಲಕ ಎಂಜಿನಿಯರ್ ತಿಪ್ಪೇಸ್ವಾಮಿ, ಸಹಾಯಕ ಎಂಜಿನಿಯರ್ ರವಿ ವಡ್ಡರ್, ಕೆ.ಬಿ. ದೇವರಾಜು, ವಿವಿಧ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರಾದ ಜೋಸವ, ಫಯಾಜ್ ಖಾನ್, ವಾರ್ಡ್ ಅಧ್ಯಕ್ಷ ಸಮೀವುಲ್ಲಾ ಉಪಸ್ಥಿತರಿದ್ದರು


ದೊಮ್ಮಲೂರಿನಲ್ಲಿರುವ ಬೆಂಗಳೂರು ಅಂತರರಾಷ್ಟ್ರೀಯ ಕೇಂದ್ರದಲ್ಲಿ (ಬಿಐಸಿ) ಕೆ.ಬಿ. ಸ್ವಾಮಿ ನೇತೃತ್ವದ ಮಂಡ್ಯದ ಶ್ರೀ ವಿನಾಯಕ ಯುವಕರ ಕಲಾ ಬಳಗವು ಶನಿವಾರ ಪೂಜಾ ಕುಣಿತ ಪ್ರಸ್ತುತಪಡಿಸಿತು

ನಗರದಲ್ಲಿ ಇಂದು

ಮನುಷ್ಯತ್ವದೆಡೆಗೆ ಸಮುದಾಯ–50 ಜಾಥಾದ ಉದ್ಘಾಟನೆ: ಕಲಾ ಶಿಬಿರದ ಉದ್ಘಾಟನೆ: ಪ.ಸ. ಕುಮಾರ್, ಬಂಜಗೆರೆ ಜಯಪ್ರಕಾಶ್, 'ಸಮುದಾಯದ–50 ಕಾರ್ಯಕ್ರಮಗಳ ಉದ್ಘಾಟನೆ: ಬರಗೂರು ರಾಮಚಂದ್ರಪ್ಪ, ಅಧ್ಯಕ್ಷತೆ: ಎಚ್. ಜನಾರ್ದನ, ಆಶಯ ಭಾಷಣ: ಎಚ್. ಎನ್. ನಾಗಮೋಹನ್‌ದಾಸ್, ಅಗ್ರಹಾರ ಕೃಷ್ಣಮೂರ್ತಿ, ಮನೋಜ್ ವಾಮಂಜೂರು, ಅತಿಥಿಗಳು: ಪ್ರಸನ್ನ, ವಿಜಯಾ, ಕಿಶೋರ್ ಕುಮಾರ್, ಕೆ.ವಿ. ನಾಗರಾಜಮೂರ್ತಿ, ಆಯೋಜನೆ: ಸಮುದಾಯ, ಸ್ಥಳ: ರವೀಂದ್ರ ಕಲಾಕ್ಷೇತ್ರ, ಜೆ.ಸಿ. ರಸ್ತೆ, ಬೆಳಿಗ್ಗೆ 10.30ರಿಂದ ಶಿಬಿರ, ವೇದಿಕೆ ಕಾರ್ಯಕ್ರಮ ಸಂಜೆ 5ರಿಂದ


ಬರಗೂರು ರಾಮಚಂದ್ರಪ್ಪ

ಸ್ಟ್ರಾಂಗ್ 5ಕೆ ವಾಕಥಾನ್: ಸ್ಥಳ: ಎಚ್‌ಸಿಜಿ ಕ್ಯಾನ್ಸರ್ ಕೇರ್ ಆಸ್ಪತ್ರೆ, ಕಾಳಿಂಗರಾವ್ ರಸ್ತೆ, ಸಂಪಂಗಿರಾಮ ನಗರ, ಬೆಳಿಗ್ಗೆ 6.30

ಪ್ರತಿಭಾ ಸಮ್ಮಿಲನ ಸಂಭ್ರಮ, ಪ್ರತಿಭಾ ಪುರಸ್ಕಾರ ಸಮಾರಂಭ: ಉದ್ಘಾಟನೆ: ಸುರೇಶ್ ಗೌಡ, ಅಧ್ಯಕ್ಷತೆ: ಪದ್ಮಿನಿ ನಾಗರಾಜು, ಪ್ರಶಸ್ತಿ ಪ್ರದಾನ: ಗೋಪಾಲಕೃಷ್ಣ ಜೋಷಿ, ಹರೀಶ್ ಕಾಮತ್, ಪ್ರಶಸ್ತಿ ಸ್ವೀಕರಿಸುವವರು: ಹುಚ್ಚಮ್ಮ ಚೌಧರಿ, ಎಂ.ಎಸ್. ಉಮೇಶ್, ಅತಿಥಿಗಳು: ರವಿ ಡಿ. ಚನ್ನಣ್ಣನವರ್, ಎಂ.ಡಿ. ಕೌಶಿಕ್, ಆಯೋಜನೆ: ಮೈಕೊ ಕನ್ನಡ ಬಳಗ, ಸ್ಥಳ: ಜಗದ್ಗುರು ರೇಣುಕಾಚಾರ್ಯ ವಿದ್ಯಾಸಂಸ್ಥೆ, ಆನಂದರಾವ್ ವೃತ್ತ, ಬೆಳಿಗ್ಗೆ 9

ನಾಡಪ್ರಭು ಕೆಂಪೇಗೌಡರ ಜಯಂತಿ: ಸಾನ್ನಿಧ್ಯ: ನಿರ್ಮಲಾನಂದನಾಥ ಸ್ವಾಮೀಜಿ, ನಿಶ್ಚಲಾನಂದನಾಥ ಸ್ವಾಮೀಜಿ, ಉಪಸ್ಥಿತಿ: ಸೌಮ್ಯನಾಥ ಸ್ವಾಮೀಜಿ, ಉದ್ಘಾಟನೆ: ಎಂ. ಕೃಷ್ಣಪ್ಪ, ಅತಿಥಿಗಳು: ಸಿ.ಎಚ್. ಹನುಮಂತರಾಯಪ್ಪ, ಕೆ.ಪಿ. ನಾಗೇಶ್, ಅಧ್ಯಕ್ಷತೆ: ಟಿ.ಎಚ್. ಆಂಜನಪ್ಪ, ಆಯೋಜನೆ: ನಾಡಪ್ರಭು ಶ್ರೀ ಕೆಂಪೇಗೌಡರ ವಿಚಾರ ವೇದಿಕೆ ಟ್ರಸ್ಟ್, ಸ್ಥಳ: ಆದಿಚುಂಚನಗಿರಿ ಸಮುದಾಯ ಭವನ, ವಿಜಯನಗರ, ಬೆಳಿಗ್ಗೆ 10

ಆಲ್ಕೋಹಾಲಿಕ್ ಅನಾನಿಮಸ್ ಕರ್ನಾಟಕ ಘಟಕದ 61ನೇ ವಾರ್ಷಿಕೋತ್ಸವ: ಅತಿಥಿಗಳು: ಜಿ. ಶಾಂತಪ್ಪ, ಅರುಣ್ ಚಕ್ರವರ್ತಿ, ಸ್ಥಳ: ಕಾರ್ಮೆಲ್ ಕಾನ್ವೆಂಟ್, ಬನ್ನೇರುಘಟ್ಟ ರಸ್ತೆ, ಜಯನಗರ, ಬೆಳಿಗ್ಗೆ 9.30

ಅಕ್ಷರ ಆರಾಧನೆ–2025, 16 ಪುಸ್ತಕಗಳ ಬಿಡುಗಡೆ: ಅತಿಥಿ: ಜೋಗಿ, ಆಯೋಜನೆ: ಸಾವಣ್ಣ, ಸ್ಥಳ: ಬಿ.ಪಿ. ವಾಡಿಯಾ ಸಭಾಂಗಣ, ದಿ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ವರ್ಲ್ಡ್ ಕಲ್ಚರ್, ಬಿ.ಪಿ. ವಾಡಿಯಾ ರಸ್ತೆ, ಬಸವನಗುಡಿ, ಬೆಳಿಗ್ಗೆ 10

ಗಾಯನ, ಹಾಸ್ಯ, ರಸಪ್ರಶ್ನೆ, ಕವಿಗೋಷ್ಠಿ: ಅಧ್ಯಕ್ಷತೆ: ಸದಾನಂದ, ಅತಿಥಿ: ವಿ. ರೇಣುಕಾಪ್ರಸನ್ನ, ಆಯೋಜನೆ: ಸಹಮತ, ಸ್ಥಳ: ಹೇಮ ಸದನ, ಏಳನೇ ಮುಖ್ಯರಸ್ತೆ, ಸಹಕಾರನಗರ, ಬೆಳಿಗ್ಗೆ 10

ಗೌರಿ–ಗಣೇಶ ಹಬ್ಬದ ಅಂಗವಾಗಿ ಹಿರಿಯ ಸಾಧಕರಿಗೆ 'ನೂರ್ಕಾಲ ಸುಖವಾಗಿ ಬಾಳಿ' ಪ್ರಶಸ್ತಿ ಪ್ರದಾನ: ಉದ್ಘಾಟನೆ: ಆರ್. ದೇವದಾಸ್, ಅಧ್ಯಕ್ಷತೆ: ವೂಡೇ ಪಿ. ಕೃಷ್ಣ, ಅತಿಥಿಗಳು: ಎಂ. ರಾಮಕೃಷ್ಣ, ಸಿ.ಆರ್. ಕುಮಾರಸ್ವಾಮಿ, ಮಲ್ಲೇಪುರಂ ಜಿ. ವೆಂಕಟೇಶ್, ಎಸ್.ಜಿ. ಸುಶೀಲಮ್ಮ, ಎ. ರಾಜೇಶ್, ಆಯೋಜನೆ: ದತ್ತಶ್ರೀ ಸಾಂಸ್ಕೃತಿಕ ವೇದಿಕೆ, ಸ್ಥಳ: ಬಾಪು ಸಭಾಂಗಣ, ಗಾಂಧಿ ಭವನ, ಕುಮಾರಕೃಪಾ ರಸ್ತೆ, ಬೆಳಿಗ್ಗೆ 10.30

ಉಪನ್ಯಾಸ, ಕವಿಗೋಷ್ಠಿ, ಕರೋಕೆ ಗಾಯನ, ರಸಪ್ರಶ್ನೆ: ಅಧ್ಯಕ್ಷತೆ: ಸುಂದರ ಪ್ರಕಾಶ್, ಅತಿಥಿಗಳು: ದತ್ತಾತ್ರೇಯ, ಇಂದಿರಾ, ಆಯೋಜನೆ: ರವಿಕಿರಣ ಆರ್ಟ್ಸ್ ಮತ್ತು ಕ್ರಿಯೇಷನ್ಸ್ ಟ್ರಸ್ಟ್, ಸ್ಥಳ: ವಾಸವಿ ಕಲಾ ಸೇವಾ ಟ್ರಸ್ಟ್, ರಾಜಾಜಿನಗರ, ಬೆಳಿಗ್ಗೆ 10.30

ನವೋದಯ ತಂಡ–2025: ಅತಿಥಿ: ಡಾ.ಎಂ.ಸಿ. ಸುಧಾಕರ್, ಅಧ್ಯಕ್ಷತೆ: ಎಂ.ಪಿ. ಶ್ಯಾಮ್, ಆಯೋಜನೆ: ಆರ್.ವಿ ಕಾಲೇಜ್ ಆಫ್ ಎಂಜಿನಿಯರಿಂಗ್, ಸ್ಥಳ: ಪೂರ್ಣಿಮಾ ಪ್ಯಾಲೇಸ್, ಮೈಸೂರು ರಸ್ತೆ, ಬೆಳಿಗ್ಗೆ 10.30

ಒಪೇರಾ–ಕಾಡೋ ಕಥೆ, ಗುನುಗೋ ಗೀತೆ: 'ಗತ' ಕಥೆ: ಎಸ್. ದಿವಾಕರ್, ಕವಿತಾವಾಚನ: ನಾಗರಾಜ ವಸ್ತಾರೆ, ಗೀತಗಾಯನ: ಪ್ರವೀಣ್ ಡಿ. ರಾವ್, ಆಯೋಜನೆ: ತಾರಾಅರೇನಾ, ಸ್ಥಳ: ಸನಾತನ ಕಲಾಕ್ಷೇತ್ರ, ಜಯನಗರ ನಾಲ್ಕನೇ ಬಡಾವಣೆ, ಬೆಳಿಗ್ಗೆ 10.35

ಧರ್ಮ ಸಂರಕ್ಷಣಾ ಸಮಾವೇಶ: ಭಾಗವಹಿಸುವವರು: ವಚನಾನಂದ ಸ್ವಾಮೀಜಿ, ಜಗದೀಶ್ ಕಾರಂತ, ಚಕ್ರವರ್ತಿ ಸೂಲಿಬೆಲೆ, ದೋ ಕೇಶವ ಮೂರ್ತಿ, ರಾಜಣ್ಣ ಹೊನ್ನೇನಹಳ್ಳಿ, ವಸಂತ್ ಗಿಳಿಯಾರ್, ಆಯೋಜನೆ: ಪುಣ್ಯಕ್ಷೇತ್ರ ಸಂರಕ್ಷಣಾ ಸಮಿತಿ, ಸ್ಥಳ: ಸ್ವಾತಂತ್ರ್ಯ ಉದ್ಯಾನ, ಬೆಳಿಗ್ಗೆ 11

ಬಿಎಲ್‌ಡಿ ಸೌಹಾರ್ದ ಬ್ಯಾಂಕ್‌ನ 11ನೇ ಶಾಖೆಯ ಉದ್ಘಾಟನೆ: ಸಿದ್ಧಲಿಂಗ ಸ್ವಾಮೀಜಿ, ಉದ್ಘಾಟನೆ: ರಾಮಲಿಂಗಾರೆಡ್ಡಿ, ಅಧ್ಯಕ್ಷತೆ: ಎಂ.ಬಿ. ಪಾಟೀಲ, ಸ್ಥಳ: ಮಹಾದೇವ ದೇಸಾಯಿ ಸಭಾಂಗಣ, ಎರಡನೇ ಮಹಡಿ, ಗಾಂಧಿ ಭವನ, ಕುಮಾರಕೃಪಾ ರಸ್ತೆ, ಬೆಳಿಗ್ಗೆ 11

ಭರತನಾಟ್ಯ ರಂಗಪ್ರವೇಶ: ಲಕ್ಷ್ಮಿ ಕೆ., ಅತಿಥಿಗಳು: ಧನಲಕ್ಷ್ಮಿ ಸಿದ್ಧಾರ್ಥ, ಎನ್. ಸಂತೋಷ್ ಕುಮಾರ್, ವಿನ್ಸೆಂಟ್ ಪೌಲ್, ಆಯೋಜನೆ: ಶ್ರೀವತ್ಸ ನಾಟ್ಯಾಲಯ, ಸ್ಥಳ: ನಾಟ್ಯಪ್ರಿಯ ನೃತ್ಯಕ್ಷೇತ್ರ, ಸ್ಕೂಲ್ ಆಫ್ ಪರ್ಫಾರ್ಮಿಂಗ್ ಆರ್ಟ್ಸ್, ರಾಮಮೂರ್ತಿನಗರ, ಮಧ್ಯಾಹ್ನ 3

'ನಮನ–2025' ಒಡಿಸಿ ನೃತ್ಯೋತ್ಸವ: ಪ್ರಸ್ತುತಿ: ನೃತ್ಯಂತರ ತಂಡ, ಗಜೇಂದ್ರ ಪಾಂಡ, ಸೂರ್ ಮಂದಿರ ತಂಡ, ಆಯೋಜನೆ: ನೃತ್ಯಂತರ, ಸ್ಥಳ: ಎಡಿಎ ರಂಗಮಂದಿರ, ಜೆ.ಸಿ. ರಸ್ತೆ, ಸಂಜೆ 5

ಸಂಗೀತ ಕಛೇರಿ: ಗಾಯನ: ಕಮಲಾ ದೀಪ್ತಿ, ಪಿಟೀಲು: ವೈಭವ್ ರಮಣಿ, ಮೃದಂಗ: ಪ್ರಜ್ವಲ್ ಬಿ.ಆರ್., ಮೋರ್ಸಿಂಗ್: ಕಾರ್ತಿಕ್ ಪ್ರಣವ್, ಆಯೋಜನೆ: ಬಿಟಿಎಂ ಕಲ್ಚರಲ್ ಅಕಾಡೆಮಿ, ಸ್ಥಳ: ಶ್ರೀರಮಣ ಮಹರ್ಷಿ ಅಕಾಡೆಮಿ ಫಾರ್ ಬ್ಲೈಂಡ್, ಜೆ.ಪಿ. ನಗರ, ಸಂಜೆ 5.30

'ದಿ ಮೋದಿ ಎಫೆಕ್ಟ್' ಪುಸ್ತಕ ಬಿಡುಗಡೆ: ಡಾ.ಸಿ.ಎನ್. ಮಂಜುನಾಥ್, ಪ್ರಕಾಶ್ ಬೆಳವಾಡಿ, ಎನ್. ತಿಪ್ಪೇಸ್ವಾಮಿ, ಮಂಚಲ್ ಮಹೇಶ್, ಡಾ. ದೇವಿಪ್ರಸಾದ್ ಶೆಟ್ಟಿ, ಚೈತನ್ಯಾ ಆದಿಕೇಶವಲು, ಆಯೋಜನೆ: ಅಯೋಧ್ಯ ಪಬ್ಲಿಕೇಷನ್ಸ್, ಸ್ಥಳ: ದಿ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ವರ್ಲ್ಡ್ ಕಲ್ಚರ್, ಬಿ.ಪಿ. ವಾಡಿಯಾ ರಸ್ತೆ, ಬಸವನಗುಡಿ, ಸಂಜೆ 5

ಸಂಗೀತ ಕಛೇರಿ: ಕೊಳಲು: ನಿತ್ಯಾನಂದ ಹಲ್ದಿಪುರ್, ತಬಲಾ: ಉದಯ್ ರಾಜ್ ಕರ್ಪುರ್, ಗಾಯನ: ವಿನಾಯಕ್ ತೊರವಿ, ತಬಲಾ: ರವೀಂದ್ರ ಯಾವಗಲ್, ಹಾರ್ಮೋನಿಯಂ: ವ್ಯಾಸಮೂರ್ತಿ ಕಟ್ಟಿ, ಆಯೋಜನೆ: ಅನ್ನಪೂರ್ಣ ದೇವಿ ಫೌಂಡೇಷನ್, ಸ್ಥಳ: ಭಾರತೀಯ ವಿದ್ಯಾಭವನ, ರೇಸ್‌ಕೋರ್ಸ್ ರಸ್ತೆ, ಸಂಜೆ 5

ಭರತನಾಟ್ಯ ಪ್ರದರ್ಶನ: ಅತಿಥಿಗಳು: ಡಾ. ವಿಜಯಲಕ್ಷ್ಮಿ ಬಾಳೇಕುಂದ್ರಿ, ಆರ್.ಪಿ. ಉಮಾಶಂಕರ್, ಡಿ.ವಿ. ಪ್ರಸನ್ನ ಕುಮಾರ್, ವೈ.ಕೆ. ಸಂಧ್ಯಾ ಶರ್ಮಾ, ಆಯೋಜನೆ: ಲಯಾಭಿನಯ ಕಲ್ಚರಲ್ ಫೌಂಡೇಷನ್, ಸ್ಥಳ: ಪುರಂದರ ಮಂಟಪ, ನಿಸರ್ಗ ಲೇಔಟ್, ಬನ್ನೇರುಘಟ್ಟದ ಬಳಿ, ಸಂಜೆ 5.15

ಗಾನಾಮೃತದಲ್ಲಿ ಗೋವಿಂದನ ಆರಾಧನೆ: ಗಾಯನ: ಎಂ.ಎಸ್. ದೀಪಕ್ ಮತ್ತು ತಂಡ, ಪವಿತ್ರಾ ಭಟ್, ರಂಜಿನಿ ವೆಂಕಟೇಶ್, ಸುಶ್ಮಿತಾ ಬೇಲೂರು, ಮನ್ವಿತಾ ಜಿ. ಸಂಗೀತಾ ಜನಾರ್ದನ್, ಕೊಳಲು: ಸಮರ್ಥ, ಮೃದಂಗ: ಅಜಯ್ ಆದಿತ್ಯ, ಆಯೋಜನೆ: ಕೃಷ್ಣ ಜನ್ಮಾಷ್ಟಮಿ ಸಂಭ್ರಮ, ಸ್ಥಳ: ಇಸ್ಕಾನ್ ವೈಕುಂಠ ಮಂದಿರ, ವಸಂತಪುರ, ಸಂಜೆ 5.30

'ರಾಗಾಂತರಂಗ' ಒಂದು ಸಂಗೀತ ಸಂವಾದ: ಭಾಗವಹಿಸುವವರು: ರಂಜನಿ ವಾಸುಕಿ, ಶತಾವಧಾನಿ ಆರ್. ಗಣೇಶ್, ಆಯೋಜನೆ: ಕಲಾ ಪ್ರೇಮಿ ಫೌಂಡೇಷನ್, ಸ್ಥಳ: ಸೇವಾ ಸದನ, ಮಲ್ಲೇಶ್ವರ, 6

ಪರಮ ವಿಹಾರ: ಪ್ರಮಥ್ ಕಿರಣ್, ಆಯೋಜನೆ: ಪರಮ್ ಫೌಂಡೇಷನ್, ಸ್ಥಳ: ಸನಾತನ ಕಲಾಕ್ಷೇತ್ರ, ಜಯನಗರ, ಸಂಜೆ 6

ಪ್ರೋಷ್ಟಪದಿ ಭಾಗವತ ಪ್ರವಚನ: ಚಂದ್ರಶೇಖರ ಆಚಾರ್ಯ, ಜಿ.ಪಿ. ನಾಗರಾಜಾಚಾರ್ಯ, ಆಯೋಜನೆ ಮತ್ತು ಸ್ಥಳ: ವಿಜಯ ಮಧ್ವ ಸಂಘ, ವಿಜಯನಗರ, ಸಂಜೆ 6.15

ನೃತ್ಯೋತ್ಸವ ಬೆಂಗಳೂರು–2025: ಅತಿಥಿಗಳು: ನಂದಿನಿ ವಿ. ರಮಣಿ, ಲಲಿತಾ ಶ್ರೀನಿವಾಸನ್, ರೇವತಿ ಕಾಮತ್, ಆರತಿ ಎಚ್.ಎನ್., ಉಷಾರಾಣಿ ರಾಮನಾಥನ್, ಸ್ಥಳ: ನಯನ ಸಭಾಂಗಣ, ಕನ್ನಡ ಭವನ, ಜೆ.ಸಿ. ರಸ್ತೆ, ಸಂಜೆ 6.45

ಸಾಹಿತ್ಯಿಕ, ಸಾಂಸ್ಕೃತಿಕ ಸೇರಿದಂತೆ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ವಿವರಗಳನ್ನು 'ನಗರದಲ್ಲಿ ಇಂದು' ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ-ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ.. nagaradalli_indu@prajavani.co.in

ಮದ್ಯ ಅಕ್ರಮ ಸಾಗಣೆ ನಿರಂತರ

ಒಂದನೇ ಪುಟದಿಂದ

ಗೋಪ್ಯ ವಿಡಿಯೊ ಮಾಡುತ್ತಿದ್ದಾರೆ ಎಂದು ನಮ್ಮ ಮೇಲೆ ಅನುಮಾನಗೊಂಡು, ಒಬ್ಬೊಬ್ಬರಾಗಿ ಗುಂಪುಗೂಡಲು ಶುರು ಮಾಡಿದ್ದರಿಂದ ಅಲ್ಲಿಂದ ಕಾಲ್ಕಿತ್ತೆವು.

ಒಂದು ಕಾಲದಲ್ಲಿ ಮದ್ಯದ ಅಕ್ರಮ ಮಾರಾಟಕ್ಕೆ ಹೆಸರಾಗಿದ್ದ ಬೆಳಗಾವಿಯ ಗ್ಯಾಂಗ್‌ವಾಡಿಯ ಹೆಸರು ರಾಮನಗರ ಎಂದು ಬದಲಾಗಿದೆ. ಆದರೆ, ಕಸುಬು ಬದಲಾಗಿಲ್ಲ. ಮದ್ಯ ಅಕ್ರಮ ಮಾರಾಟ ಈಗಲೂ ನಡೆದಿದ್ದು ಕುಟುಕು ಕಾರ್ಯಾಚರಣೆಯಲ್ಲಿ ಪತ್ತೆಯಾಯಿತು.

ಇಂಥದ್ದೇ ಕಸುಬಿಗೆ ಹೆಸರಾಗಿದ್ದು ಬಾಡವಾಡ. 'ಪಾರ್ಟಿ' ಮಾಡುವ ಸೋಗಿನಲ್ಲಿ ಅಲ್ಲಿಗೆ ಹೊರಟೆವು. ಆರಂಭದಲ್ಲೇ ಕಾಣಿಸಿದ ದೊಡ್ಡ ಬಂಗಲೆಗೆ ಹೋಗಿ 'ಗೋವಾ ಮಾಲು?' ಕೇಳಿದೆ. ಯುವಕನೊಬ್ಬ ಎಷ್ಟು ಬೇಕು ಅಂದ. ನೂರು ಜನರ ಪಾರ್ಟಿ ಇದೆ, ಜಾಸ್ತಿ ಬೇಕು ಎಂದೆ. ಸಾವಿರ ಜನರಿದ್ದರೂ ಕೊಡುತ್ತೇನೆ. ಯಾವುದು ಬೇಕು ಹೇಳು ಅಂದ. ರೊಕ್ಕ ತಂದಿಲ್ಲ 'ಫೋನ್ ಪೆ' ಮಾಡಬಹುದೇ ಎಂದೆ. ಅದೆಲ್ಲ ನಡೆಯುವುದಿಲ್ಲ. ರೊಕ್ಕ ಮಾತ್ರ ಎಂದು ಹೊರಗೆ ಕಳುಹಿಸಿದ. ಅನುಮಾನದಿಂದ ನಮ್ಮನ್ನು ದೂರದವರೆಗೂ ಹಿಂಬಾಲಿಸಿದ.

ಗೋವಾದಿಂದ ಮದ್ಯ ತಂದು ಮಾರಾಟ ಮಾಡುವ ಕೆಲವರು ಇಲ್ಲಿದ್ದಾರೆ. ಇದೇ ದಂಧೆ ಮಾಡಿ ಬಂಗಲೆ ಕಟ್ಟಿಕೊಂಡಿದ್ದಾರೆ. ಅಬಕಾರಿ ಅಧಿಕಾರಿಗಳು ಸಾಕಷ್ಟು ಬಾರಿ ದಾಳಿ ಮಾಡಿ, ಪ್ರಕರಣ ದಾಖಲಿಸಿದ್ದಾರೆ. ಪೂರ್ಣ ನಿಲ್ಲಿಸಲು ಆಗಿಲ್ಲ.

'ಕಳ್ಳರು ವೈವಿಧ್ಯಮಯ ತಂತ್ರಗಳನ್ನು ಅನುಸರಿಸುತ್ತಿದ್ದಾರೆ. 'ಪುಷ್ಪ' ಸಿನಿಮಾದಲ್ಲಿ ರಕ್ತಚಂದನ ಕಟ್ಟಿಗೆ ಅಕ್ರಮವಾಗಿ ಸಾಗಿಸುವ ದೃಶ್ಯವಿದೆ. ಅದೇ ರೀತಿ ಲಾರಿಯೊಂದರಲ್ಲಿ 'ಪ್ಲೈವುಡ್' ಹೇರಿಕೊಂಡು ಅದರ ಮಧ್ಯೆ ಮದ್ಯದ ಬಾಕ್ಸ್‌ಗಳ ಸಾಗಿಸಲಾಗುತ್ತಿತ್ತು. ಇದು ನಮ್ಮ ಗುಪ್ತಚರ ಮೂಲದಿಂದ ಮಾಹಿತಿ ಸಿಕ್ತು. ವಾಹನ ನಂಬರ್ ಜಾಲಾಡಿ, ಮಾಲು ವಶಕ್ಕೆ ಪಡೆದೆವು' ಎಂದು ಕಾರ್ಯಾಚರಣೆಯ ರೂಪ ವಿವರಿಸುತ್ತಾರೆ ಸ್ಥಳೀಯ ಅಬಕಾರಿ ಅಧಿಕಾರಿಗಳು.

ವಿದ್ಯುತ್ ಟ್ರಾನ್ಸ್‌ಫಾರ್ಮರ್‌ಗಳ ಒಳಭಾಗದಲ್ಲಿ ಮದ್ಯದ ಬಾಕ್ಸ್‌ಗಳನ್ನು ಮುಚ್ಚಿ ಸಾಗಿಸುವುದು, ಎಲೆಕ್ಟ್ರಾನಿಕ್ ತ್ಯಾಜ್ಯ ಸಾಗಣೆ ಮಾಡುವ ನೆಪದಲ್ಲಿ ಕಂಟೇನರ್‌ನಲ್ಲಿ ಮದ್ಯ ಸಾಗಿಸುವುದು, ಹುಣಸೆ ಬೀಜ ಸಾಗಣೆ ನೆಪದಲ್ಲಿ ಲಾರಿಯಲ್ಲಿ ಮದ್ಯದ ಬಾಟಲಿ ಸಾಗಾಟ... ಹೀಗೆ ಹಲವು ತಂತ್ರಗಳನ್ನು ಖದೀಮರು ಅನುಸರಿಸುತ್ತಿದ್ದಾರೆ. ಈ ರೀತಿಯ ವಾಹನ ಗೋವಾ ಗಡಿ ದಾಟಿದ ತಕ್ಷಣವೇ ನಮಗೆ ಮಾಹಿತಿ ಬರುತ್ತದೆ. ಪ್ರತಿತಂತ್ರ ರೂಪಿಸಿ ಪತ್ತೆ ಮಾಡುತ್ತೇವೆ. ಅತ್ಯಂತ ನಾಜೂಕಿನಿಂದ ಕಾರ್ಯಾಚರಣೆ ಮಾಡಿದರೆ ಮಾತ್ರ ಹಿಡಿಯಲು ಸಾಧ್ಯ' ಎನ್ನುವುದು ಅಧಿಕಾರಿಯ ಹೇಳಿಕೆ.

ರಾಜ್ಯದಲ್ಲಿ ಮದ್ಯಕ್ಕೆ ಕೊರತೆಯಿಲ್ಲ. ಪ್ರತಿಷ್ಠಿತ ಬ್ರ್ಯಾಂಡ್ ಸಿಗುವುದಿಲ್ಲ ಎಂಬ ದೂರುಗಳಿಲ್ಲ. ಆದರೆ, ಗೋವಾದ ಮದ್ಯ ಮಾತ್ರ ಬೇಕು. ಅಕ್ರಮವಾದರೂ ಸರಿಯೇ, ಗೋವಾದಿಂದ ಭಾರಿ ಪ್ರಮಾಣದಲ್ಲಿ ಮದ್ಯ ಸಾಗಣೆ ಆಗುತ್ತಿದೆ. ಕಡಿಮೆ ದರದಲ್ಲಿ ಸಿಗುತ್ತದೆ ಎಂಬ ಏಕೈಕ ಕಾರಣಕ್ಕೆ ಪೊಲೀಸರು ಮತ್ತು ಅಬಕಾರಿಯವರ ಕಣ್ತಪ್ಪಿಸಿ, ಬಗೆಬಗೆಯ ಕಸರತ್ತು ನಡೆಸಿ, ಮದ್ಯವನ್ನು ಕರ್ನಾಟಕದ ಮೂಲೆಮೂಲೆಗೆ ತಲುಪಿಸಲಾಗುತ್ತಿದೆ.

ಪ್ರತಿ ವಾರ ಅಥವಾ 15 ದಿನಕ್ಕೊಮ್ಮೆ ಅಬಕಾರಿ ಇಲಾಖೆಯವರು ಮತ್ತು ಪೊಲೀಸರು ಜಂಟಿ ಕಾರ್ಯಾಚರಣೆ ನಡೆಸಿದಾಗಲೆಲ್ಲ, ಗೋವಾದಿಂದ ಮದ್ಯ ಅಕ್ರಮವಾಗಿ ಸಾಗಣೆ ಆಗುವುದು ದೃಢಪಡುತ್ತದೆ. ಬಗೆಬಗೆಯ ತಂತ್ರ-ಪ್ರತಿತಂತ್ರ ನಡೆಸಿದರೂ ಮದ್ಯದ ಅಕ್ರಮ ಸಾಗಣೆಗಾರರು ಬಹುತೇಕ ಸಂದರ್ಭದಲ್ಲಿ ಸಿಕ್ಕಿಬೀಳುತ್ತಾರೆ.

2024ರ ಜುಲೈ 1ರಿಂದ ಈವರೆಗೆ ₹8 ಕೋಟಿಗೂ ಅಧಿಕ ಮೌಲ್ಯದ ಮದ್ಯವನ್ನು ಬೆಳಗಾವಿ ವಿಭಾಗದ ಪೊಲೀಸರು ವಶಕ್ಕೆ ಪಡೆದಿದ್ದಾರೆ. 4,862 ಪ್ರಕರಣ ದಾಖಲಾಗಿವೆ. ಇವು ಚೆಕ್‌ಪೋಸ್ಟ್, ದಾಳಿ ವೇಳೆಯ ಅಂಕಿ ಅಂಶ. ಆದರೆ, ಅಬಕಾರಿ ಸಿಬ್ಬಂದಿ ಮತ್ತು ಪೊಲೀಸರಿಗೆ ಗೊತ್ತಾಗದಂತೆ ಅಕ್ರಮ ಸಾಗಣೆ ಈಗಲೂ ನಡೆಯುತ್ತಲೇ ಇದೆ. ಒಬ್ಬ ವ್ಯಕ್ತಿ 2.6 ಲೀಟರ್ ಮದ್ಯವನ್ನು ಜತೆಗೆ ಒಯ್ಯಲು ಕಾನೂನಿನಲ್ಲಿ ಅವಕಾಶವಿದೆ. ಗೋವಾಗೆ ಪ್ರವಾಸಕ್ಕೆ ಬರುವ ಹಲವರು ವಿಮಾನದ ಮೂಲಕ ಹೆಚ್ಚುವರಿ ಮದ್ಯವನ್ನು ಕೊಂಡೊಯ್ಯುವುದು ಇದೆ.



ಬೆಳಗಾವಿ ಅಬಕಾರಿ ಅಧಿಕಾರಿಗಳು ಈಚೆಗೆ ವಶಪಡಿಸಿಕೊಂಡಿದ್ದ ಅಪಾರ ಪ್ರಮಾಣದ ಮದ್ಯವನ್ನು ನಾಶ ಮಾಡಿದರು

> ಗಡಿಯಲ್ಲಿ ಚೆಕ್‌ಪೋಸ್ಟ್ ಬಿಗಿಗೊಳಿಸಲಾಗಿದೆ. ದಾಳಿ ಮುಂದುವರಿದಿದೆ. ಚೆಕ್‌ಪೋಸ್ಟ್ ತಪ್ಪಿಸಿ ಬರುವ ಮದ್ಯ ಹಿಡಿಯಲು ಹೆದ್ದಾರಿಗಳ ಗಸ್ತು ಮಾಡಲಾಗುತ್ತಿದೆ. ನಿಗಾ ಇಟ್ಟಿದ್ದೇವೆ. ನಿರೀಕ್ಷೆಗೂ ಮೀರಿ ಪ್ರಕರಣ ದಾಖಲಿಸಿದ್ದೇವೆ.
> **ಎಫ್.ಎಚ್.ಚಲವಾದಿ,** ಜಂಟಿ ಆಯುಕ್ತ, ಅಬಕಾರಿ ಇಲಾಖೆ, ಬೆಳಗಾವಿ ವಿಭಾಗ

> 20 ವರ್ಷಗಳ ಹಿಂದೆ ಶೇ 8ರಷ್ಟು ಲಾಭದ ಮಿತಿ (ಮಾರ್ಜಿನ್) ಇತ್ತು. ಈಗಲೂ ಅಷ್ಟೇ ಇದೆ. ಮದ್ಯದ ದರ– ಮಾರಾಟದ ಗುರಿ ಏರಿಸಿದ್ದಾರೆ. ಶೇ 20ರಷ್ಟು ಮಾರ್ಜಿನ್ ಕೊಡಬೇಕು ಎಂಬ ಬೇಡಿಕೆಗೆ ಸರ್ಕಾರ ಸ್ಪಂದಿಸಿಲ್ಲ.
> **ರಾಮುಲು ರೆಡ್ಡಿ,** ಉಪಾಧ್ಯಕ್ಷ, ಕಲಬುರ್ಗಿ ವೈನ್ ಮರ್ಚಂಟ್ಸ್ ಅಸೋಸಿಯೇಷನ್

ಗೋವಾದಲ್ಲಿ ಲೋಡ್ ಆಗುವ ಮದ್ಯವನ್ನು ಹೊರ ರಾಜ್ಯಗಳಿಗೆ ಸಾಗಣೆ ಮಾಡಲು ಬೆಳಗಾವಿ ಹಾಗೂ ಉತ್ತರಕನ್ನಡ ಜಿಲ್ಲೆಗಳೇ ಮುಖ್ಯ ಮಾರ್ಗ. ಬೆಳಗಾವಿ ಮಾರ್ಗವಾಗಿ ಸಾಗಿಸುವ ಮದ್ಯ ಮಹಾರಾಷ್ಟ್ರ, ಆಂಧ್ರ, ತೆಲಂಗಾಣ, ಗುಜರಾತ್, ಮಧ್ಯಪ್ರದೇಶ ಹಾಗೂ ಉತ್ತರ ಭಾರತದ ಕೆಲವು ರಾಜ್ಯಗಳ ಕಡೆಗೂ ಹೋಗುತ್ತದೆ. ಮದ್ಯ ಸಾಗಣೆ ವೇಳೆ ಸಿಕ್ಕಿಬಿದ್ದ ವಾಹನ ಚಾಲಕರು ಉತ್ತರ ಭಾರತದವರೇ ಆಗಿರುವುದು ಇದಕ್ಕೆ ಸಾಕ್ಷಿ ನೀಡುತ್ತದೆ.

ಕಾರವಾರ ಮೂಲಕ ಸಾಗಿಸುವ ಮದ್ಯ ಕೇರಳ, ತಮಿಳುನಾಡು ತಲುಪುತ್ತದೆ. ಗೋವಾದಿಂದ ನೇರವಾಗಿ ಸಮುದ್ರ ಮಾರ್ಗದ ಮೂಲಕವೂ ಕರಾವಳಿ ಪ್ರದೇಶಕ್ಕೆ ಮದ್ಯ ತಲುಪುತ್ತದೆ. ಇಂಥ ಸಾಕಷ್ಟು ಪ್ರಕರಣಗಳು ಪತ್ತೆಯಾಗಿವೆ. ಬಿಗಿ ಕ್ರಮದ ನಡುವೆಯೂ ಬೆಂಗಳೂರು, ಮಂಗಳೂರು, ಬೆಳಗಾವಿ, ಮುಂಬೈ, ಪುಣೆ, ಚೆನ್ನೈ, ಹೈದರಾಬಾದ್ ಮತ್ತಿತರ ಕಡೆಗೂ ಲೋಡ್‌ಗಟ್ಟಲೇ ಮದ್ಯ ಸಾಗಣೆ ಆಗುತ್ತಿದೆ.

ವಿಮಾನ, ಹಡಗು, ರೈಲು, ಲಾರಿ, ಟ್ರಕ್, ಆಯಿಲ್ ಟ್ಯಾಂಕರ್, ಟೆಂಪೊ, ಖಾಸಗಿ ಬಸ್, ಆಟೊ, ಬೈಕ್, ಸೈಕಲ್ ಮೂಲಕ ಮದ್ಯವನ್ನು ಸಾಗಿಸಲಾಗುತ್ತದೆ. ಗಡಿ ಗ್ರಾಮಗಳಲ್ಲಿ ಕೆಲವರು ಪಾತ್ರೆಗಳ ಮಾರಾಟ, ಮೇವಿನ ಹೊರೆ ಮಾರಾಟದ ನೆಪದಲ್ಲಿ ಚಿಲ್ಲರೆ ಬಾಟಲಿಗಳನ್ನು ಸಾಗಿಸುತ್ತಾರೆ. ಗೋವಾ ಮಾರ್ಗದಲ್ಲಿರುವ ಬೆಳಗಾವಿ, ಖಾನಾಪುರ ತಾಲ್ಲೂಕಿನ ಗ್ರಾಮಗಳ ಕೆಲವರು ಮನೆಯಲ್ಲೇ ಸಂಗ್ರಹಿಸಿ ಇಟ್ಟು ಮಾರುವುದೂ ಇದೆ. ರಸ್ತೆ ಮಾರ್ಗದಲ್ಲಿ ಕಾವಲು ಹೆಚ್ಚಿರುವ ಕಾರಣ ಅರಣ್ಯ ಮಾರ್ಗದಲ್ಲಿ ನುಸುಳುವುದು ಸಾಮಾನ್ಯ.

ಅಕ್ರಮ ಸಾಗಣೆಗೆ ಕಾರಣವೇನು: ಮದ್ಯ ತಯಾರಿಸಲು ಸ್ಪಿರಿಟ್ ಬೇಕು. ಗೋವಾದಲ್ಲಿ ಒಂದು ಹನಿ ಸ್ಪಿರಿಟ್ ಕೂಡ ಉತ್ಪಾದನೆಯಾಗುವುದಿಲ್ಲ. ಕರ್ನಾಟಕ ಹಾಗೂ ಮಹಾರಾಷ್ಟ್ರಗಳಿಂದ ಅದು ಗೋವಾಗೆ ಹೋಗುತ್ತದೆ. ಅಲ್ಲಿ ಮದ್ಯ ತಯಾರಾಗಿ, ಮರಳುತ್ತದೆ. ಅಲ್ಲಿಂದ ಮದ್ಯ ಕೆಲ ಪ್ರಮಾಣದಲ್ಲಿ ಅಕ್ರಮವಾಗಿ ನುಸುಳಿದರೆ, ಇಲ್ಲಿಂದ ಸ್ಪಿರಿಟ್ ಸಹ ಅಕ್ರಮವಾಗಿ ಹೋಗುತ್ತದೆ.

ಎರಡು ಜಿಲ್ಲೆ, ಎರಡೇ ದೊಡ್ಡ ನಗರಗಳುಳ್ಳ ರಾಜ್ಯ ಗೋವಾ. ಮದ್ಯಪ್ರಿಯರಿಗೆ ಸ್ವರ್ಗ. ದೇಶದಲ್ಲೇ ಅತ್ಯಂತ ಕಡಿಮೆ ದರದಲ್ಲಿ ಮದ್ಯ ಸಿಗುವುದು ಇಲ್ಲೇ. ಹೀಗಾಗಿ ಮದ್ಯಪ್ರಿಯರ ಗೋವಾ ಅಕ್ಷರಶಃ 'ಮದ್ಯದಾನಿ' ಎಂಬ ಮಾತಿದೆ.

ಕರ್ನಾಟಕದಲ್ಲಿ 2024ರಿಂದ ಇಲ್ಲಿಯವರೆಗೆ ನಾಲ್ಕು ಬಾರಿ ಮದ್ಯದ ದರ ಹೆಚ್ಚಿಸಲಾಗಿದೆ. ವ್ಯಾಪಾರ ಪರವಾನಗಿ ಶುಲ್ಕ ದುಪ್ಪಟ್ಟು ಮಾಡಲಾಗಿದೆ. ಅಬಕಾರಿ ಶುಲ್ಕದ ಜತೆಗೆ 'ಹೆಚ್ಚುವರಿ ಶುಲ್ಕ'ದ ದರವನ್ನೂ ಸರ್ಕಾರ ಹೆಚ್ಚಿಸಿದೆ. ಹೀಗಾಗಿ ಗೋವಾದಲ್ಲಿ ಮದ್ಯ ಕಡಿಮೆ ಹಣಕ್ಕೆ ಸಿಗುತ್ತದೆ.

ಇಲ್ಲಿ ಒಂದು ಲೀಟರ್ ಮದ್ಯಕ್ಕೆ ₹50 ಅಬಕಾರಿ ಶುಲ್ಕವಿದ್ದರೆ; ₹450 ಹೆಚ್ಚುವರಿ ಶುಲ್ಕ ಇದೆ. ಗೋವಾ ರಾಜ್ಯದಲ್ಲಿ ಹೆಚ್ಚುವರಿ ಶುಲ್ಕವಿಲ್ಲ. ಇದರಿಂದ ಕರ್ನಾಟಕದಲ್ಲಿ ₹10 ಸಾವಿರಕ್ಕೆ ಸಿಗುವ ಸ್ಕಾಚ್ ವಿಸ್ಕಿ ಅಲ್ಲಿ ₹4,000ಕ್ಕೆ ಸಿಗುತ್ತದೆ. ಇಲ್ಲಿ ₹240ಕ್ಕೆ ಸಿಗುವ 'ಚೀಪ್ ಲಿಕ್ಕರ್' ಅಲ್ಲಿ ಕೇವಲ ₹120ಕ್ಕೆ ಅಲ್ಲಿ ಸಿಗುತ್ತವೆ. ಹೀಗಾಗಿ, ಅಲ್ಲಿ ಕಡಿಮೆ ದರಕ್ಕೆ ಖರೀದಿಸಿ, ಹೊರಗಡೆ ಹೆಚ್ಚಿನ ಲಾಭ ಮಾಡಿಕೊಳ್ಳಲು ವ್ಯಾಪಾರಿಗಳು ಅಡ್ಡದಾರಿ ಹಿಡಿದಿದ್ದಾರೆ.

₹42 ಸಾವಿರ ಕೋಟಿ ತೆರಿಗೆ!

'ಈ ವರ್ಷ ₹42 ಸಾವಿರ ಕೋಟಿಗೂ ಅಧಿಕ ತೆರಿಗೆ ಮದ್ಯೋದ್ಯಮವೊಂದೇ ಸಂದಾಯ ಆಗಲಿದೆ. ಪಂಚಗ್ಯಾರಂಟಿ ಯೋಜನೆಗಳಿಗೆ ₹60 ಸಾವಿರ ಕೋಟಿ ಬೇಕು. ಶೇ 70 ಭಾಗದ ಹಣವನ್ನು ಇದೇ ಉದ್ಯಮ ನೀಡುತ್ತಿದೆ' ಎನ್ನುತ್ತಾರೆ ಮದ್ಯದ ವ್ಯಾಪಾರಿಗಳು.

'ಮೂರು ವರ್ಷಗಳ ಹಿಂದೆ ₹23 ಸಾವಿರ ಕೋಟಿ, ಎರಡು ವರ್ಷಗಳ ಹಿಂದೆ ₹38 ಸಾವಿರ ಕೋಟಿ ತೆರಿಗೆ ಸಂಗ್ರಹವಾಗಿದೆ. ವರ್ಷದಿಂದ ವರ್ಷಕ್ಕೆ 'ಟಾರ್ಗೆಟ್' ಹೆಚ್ಚಳ ಮಾಡಿದ್ದರಿಂದ ಕಳೆದ ವರ್ಷ ತೆರಿಗೆ ಸಂಗ್ರಹಣೆ ₹40 ಸಾವಿರ ಕೋಟಿ ದಾಟಿದೆ. ಈಗ ಬಜೆಟ್ ಶೇ 16ರಷ್ಟು ಹಣ ಹೊಂದಿಸುವುದು ಮದ್ಯೋದ್ಯಮವೇ. ದರ ಮತ್ತು ಗುರಿ ಎರಡೂ ಹೆಚ್ಚಳ ಮಾಡಿದ್ದರಿಂದ ಜನರಿಗೆ ಹೆಚ್ಚು ಕುಡಿಸಬೇಕಾದ ಅನಿವಾರ್ಯವೂ ನಮಗಿದೆ. ಇದರಿಂದಾಗೇ ಹಳ್ಳಿ ಹಳ್ಳಿಗಳಲ್ಲಿ ಲೈಸೆನ್ಸ್ ಇಲ್ಲದೆ ಮದ್ಯ ಮಾರಾಟ ನಡೆಯುತ್ತಿದೆ ಎಂಬುದು ಕಲಬುರಗಿಯ ವ್ಯಾಪಾರಿಗಳ ಅಭಿಪ್ರಾಯ.

ಮೂರು ರೀತಿಯ ಅಕ್ರಮ: ಗೋವಾದಲ್ಲೇ ತಯಾರಾಗುವ 'ಗೋವಾ ಲಿಕ್ಕರ್' ಎಂಬ ಲೇಬಲ್ ಇರುವ ಮದ್ಯ ಅಗ್ಗವಾಗಿದೆ. 750 ಎಂ.ಎಲ್‌ನ 12 ಬಾಟಲಿಗಳ ಒಂದು ಕೇಸ್‌ಗೆ ₹450 ಮಾತ್ರ. ಅಲ್ಲಿ ಮಾತ್ರ ಮಾರಲು ಅನುಮತಿ ಇರುವ ಈ ಅಗ್ಗದ ಮದ್ಯವನ್ನು ಕರ್ನಾಟಕ್ಕೆ ಕಳ್ಳದಾರಿಯಲ್ಲಿ ಸಾಗಣೆ ಮಾಡಲಾಗುತ್ತಿದೆ. ಇನ್ನೊಂದೆಡೆ ವಿಸ್ಕಿ, ಬಿಯರ್, ರಮ್, ವೋಡ್ಕಾ ಮುಂತಾದ ಕಂಪನಿ ಮದ್ಯವನ್ನು ಖರೀದಿಸಿ, ಹೊರಕ್ಕೆ ಸಾಗಿಸಲಾಗುತ್ತದೆ.

ಮೂರನೆಯದ್ದು ತುಂಬ ಗಂಭೀರ ಪ್ರಕರಣ; ಇಲ್ಲಿ ಮದ್ಯವೇ ನಕಲಿ. ಖಾಲಿ ಬಾಟಲಿಗಳ ಮೇಲೆ ಬ್ರ್ಯಾಂಡೆಡ್ ಲೇಬಲ್ಲುಗಳನ್ನು ಅಂಟಿಸಿ, ಅದರಲ್ಲಿ ನಕಲಿ ಮದ್ಯ ತುಂಬಿ ಸಾಗಿಸಲಾಗುತ್ತದೆ. ಒಮ್ಮೆ ಕಾರ್ಯಾಚರಣೆ ನಡೆಸಿದಾಗ, ₹50 ಲಕ್ಷಕ್ಕೂ ಅಧಿಕ ಮೌಲ್ಯದ ನಕಲಿ ಮದ್ಯ ಬೆಳಗಾವಿ ಬಳಿಯ ಹಿರೇಬಾಗೇವಾಡಿ ಹತ್ತಿರ ರಾಷ್ಟ್ರೀಯ ಹೆದ್ದಾರಿಯಲ್ಲಿ ಪತ್ತೆಯಾಗಿತ್ತು.

ಮಹಾರಾಷ್ಟ್ರದಿಂದಲೂ ಅಕ್ರಮ ದಾರಿ: ರಾಜ್ಯದಲ್ಲಿ ಕೆಲವು ದುಬಾರಿ ಬ್ರ್ಯಾಂಡಿನ ಮದ್ಯಕ್ಕೆ ಮಹಾರಾಷ್ಟ್ರದಲ್ಲಿ ಶೇ 35ರಷ್ಟು ಕಡಿಮೆಗೆ ದರವಿದೆ. ಎಂಸಿ ವಿಸ್ಕಿ, ಐ.ಬಿ 180 ಎಂ.ಎಲ್‌ನ (ಕ್ವಾರ್ಟರ್) ಬೆಲೆ ಇಲ್ಲಿ ₹235, ಮಹಾರಾಷ್ಟ್ರದಲ್ಲಿ ₹150. ಅಂದರೆ, ₹85 ವ್ಯತ್ಯಾಸ ಇದೆ. ಮಹಾರಾಷ್ಟ್ರದಲ್ಲಿ ಮಾರಾಟವಾಗುವ ರಾಯಲ್ ಚಾಲೆಂಜ್, ರಾಯಲ್ ಸ್ಟ್ಯಾಗ್‌ನ ಬೆಲೆ ₹190. ಇದೇ ಬ್ರ್ಯಾಂಡ್‌ಗಳ ಬೆಲೆಗಳು ಕರ್ನಾಟಕದಲ್ಲಿ ₹285ರ ಆಸುಪಾಸು. ಅಂದರೆ ₹95 ವ್ಯತ್ಯಾಸವಾಗುತ್ತದೆ. ಕೂಲಿ ಕಾರ್ಮಿಕರು ಕುಡಿಯುವ ಮದ್ಯಗಳಾದ ಒಟಿ., ಬಿಪಿ, ಒಸಿ ಮುಂತಾದವುಗಳ ದರ ₹120 ರಿಂದ ₹140. ಇದೇ ಮದ್ಯ ಮಹಾರಾಷ್ಟ್ರದಲ್ಲಿ ₹60 ರಿಂದ ₹80ಕ್ಕೆ ಸಿಗುತ್ತದೆ.

ಕಡಿವಾಣಕ್ಕೆ ಇಲ್ಲ ದಿಟ್ಟ ಕ್ರಮ: ಕರ್ನಾಟಕ– ಗೋವಾ ಮಧ್ಯ ಅನಮೋಡ್, ಮಾಚಾಳಿ ಹಾಗೂ ಕಣಕುಂಬಿ ಎಂಬಲ್ಲಿ ಮಾತ್ರ ಚೆಕ್‌ಪೋಸ್ಟ್ ಇವೆ. ಗೋವಾ– ಮಹಾರಾಷ್ಟ್ರ ಮಧ್ಯೆ ಗಡಹಿಂಗ್ಲಜ್ ಬಳಿ ಚೆಕ್ ಪೋಸ್ಟ್ ಇದೆ. ಇಲ್ಲಿ ಅಕ್ರಮ ಮದ್ಯ ತಪಾಸಣೆಗೆ ಇಬ್ಬರು ಸಿಬ್ಬಂದಿ ಇರುತ್ತಾರೆ. ಪ್ರತಿ ಗಂಟೆಗೂ 1,000ರಿಂದ 1,500 ವಾಹನಗಳು ಓಡಾಡುತ್ತವೆ. ಎಲ್ಲವನ್ನೂ ನಿಲ್ಲಿಸಿ ತಪಾಸಣೆ ಮಾಡಲು ಸಾಧ್ಯವಿಲ್ಲ. ನಿಖರ ಮಾಹಿತಿ ದೊರೆತರೆ ಮಾತ್ರ ಪೊಲೀಸರು ಹಿಡಿಯುತ್ತಾರೆ.

ಗೋವಾ, ಕರ್ನಾಟಕ, ಮಹಾರಾಷ್ಟ್ರ ಮಧ್ಯೆ ಚೆಕ್‌ಪೋಸ್ಟ್ ತಪ್ಪಿಸಿಯೂ ಅನ್ಯಮಾರ್ಗಗಳು ಸಾಕಷ್ಟಿವೆ. ಸಮುದ್ರ ಮಾರ್ಗ ಹಾಗೂ ಅರಣ್ಯ ಮಾರ್ಗದ ಮೂಲಕ ಉತ್ತರಕನ್ನಡ ಜಿಲ್ಲೆಗೆ ಅಕ್ರಮ ಸಾಗಣೆ ಮಾಡಲಾಗುತ್ತದೆ. ಅಬಕಾರಿ ಅಧಿಕಾರಿಗಳು ಕಳೆದ ವರ್ಷ ಇದರ ಪತ್ತೆಗೆ 'ಡ್ರೋನ್ ಕಣ್ಗಾವಲು ಪಡೆ' ಕಟ್ಟಿದ್ದರು. ಡ್ರೋನ್ ಕಣ್ಣುಗಳ ನಡುವೆಯು ಮದ್ಯ ಸಾಗಿಸುವುದು ನಡೆದೇ ಇದೆ.

ರಾಜ್ಯದ ಒಳಗೂ ಅಕ್ರಮ: ಗೋವಾದಿಂದ ಬರುವ ಮದ್ಯ ಕಳ್ಳಮಾರ್ಗದಲ್ಲಿ ಕರ್ನಾಟಕ ಮತ್ತು ಮಹಾರಾಷ್ಟ್ರವನ್ನು ಪ್ರವೇಶಿಸುತ್ತಿದೆ. ಇದರ ಜತೆಗೆ ರಾಜ್ಯದ ಮದ್ಯವೇ ಮಾರಾಟದ ಲೈಸೆನ್ಸ್ ಇಲ್ಲದ ರಾಜ್ಯದ ಮೂಲೆ ಮೂಲೆಯಲ್ಲಿರುವ ಅಂಗಡಿಗಳನ್ನು ಕಳ್ಳದಾರಿಯಲ್ಲಿ ತಲುಪುತ್ತಿದೆ. ಅಬಕಾರಿ ವಹಿವಾಟು ಹೆಚ್ಚಿಸಿ ಆದಾಯ ಹೆಚ್ಚಿಸಿಕೊಳ್ಳಲು, ತಿಂಗಳಿಗೆ ಇಂತಿಷ್ಟು ಮದ್ಯ ಮಾರಲೇಬೇಕೆಂದು ಇಲಾಖೆಯೇ 'ಗುರಿ' ನೀಡಿದೆ. 'ಗುರಿ' ಮುಟ್ಟದಿದ್ದರೆ ವ್ಯಾಪಾರಿಗೆ ನಷ್ಟ. ಹೀಗಾಗಿ ಆಟೊ, ಬೈಕುಗಳ ಮೇಲೆ ಚಿಲ್ಲರೆ ವ್ಯಾಪಾರಿಗಳು ಹಳ್ಳಿಹಳ್ಳಿಗೂ ಮದ್ಯವನ್ನು ತಲುಪಿಸುತ್ತಾರೆ. ನಗರ– ಪಟ್ಟಣಗಳಲ್ಲಿ ಖರೀದಿಸಿ ಹಳ್ಳಿಯ ಧಾಬಾ, ಹೋಟೆಲ್, ಕಿರಾಣಿ ಅಂಗಡಿ, ತಂಪುಪಾನೀಯ ಅಂಗಡಿಗಳಿಗೂ ಸರಬರಾಜು ಮಾಡುವುದು ಇದರ ಇನ್ನೊಂದು ಮುಖ. 'ಟಾರ್ಗೆಟ್' ನೀಡುವ ಮೂಲಕ ಇಲಾಖೆಯೇ ಅಕ್ರಮ ಸಾಗಣೆಗೆ ಪರೋಕ್ಷ ಪ್ರೋತ್ಸಾಹ ನೀಡುತ್ತಿದೆ ಎಂಬ ಮಾತಿದೆ.

ಹಳ್ಳಿಗಳಲ್ಲಿ ಅಕ್ರಮ ಮಾರಾಟ ಅವ್ಯಾಹತ

ರಾಜ್ಯದ ಬಹುಪಾಲು ಗ್ರಾಮೀಣ ಭಾಗದಲ್ಲಿ ಮದ್ಯ ಅಕ್ರಮ ಮಾರಾಟ ರಾಜಾರೋಷವಾಗಿ ನಡೆಯುತ್ತಿದೆ. ಚಿತ್ರದುರ್ಗ ಜಿಲ್ಲೆಯ ಚಳ್ಳಕೆರೆ, ಮೊಳಕಾಲ್ಮುರು ಮುಂತಾದ ಗಡಿ ಭಾಗಗಳು, ಮಲೆನಾಡಿನ ಸಾಗರ, ಸೊರಬ, ತೀರ್ಥಹಳ್ಳಿ, ಬೆಳಗಾವಿ, ಯಾದಗಿರಿ ಮುಂತಾದ ಜಿಲ್ಲೆಗಳ ಗಡಿಯಲ್ಲಿ ಅಂಗಡಿಗಳು ಹಾಗೂ ಪ್ರವಾಸಿ ತಾಣಗಳಲ್ಲಿ ಚಿಲ್ಲರೆ ವ್ಯಾಪಾರ ಜೋರಾಗಿದೆ.

ಮೈಸೂರು, ಮಂಡ್ಯ, ಚಾಮರಾಜನಗರ, ಹಾಸನ, ಹಾವೇರಿ, ಹೊಸಪೇಟೆ, ಗದಗ, ವಿಜಯಪುರ ಹೀಗೆ ವಿವಿಧ ಜಿಲ್ಲೆಗಳಲ್ಲಿ ದಿನಸಿ ಹಾಗೂ ಗೂಡಂಗಡಿಗಳಲ್ಲಿ ಮದ್ಯ ಅಕ್ರಮ ಮಾರಾಟ ನಡೆಯುತ್ತಿದೆ. ಇದಕ್ಕೆ ಕಡಿವಾಣ ಹಾಕುವಂತೆ ರೈತ, ಕನ್ನಡಪರ, ಮಹಿಳಾ ಹಾಗೂ ಸ್ಥಳೀಯ ಸಂಘಟನೆಗಳ ನೇತೃತ್ವದಲ್ಲಿ ನಿತ್ಯ ಒಂದಿಲ್ಲೊಂದು ಹೋರಾಟ, ಪ್ರತಿಭಟನೆಗಳು ನಡೆಯುತ್ತಲೇ ಇವೆ. ಆದರೂ ಅಕ್ರಮವಾಗಿ ಮದ್ಯ ಮಾರಾಟ ಅನಿಯಂತ್ರಿತವಾಗಿ ನಡೆಯುತ್ತಲೇ ಇದೆ. ಗೋವಾದಿಂದಲೂ ಮದ್ಯ ಅಕ್ರಮವಾಗಿ ರಾಜ್ಯವನ್ನು ಪ್ರವೇಶಿಸುತ್ತಲೇ ಇದೆ.

ಪರಿಕಲ್ಪನೆ: ಜಿ.ಡಿ.ಯತೀಶ್ ಕುಮಾರ್
ಪೂರಕ ಮಾಹಿತಿ: ಪ್ರವೀಣ್ ಕುಮಾರ್ ಪಿ.ವಿ, ಜಿ.ಶಿವಕುಮಾರ್, ಮಲ್ಲಿಕಾರ್ಜುನ ನಾಲವಾರ

ಪತ್ತೆಗೆ ಇಲ್ಲ ತಂತ್ರಜ್ಞಾನ

ವಿಮಾನ ನಿಲ್ದಾಣ, ರೈಲು ನಿಲ್ದಾಣ, ಮೆಟ್ರೊಗಳಲ್ಲಿ ಅಕ್ರಮ ತಡೆಗೆ 'ಮೆಟಲ್ ಡಿಟೆಕ್ಟರ್'ನಂಥ ಸ್ಮಾರ್ಟ್ ಮಷಿನ್‌ಗಳನ್ನು ಬಳಸಲಾಗುತ್ತದೆ. ಗಡಿಯಲ್ಲಿ ಮದ್ಯ ತುಂಬಿದ ವಾಹನಗಳನ್ನು ಪತ್ತೆ ಮಾಡುವಂಥ ಜಾಣ ತಂತ್ರಜ್ಞಾನ ಅನುಷ್ಠಾನ ಮಾಡಿಲ್ಲ.

ಸದ್ಯಕ್ಕೆ 'ಯುವಿ ಲ್ಯಾಂಪ್' (ಅಲ್ಟ್ರಾ ವೈಲೆಟ್ ಲ್ಯಾಂಪ್) ಮಾತ್ರ ಬಳಕೆಯಲ್ಲಿದೆ. ಇದು ನಕಲಿ ಮದ್ಯವನ್ನು ಮಾತ್ರ ಖಾತ್ರಿಪಡಿಸಬಲ್ಲದು. ಅಲ್ಕೋಹಾಲ್ ಕಂಟೆಂಟ್ ಸ್ಕ್ಯಾನ್' ಮಾಡುವಂಥ ಯಾವುದೇ ತಂತ್ರಜ್ಞಾನವನ್ನು ಬಳಸುವ ಗೋಜಿಗೇ ಇಲಾಖೆ ಹೋಗಿಲ್ಲ.

'ಮದ್ಯ ಸೇವನೆ ಮಾಡಿ ವಾಹನ ಚಲಿಸುವವರ ಪತ್ತೆಗೆ ಯಂತ್ರಗಳಿವೆ. ಆದರೆ, ಮದ್ಯ ತುಂಬಿದ ವಾಹನ ಪತ್ತೆಗೆ ಇದನ್ನು ಅಭಿವೃದ್ಧಿಪಡಿಸಿಲ್ಲ ಎಂಬುದೇ ಅಚ್ಚರಿ' ಎಂಬುದು ವ್ಯಾಪಾರಿ ಪ್ರಮೋದ್ ಶೆಟ್ಟಿ ಮಾತು.



ಗೋವಾದಿಂದ ಟ್ರಾನ್ಸ್‌ಫಾರ್ಮರ್ ಮಾದರಿಯ ಬಾಕ್ಸಿನಲ್ಲಿ ಸಾಗಿಸುತ್ತಿದ್ದ ಅಕ್ರಮ ಮದ್ಯವನ್ನು ಬೆಳಗಾವಿಯ ಹಿರೇಬಾಗೇವಾಡಿ ಬಳಿ ಅಬಕಾರಿ ಅಧಿಕಾರಿಗಳು ಇತ್ತೀಚೆಗೆ ವಶಕ್ಕೆ ಪಡೆದರು

ಜಾತಿವಾರು ಸಮೀಕ್ಷೆಗೆ 'ವಿದ್ಯುತ್ ಮೀಟರ್' ಆಸರೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಆಯೋಗವು ಹೊಸದಾಗಿ ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆ ಆರಂಭಿಸಿದ್ದು, ದೇಶದಲ್ಲೇ ಮೊದಲ ಬಾರಿ ಮನೆಗಳ ವಿದ್ಯುತ್ ಸಂಪರ್ಕದ ಮಾಹಿತಿಯನ್ನು (ಆರ್‌ಆರ್ ಸಂಖ್ಯೆ) ಸಮೀಕ್ಷೆಗೆ ಬಳಸಿಕೊಳ್ಳುತ್ತಿದೆ.

ಅತಿ ಹೆಚ್ಚು ಮನೆಗಳಿಗೆ ವಿದ್ಯುತ್ ಸಂಪರ್ಕ ಕಲ್ಪಿಸಿದ ದೇಶದ ಮೊದಲ ರಾಜ್ಯ ಕರ್ನಾಟಕ. ವಿದ್ಯುತ್ ಬಳಕೆಯ ಶುಲ್ಕದ ರಸೀದಿ ನೀಡಲು ಪ್ರತಿ ಮೀಟರ್‌ಗೂ ಆರ್‌ಆರ್ ಸಂಖ್ಯೆ ನೀಡಲಾಗಿರುತ್ತದೆ. ಈ ಸಂಖ್ಯೆಯ ಆಧಾರದ ಮೇಲೆ ಪ್ರತಿ ಮನೆಗಳನ್ನೂ ಗುರುತಿಸಿ, ಆ ಮನೆಗಳಲ್ಲಿ ವಾಸಿಸುವ ಕುಟುಂಬದ ವಿವರಗಳನ್ನು ಖಚಿತವಾಗಿ ಸಂಗ್ರಹಿಸಬಹುದು ಎನ್ನುವುದು ಆಯೋಗದ ಲೆಕ್ಕಾಚಾರ.

ಸಮೀಕ್ಷೆಯ ಈ ವಿಶಿಷ್ಟ ವಿನ್ಯಾಸ, ಪ್ರಕ್ರಿಯೆಯನ್ನು ಇ-ಆಡಳಿತ, ಇಂಧನ ಇಲಾಖೆ, ಹಿಂದುಳಿದ ವರ್ಗಗಳ ಆಯೋಗದ ಸಹಯೋಗದಲ್ಲಿ ರೂಪಿಸಲಾಗಿದೆ. ಅದಕ್ಕಾಗಿ ಪ್ರತ್ಯೇಕ ಆ್ಯಪ್ ಸಿದ್ಧಪಡಿಸಲಾಗಿದೆ. ಸಮೀಕ್ಷಾ ಕಾರ್ಯವನ್ನು ತ್ವರಿತವಾಗಿ ಪೂರ್ಣಗೊಳಿಸಲು, ಸಮೀಕ್ಷಾ ವ್ಯಾಪ್ತಿಯಿಂದ ಯಾವುದೇ ಮನೆಗಳು ಬಿಟ್ಟುಹೋಗದಂತೆ ಮುನ್ನೆಚ್ಚರಿಕೆ ವಹಿಸಲು ವಿಧಾನ ಸಹಕಾರಿಯಾಗಿದೆ.

'ಸೆ. 22ರಿಂದ ಅ.7ರವರೆಗೆ ನಡೆಸುವ ಎರಡನೇ ಹಂತದ ಸಮೀಕ್ಷಾ ಕಾರ್ಯದಲ್ಲಿ ವಿದ್ಯುತ್ ಮೀಟರ್‌ಗಳ ಮಾಹಿತಿ ಆಧಾರದ ಸಮೀಕ್ಷಾ ಕಾರ್ಯ ನಡೆಯಲಿದೆ. ದಸರಾ ರಜೆಯ ಅವಧಿಯ ಕಾರಣ ಮಕ್ಕಳ ಗಣತಿಗೂ ಅನುಕೂಲವಾಗುತ್ತದೆ' ಎಂದು ಆಯೋಗದ ಅಧ್ಯಕ್ಷ ಮಧುಸೂದನ್ ಆರ್. ನಾಯ್ಕ್ ಹೇಳಿದ್ದಾರೆ.

ಅಂಕಿ ಅಂಶಗಳು

90 ದಿನಗಳು
ಸಮೀಕ್ಷೆಗೆ ನಿಗದಿ ಮಾಡಿದ ಅವಧಿ

23 ಆಗಸ್ಟ್
'ಮೀಟರ್ ರೀಡರ್' ಕಾರ್ಯ ಆರಂಭ

22 ಸೆಪ್ಟೆಂಬರ್
2ನೇ ಹಂತದ ಸಮೀಕ್ಷೆ ಆರಂಭ

> ಸಮೀಕ್ಷೆಯು ರಾಜ್ಯದ ಏಳು ಕೋಟಿ ಜನರ ದತ್ತಾಂಶವಷ್ಟೇ ಅಲ್ಲ, ಸರ್ಕಾರದ ವಿವಿಧ ಇಲಾಖೆಗಳ ಕಲ್ಯಾಣ ಕಾರ್ಯಕ್ರಮಗಳ ಯಶಸ್ವಿ ಅನುಷ್ಠಾನಕ್ಕೆ ಕೈಪಿಡಿಯಾಗಲಿದೆ
> **ಮಧುಸೂದನ್ ಆರ್. ನಾಯ್ಕ್,** ಆಯೋಗದ ಅಧ್ಯಕ್ಷ

'ಮೀಟರ್ ರೀಡರ್'ಗಳೇ ನಿರ್ಣಾಯಕ

ಇಂಧನ ಇಲಾಖೆಯ 'ಮೀಟರ್ ರೀಡರ್'ಗಳು ಈ ಸಮೀಕ್ಷೆಗೆ ಬಹುದೊಡ್ಡ ಕೊಡುಗೆ ನೀಡಲಿದ್ದಾರೆ. ಮೀಟರ್ ರೀಡಿಂಗ್ ಮಾಡುವಾಗಲೇ ಅಂತಹ ಮನೆಗಳನ್ನು 'ಜಿಯೊ ಟ್ಯಾಗ್' ಮಾಡುವ ಮೂಲಕ ಸಮೀಕ್ಷೆಗೆ ಒಳಪಡಿಸುತ್ತಾರೆ. ಆ್ಯಪ್‌ನಲ್ಲಿ ಪ್ರತಿ ಮನೆಯ ಸ್ಥಳದ ಮಾಹಿತಿ (ಲೊಕೇಶನ್) ಅಪ್‌ಲೋಡ್ ಮಾಡುತ್ತಾರೆ. ಅವರು ಸಂಗ್ರಹಿಸಿದ ಮನೆ ಪಟ್ಟಿ ದತ್ತಾಂಶಗಳನ್ನು ಇಡಿಸಿಎಸ್ (ನಾಗರಿಕ ಸೇವೆಗಳ ಎಲೆಕ್ಟ್ರಾನಿಕ್ ವಿತರಣೆ) ಸರ್ವರ್‌ನಲ್ಲಿ ಅಪ್‌ಲೋಡ್ ಮಾಡಲಾಗುತ್ತದೆ. ನಂತರ ದ್ವಿತೀಯ ದತ್ತಾಂಶಗಳನ್ನು ಆಧರಿಸಿ ಮನೆಪಟ್ಟಿ ದತ್ತಾಂಶಗಳನ್ನು ಮ್ಯಾಪಿಂಗ್ ಮಾಡಲಾಗುತ್ತದೆ. ಪ್ರತಿ ಮನೆಗೂ ವಿಶಿಷ್ಟ ಗುರುತಿನ ಸಂಖ್ಯೆಯನ್ನು ಮೀಟರ್ ರೀಡರ್‌ಗಳೇ ಅಂಟಿಸಿ, ಅಂತಿಮ ಸಮೀಕ್ಷಾ ಕಾರ್ಯಕ್ಕೆ ವೇದಿಕೆ ಸಿದ್ಧಪಡಿಸುತ್ತಾರೆ.

ಬೆಟ್ಟಿಂಗ್: ಕೈ ಶಾಸಕ ಬಂಧನ

ಒಂದನೇ ಪುಟದಿಂದ...

ಇದಲ್ಲದೇ ಹತ್ತಾರು ಸ್ಥಿರಾಸ್ತಿಗಳ ಪತ್ರಗಳು, 17 ಬ್ಯಾಂಕ್ ಖಾತೆಗಳು ಮತ್ತು ನಾಲ್ಕು ಲಾಕರ್‌ಗಳು ಪತ್ತೆಯಾಗಿವೆ. ಎಲ್ಲವುಗಳ ಪರಿಶೀಲನೆಯ ನಂತರ ಆಸ್ತಿಯ ಮೌಲ್ಯ ಇನ್ನಷ್ಟು ಹೆಚ್ಚಬಹುದು ಎಂದು ಇ.ಡಿ ಮೂಲಗಳು ತಿಳಿಸಿವೆ.

ಮುಂದುವರೆದ ವಿಚಾರಣೆ: 'ವೀರೇಂದ್ರ ಅವರ ಸೋದರ ಕೆ.ಸಿ. ನಾಗರಾಜ್ ಮತ್ತು ಅವರ ಮಗ ಪೃಥ್ವಿ ಎನ್. ರಾಜ್ ಅವರನ್ನು ವಿಚಾರಣೆಗೆ ಒಳಪಡಿಸಲಾಗುತ್ತಿದೆ. ವೀರೇಂದ್ರ ಅವರ ಆನ್‌ಲೈನ್ ಬೆಟ್ಟಿಂಗ್‌ನ ಪ್ಲಾಟ್‌ಫಾರಂಗಳನ್ನು ಈ ಇಬ್ಬರು ನಿರ್ವಹಣೆ ಮಾಡುತ್ತಿದ್ದರು. ದುಬೈನಲ್ಲಿನ ಕಾಲ್‌ಸೆಂಟರ್ ಮತ್ತು ಷೆಲ್ ಕಂಪನಿಗಳನ್ನೂ ಇವರೇ ನೋಡಿಕೊಳ್ಳುತ್ತಿದ್ದರು. ಅವರ ವಿಚಾರಣೆ ಮುಂದುವರೆದಿದೆ' ಎಂದು ಇ.ಡಿ ಪ್ರಕಟಣೆ ತಿಳಿಸಿದೆ. 'ಇದೇ ಪ್ರಕರಣಕ್ಕೆ ಸಂಬಂಧಿಸಿದಂತೆ ಕ್ಯಾಸಿನೊ ಉದ್ಯಮಿ ಮತ್ತು ಹವಾಲಾ ಆಪರೇಟರ್ ಸಮುಂದರ್ ಸಿಂಗ್‌ನನ್ನು ಹುಬ್ಬಳ್ಳಿಯಲ್ಲಿ ವಶಕ್ಕೆ ಪಡೆಯಲಾಗಿದೆ. ಸಮುಂದರ್ ಅವರನ್ನೂ ಬೆಂಗಳೂರಿಗೆ ಕರೆತರಲಾಗುತ್ತಿದೆ' ಎಂದು ಮೂಲಗಳು ತಿಳಿಸಿವೆ.

ಗ್ಯಾಂಗ್ಟಕ್‌ನಲ್ಲಿ ಬಂಧನ

ವೀರೇಂದ್ರ ಅವರ ಕುಟುಂಬದ ಒಡೆತನದ ಪಪ್ಪೀ'ಸ್ ಕ್ಯಾಸಿನೊ ಪ್ರೈಡ್‌ನ ಒಂದು ಶಾಖೆ ಸಿಕ್ಕಿಂನ ಗ್ಯಾಂಗ್ಟಕ್‌ನಲ್ಲಿದೆ. ಅದನ್ನು ಸ್ಥಳೀಯ ಕ್ಯಾಸಿನೊ ಉದ್ಯಮಿಗಳಿಗೆ ಭೋಗ್ಯಕ್ಕೆ ನೀಡುವ ಸಂಬಂಧದ ಮಾತುಕತೆಗಾಗಿ ವೀರೇಂದ್ರ ಮತ್ತು ಸಹಚರರು ಗುರುವಾರ ರಾತ್ರಿ ಗ್ಯಾಂಗ್ಟಕ್‌ಗೆ ತೆರಳಿದ್ದರು. ಇದೇ ವೇಳೆ ಗ್ಯಾಂಗ್ಟಕ್‌ನ ಕ್ಯಾಸಿನೊಗಳ ಮೇಲೆ ದಾಳಿ ನಡೆಸಲಾಗಿತ್ತು.

'ವೀರೇಂದ್ರ ಮತ್ತು ಸಹಚರರನ್ನು ವಿಚಾರಣೆಗೆ ಒಳಪಡಿಸಲಾಗಿತ್ತು. ಶನಿವಾರ ಬೆಳಿಗ್ಗೆ ವೀರೇಂದ್ರ ಅವರನ್ನು ಬಂಧಿಸಿ, ಗ್ಯಾಂಗ್ಟಕ್‌ನ ವಿಶೇಷ ಮ್ಯಾಜಿಸ್ಟ್ರೇಟ್ ನ್ಯಾಯಾಲಯಕ್ಕೆ ಹಾಜರುಪಡಿಸಲಾಯಿತು. ಆರೋಪಿಯನ್ನು ಬೆಂಗಳೂರಿಗೆ ಕರೆತರಲು ಟ್ರಾನ್ಸಿಟ್ ರಿಮ್ಯಾಂಡ್ ಪಡೆಯಲಾಗಿದೆ' ಎಂದು ಇ.ಡಿ ಮಾಹಿತಿ ನೀಡಿದೆ.

'ಆರೋಪಿಯನ್ನು ವಿಮಾನದ ಮೂಲಕ ಬೆಂಗಳೂರಿಗೆ ಕರೆತರಲಾಗುತ್ತದೆ. ರಾತ್ರಿ 11ರ ವೇಳೆಗೆ ಬೆಂಗಳೂರು ತಲುಪಬಹುದು. ನಂತರ ನಗರದ ಆರ್ಥಿಕ ಅಪರಾಧಗಳ ವಿಶೇಷ ನ್ಯಾಯಾಲಯಕ್ಕೆ ಹಾಜರುಪಡಿಸಿ, ಕಸ್ಟಡಿಗೆ ಪಡೆಯಲಾಗುತ್ತದೆ' ಎಂದು ತಿಳಿಸಿದೆ.

ಗುಂಡಣ್ಣ



25 ವರ್ಷಗಳ ಹಿಂದೆ

ಗುರುವಾರ, 24-8-2000

- **ಡಾ. ರಾಜ್ ಬಿಡುಗಡೆ: ನಿರ್ಣಾಯಕ ಘಟ್ಟಕ್ಕೆ**

ಚೆನ್ನೈ, ಆ.23 (ಪಿಟಿಐ)– ಕಾಡುಗಳ್ಳ ವೀರಪ್ಪನ್ ವಶದಲ್ಲಿರುವ ನಟ ರಾಜ್‌ಕುಮಾರ್ ಮತ್ತು ಇತರ ಮೂವರ ಬಿಡುಗಡೆಗೆ ಅರಣ್ಯಕ್ಕೆ ಎರಡನೇ ಬಾರಿಗೆ ತೆರಳಿರುವ ನಕ್ಕೀರನ್ ಪತ್ರಿಕೆ ಸಂಪಾದಕ ಆರ್.ಆರ್.ಗೋಪಾಲ್ ಇಂದು ರಾತ್ರಿ ತಮ್ಮ ಕಚೇರಿಗೆ ನಾಲ್ಕು ಛಾಯಾಚಿತ್ರಗಳನ್ನು ಕಳಿಸಿದ್ದು, ರಾಜ್‌ಕುಮಾರ್ ಅಪಹರಣ ಪ್ರಕರಣ ನಿರ್ಣಾಯಕ ಘಟ್ಟವನ್ನು ತಲುಪಿದೆ.

ಛಾಯಾಚಿತ್ರಗಳನ್ನು ಕಳಿಸಿರುವುದನ್ನು ಪ್ರಕಟಿಸಿದ ನಕ್ಕೀರನ್ ಪತ್ರಿಕೆ ಸಹ ಸಂಪಾದಕ ಎ.ಕಾಮರಾಜ್ ಅವರು ತಾವು ಗೋಪಾಲ್ ಅವರಿಂದ ಮುಂದಿನ ಸಂದೇಶಕ್ಕೆ ಕಾಯುತ್ತಿರುವುದಾಗಿ ತಿಳಿಸಿದರು.

75 ವರ್ಷಗಳ ಹಿಂದೆ

ಗುರುವಾರ, 24-8-1950

- **ಕೋಸಿ ನದಿ ಪ್ರವಾಹದಿಂದ ಅಪಾರ ವಿಪತ್ತು**

ಪಾಟ್ನ, ಆ.23– ಬಿಹಾರದ ಉತ್ಪಾತನದಿಯೆಂದು ಹೆಸರಾಗಿರುವ ಕೋಸಿ ನದಿಯಲ್ಲಿ ಅತಿವೃಷ್ಟಿ ದೆಸೆಯಿಂದ ಬೃಹತ್ ಪ್ರವಾಹವು ಉಕ್ಕೇರಿ 320 ಚದರ ಮೈಲಿಯಷ್ಟು ಭೂಪ್ರದೇಶವನ್ನು ಕೊಚ್ಚಿ ನಾಶಮಾಡಿ ಪಾಳುಗೆಡವಿದೆ. ಇದರಿಂದ ದರ್ಬಾನಾ ಜಿಲ್ಲೆಯ 5 ಲಕ್ಷ ಪ್ರಜೆಗಳಿಗೆ ಹೊಟ್ಟೆಗಿಲ್ಲದಂತಾಗಿ ಅಗಾಧ ವಿಪತ್ತನ್ನು ತಂದೊಡ್ಡಿರುವುದಲ್ಲದೆ, ಕರ್ಕಶಮಯ ಗೊಂದಲವನ್ನೆಬ್ಬಿಸಿದೆ.

ಭತ್ತ ಮತ್ತು ಇತರ ಫಸಲುಗಳು ಇನ್ನೂ ನೀರಿನೊಳಗೆ ಮುಳುಗಿದ್ದು, ಸಂಪೂರ್ಣ ನಾಶವಾಗಿವೆಯೋ ಎಂಬ ಭಯ ಕಾಡುತ್ತಿದೆ.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ, ಕಮ್ಮರಡಿ

24 ಆಗಸ್ಟ್ 2025 ಭಾನುವಾರ, ಶ್ರೀ ವಿಶ್ವಾವಸು ನಾಮ ಸಂವತ್ಸರ ದಕ್ಷಿಣಾಯನ ವರ್ಷ ಋತು ತಿಥಿ: ಭಾದ್ರಪದ ಶುಕ್ಲ ಪ್ರತಿಪದ್ ಗಂ.11-49 **ನಕ್ಷತ್ರ:** ಪೂರ್ವ ಫಲ್ಗುಣಿ ಗಂ. 26-06 **ಯೋಗ:** ಶಿವ ಗಂ. 12-30 **ಕರಣ:** ಬವ ಗಂ. 11-49 ಸಿಂಹ ಮಾಸದ 07 ನೇ ದಿನ. **ಮಳೆ ನಕ್ಷತ್ರ:** ಮಘಾ 3 ನೇ ಪಾದ. **ರಾಹುಕಾಲ:** ಸಾಯಂಕಾಲ 04-30 06-00, **ಸೂರ್ಯೋದಯ:** 06-22 **ಸೂರ್ಯಾಸ್ತ:** 06-44, **ಮುಸ್ಲಿಂ ದಿನಾಂಕ:** 29 ಸಫರ್, **ಅದೃಷ್ಟ ಸಂಖ್ಯೆ:** 9, 12

ಮೇಷ: ಕ್ರೀಡಾಪಟುಗಳು ಶ್ರಮವಹಿಸಿ ಅಭ್ಯಾಸಿಸಿದರೆ ನಿರೀಕ್ಷೆಗಿಂತ ಹೆಚ್ಚಿನ ಯಶಸ್ಸು ಲಭಿಸುವುದು. ಮುಂದೂಡಿದ್ದ ವಿದೇಶ ಪ್ರಯಾಣವನ್ನು ಮತ್ತೆ ಕೈಗೊಳ್ಳುವ ಬಗ್ಗೆ ಯೋಚಿಸಿ. ನವಗ್ರಹ ಆರಾಧನೆ ಶುಭ ತರಲಿದೆ.

ವೃಷಭ: ಸಾಕು ಪ್ರಾಣಿಗಳಿಂದ ತೊಂದರೆಗಳು ಸಂಭವಿಸಬಹುದು. ಪಶು ವೈದ್ಯರು, ಪ್ರಾಣಿ ಸಂಗ್ರಹಾಲಯದವರು ಹೆಚ್ಚು ಜಾಗರೂಕತೆಯಿಂದ ಕಾರ್ಯ ನಿರ್ವಹಿಸಿ. ಕೌಟುಂಬಿಕ ಸಮಸ್ಯೆಗಳು ಹೊಸದೊಂದು ಆಯಾಮ ಪಡೆಯಲಿದೆ.

ಮಿಥುನ: ಉತ್ಸಾಹಭರಿತವಾದ ಕಾರ್ಯಾಸಕ್ತಿಯನ್ನು ಹೊಂದಿರುವ ನಿಮಗೆ ಇಂದು ವಿಘ್ನಗಳು ಎದುರಾದರೂ, ಮುಂದಿನ ದಿನಗಳಲ್ಲಿ ಕಾರ್ಯ ಸಂಪೂರ್ಣವಾಗುವುದು. ಪ್ರವೃತ್ತಿಯಿಂದ ಹಣ ಸಂಪಾದಿಸುವುದು ಸಂತಸ ತರಲಿದೆ.

ಕರ್ಕಾಟಕ: ರಾಜಕೀಯ ವರ್ಗದವರು ಜನ ಮನ್ನಣೆ ಪಡೆದುಕೊಂಡು ಉತ್ತಮ ಫಲಗಳನ್ನು ಹೊಂದಲಿದ್ದಾರೆ. ಎಲ್ಲರೂ ನನ್ನಂತೆಯೇ ಇರಬೇಕೆಂಬ ನಿಮ್ಮ ಮನೋಭಾವವು, ನಿಮ್ಮ ಮನಸ್ಥಿತಿಯನ್ನು ಹಾಳುಮಾಡಲಿದೆ.

ಸಿಂಹ: ಕುಟುಂಬದ ಕಿರಿಯ ಸೋದರನಿಗೆ ವಿವಾಹ ನಿಶ್ಚಯವಾಗುವುದು. ಅನಿರೀಕ್ಷಿತವಾಗಿ ಸಂತೋಷದ ಕ್ಷಣಗಳು ಈ ದಿನ ಬರಲಿವೆ. ಯಾವುದೇ ರೀತಿಯ ಕಾಗದ ಪತ್ರಗಳಿಗೆ ಸಹಿಯನ್ನು ಹಾಕದಿರಿ.

ಕನ್ಯಾ: ಮಕ್ಕಳಿಗೆ ಚಿಕ್ಕ ವಯಸ್ಸಿನಲ್ಲೇ ಸರಿ ತಪ್ಪುಗಳ ತಿಳಿವಳಿಕೆ ಹೇಳಿಕೊಡುವುದು ಪೋಷಕರ ಕರ್ತವ್ಯವಾಗಿರುತ್ತದೆ. ನಿಮ್ಮ ವಾಸಸ್ಥಾನ ಬದಲಾಗುವ ಲಕ್ಷಣಗಳಿವೆ.

ತುಲಾ: ಇನ್ನೊಬ್ಬರ ಭಾವನೆಗಳಿಗೆ ಹೇಗೆ ಪ್ರತಿಕ್ರಿಯಿಸಬೇಕೆಂಬುದು ನಿಮಗೆ ಚೆನ್ನಾಗಿ ತಿಳಿದಿದೆ. ಕೆಲಸಗಳು ಎಷ್ಟು ಕಷ್ಟವಾದರೂ ಹಿಂತಿರುಗುವ ಯೋಚನೆಯನ್ನು ಬೇಡ. ಇಂಧನ ಮಾರಾಟಗಾರರಿಗೆ ಅನುಕೂಲಕರ ದಿನ.

ವೃಶ್ಚಿಕ: ಸಿವಿಲ್ ಎಂಜಿನಿಯರ್‌ಗಳಿಗೆ ಬೃಹತ್ ವಾಣಿಜ್ಯ ಮಳಿಗೆಯ ಕಾರ್ಯಭಾರ ಸಿಗಬಹುದು. ಸ್ಥಿರ ವರಮಾನದ ಬಗ್ಗೆ ಯೋಚನೆಯನ್ನು ಮಾಡಿ. ಈ ದಿನ ನಿಮಗೆ ಸುಖ-ದುಃಖದ ಮಿಶ್ರಫಲ ಅನುಭವಕ್ಕೆ ಬರಲಿದೆ.

ಧನು: ಉನ್ನತ ಪೊಲೀಸ್ ಅಧಿಕಾರಿಗಳು ಜವಾಬ್ದಾರಿಗಳನ್ನು ನಿಭಾಯಿಸಲು ಸಿದ್ಧರಾಗಬೇಕಾಗಲಿದೆ. ಈಶ್ವರನ ಆರಾಧನೆಯು ಕೋರ್ಟ್ ವ್ಯವಹಾರಗಳಲ್ಲಿ ಯಶಸ್ಸನ್ನು ತಂದು ಕೊಡುವುದು. ಮುದ್ರಣ ವೃತ್ತಿಯವರಿಗೆ ಉತ್ತಮ ಲಾಭ.

ಮಕರ: ರಾಜಕಾರಣಿಗಳು ನಿರ್ಲಿಪ್ತವಾಗಿರುವ ನಿರ್ಧಾರಗಳನ್ನು ತೆಗೆದುಕೊಳ್ಳುವುದು ಉತ್ತಮ. ವೈದ್ಯಕೀಯ ವೃತ್ತಿಯವರಿಗೆ ಆಶ್ಚರ್ಯಕರವಾದ ಅನುಭವ ಆಗಲಿದೆ. ಹೊಸ ಬಟ್ಟೆ ಖರೀದಿಸುವ ಯೋಗವಿದೆ.

ಕುಂಭ: ಅಪವಾದದ ಭೀತಿಗೆ ಒಳಗಾಗದಿರಿ. ನಿಮ್ಮದಲ್ಲದ ವಸ್ತುಗಳನ್ನು ನೀವು ಅಪೇಕ್ಷಿಸುವುದು ಸಣ್ಣತನವಾಗುವುದು. ಮಗನ ವಿದ್ಯಾಭ್ಯಾಸಕ್ಕೆ ಹೆಚ್ಚಿನ ಗಮನ ನೀಡಿ. ದಿನ ಕೂಲಿ ನೌಕರರಿಗೆ ಸಂಬಳದಲ್ಲಿ ಹೆಚ್ಚಳ ಕಂಡುಬರಲಿದೆ.


ಮೀನ: ಇತರರು ನಿಮ್ಮ ಪ್ರತಿಭೆಯನ್ನು ಗುರುತಿಸುವ ಕಾಲ ಹತ್ತಿರವಿದೆ. ಸಾಲಗಳಿಂದ ದೂರವಾಗುವ ಬಗ್ಗೆ ಗಮನ ಹರಿಸಿ. ಹೊಸದಾಗಿ ಹಣ ಹೂಡಿಕೆ ಮಾಡುವಾಗ ಪರಿಶೀಲನೆ ಅಗತ್ಯ. ಆರೋಗ್ಯದಲ್ಲಿ ಉದಾಸೀನತೆ ತೋರದಿರಿ.

ಪದಬಂಧ 6144

ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ಅಗಲವಾದ ಹರಿವಾಣ (3)
3.ವನದಲ್ಲಿ ಕಾಣಿಸಿದ ಉಡುಗೆ (3)
5.ಮದುವೆಯಲ್ಲಿ ಹೆಣ್ಣಿನ ತಂದೆ ವರನಿಗೆ ಕೊಡುವ ಉಡುಗೊರೆ (5)
6.ಶರಧಿ ಹತ್ತಿರವಿರುವ ಬಾಣ (2)
8.ನಾವಿಕನಿಗೆ ಪ್ರಾಪ್ತವಾಗಿರುವ ಸ್ವರ್ಗ (2)
9.ಹತೋಟಿಗೊಂದು ಪರ್ಯಾಯ ಪದ (2)
10.ಕಲಾವಿದನ ಮನೆ ಬಾಗಿಲು (2)
14.ಕೈಗೂಡದ ಆಸೆಯನ್ನು ಹೀಗೆನ್ನಿ (5)
15.ಕರಿಯ ಮರಿ ಬಿದ್ದ ಆಳವಾದ ಗುಂಡಿ (3)
16.ಅಪೇಕ್ಷೆಯನ್ನು ಹೀಗೂ ಹೇಳುತ್ತಾರೆ (3)

ಮೇಲಿಂದ ಕೆಳಕ್ಕೆ
1.ಬೇರೆಯವರ ಅಧೀನದಲ್ಲಿರುವಿಕೆ (4)
2. ತಂದೆ ತಾಯಿ ಇರುವ ಊರು (3)
3.ವರ ಹಿಡಿದಿರುವ ಚಿನ್ನದ ನಾಣ್ಯ (3)
4.ಬೆಂಬಿಡದೆ ಕಾಡುವವನನ್ನು ಹೀಗೆನ್ನುವರು (4)
7.ಕೀವು ಇಲ್ಲಿ ಕಾಣಿಸುತ್ತಿದೆ (3)
8.ನಾಕದಲ್ಲಿ ತೂರಿಸಿದ ಮೂಗು (3)
9.ಮಂಗಳ ಗ್ರಹವಿದು (4)
11.ಬಲಾತ್ಕಾರದ ಆಡಳಿತವನ್ನು ಹೀಗೆನ್ನಿ (4)
12.ನಗರದ ಹತ್ತಿರ ಕೇಳಿದ ಚರ್ಮ ವಾದ್ಯ (3)
13.ಹಾರ ಹಿಡಿದ ಬ್ರಾಹ್ಮಣನಿಲ್ಲಿ ತಿರುಗಿದ್ದಾನೆ (3)



6143ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1. 2.ಮಯ 3.ಜಯಶಾಲಿ
5.ನಗದು 6.ವಾತಾಯನ
8.ಗತ್ತಂತರ 11.ಪ್ರಕರಣ
14.ಅನುವಾದ 15.ಮಧುರ
16.ವಿದ್ಯಮಾನ 17.ಮಾಸು

ಮೇಲಿಂದ ಕೆಳಕ್ಕೆ:
1.ಜನಮನ 2.ಮದುಮಗ
3.ಜನಿವಾರ 4.ಲಿಕನ 7.ಯಮಳ
9.ತಟಾಕ 10.ಕಮಾನು
11.ಪ್ರದರ್ಶನ 12.ಣಬಾಮನು
13.[illegible] 14.[illegible]

ಸುಡೊಕು 6528

ಹೀಗೆ ಆಡಿ: ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

	4	2			7		8	3
8			1					7
		3		8	4		5	
3		6						
	8			1				5
1		4	3		8		6	
	7			6				
2		8	4		3			1
				2		8	9	

6527 ಸುಡೊಕು

3	6	7	8	2	9	5	4	1
5	9	4	1	6	7	8	2	3
1	2	8	5	4	3	6	9	7
8	4	1	6	3	2	7	5	9
6	3	5	9	7	8	2	1	4
9	7	2	4	5	1	3	8	6
7	5	3	2	9	4	1	6	8
4	8	6	7	1	5	9	3	2
2	1	9	3	8	6	4	7	5

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete.

ಚುಟುಕು ಸುದ್ದಿ

ಹಿಜ್ಬುಲ್ ಗೂಢಚಾರ ಬಂಧನ

ಶ್ರೀನಗರ (ಪಿಟಿಐ): ಹಿಜ್ಬುಲ್ ಮುಜಾಹಿದೀನ್ ಭಯೋತ್ಪಾದಕ ಸಂಘಟನೆಯ ಗೂಢಚಾರ (ಸ್ಲೀಪರ್ ಸೆಲ್) ಎಂಬ ಆರೋಪದ ಮೇಲೆ ಕ್ಷೇತ್ರೀಯ ಬೆಂಬಲಿಗನೊಬ್ಬನನ್ನು ಜಮ್ಮು ಮತ್ತು ಕಾಶ್ಮೀರ ಪೊಲೀಸ್ ಇಲಾಖೆಯ ರಾಜ್ಯ ತನಿಖಾ ಸಂಸ್ಥೆ (ಎಸ್ಐಎ) ಶನಿವಾರ ಬಂಧಿಸಿದೆ.

ಅಲ್ತಾಫ್ ಹುಸೇನ್ ವಾಗೆ ಬಂಧಿತ ವ್ಯಕ್ತಿ. ಈತ ಉಗ್ರ ಸಂಘಟನೆಗೆ ರಹಸ್ಯವಾಗಿ ಸಹಕರಿಸುತ್ತಿದ್ದ ಎಂದು ಎಸ್ಐಎ ವಕ್ತಾರರು ತಿಳಿಸಿದ್ದಾರೆ.

‘ಪ್ರಕರಣವೊಂದರ ತನಿಖೆ ವೇಳೆ ಉಗ್ರ ಸಂಘಟನೆಯ ಮುಖಂಡನ ಜೊತೆ ಅಲ್ತಾಫ್ ಸಂಪರ್ಕದ ಮಾಹಿತಿ ಸಿಕ್ಕಿತ್ತು. ಈತ ಕಾನೂನುಬಾಹಿರ ಮತ್ತು ಭಾರತ ವಿರೋಧಿ ಚಟುವಟಿಕೆ ನಡೆಸಲು ಉಗ್ರರಿಗೆ ವ್ಯವಸ್ಥೆ ಕಲ್ಪಿಸುತ್ತಿದ್ದ’ ಎಂದು ವಕ್ತಾರರು ತಿಳಿಸಿದ್ದಾರೆ.

ಕಾಸಗಂಜ್ ಕಾರಾಗೃಹಕ್ಕೆ ಉಮರ್ ಅನ್ಸಾರಿ ಸ್ಥಳಾಂತರ

ಘಾಜಿಪುರ (ಯುಪಿ) (ಪಿಟಿಐ): ಮಾಜಿ ಶಾಸಕ ಹಾಗೂ ಪಾತಕಿ ಮುಖ್ತಾರ್ ಅನ್ಸಾರಿ ಅವರ ಮಗ ಉಮರ್ ಅನ್ಸಾರಿ ಅವರನ್ನು ಗಾಜಿಪುರ ಕಾರಾಗೃಹದಿಂದ ಕಾಸಗಂಜ್ ಜಿಲ್ಲಾ ಕಾರಾಗೃಹಕ್ಕೆ ಶುಕ್ರವಾರ ರಾತ್ರಿ ಸ್ಥಳಾಂತರಿಸಲಾಗಿದೆ.



ಈ ವಿಷಯವನ್ನು ಕೊತವಾಲಿ ಠಾಣಾಧಿಕಾರಿ ದೀನದಯಾಳ್ ಪಾಂಡೆ ಖಚಿತಪಡಿಸಿದ್ದಾರೆ.

ಉತ್ತರ ಪ್ರದೇಶ ಗ್ಯಾಂಗ್‌ಸ್ಟರ್ ಕಾಯ್ದೆಯಡಿ ಮುಟ್ಟುಗೋಲು ಹಾಕಿಕೊಂಡಿದ್ದ ತನ್ನ ತಂದೆಯ ಆಸ್ತಿಯನ್ನು ಬಿಡುಗಡೆ ಮಾಡುವಂತೆ ಕೋರಿದ್ದ ಅರ್ಜಿಗೆ ಸಂಬಂಧಿಸಿದಂತೆ ನ್ಯಾಯಾಲಯಕ್ಕೆ ನಕಲಿ ದಾಖಲೆಗಳನ್ನು ಸಲ್ಲಿಸಿದ ಆರೋಪದಡಿ ಉಮರ್ ಅವರನ್ನು ಲಖನೌದಲ್ಲಿ ಆ.3ರಂದು ಬಂಧಿಸಲಾಗಿತ್ತು.

ಹೆಚ್ಚುವರಿ ಮತಗಟ್ಟೆ

ಕೋಲ್ಕತ್ತ (ಪಿಟಿಐ): ಪಶ್ಚಿಮ ಬಂಗಾಳದಲ್ಲಿ 2026ರ ವಿಧಾನಸಭಾ ಚುನಾವಣೆಯ ವೇಳೆಗೆ ಹೆಚ್ಚುವರಿಯಾಗಿ 14 ಸಾವಿರ ಮತಗಟ್ಟೆಗಳು ಸ್ಥಾಪನೆ ಯಾಗಲಿವೆ. ಸದ್ಯ ರಾಜ್ಯದ 294 ವಿಧಾನಸಭಾ ಕ್ಷೇತ್ರಗಳಲ್ಲಿ 78 ಸಾವಿರ ಮತಗಟ್ಟೆಗಳಿವೆ. ಮತಗಟ್ಟೆಗಳ ಮರು ವಿಂಗಡಣೆ ಬಗ್ಗೆ ಸಭೆ ನಡೆಸುವುದಾಗಿ ಚುನಾವಣಾ ಆಯೋಗವು ತಿಳಿಸಿದೆ.

ಮೊಸಳೆ ದಾಳಿ ರೈತ ಸಾವು



ಕಾಶಪ್ಪ ಕಂಬಳಿ

ಮುದ್ದೇಬಿಹಾಳ (ವಿಜಯಪುರ ಜಿಲ್ಲೆ): ತಾಲ್ಲೂಕಿನ ಕುಂಚಗನೂರಿನಲ್ಲಿ ಶನಿವಾರ ಅಮಾವಾಸ್ಯೆ ಪ್ರಯುಕ್ತ ಎತ್ತುಗಳ ಮೈತೊಳೆಯಲು ಕೃಷ್ಣಾ ನದಿ ತೀರಕ್ಕೆ ಹೋಗಿದ್ದ ವೇಳೆ ರೈತ ಕಾಶಪ್ಪ ಹಣಮಂತ ಕಂಬಳಿ (38) ಎಂಬುವರು ಮೊಸಳೆ ದಾಳಿಯಿಂದ ಸಾವಿಗೀಡಾಗಿದ್ದಾರೆ.

ತಂಗಡಗಿ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಗ್ರಾಮದ ಪಂಪ್‌ಹೌಸ್ ಬಳಿ ಘಟನೆ ನಡೆದಿದೆ.

ಬಾನು ಮುಷ್ತಾಕ್‌ಗೆ ಆಹ್ವಾನ: ಖಂಡಿಸಿ ಪೋಸ್ಟ್ – ದೂರು

ಕಾರ್ಕಳ (ಉಡುಪಿ): ಜಾತಿ, ಧರ್ಮಗಳ ಮಧ್ಯೆ ವೈಷಮ್ಯ ಮೂಡಿಸುವಂತೆ ಫೇಸ್‌ಬುಕ್‌ನಲ್ಲಿ ಪೋಸ್ಟ್ ಮಾಡಿದ್ದ ನಿಟ್ಟೆ ಸುದೀಪ್ ಶೆಟ್ಟಿ ವಿರುದ್ಧ ಸ್ಥಳೀಯ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಎಎಸ್ಐ ಸುಂದರ, ಸಾಮಾಜಿಕ ಜಾಲತಾಣ ಪರಿಶೀಲಿಸುವಾಗ ಪೋಸ್ಟ್ ಗಮನಕ್ಕೆ ಬಂದಿತ್ತು. ‘ದಸರಾ ಹಿಂದೂಗಳ ಸಾಂಸ್ಕೃತಿಕ ಹಬ್ಬ. ಸನಾತನ ಹಿಂದೂ ಸಂಸ್ಕೃತಿ ಒಪ್ಪದ, ಆಚರಣೆ ಮಾಡದ ಬಾನು ಮುಷ್ತಾಕ್‌ರಿಂದ ದಸರಾ ಉದ್ಘಾಟನೆ ಮಾಡುವ ದರ್ದು ಏನಿದೆ. ಕಾಂಗ್ರೆಸ್, ಹಿಂದೂಗಳ ಭಾವನೆಗೆ ಪ್ರತಿ ವಿಚಾರದಲ್ಲೂ ಧಕ್ಕೆ ತರುತ್ತಿದೆ’ ಎಂದು ಪೋಸ್ಟ್ ಮಾಡಿದ್ದ ಎನ್ನಲಾಗಿದೆ.

ನಿಧನ ವಾರ್ತೆ

ಸುಧಾಕರ್ ರೆಡ್ಡಿ



ಹೈದರಾಬಾದ್: ಕಮ್ಯುನಿಸ್ಟ್ ಪಾರ್ಟಿ ಆಫ್ ಇಂಡಿಯಾ (ಸಿಪಿಐ) ಮಾಜಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಸುರವರಂ ಸುಧಾಕರ್ ರೆಡ್ಡಿ (83) ಹೃದಯಾಘಾತದಿಂದ ಶುಕ್ರವಾರ ಮೃತಪಟ್ಟಿದ್ದಾರೆ.

ಮಕ್ದೂಮ್ ಭವನದ ಸಿಪಿಐ ರಾಜ್ಯ ಕಚೇರಿಯಲ್ಲಿ ಭಾನುವಾರ ಅಂತಿಮ ದರ್ಶನಕ್ಕಾಗಿ ಸಾರ್ವಜನಿಕರಿಗೆ ಅವಕಾಶ ಕಲ್ಪಿಸಲಾಗಿದೆ. ಮೃತದೇಹವನ್ನು ಅವರ ಇಚ್ಛೆಯಂತೆ ಗಾಂಧಿ ವೈದ್ಯಕೀಯ ಕಾಲೇಜಿಗೆ ದಾನ ಮಾಡಲಾಗುತ್ತದೆ. ಅವರ ಕಣ್ಣುಗಳನ್ನು ಎಲ್‌ವಿ ಪ್ರಸಾದ್ ಕಣ್ಣಿನ ಆಸ್ಪತ್ರೆಗೆ ದಾನ ಮಾಡಲಾಗಿದೆ.

ಸುಧಾಕರ್ ರೆಡ್ಡಿ ಅವರು ನಲ್ಗೊಂಡ ಕ್ಷೇತ್ರದಿಂದ ಎರಡು ಬಾರಿ ಸಂಸದರಾಗಿ ಆಯ್ಕೆಯಾಗಿದ್ದರು.

119 ಉಪಗ್ರಹ ಉಡಾವಣೆ ಗುರಿ

ಮುಂದಿನ 15 ವರ್ಷಗಳ ಬಾಹ್ಯಾಕಾಶ ಯೋಜನೆಯ ವಿವರ ನೀಡಿದ ವಿಜ್ಞಾನಿಗಳು

ನವದೆಹಲಿ: ಮುಂದಿನ 15 ವರ್ಷಗಳಲ್ಲಿ ಭಾರತವು 119 ಉಪಗ್ರಹಗಳನ್ನು ಉಡಾವಣೆ ಮಾಡುವ ಯೋಜನೆ ಹೊಂದಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ರಾಷ್ಟ್ರೀಯ ಬಾಹ್ಯಾಕಾಶ ದಿನದ ಅಂಗವಾಗಿ ಶನಿವಾರ ಇಲ್ಲಿ ನಡೆದ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಈ ಯೋಜನೆಯು ಭೂಮಿಗೆ ಸಂಬಂಧಿಸಿದ 80 ಉಪಗ್ರಹಗಳು, ಸಾಗರ ಮತ್ತು ಪರಿಸರಕ್ಕೆ ಸಂಬಂಧಿಸಿದ 23 ಉಪಗ್ರಹಗಳು, ತಂತ್ರಜ್ಞಾನಕ್ಕೆ ಸಂಬಂಧಿಸಿದ 16 ಉಪಗ್ರಹಗಳ ಉಡಾವಣೆ ಉದ್ದೇಶವನ್ನು ಒಳಗೊಂಡಿದೆ. ಭೂಮಿಯಲ್ಲಿನ ಹವಾಗುಣ ಅಧ್ಯಯನಕ್ಕೆ ಸಂಬಂಧಿಸಿದಂತೆ ಉಪಗ್ರಹಗಳಿಗೆ ಯೋಜನೆಯಡಿ ಆದ್ಯತೆ ನೀಡಲಾಗಿದೆ.

ಮುಂದಿನ ಎರಡು ದಶಕಗಳಲ್ಲಿ ಮಂಗಳ ಗ್ರಹದ ಮೇಲೆ ಇಳಿಯುವುದೂ ಸೇರಿ 2040ರ ವೇಳೆಗೆ ಭಾರತೀಯರು ಚಂದ್ರನ ಮೇಲೆ ಕಾಲಿಡುವ ಮೊದಲೇ ಕನಿಷ್ಠ 5 ಮಾನವರಹಿತ ಚಂದ್ರಯಾನ ಯೋಜನೆ ಹಮ್ಮಿಕೊಳ್ಳುವ ಯೋಜನೆಯೂ ಇದೆ ಎಂದು ಅಧಿಕಾರಿಗಳು ಹೇಳಿದ್ದಾರೆ. 2028ರ ಮಾರ್ಚ್‌ನಲ್ಲಿ ‘ಶುಕ್ರಯಾನ’ ಯೋಜನೆ ಹಮ್ಮಿಕೊಳ್ಳುವ ಗುರಿಯನ್ನು ಭಾರತ ಹೊಂದಿದೆ.

ದೇಶದ ‘ಗಗನಯಾನ ಕಾಯೋಜನೆಗೆ ಆಯ್ಕೆಯಾಗಿರುವ ನಾಲ್ವರು ಗಗನಯಾನಿಗಳು ಭಾರತದ ಬಾಹ್ಯಾಕಾಶ ಯಾತ್ರೆಯ ಭವಿಷ್ಯವನ್ನು ಪ್ರತಿಬಿಂಬಿಸುತ್ತಾರೆ’ ಎಂದು ಗ್ರೂಪ್ ಕ್ಯಾಪ್ಟನ್ ಪ್ರಶಾಂತ್ ಬಾಲಕೃಷ್ಣನ್ ನಾಯರ್ ಅಭಿಪ್ರಾಯಪಟ್ಟರು.

ರಾಷ್ಟ್ರೀಯ ಬಾಹ್ಯಾಕಾಶ ದಿನದ ಅಂಗವಾಗಿ ನಡೆದ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ‘ಆಧುನಿಕ ಬಾಹ್ಯಾಕಾಶ ವಿಜ್ಞಾನವು ಭಾರತ ಪ್ರಾಚೀನ ನಾಗರಿಕತೆಯ ಜ್ಞಾನವನ್ನು ಆಧರಿಸಿ. ನಾವು ಹಿಂದೆಯೇ ಖಗೋಳ ಕ್ಷೇತ್ರದಲ್ಲಿ ಮುಂದೆ ಇದ್ದೆವು. ಇಡೀ ಪ್ರಪಂಚವೇ ನಮ್ಮನ್ನು ಹಿಂಬಾಲಿಸುತ್ತಿತ್ತು. ಈಗ ಮತ್ತೆ ನಾವು ಈ ಕ್ಷೇತ್ರದಲ್ಲಿ ಮುಂದೆ ಬರುತ್ತಿದ್ದೇವೆ’ ಎಂದು ಅವರು ಹೇಳಿದರು.

‘ಬಾಹ್ಯಾಕಾಶ ಸಂಶೋಧನೆಗಳು ಭೂಮಿಯ ಮೇಲಿನ ಜೀವನದೊಂದಿಗೆ ಸಂಪರ್ಕ ಹೊಂದಿರಬೇಕು’ ಎಂದು ಗ್ರೂಪ್ ಕ್ಯಾಪ್ಟನ್ ಅಜಿತ್ ಕೃಷ್ಣನ್ ಹೇಳಿದರು.

‘ಕಕ್ಷೆಯಿಂದ ಭೂಮಿಯನ್ನು ನೋಡಿದಾಗ ಅದು ಹೊಸ ದೃಷ್ಟಿಕೋನವನ್ನು ನೀಡಿತು’ ಎಂದು ಗಗನಯಾನಿ ಶುಭಾಂಶು ಶುಕ್ಲಾ ಹೇಳಿದರು.

‘ಅಂತರಿಕ್ಷದ ರಹಸ್ಯ ಭೇದಿಸಿ’



ನರೇಂದ್ರ ಮೋದಿ

ಮಾನವತೆಯ ಭವಿಷ್ಯವನ್ನು ಉಜ್ವಲಗೊಳಿಸುವಂಥ ಅಂತರಿಕ್ಷ ರಹಸ್ಯಗಳನ್ನು ಭೇದಿಸುವ ಬಾಹ್ಯಾಕಾಶದ ಆಳ ಅಧ್ಯಯನ ಯೋಜನೆಗಳನ್ನು ಸಾಕಾರಗೊಳಿಸಲು ಸನ್ನದ್ಧರಾಗುವಂತೆ ವಿಜ್ಞಾನಿಗಳಿಗೆ ಪ್ರಧಾನಿ ನರೇಂದ್ರ ಮೋದಿ ಶನಿವಾರ ಸಲಹೆ ನೀಡಿದ್ದಾರೆ.

ರಾಷ್ಟ್ರೀಯ ಬಾಹ್ಯಾಕಾಶ ದಿನದ ಅಂಗವಾಗಿ ವಿಡಿಯೊ ಮೂಲಕ ವಿಜ್ಞಾನಿಗಳನ್ನುದ್ದೇಶಿಸಿ ಮಾತನಾಡಿದ ಅವರು, ‘ಭವಿಷ್ಯದ ಯೋಜನೆಗಳಿಗಾಗಿ ಗಗನಯಾತ್ರಿಗಳನ್ನು ಬಹು ಸಂಖ್ಯೆಯಲ್ಲಿ ಹೊಂದಲು ಭಾರತ ಉದ್ದೇಶಿಸಿದೆ. ದೇಶದ ಯುವಜನರು ಕೂಡ ಗಗನಯಾನಿಗಳ ಈ ಗುಂಪಿನಲ್ಲಿ ಸೇರಬೇಕು’ ಎಂದಿದ್ದಾರೆ.

ಅಲ್ಲದೇ, ‘ನಾವು ಈಗಾಗಲೇ ಚಂದ್ರ ಹಾಗೂ ಮಂಗಳನ ಅಂಗಳಕ್ಕೆ ಕಾಲಿಟ್ಟಿದ್ದೇವೆ. ಬಾಹ್ಯಾಕಾಶದ ಆಳಕ್ಕೂ ಇಣುಕಬೇಕಿದೆ. ಅಲ್ಲಿರುವ ಹಲವು ರಹಸ್ಯಗಳು ಮಾನವತೆಯ ಭವಿಷ್ಯವನ್ನು ಉಜ್ವಲಗೊಳಿಸಲಿವೆ’ ಎಂದಿದ್ದಾರೆ.

‘ಬಾಹ್ಯಾಕಾಶ ಕ್ಷೇತ್ರದಲ್ಲಿ ಒಂದರ ಹಿಂದೆ ಮತ್ತೊಂದರಂತೆ ಮೈಲಿಗಲ್ಲುಗಳನ್ನು ಸ್ಥಾಪಿಸುವುದು ಭಾರತ ಹಾಗೂ ಭಾರತೀಯ ವಿಜ್ಞಾನಿಗಳ ಗುಣಲಕ್ಷಣವಾಗಿ ಹೋಗಿದೆ’ ಎಂದು ಪ್ರತಿಪಾದಿಸಿದ್ದಾರೆ. ಇದೇ ವೇಳೆ, ವರ್ಷಂಪ್ರತಿ 50 ರಾಕೆಟ್‌ಗಳನ್ನು ಉಡಾವಣೆ ಮಾಡುವ ಹಂತಕ್ಕೆ ನಾವು ತಲುಪಬಹುದೇ? ಈ ನಿಟ್ಟಿನಲ್ಲಿ ಕಾರ್ಯಪ್ರವೃತ್ತರಾಗಬಹುದೇ ಎಂದು ವಿಜ್ಞಾನಿಗಳನ್ನು ಕೇಳಿದ್ದಾರೆ.

‘ಶಿಕ್ಷಕರಿಗೆ ಗೌರವಯುತ ವೇತನ ನೀಡಿ’

ನವದೆಹಲಿ: ‘ಶಿಕ್ಷಕರನ್ನು ಗೌರವದಿಂದ ನಡೆಸಿಕೊಳ್ಳದೇ ಇದ್ದರೆ ಅಥವಾ ಗೌರವಯುತ ವೇತನ ನೀಡದೇ ಇದ್ದರೆ ಅದು ದೇಶವು ಜ್ಞಾನಕ್ಕೆ ನೀಡುವ ಮೌಲ್ಯವನ್ನು ಕಡಿಮೆಗೊಳಿಸಿದಂತೆ ಆಗುತ್ತದೆ. ಅಲ್ಲದೆ ಅದು ಬೌದ್ಧಿಕ ಬಂಡವಾಳ ನಿರ್ಮಿಸುವ ಜವಾಬ್ದಾರಿ ಹೊಂದಿರುವವರ ಪ್ರೇರಣೆಯನ್ನೂ ಹಾಳುಗೆಡವುತ್ತದೆ’ ಎಂದು ಸುಪ್ರೀಂ ಕೋರ್ಟ್ ಹೇಳಿದೆ.

‘ಸಾರ್ವಜನಿಕ ಕಾರ್ಯಕ್ರಮಗಳಲ್ಲಿ ಗುರುಬ್ರಹ್ಮ ಗುರುವಿಷ್ಣು, ಗುರುದೇವೋ ಮಹೇಶ್ವರಃ ಎಂದು ಪಠಿಸಿದರೆ ಸಾಕಾಗುವುದಿಲ್ಲ. ಅದಕ್ಕೆ ತಕ್ಕಂತೆ ದೇಶವು ಶಿಕ್ಷಕರನ್ನು ನಡೆಸಿಕೊಳ್ಳಬೇಕು’ ಎಂದು ನ್ಯಾಯಮೂರ್ತಿಗಳಾದ ಪಿ.ಎಸ್. ನರಸಿಂಹ ಮತ್ತು ಜೊಯಮಲ್ಯ ಬಾಗ್ಚಿ ಅವರ ಪೀಠ ಕಿವಿಮಾತು ಹೇಳಿತು.

ಗುಜರಾತಿನ ಸರ್ಕಾರಿ ಎಂಜಿನಿಯರಿಂಗ್ ಕಾಲೇಜುಗಳಲ್ಲಿನ ಗುತ್ತಿಗೆ ನೀಡುತ್ತಿರುವ ಸಹಾಯಕ ಪ್ರಾಧ್ಯಾಪಕರಿಗೆ ಕಡಿಮೆ ವೇತನದ ಬಗ್ಗೆ ಪೀಠ ಅಸಮಾಧಾನ ವ್ಯಕ್ತಪಡಿಸಿತು.

‘ಕಡಿಮೆ ಕೆಲಸ ಹೆಚ್ಚು ಮಾತು’

ನವದೆಹಲಿ: ಪ್ರಧಾನಿ ನರೇಂದ್ರ ಮೋದಿ ವಿರುದ್ಧ ವಾಗ್ದಾಳಿ ಮುಂದುವರಿಸಿರುವ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ‘ಮೋದಿ ಅವರು ಹೆಚ್ಚು ಮಾತನಾಡುತ್ತಾರೆ, ಕಡಿಮೆ ಕೆಲಸ ಮಾಡುತ್ತಾರೆ’ ಎಂದು ಆರೋಪಿಸಿದರು.

ಅವರಿಗೂ ಹಿಂದೆ ಅಧಿಕಾರದಲ್ಲಿದ್ದ ಮನಮೋಹನ ಸಿಂಗ್ ‘ಕಡಿಮೆ ಮಾತನಾಡಿ, ಹೆಚ್ಚು ಕೆಲಸ ಮಾಡುತ್ತಿದ್ದರು’ ಎಂದು ಖರ್ಗೆ ಶನಿವಾರ ಸ್ಮರಿಸಿದರು. ಯುಪಿಎ ಸರ್ಕಾರದ ಅವಧಿಯಲ್ಲಿ ಆದ ಅಭಿವೃದ್ಧಿ ಕೆಲಸಗಳ ಪೈಕಿ ಶೇ 10ರಷ್ಟನ್ನೂ ಮೋದಿ ಅವರು 11 ವರ್ಷಗಳಲ್ಲಿ ಮಾಡಿಲ್ಲ ಎಂದು ದೂರಿದರು. ‘ಮನಮೋಹನ ಸಿಂಗ್ ಫೆಲೋ’ ಕಾರ್ಯಕ್ರಮದಲ್ಲಿ ಮಾತನಾಡಿ, ‘ಸಂಸತ್ತಿನ ಅಧಿವೇಶನ ನಡೆಯುವಾಗ ಸಿಂಗ್ ಅವರು ಸದಾ ಕಲಾಪದಲ್ಲಿ ಹಾಜರಿದ್ದು ಪ್ರತಿಕ್ರಿಯಿಸುತ್ತಿದ್ದರು. ಆದರೆ, ಈಗಿನ ಪ್ರಧಾನಿ ನರೇಂದ್ರ ಮೋದಿ ಅವರು ಇದನ್ನು ತಮ್ಮ ಘನತೆಗೆ ತಕ್ಕದ್ದಲ್ಲ ಎಂದು ಭಾವಿಸಿದ್ದಾರೆ’ ಎಂದರು.

ಮೋದಿ ಟೀಕೆ: ತೇಜಸ್ವಿ ವಿರುದ್ಧ ಪ್ರಕರಣ

ಶಹಜಹಾನ್‌ಪುರ (ಪಿಟಿಐ): ಸಾಮಾಜಿಕ ಮಾಧ್ಯಮದ ಪೋಸ್ಟ್‌ವೊಂದರಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರನ್ನು ‘ಮತ ಕಳ್ಳ’ ಎಂದು ನಿಂದಿಸಿದ ಆರೋಪಕ್ಕೆ ಸಂಬಂಧಿಸಿದಂತೆ ಬಿಹಾರದ ಮಾಜಿ ಉಪಮುಖ್ಯಮಂತ್ರಿ ಮತ್ತು ರಾಷ್ಟ್ರೀಯ ಜನತಾದಳದ (ಆರ್‌ಜೆಡಿ) ನಾಯಕ ತೇಜಸ್ವಿ ಯಾದವ್ ಅವರ ವಿರುದ್ಧ ಉತ್ತರ ಪ್ರದೇಶದ ಶಹಜಹಾನ್‌ಪುರ ಪೊಲೀಸರು ಪ್ರಕರಣ ದಾಖಲಿಸಿದ್ದಾರೆ.

ಬಿಜೆಪಿ ನಗರ ಘಟಕದ ಅಧ್ಯಕ್ಷರಾದ ಶಿಲ್ಪಿ ಗುಪ್ತ ಅವರು ನೀಡಿದ್ದ ದೂರು ಆಧರಿಸಿ ಶುಕ್ರವಾರ ಎಫ್‌ಐಆರ್ ದಾಖಲಿಸಲಾಗಿದೆ ಎಂದು ಎಸ್‌ಪಿ ರಾಜೇಶ್ ದ್ವಿವೇದಿ ತಿಳಿಸಿದ್ದಾರೆ.

‘ಪ್ರಧಾನಿ ವಿರುದ್ಧ ಅನುಚಿತ ಪದ ಬಳಸಲಾಗಿದೆ. ಆರ್‌ಜೆಡಿಯ ಅಧಿಕೃತ ಖಾತೆಯಿಂದ ‘ಇಂದು ಮತಗಳ್ಳ ಗಯಾಗೆ ಬರುತ್ತಿದ್ದಾನೆ. ಬಿಹಾರಿಗಳ ಎದುರು ಸುಳ್ಳಿನ ಮೇಲೆ ಸುಳ್ಳು ಹೇಳುತ್ತಾನೆ’ ಎಂಬ ಅರ್ಥದಲ್ಲಿ ಪೋಸ್ಟ್ ಮಾಡಲಾಗಿತ್ತು. ಇದು ದೇಶದ ಜನರು ಮತ್ತು ಬಿಜೆಪಿ ಕಾರ್ಯಕರ್ತರ ಆಕ್ರೋಶಕ್ಕೆ ಕಾರಣವಾಗಿದೆ. ಕೂಡಲೇ ಯಾದವ್ ವಿರುದ್ಧ ಕ್ರಮ ಕೈಗೊಳ್ಳಬೇಕು’ ಎಂದು ಸದರ್ ಬಜಾರ್ ಠಾಣೆಗೆ ಗುಪ್ತ ದೂರು ನೀಡಿದ್ದರು.

‘ಹೆದರಿಲ್ಲ; ಸತ್ಯ ಹೇಳುವುದು ನಿಲ್ಲಿಸಲ್ಲ’



ಕಟಿಹಾರ್ (ಪಿಟಿಐ): ‘ಬಿಜೆಪಿ ಆಡಳಿತದ ರಾಜ್ಯಗಳಲ್ಲಿ ಎಫ್‌ಐಆರ್ ದಾಖಲಿಸಿದ ಮಾತ್ರಕ್ಕೆ ನಾನು ಹೆದರುವುದಿಲ್ಲ. ಸತ್ಯ ಹೇಳುವುದನ್ನು ನಿಲ್ಲಿಸುವುದಿಲ್ಲ’ ಎಂದು ತೇಜಸ್ವಿ ಯಾದವ್ ಅವರು ಪ್ರತಿಕ್ರಿಯಿಸಿದ್ದಾರೆ.

‘ಎಫ್‌ಐಆರ್‌ಗೆ ಯಾರು ಹೆದರಿದ್ದಾರೆ? ‘ಜುಮ್ಲಾ’ ಎನ್ನುವುದು ಆಕ್ಷೇಪಾರ್ಹ ಪದವೇ? ಸತ್ಯ ಹೇಳುವುದನ್ನು ಮುಂದುವರಿಸುವೆ. ಅವರು ಎಷ್ಟು ಪ್ರಕರಣ ಬೇಕಿದ್ದರೂ ಹಾಕಿಕೊಳ್ಳಲಿ’ ಎಂದು ಯಾದವ್ ಹೇಳಿದ್ದಾರೆ.

ಕಟಿಹಾರ್ ಜಿಲ್ಲೆಯ ಮೀನು ಮಾರುಕಟ್ಟೆ ಮತ್ತು ಮಖಾನಾ ಕೃಷಿ ಪ್ರದೇಶದಲ್ಲಿ ‘ಮತದಾರರ ಅಧಿಕಾರ ಯಾತ್ರೆ’ಯಲ್ಲಿ ಭಾಗಿಯಾಗಿದ್ದ ಯಾದವ್, ಎಫ್‌ಐಆರ್ ದಾಖಲಾಗಿರುವ ಬಗ್ಗೆ ಈ ರೀತಿ ಪ್ರತಿಕ್ರಿಯಿಸಿದ್ದಾರೆ.

ವಿದ್ಯಾರ್ಥಿನಿ ಕೊಲೆಗೈದ ಬಾಲಕ

ಪ್ರಜಾವಾಣಿ ವಾರ್ತೆ

ಹೈದರಾಬಾದ್: ತಾನು ಕ್ರಿಕೆಟ್ ಬ್ಯಾಟ್ ಕದಿಯುವುದನ್ನು ನೋಡಿದಳೆಂಬ ಕಾರಣಕ್ಕೆ 14 ವರ್ಷದ ಬಾಲಕನೊಬ್ಬ 10 ವರ್ಷದ ಬಾಲಕಿಯನ್ನು ಹತ್ಯೆ ಮಾಡಿರುವ ಘಟನೆ ಕೂಕಟಪಲ್ಲಿಯಲ್ಲಿ ನಡೆದಿದೆ ಎಂದು ಸೈಬರಾಬಾದ್ ಪೊಲೀಸರು ತಿಳಿಸಿದ್ದಾರೆ.

ಆರೋಪಿ ಬಾಲಕನು 10ನೇ ತರಗತಿಯ ವಿದ್ಯಾರ್ಥಿಯಾಗಿದ್ದು, ಆಗಸ್ಟ್ 18ರ ಬೆಳಿಗ್ಗೆ ಪಕ್ಕದ ಮನೆಯ ಬಾಲಕನ ಎಂಆರ್‌ಎಫ್ ಬ್ಯಾಟ್ ಕದಿಯಲು ಯೋಜನೆ ರೂಪಿಸಿದ್ದಾನೆ. ಆತ ಬ್ಯಾಟ್ ಕದಿಯುವಾಗ ಪಕ್ಕದ ಮನೆಯ ಬಾಲಕನ ಸಹೋದರಿ ನೋಡಿದ್ದಾಳೆ. ಇದರಿಂದ ಭಯಗೊಂಡ ಬಾಲಕನು ಬಾಲಕಿಗೆ ಚಾಕುವಿನಿಂದ ಹಲವು ಬಾರಿ ಇರಿದು ಕೊಲೆ ಮಾಡಿದ್ದಾನೆ ಎಂದು ಸೈಬರಾಬಾದ್ ಪೊಲೀಸ್ ಆಯುಕ್ತ ಅವಿನಾಶ್ ಎಂದಿದ್ದಾರೆ.

ಎಫ್ಎಟಿ ಶಾಲೆ: ಕಣಿವೆಯಲ್ಲಿ ರಾಜಕೀಯ ಜಟಾಪಟಿ

ಶ್ರೀನಗರ: ನಿಷೇಧಿತ ಜಮಾತ್–ಎ–ಇಸ್ಲಾಮಿ ಸಂಘಟನೆಯೊಂದಿಗೆ ಸಂಪರ್ಕ ಹೊಂದಿದೆ ಎನ್ನಲಾಗಿರುವ ಫಲಾಹ್– ಎ– ಆಮ್ ಟ್ರಸ್ಟ್ (ಎಫ್ಎಟಿ) ಮುನ್ನಡೆಸುತ್ತಿರುವ 215 ಶಾಲೆಗಳ ಉಸ್ತುವಾರಿ ವಿಚಾರವು ಜಮ್ಮು ಕಾಶ್ಮೀರದಲ್ಲಿ ಹೊಸ ಜಟಾಪಟಿ ಹುಟ್ಟುಹಾಕಿದೆ.



ಎಫ್ಎಟಿ ಶಾಲೆಗಳಲ್ಲಿ ಓದುತ್ತಿರುವ ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ಆ ಶಾಲೆಗಳ ಉಸ್ತುವಾರಿಯನ್ನು ಸಂಬಂಧಿತ ಜಿಲ್ಲಾಧಿಕಾರಿಗಳು ವಹಿಸಿಕೊಂಡು, ಶೀಘ್ರವೇ ಶಾಲೆಗಳ ಮೇಲ್ವಿಚಾರಣೆಗೆ ಸಮಿತಿಗಳನ್ನು ರಚಿಸಬೇಕೆಂದು ಲೆಫ್ಟಿನೆಂಟ್ ಗವರ್ನರ್ ನೇತೃತ್ವದ ಶಾಲಾ ಶಿಕ್ಷಣ ಇಲಾಖೆಯು ಆದೇಶ ಹೊರಡಿಸಿದೆ. ಆದರೆ, ಈ ಬಗ್ಗೆ ಶಿಕ್ಷಣ ಸಚಿವೆ ಸಕಿನಾ ಇಟೂ ತಕರಾರು ವ್ಯಕ್ತಪಡಿಸಿದ್ದಾರೆ.

‘ಎಫ್ಎಟಿ ಶಾಲೆಗಳ ಮೇಲ್ವಿಚಾರಣೆಯನ್ನು ಸ್ಥಳೀಯ ಸರ್ಕಾರಿ ಶಾಲೆಯ ಪ್ರಾಂಶುಪಾಲರಿಗೆ ವಹಿಸಬೇಕು ಎಂಬ ಪ್ರಸ್ತಾಪಕ್ಕೆ ನಾನು ಅನುಮತಿ ನೀಡಿದ್ದೆ. ಆದರೆ, ಜಿಲ್ಲಾಧಿಕಾರಿಗಳ ವ್ಯಾಪ್ತಿಗೆ ಶಾಲೆಗಳನ್ನು ತರಲು ಅನುಮತಿಸಿರಲಿಲ್ಲ. ನನ್ನ ಗಮನಕ್ಕೆ ಬಾರದಂತೆ ಆದೇಶ ತಿದ್ದುಪಡಿ ಮಾಡಲಾಗಿದೆ’ ಎಂದು ಸಕಿನಾ ದೂರಿದ್ದಾರೆ.

ಈ ವಿಚಾರ ಇದೀಗ ಒಮರ್ ಅಬ್ದುಲ್ಲಾ ನೇತೃತ್ವದ ಸರ್ಕಾರ ಹಾಗೂ ಲೆಫ್ಟಿನೆಂಟ್ ಗವರ್ನರ್ ನೇತೃತ್ವದ ಆಡಳಿತ ಇಲಾಖೆಗಳ ನಡುವಿನ ಜಟಾಪಟಿಗೆ ಕಾರಣವಾಗಿದೆ.ಏತನ್ಮಧ್ಯೆ, ಎಫ್ಎಟಿ ಶಾಲೆಗಳಲ್ಲಿ ನೋಂದಣಿ ಹೊಂದಿರುವ ವಿದ್ಯಾರ್ಥಿಗಳ ಪೋಷಕರಲ್ಲಿ ಮಕ್ಕಳ ಭವಿಷ್ಯದ ಆತಂಕ ಮನೆ ಮಾಡಿದೆ.

ಉತ್ತರಾಖಂಡದ ಚಮೋಲಿಯಲ್ಲಿ ಮೇಘಸ್ಫೋಟ: 11 ಮಂದಿಗೆ ಗಾಯ

ಥರಾಲಿ: ಮಹಿಳೆ ಸಾವು, ಇಬ್ಬರು ನಾಪತ್ತೆ

ಪ್ರಜಾವಾಣಿ ವಾರ್ತೆ/ಪಿಟಿಐ

ಲಖನೌ/ಗೋಪೇಶ್ವರ್: ಉತ್ತರಾಖಂಡದ ಉತ್ತರಕಾಶಿ ಜಿಲ್ಲೆಯ ಧರಾಲಿ ಗ್ರಾಮದಲ್ಲಿ ಇತ್ತೀಚೆಗೆ ಸಂಭವಿಸಿದ್ದ ಮೇಘಸ್ಫೋಟದಿಂದ ಪ್ರವಾಹ ಉಂಟಾಗಿ ಏಳು ಮಂದಿ ಮೃತಪಟ್ಟ ಘಟನೆ ಮಾಸುವ ಮುನ್ನವೇ ಚಮೋಲಿ ಜಿಲ್ಲೆಯ ಥರಾಲಿ ಪಟ್ಟಣದಲ್ಲಿ ಶುಕ್ರವಾರ ರಾತ್ರಿ ಮೇಘಸ್ಫೋಟ ಸಂಭವಿಸಿ ಅಪಾರ ಪ್ರಮಾಣದ ಹಾನಿ ಉಂಟಾಗಿದೆ.

ಘಟನೆಯಲ್ಲಿ ಮಹಿಳೆಯೊಬ್ಬರು ಮೃತಪಟ್ಟಿದ್ದು, ಇಬ್ಬರು ನಾಪತ್ತೆಯಾಗಿದ್ದಾರೆ. 11 ಮಂದಿ ಗಾಯಗೊಂಡಿದ್ದು, ವೈದ್ಯಕೀಯ ನೆರವು ಒದಗಿಸಲಾಗಿದೆ.

ಪರ್ವತದಿಂದ ರಭಸವಾಗಿ ನುಗ್ಗಿದ ಪ್ರವಾಹ ತನ್ನೊಟ್ಟಿಗೆ ಅಪಾರ ಪ್ರಮಾಣದ ಮಣ್ಣಿನ ರಾಶಿಯನ್ನೂ ಹೊತ್ತುತಂದಿದ್ದು, ಮನೆಗಳು, ಅಂಗಡಿ–ಮಳಿಗೆಗಳು ಹಾಗೂ ವಾಹನಗಳ ಮೇಲೆ ಅದು ಜಮೆಯಾಗಿದೆ. ಥರಾಲಿ ಮಾರುಕಟ್ಟೆ ಸೇರಿದಂತೆ ವಿವಿಧ ಪ್ರದೇಶಗಳಲ್ಲಿ ತೀವ್ರ ಸ್ವರೂಪದ ಹಾನಿ ಉಂಟಾಗಿದೆ. ಇಡೀ ಮಾರುಕಟ್ಟೆಯು ಮಣ್ಣಿನ ರಾಶಿಯಿಂದ ಆವೃತವಾಗಿದೆ. ವಸತಿ ಪ್ರದೇಶ ಹಾಗೂ ಅಂಗಡಿಗಳ ಮೇಲೆ ಮಣ್ಣಿನ ರಾಶಿ ಹಾಗೂ ಅವಶೇಷಗಳು ಹರಡಿವೆ ಎಂದು ಜಿಲ್ಲಾಧಿಕಾರಿ ಸಂದೀಪ್ ತಿವಾರಿ ತಿಳಿಸಿದ್ದಾರೆ.

ರಾಷ್ಟ್ರೀಯ ವಿಪತ್ತು ನಿರ್ವಹಣಾ ಪಡೆ (ಎನ್‌ಡಿಆರ್‌ಎಫ್) ಹಾಗೂ ಇಂಡೋ–ಟಿಬೆಟನ್ ಗಡಿ ಪೊಲೀಸ್ ಸಿಬ್ಬಂದಿ (ಐಟಿಬಿಪಿ) ಸಮರೋಪಾದಿಯಲ್ಲಿ ರಕ್ಷಣಾ ಕಾರ್ಯ ಕೈಗೊಂಡಿದ್ದಾರೆ. ಅವಶೇಷಗಳ ತೆರವು ಹಾಗೂ ಸಂತ್ರಸ್ತರನ್ನು ಸುರಕ್ಷಿತ ಪ್ರದೇಶಗಳಿಗೆ ಸ್ಥಳಾಂತರಿಸುವ ಕಾರ್ಯ ನಡೆದಿದೆ.

ಅನೇಕ ರಸ್ತೆಗಳು ಅವಶೇಷಗಳಿಂದಾಗಿ ಮುಚ್ಚಿಹೋಗಿವೆ. ಸಾಗ್ವಾರಾ ಗ್ರಾಮದಲ್ಲಿ ಅವಶೇಷಗಳಡಿ ಕೆಲವರು ಸಿಲುಕಿರುವ ಸಾಧ್ಯತೆ ಇದೆ. ಅನೇಕ ಪ್ರದೇಶಗಳಲ್ಲಿ ಶಾಲೆಗಳನ್ನು ಮುಚ್ಚಲಾಗಿದೆ.



ಉತ್ತರಾಖಂಡದ ಚಮೋಲಿ ಜಿಲ್ಲೆಯ ಥರಾಲಿ ಪಟ್ಟಣದ ಮನೆಗಳು ಮೇಘಸ್ಫೋಟದಿಂದ ಉಂಟಾದ ಪ್ರವಾಹದಿಂದ ಹಾನಿಗೊಂಡಿವೆ –ಪಿಟಿಐ ಚಿತ್ರ



ಥರಾಲಿ ಪಟ್ಟಣದಲ್ಲಿ ಸಿಬ್ಬಂದಿಯು ರಕ್ಷಣಾ ಕಾರ್ಯ ಕೈಗೊಂಡಿದ್ದರು

ಭಾರಿ ಮಳೆ: ಐವರ ಸಾವು

ರಾಂಚಿ/ಸರಾಯ್‌ಕೆಲಾ (ಪಿಟಿಐ): ಜಾರ್ಖಂಡ್ ಭಾಗದಲ್ಲಿ ಶನಿವಾರ ಬೆಳಿಗ್ಗೆ ಸುರಿದ ಭಾರಿ ಮಳೆಯಿಂದಾಗಿ ಐವರು ಮೃತಪಟ್ಟಿದ್ದು, ಒಬ್ಬರು ನಾಪತ್ತೆಯಾಗಿದ್ದಾರೆ. ಅನೇಕರು ಗಾಯಗೊಂಡಿದ್ದಾರೆ. ಸರಾಯ್‌ಕೆಲಾ–ಖರ್ಸಾವಾನ್ ಜಿಲ್ಲೆಯಲ್ಲಿ ಶುಕ್ರವಾರ ರಾತ್ರಿ ಮನೆ ಕುಸಿದು ಒಬ್ಬ ಮಹಿಳೆ ಹಾಗೂ ಆಕೆಯ 7 ವರ್ಷದ ಮಗ ಅಸುನೀಗಿದ್ದಾರೆ. ರಾಜ್‌ನಗರ ಬ್ಲಾಕ್‌ನ ದಾಂಡು ಗ್ರಾಮದಲ್ಲಿ ಎಂಟು ಮಂದಿ ಗಾಯಗೊಂಡಿದ್ದಾರೆ.

ಮತ್ತೊಂದು ಘಟನೆಯಲ್ಲಿ ಮನೆ ಗೋಡೆ ಬಿದ್ದು ಐದು ವರ್ಷದ ಬಾಲಕ ಮೃತಪಟ್ಟಿದ್ದು, ಮೂವರು ಗಾಯಗೊಂಡಿದ್ದಾರೆ.

339 ರಸ್ತೆಗಳು ಬಂದ್

ಶಿಮ್ಲಾ (ಪಿಟಿಐ): ಹಿಮಾಚಲ ಪ್ರದೇಶದ ವಿವಿಧೆಡೆ ಶನಿವಾರ ಸುರಿದ ಜೋರು ಮಳೆಯಿಂದಾಗಿ ರಾಷ್ಟ್ರೀಯ ಹೆದ್ದಾರಿ ಸೇರಿದಂತೆ 339 ರಸ್ತೆಗಳು ಬಂದ್ ಆಗಿವೆ.

ಮಂಡಿ ಜಿಲ್ಲೆಯಲ್ಲಿ 162, ಕುಲ್ಲೂ ಜಿಲ್ಲೆಯಲ್ಲಿ 106 ರಸ್ತೆಗಳು ಬಂದ್ ಆಗಿವೆ. ಮಳೆ ಸಂಬಂಧಿತ ಘಟನೆಗಳಲ್ಲಿನ ಅನಾಹುತದಿಂದ ₹2,326 ಕೋಟಿಗೂ ಹೆಚ್ಚಿನ ಮೊತ್ತದ ಹಾನಿ ಉಂಟಾಗಿದೆ.

ಸಂಖ್ಯೆ ಇಲ್ಲಿ ಅಪ್ರಸ್ತುತ: ನ್ಯಾ.ರೆಡ್ಡಿ

• ಶೆಮಿನ್ ಜಾಯ್

ಪ್ರಜಾವಾಣಿ ಸಂದರ್ಶನ

ಜಗದೀಪ್ ಧನಕರ್ ಅವರ ದಿಢೀರ್ ರಾಜೀನಾಮೆಯಿಂದ ತೆರವಾದ ಉಪರಾಷ್ಟ್ರಪತಿ ಹುದ್ದೆಗೆ ಕಾಂಗ್ರೆಸ್ ನೇತೃತ್ವದ ಇಂಡಿಯಾ ಕೂಟವು ಸುಪ್ರೀಂ ಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿ ಬಿ.ಸುದರ್ಶನ ರೆಡ್ಡಿ ಅವರನ್ನು ಅಭ್ಯರ್ಥಿಯಾಗಿ ಆಯ್ಕೆ ಮಾಡಿದೆ. ಎನ್‌ಡಿಎ ಮೈತ್ರಿಕೂಟವು ಸಿ.ಪಿ ರಾಧಾಕೃಷ್ಣನ್ ಅವರನ್ನು ಕಣಕ್ಕಿಳಿಸಿದೆ. ನ್ಯಾ.ರೆಡ್ಡಿ ಅವರು ಉಪರಾಷ್ಟ್ರಪತಿ ಚುನಾವಣೆ, ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರ ಆರೋಪ ಮತ್ತಿತರ ವಿಚಾರಗಳ ಬಗ್ಗೆ ‘ಪ್ರಜಾವಾಣಿ’ ಜೊತೆ ಮಾತನಾಡಿದ್ದಾರೆ.

• ಬಹುಮತಕ್ಕೆ ಬೇಕಿರುವ ಸಂಖ್ಯೆಗಳು ನಿಮ್ಮ ವಿರುದ್ಧ ಇದ್ದರೂ ಉಮೇದುವಾರಿಕೆ ಸಲ್ಲಿಸಿದ್ದೀರಿ. ಇದರ ಅರ್ಥವೇನು?

ಉಪರಾಷ್ಟ್ರಪತಿ ಚುನಾವಣೆಯು ಸಂಸದರನ್ನು ಒಳಗೊಂಡಿರುತ್ತದೆಯೇ ವಿನಾ ಪಕ್ಷಗಳನ್ನಲ್ಲ. ಹೀಗಾಗಿ ದೇಶದಲ್ಲಿ ಎಷ್ಟು ರಾಜಕೀಯ ಪಕ್ಷಗಳಿವೆ ಅಥವಾ ‘ಇಂಡಿಯಾ’ ಕೂಟದಲ್ಲಿ ಎಷ್ಟು ಪಕ್ಷಗಳಿವೆ ಎಂದು ಎಣಿಸುವ ಗೊಡವೆಗೆ ಹೋಗಿಲ್ಲ. ನನಗೆ ಮತ ಚಲಾಯಿಸುವಂತೆ ಸಂಸದರನ್ನು ಕೋರುತ್ತೇನೆ, ಅವರು ನಿರ್ಧಾರ ತೆಗೆದುಕೊಳ್ಳುತ್ತಾರೆ. ಇಲ್ಲಿ ಬಹುಮತದ ಸಂಖ್ಯೆ ಕುರಿತ ಪ್ರಶ್ನೆ ಅಪ್ರಸ್ತುತ.

• ಎನ್‌ಡಿಎ ಅಭ್ಯರ್ಥಿ ತಮಿಳು ನಾಡಿನವರು. ಹೀಗಾಗಿ ಕೆಲವರು ಈ ಚುನಾವಣೆಯನ್ನು ತಮಿಳು ಮತ್ತು ತೆಲುಗು ನಡುವಣ ಹಣಾಹಣಿ ಎಂದು ಕರೆಯುತ್ತಿದ್ದಾರೆ. ಈ ಸಂಕಥನದ ಬಗ್ಗೆ ನಿಮ್ಮ ಅಭಿಪ್ರಾಯವೇನು?

ಭಾರತ ಒಂದೇ. ಇಲ್ಲಿರುವುದು ಒಂದೇ ಪೌರತ್ವ. ನಾನು ಮತ್ತು ರಾಧಾಕೃಷ್ಣನ್ ಭಾರತೀಯರು. ನೀವು ಹೇಳಿದ ರೀತಿಯ ಸಂಕಥನವೇ ತಪ್ಪು.

• ನಾಮಪತ್ರ ಸಲ್ಲಿಕೆ ನಂತರ ಈ ಚುನಾವಣೆ ಕೇವಲ ಒಬ್ಬ ವ್ಯಕ್ತಿಗೆ ಸಂಬಂಧಿಸಿದ್ದಲ್ಲ ಎಂದು ಹೇಳಿದ್ದೀರಿ. ಹಾಗಾದರೆ ಈ ಚುನಾವಣೆ ಏನು?

ನನಗೆ ಯಾವುದೇ ಅಜೆಂಡಾ ಇರಲಿಲ್ಲ. ಆದರೆ, ಅವರೇ ‘ನಮ್ಮ ಅಭ್ಯರ್ಥಿ 15 ವರ್ಷದವರಿದ್ದಾಗಲೇ ಆರ್‌ಎಸ್‌ಎಸ್ ಸೇರಿದ್ದರು. ಇದು ಸೈದ್ಧಾಂತಿಕ ಹೋರಾಟ’ ಎಂದು ಹೇಳಲು ಆರಂಭಿಸಿದರು. ನಂತರ ನಾನೂ, ‘ನಿಜ, ಇದು ಉದಾರ ಸಾಂವಿಧಾನಿಕ ಪ್ರಜಾಪ್ರಭುತ್ವವಾದಿಯ ಮತ್ತು ಸರ್ವೋತ್ಕೃಷ್ಟ ಆರ್‌ಎಸ್‌ಎಸ್ ವ್ಯಕ್ತಿಯ ನಡುವಣ ಹೋರಾಟ ಆಗಲಿದೆ’ ಎಂದು ಪ್ರತಿಕ್ರಿಯಿಸಲು ಆರಂಭಿಸಿದೆ.


• ಇತ್ತೀಚೆಗೆ ತನಿಖಾ ಸಂಸ್ಥೆಗಳು ಸರ್ಕಾರದ ಕೈಗೊಂಬೆಗಳಾಗಿವೆ, ಮತ ಕಳವು ನಡೆಯುತ್ತಿದೆ ಎಂಬ ಆರೋಪ ಕೇಳಿಬರುತ್ತಿದೆ. ಇದನ್ನು ನೀವು ಹೇಗೆ ವಿಶ್ಲೇಷಿಸುವಿರಿ?

ಮತದಾನದ ಹಕ್ಕು ಶಾಸನಬದ್ಧವಾದ ಹಕ್ಕಲ್ಲ; ಸಾಂವಿಧಾನವು ಖಾತರಿಪಡಿಸಿದ ಹಕ್ಕು. ಭಾರತ ವಿಭಜನೆಯ ಸಂದರ್ಭದಲ್ಲೂ ಮತದಾರರನ್ನು ಪಟ್ಟಿಗೆ ಸೇರ್ಪಡೆ ಮಾಡುವ ಪ್ರಕ್ರಿಯೆ ನಡೆಸಲಾಗುತ್ತಿತ್ತು. ಆದರೆ ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆ (ಎಸ್ಐಆರ್) ಮೂಲಕ ಮತದಾರರನ್ನು ಹೊರಗಿಡಲಾಗುತ್ತಿದೆ. ಇದು ಸಂವಿಧಾನದ ಉಲ್ಲಂಘನೆಯಲ್ಲವೇ?

• ನೀವು ನಕ್ಸಲಿಸಂ ಬೆಂಬಲಿಗರು ಎಂದು ಗೃಹ ಸಚಿವ ಅಮಿತ್ ಶಾ ಆರೋಪಿಸಿದ್ದಾರೆ. ಇದಕ್ಕೆ ನಿಮ್ಮ ಪ್ರತಿಕ್ರಿಯೆ?

‘ಸಲ್ವಾ ಜುಡೂಮ್’ ತೀರ್ಪು ನನ್ನ ತೀರ್ಪು ಅಲ್ಲ, ಸುಪ್ರೀಂ ಕೋರ್ಟ್‌ನದ್ದು. ತೀರ್ಪನ್ನು ಬರೆದಿದ್ದು ನಾನು ಎಂಬುದು ನಿಜ. ನ್ಯಾಯಮೂರ್ತಿ ಎಸ್.ಎಸ್. ನಿಜ್ಜರ್ ಅವರೂ ನ್ಯಾಯಪೀಠದಲ್ಲಿ ನನ್ನೊಂದಿಗೆ ಇದ್ದರು. ಇಬ್ಬರ ಮಧ್ಯೆ ಯಾವುದೇ ಭಿನ್ನಾಭಿಪ್ರಾಯ ಇರಲಿಲ್ಲ. ನನ್ನ ನಿವೃತ್ತಿ ಬಳಿಕ, ಈ ಕುರಿತ ತೀರ್ಪಿನ ಮರುಪರಿಶೀಲನೆ ಕೋರಿ ಅರ್ಜಿ ಸಲ್ಲಿಸಲಾಗಿದ್ದು, ಛತ್ತೀಸಗಢಕ್ಕೆ ಮಾತ್ರ ತೀರ್ಪು ಅನ್ವಯವಾಗುವಂತೆ ಸೀಮಿತಗೊಳಿಸಿ ಅರ್ಜಿಯನ್ನು ವಜಾಗೊಳಿಸಲಾಗಿದೆ.

ಸಲ್ವಾ ಜುಡೂಮ್ ಈಗ ಅಸ್ತಿತ್ವದಲ್ಲೇ ಇಲ್ಲದ ಕಾರಣ ತೀರ್ಪು ಛತ್ತೀಸಗಢಕ್ಕೆ ಮಾತ್ರ ಅನ್ವಯವಾಗುವಂತೆ ಸೀಮಿತಗೊಳಿಸುವ ಅಗತ್ಯ ಇರಲಿಲ್ಲ. ಯಾವುದೇ ತೀರ್ಪನ್ನು ಮರುಪರಿಶೀಲಿಸಲು ಹಾಗೂ ಅದರ ಬಗ್ಗೆ ಟಿಪ್ಪಣಿ ಮಾಡಲು ಒಪ್ಪಿತವಾದ ವಿಧಾನವಿದೆ. ಇಂಥ ಸಂದರ್ಭದಲ್ಲಿ ತೀರ್ಪು ಬರೆದವರ ಕುರಿತಾಗಿ ಯಾವುದೇ ಟೀಕೆ–ಟಿಪ್ಪಣಿ ಮಾಡುವುದಿಲ್ಲ. ನ್ಯಾಯಮೂರ್ತಿಯೊಬ್ಬರು ಸಾರ್ವಜನಿಕವಾಗಿ ತಮ್ಮ ತೀರ್ಪಿನ ಸಮರ್ಥನೆ ಮಾಡಬಾರದು.



ಗೋವಿನಜೋಳದಲ್ಲಿ ಅರಳಿದ ಗಣಪ

ಪೌಷ್ಟಿಕ ಆಹಾರದ ಜಾಗೃತಿಗೆ ಪರಿಸರಸ್ನೇಹಿ ಮೂರ್ತಿ

• ಇಮಾಮ್‌ಹುಸೇನ್ ಗೂಡುನವರ

ಬೆಳಗಾವಿ: ಪೌಷ್ಟಿಕ ಆಹಾರದ ಬಗ್ಗೆ ಜಾಗೃತಿ ಮೂಡಿಸಲು ಇಲ್ಲಿನ ಮಾಳಿ ಗಲ್ಲಿಯ ಸಾರ್ವಜನಿಕ ಗಣೇಶೋತ್ಸವ ಮಂಡಳಿಯು, ಗೋವಿನಜೋಳದ ಕಾಳು ಬಳಸಿ ಸಿದ್ಧಪಡಿಸಿದ ಪರಿಸರ ಸ್ನೇಹಿ ಗಣಪನ ಮೂರ್ತಿ ಪ್ರತಿಷ್ಠಾಪಿಸಲಿದೆ. ಕಲಾವಿದ ಸುನೀಲ ಆನಂದಾಚೆ ಇದನ್ನು ಸಿದ್ಧಪಡಿಸಿದ್ದಾರೆ.

‘ಹುಲ್ಲು, ನಿರುಪಯುಕ್ತ ಕಾಗದ ಬಳಸಿ, 11.5 ಅಡಿ ಎತ್ತರದ ಮೂರ್ತಿ ಸಿದ್ಧಪಡಿಸಿದ್ದೇನೆ. 31 ಕೆ.ಜಿ ಗೋವಿನಜೋಳದ ಕಾಳುಗಳನ್ನು ಪುಡಿ ಮಾಡಿ ಗಂಜಿಯಲ್ಲಿ ಬೆರೆಸಿ, ಕಾಗದದ ಮೇಲೆ ಅಂಟಿಸಿದ್ದೇನೆ. ಇಬ್ಬರ ನೆರವಿನಿಂದ ತಿಂಗಳಲ್ಲಿ ಮೂರ್ತಿ ಸಿದ್ಧವಾಗಿದೆ’ ಎಂದು ಸುನೀಲ ಆನಂದಾಚೆ ‘ಪ್ರಜಾವಾಣಿ’ಗೆ ತಿಳಿಸಿದರು.

‘ಪ್ಲಂಬರ್ ಆಗಿರುವ ನಾನು, 25 ವರ್ಷಗಳಿಂದ ಬಿಡುವಿನಲ್ಲಿ ಮೂರ್ತಿಗಳನ್ನು ಸಿದ್ಧಪಡಿಸುತ್ತೇನೆ. ರುದ್ರಾಕ್ಷಿ, ಹುಣಸೆ ಬೀಜ ಬಳಸಿ ಈ ಹಿಂದೆ ಗಣೇಶ ಮೂರ್ತಿಗಳನ್ನು ಸಿದ್ಧಪಡಿಸಿದ್ದೇನೆ’ ಎಂದರು.

‘ನಾವು ಕಳೆದ ಐದು ವರ್ಷಗಳಿಂದ ಪರಿಸರಸ್ನೇಹಿ ಆಚರಣೆಗೆ ಒತ್ತು ನೀಡಿದ್ದೇವೆ. ಗೋವಿನಜೋಳ ಪೌಷ್ಟಿಕ ಆಹಾರ. ಈ ಕುರಿತು ಜಾಗೃತಿ ಮೂಡಿಸುವುದು ಈಗಿನ ಉದ್ದೇಶ’ ಎಂದು ಮಾಳಿ ಗಲ್ಲಿಯ ಸಾರ್ವಜನಿಕ ಗಣೇಶೋತ್ಸವ ಮಂಡಳಿ ಅಧ್ಯಕ್ಷ ಮೇಘನ್ ಲಂಗರಕಾಂಡೆ ಹೇಳಿದರು.

‘11 ದಿನಗಳ ಬಳಿಕ ಹೊಂಡದಲ್ಲಿ ಮೂರ್ತಿ ವಿಸರ್ಜಿಸಲಾಗುತ್ತದೆ. ಪಿಒಪಿ ಮೂರ್ತಿಗಳಿದ್ದರೆ ಅದರಲ್ಲಿನ ಯಾವ ವಸ್ತು ತಿನ್ನಲಾಗದು. ಗೋವಿನಜೋಳದ ಕಾಳುಗಳಿದ್ದರೆ ಪ್ರಾಣಿ–ಪಕ್ಷಿಗಳಾದರೂ ತಿನ್ನುತ್ತವೆ’ ಎಂದರು.



ಗೋವಿನಜೋಳದ ಕಾಳು ಬಳಸಿ ಸಿದ್ಧಪಡಿಸಲಾದ ಗಣೇಶ ಮೂರ್ತಿಗೆ ಕಲಾವಿದ ಸುನೀಲ ಆನಂದಾಚೆ ಅಂತಿಮ ಸ್ಪರ್ಶ ನೀಡುತ್ತಿರುವುದು

ಪರಿಸರಕ್ಕೆ ಮಾರಕ ಆಗದಿರಲೆಂದು ನಾನು ಪಿಒಪಿ ಮೂರ್ತಿಗಳಿಗೆ ಬದಲಾಗಿ ಪರಿಸರ ಸ್ನೇಹಿ ಮೂರ್ತಿಗಳ ತಯಾರಿಕೆಗೆ ಒತ್ತು ನೀಡುತ್ತೇನೆ
ಸುನೀಲ ಆನಂದಾಚೆ, ಕಲಾವಿದ

11 ದಿನ ಗಣೇಶೋತ್ಸವದ ಕೊನೆಯ ಎರಡು ದಿನ ಭಕ್ತರಿಗೆ ಸಿಹಿ ಗೋವಿನಜೋಳವನ್ನೇ ಪ್ರಸಾದ ರೂಪದಲ್ಲಿ ವಿತರಿಸುತ್ತೇವೆ
ಮೇಘನ್ ಲಂಗರಕಾಂಡೆ, ಅಧ್ಯಕ್ಷ, ಮಾಳಿ ಗಲ್ಲಿಯ ಸಾರ್ವಜನಿಕ ಗಣೇಶೋತ್ಸವ ಮಂಡಳಿ



ಚಾಮರಾಜನಗರ ಜಿಲ್ಲೆಯ ಮಲೆ ಮಹದೇಶ್ವರ ಬೆಟ್ಟದಲ್ಲಿ ಬೆನಕನ ಅಮಾವಾಸ್ಯೆ ನಿಮಿತ್ತ ಶನಿವಾರ ವಿಶೇಷ ಪೂಜೆ ಸಲ್ಲಿಸಲು ಬೇಡಿಗಂಪಣ ಸಮುದಾಯದ 101 ಅರ್ಚಕರು ಕುಂಭ ಹೊತ್ತು ದೇಗುಲದ ಪ್ರಾಂಗಣದಲ್ಲಿ ಪ್ರದಕ್ಷಿಣೆ ಹಾಕಿದರು

ಕೊಲೆ ಪ್ರಕರಣ; ಐವರಿಗೆ ಜೀವಾವಧಿ ಶಿಕ್ಷೆ, ₹13.74 ಲಕ್ಷ ದಂಡ

ಪ್ರಜಾವಾಣಿ ವಾರ್ತೆ

ಬೆಳಗಾವಿ: ತಾಲ್ಲೂಕಿನ ಗೌಂಡವಾಡ ಗ್ರಾಮದಲ್ಲಿ ಜಮೀನು ವಿವಾದಕ್ಕೆ ಸಂಬಂಧಿಸಿ ಸಾಮಾಜಿಕ ಕಾರ್ಯಕರ್ತ ಸತೀಶ ಪಾಟೀಲ ಅವರ ಕೊಲೆ ಮಾಡಿದ್ದ ಐವರು ಅಪರಾಧಿಗಳಿಗೆ ಇಲ್ಲಿನ ಎರಡನೇ ಹೆಚ್ಚುವರಿ ಸೆಷನ್ಸ್ ಕೋರ್ಟ್‌ನ ಕಠಿಣ ಜೀವಾವಧಿ ಶಿಕ್ಷೆ ಮತ್ತು ₹13.74 ಲಕ್ಷ ದಂಡ ವಿಧಿಸಿದೆ.

ನ್ಯಾಯಾಧೀಶ ಗಂಗಾಧರ ಕೆ.ಎನ್. ಶನಿವಾರ ಆದೇಶ ಪ್ರಕಟಿಸಿದರು. ಆನಂದ ಕುಟ್ರೆ, ಅರ್ಣವ್ ಕುಟ್ರೆ, ಜಯಪ್ಪ ಅಲಿಯಾಸ್ ಬಾಳು ನಿಲಜಕರ, ಮಹಾಂತೇಶ ಅಲಿಯಾಸ್ ಧನರಾಜ ನಿಲಜಕರ ಮತ್ತು ಶಶಿಕಲಾ ಅಲಿಯಾಸ್ ಅನಿತಾ ಕುಟ್ರೆ ಜೀವಾವಧಿ ಶಿಕ್ಷೆಗೆ ಗುರಿಯಾದವರು.

ಸುರೇಖಾ ನಿಲಜಕರ, ಸಂಜನಾ ನಿಲಜಕರ, ವಸಂತ ಪಾಟೀಲ, ಪರಶುರಾಮ ಮುತಗೇಕರ ಅವರಿಗೆ ಆರು ತಿಂಗಳ ಸಾದಾ ಶಿಕ್ಷೆ, ತಲಾ ₹1 ಸಾವಿರ ದಂಡ ವಿಧಿಸಲಾಗಿದೆ. ಉಳಿದ ಆರೋಪಿಗಳು ಖುಲಾಸೆಗೊಂಡರು.

2022ರ ಜೂನ್ 18ರಂದು 25 ಜನರ ಗುಂಪು ಸೇರಿ ಸತೀಶ ಪಾಟೀಲ ಹತ್ಯೆ ಮಾಡಿತ್ತು. ಕಾಕತಿ ಠಾಣೆ ಪೊಲೀಸರು ಪ್ರಕರಣದ ತನಿಖೆ ನಡೆಸಿ, ನ್ಯಾಯಾಲಯಕ್ಕೆ ದೋಷಾರೋಪ ಪಟ್ಟಿ ಸಲ್ಲಿಸಿದ್ದರು.

ದಂಡದಲ್ಲಿ ಸಂತ್ರಸ್ತನ ಪತ್ನಿ ಮತ್ತು ಮಕ್ಕಳಿಗೆ ₹10.50 ಲಕ್ಷ ಪರಿಹಾರ, ಸಂತ್ರಸ್ತನ ತಾಯಿಗೆ ₹2.50 ಲಕ್ಷ ಪರಿಹಾರ ಮತ್ತು ಪ್ರಾಸಿಕ್ಯೂಷನ್ ಸಾಕ್ಷಿಯಾದ ನಂದು ನಿಲಜಕರ ಅವರಿಗೆ ₹25 ಸಾವಿರ ನೀಡಲಾಗುವುದು.

ಮೊದಲು ಸರ್ಕಾರಿ ಅಭಿಯೋಜಕ ಜಿ.ಕೆ.ಮಹುರಕರ ವಾದ ಮಂಡಿಸಿದ್ದರು. ಅವರ ನಿವೃತ್ತಿ ಬಳಿಕ ನಸರೀನ್ ಬಂಕಾಪುರ ವಾದ ಮಂಡಿಸಿದ್ದರು.

ಸಿರಿಯಜ್ಜಿ ಸ್ಮಾರಕ ಲೋಕಾರ್ಪಣೆ ಇಂದು

ಪ್ರಜಾವಾಣಿ ವಾರ್ತೆ

ಚಳ್ಳಕೆರೆ (ಚಿತ್ರದುರ್ಗ): ಜಾನಪದ ಗಾಯಕಿ, ಕಾಡುಗೊಲ್ಲ ಬುಡಕಟ್ಟು ಸಮುದಾಯಕ್ಕೆ ಸೇರಿದ ಸಿರಿಯಜ್ಜಿಯ ಸ್ಮಾರಕ ಆ.24ರಂದು ಲೋಕಾರ್ಪಣೆ ಆಗಲಿದೆ. ನಿವೃತ್ತ ಐಎಫ್‌ಎಸ್ ಅಧಿಕಾರಿ ಚಿಕ್ಕಪ್ಪಯ್ಯ, ಡಿವೈಎಸ್ಪಿ ಟಿ.ಬಿ. ರಾಜಣ್ಣ, ಜಾನಪದ ಸಿರಿ ನಾಡೋಜ ಅಭಿಮಾನಿಗಳ ಬಳಗದವರು ಸ್ಮಾರಕ ನಿರ್ಮಿಸಿದ್ದಾರೆ.

‘₹ 2.5 ಲಕ್ಷ ವೆಚ್ಚದಲ್ಲಿ ದೇವರಮರಿಕುಂಟೆ ಗ್ರಾಮದ ಯಲಗಟ್ಟೆ ಗೊಲ್ಲರಹಟ್ಟಿಯಲ್ಲಿ ಸಮಾನ ಮನಸ್ಕರು ಸ್ಮಾರಕ ನಿರ್ಮಿಸಿದ್ದಾರೆ. 10X6 ಅಡಿ ವಿಸ್ತೀರ್ಣದ ಸಮಾಧಿ, 4 X 5 ಅಡಿ ವಿಸ್ತೀರ್ಣದ ಶಿಲಾ ಮಂಟಪ ಕಟ್ಟಲಾಗಿದೆ. ಸಿರಿಯಜ್ಜಿಯ ಭಾವಚಿತ್ರ, ಪರಿಚಯವುಳ್ಳ ಶಿಲಾಶಾಸನ, ಸಾಧನೆಗಳ ಫಲಕ ಅಳವಡಿಸಲಾಗಿದೆ.

‘ಸಿರಿಯಜ್ಜಿ ನಿಧನರಾಗಿ 16 ವರ್ಷಗಳಾಗಿದ್ದು ಅವರ ಹೆಸರಿನಲ್ಲಿ ಸ್ಮಾರಕ ನಿರ್ಮಾಣಗೊಳ್ಳಬೇಕು ಎಂಬ ಒತ್ತಾಯ ಮೊದಲಿನಿಂದಲೂ ಇತ್ತು. ಸರ್ಕಾರಕ್ಕೆ ಮನವಿ ಮಾಡಿದರೂ ಸಾಕಾರಗೊಂಡಿರಲಿಲ್ಲ. ಈಗ ಏಳೆಂಟು ಮಂದಿ ಸೇರಿ ಹಣ ಹಾಕಿ ಸಣ್ಣದಾಗಿ ಸ್ಮಾರಕ ನಿರ್ಮಿಸಿದ್ದೇವೆ’ ಎಂದು ಚಿಕ್ಕಪ್ಪಯ್ಯ ತಿಳಿಸಿದರು.

ಸಿರಿಯಜ್ಜಿ, ಅಪೂರ್ವ ಕಂಠದಿಂದ ಕೇಳುಗರ ಮನಸೂರೆಗೊಂಡಿದ್ದರು. ಜಾನಪದ ವಿದ್ವಾಂಸ ಕೃಷ್ಣಮೂರ್ತಿ ಹನೂರು, ಮೀರಾಸಾಬಿಹಳ್ಳಿ ಶಿವಣ್ಣ, ಕಲಮರಹಳ್ಳಿ ಮಲ್ಲಿಕಾರ್ಜುನ ಮುಂತಾದ ವಿದ್ವಾಂಸರ ಒಡನಾಟದಿಂದ ಸಮಾಜಕ್ಕೆ ಅವರು ಪರಿಚಯವಾಗಿದ್ದರು. ಕೃಷ್ಣಮೂರ್ತಿ ಹನೂರು ಅವರು ಸಾವಿರಾರು ತ್ರಿಪದಿಗಳನ್ನು ಸಂಗ್ರಹಿಸಿದ್ದರು. 1983ರಲ್ಲಿ ಹಂಪಿ ಕನ್ನಡ ವಿಶ್ವವಿದ್ಯಾಲಯ 4,000 ತ್ರಿಪದಿಗಳನ್ನು ‘ಸಾವಿರದ ಸಿರಿ ಬೆಳಗು’ ಶೀರ್ಷಿಕೆಯಡಿ ಪ್ರಕಟಿಸಿತ್ತು. ಇದೀಗ ಶಿವಮೊಗ್ಗದ ಅಹರ್ನಿಶಿ ಪ್ರಕಾಶನ ಪುನರ್ ಮುದ್ರಣ ಮಾಡುತ್ತಿದೆ. ಜನಪದ ಕಥನ ಗೀತೆಗಳು, ಸಿರಿಯಜ್ಜಿ ಕಥನ ಮುಂತಾದ ಕೃತಿಗಳೂ ಪ್ರಕಟವಾಗಿವೆ.



ದೇವರಮರಿಕುಂಟೆ ಗ್ರಾಮದ ಯಲಗಟ್ಟೆ ಗೊಲ್ಲರಹಟ್ಟಿಯಲ್ಲಿ ಸಿದ್ಧಗೊಂಡಿರುವ ಸಿರಿಯಜ್ಜಿ ಸ್ಮಾರಕ

ಮುಂಬೈ ಧಾರಣೆ (ಶೇಂಗಾ)	
23-08-2025	
ಜಾವಾ 70/80(ಹೊಸ)	10700-10800
ಜಾವಾ 80/90(ಹೊಸ)	10000-10100
ದಪ್ಪ ಮಧ್ಯಪ್ರದೇಶ (ಹೊಸ)	7400-7500
ದಪ್ಪ ಗುಜರಾತ್ (ಹೊಸ)	8400-8500
ಶೇಂಗಾ ಎಣ್ಣೆ (10 ಕೆಜಿಗೆ)	
ಕಚ್ಚಾ (ತೆರಿಗೆ ಬಿಟ್ಟು)	1385 (1385)
ಒಂದು ವಾರದ ಡೆಲಿವರಿ	1380 (1380)
ಪಾಮ್ ವಾರದ ಡೆಲಿವರಿ	1278 (1273)
ಸೂರ್ಯಕಾಂತಿ ಎಣ್ಣೆ ಕಚ್ಚಾ	1350 (1345)
ಚಿನ್ನ-ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)	
ಅಪರಂಜಿ ಚಿನ್ನ 10 ಗ್ರಾಂ	99,950 (99,000)
ಬೆಳ್ಳಿ ಕೆ.ಜಿಗೆ	1,16,550 (1,13,900)

ಆವರಣದಲ್ಲಿ ಹಿಂದಿನ ವಹಿವಾಟಿನ ಧಾರಣೆ

ಮುಂಬೈ ಖಾದ್ಯ ತೈಲ (ಆವರಣದಲ್ಲಿ ಕಳೆದ ವಹಿವಾಟಿನ ದರ)

(10 ಕೆ.ಜಿಗೆ)

ಶೇಂಗಾ (ರಿಫೈನ್ಡ್)	₹1375 (1375)
ಸೋಯಾ (ರಿಫೈನ್ಡ್)	₹1285 (1280)
ಸೂರ್ಯಕಾಂತಿ (ರಿಫೈನ್ಡ್)	₹1415 (1410)
ಪಾಮೋಲಿನ್	₹1280 (1275)

ಮೊಟ್ಟೆ ಧಾರಣೆ (ಎನ್‌ಇಸಿಸಿ)

ಬೆಂಗಳೂರು		
	100 ಕ್ಕೆ	₹540
	12 ಕ್ಕೆ	₹72
ಮೈಸೂರು:	100 ಕ್ಕೆ	₹548

ರಾಮನಗರ ರೇಷ್ಮೆಗೂಡು

ಮಿಶ್ರತಳಿ(ಸಿ.ಬಿ)	₹299-625
ದ್ವಿತಳಿ (ಬಿ.ವಿ)	₹480-766

ಎನ್.ಆರ್.ಪುರ ರಬ್ಬರ್ (ಪ್ರತಿ ಕೆ.ಜಿಗೆ)

ಆರ್‌ಎಸ್‌ಎಸ್-4	₹187
ಆರ್‌ಎಸ್‌ಎಸ್-5	₹182
ಗುಡ್ ಲಾಟ್	₹167

ಅಮೆರಿಕಕ್ಕೆ ಕೆಲ ಅಂಚೆ ಸೇವೆ ಅಮಾನತು

‘ಅಮೆರಿಕದ ಹೊಸ ನಿಯಮಗಳಲ್ಲಿನ ಅಸ್ಪಷ್ಟತೆಯೇ ಇದಕ್ಕೆ ಕಾರಣ’



ಮುಖ್ಯಾಂಶಗಳು
- ಪತ್ರ, ಕಡತ ರವಾನೆ ಸೇವೆ ಎಂದಿನಂತೆ ಇರಲಿದೆ
- ಆಗಸ್ಟ್ 25ರ ನಂತರ ತಾತ್ಕಾಲಿಕವಾಗಿ ಬುಕಿಂಗ್ ಸೇವೆ ಸ್ಥಗಿತ
- ಸರಕು ಸಾಗಿಸಲು ಸಾಧ್ಯವಿಲ್ಲದಿದ್ದರೆ ಶುಲ್ಕ ವಾಪಸ್

ನವದೆಹಲಿ (ಪಿಟಿಐ): ಅಂಚೆ ಇಲಾಖೆಯು ಅಮೆರಿಕಕ್ಕೆ ಕೆಲವು ವಸ್ತುಗಳ ರವಾನೆ ಸೇವೆಯನ್ನು ಅಮಾನತಿನಲ್ಲಿ ಇರಿಸಿದೆ.

ಅಮೆರಿಕದ ಸೀಮಾಸುಂಕ ಇಲಾಖೆಯು ಹೊರಡಿಸಿರುವ ಹೊಸ ನಿಯಮಗಳ ಬಗ್ಗೆ ಸ್ಪಷ್ಟತೆ ಇಲ್ಲದ ಕಾರಣ ಅಮೆರಿಕಕ್ಕೆ ತೆರಳುವ ವಿಮಾನಗಳು ವಸ್ತುಗಳನ್ನು ಒಯ್ಯಲು ಒಪ್ಪುತ್ತಿಲ್ಲ. ಹೀಗಾಗಿ ಅಂಚೆ ಇಲಾಖೆಯು ಈ ನಿರ್ಧಾರ ಕೈಗೊಂಡಿದೆ ಎಂದು ಸಂವಹನ ಸಚಿವಾಲಯವು ಶನಿವಾರ ಹೇಳಿದೆ.

ಆದರೆ ಪತ್ರಗಳು, ಕಡತಗಳು ಹಾಗೂ 100 ಡಾಲರ್‌ಗಿಂತ ಕಡಿಮೆ ಮೌಲ್ಯದ ಉಡುಗೊರೆಗಳನ್ನು ಅಮೆರಿಕಕ್ಕೆ ಕಳುಹಿಸಿಕೊಡುವ ಸೇವೆಗಳು ಮುಂದುವರಿಯುತ್ತವೆ ಎಂದು ಅದು ಸ್ಪಷ್ಟಪಡಿಸಿದೆ.

ಅಮೆರಿಕದ ಆಡಳಿತವು 2025ರ ಜುಲೈ 30ರಂದು ಹೊರಡಿಸಿರುವ ಕಾರ್ಯಕಾರಿ ಆದೇಶದ ಪ್ರಕಾರ 100 ಡಾಲರ್‌ಗಿಂತ ಹೆಚ್ಚಿನ ಮೌಲ್ಯದ ಸರಕುಗಳಿಗೆ ಅಮೆರಿಕದಲ್ಲಿ ಆಗಸ್ಟ್ 29ರಿಂದ ಸುಂಕ ವಿಧಿಸಲಾಗುತ್ತದೆ. ಈ ಕಾರ್ಯಕಾರಿ ಆದೇಶದಲ್ಲಿ ಹೇಳಿರುವಂತೆ, ಅಂತರರಾಷ್ಟ್ರೀಯ ಅಂಚೆ ಜಾಲ ಅಥವಾ ‘ಅಮೆರಿಕದ ಸೀಮಾಸುಂಕ ಮತ್ತು ಗಡಿ ರಕ್ಷಣಾ ವಿಭಾಗ’ದ ಒಪ್ಪಿಗೆ ಪಡೆದಿರುವ ಇತರ ಅರ್ಹ ಸಂಸ್ಥೆಗಳ ಮೂಲಕ ಸರಕು ಸಾಗಣೆ ಮಾಡಿಕೊಡುವ ಸಂಸ್ಥೆಗಳು ಸುಂಕದ ಮೊತ್ತ ಸಂಗ್ರಹಿಸಬೇಕು, ಆ ಮೊತ್ತವನ್ನು ಜಮಾ ಮಾಡಬೇಕು.

‘ಸುಂಕವನ್ನು ಸಂಗ್ರಹಿಸುವುದು ಹಾಗೂ ಅದನ್ನು ಜಮಾ ಮಾಡುವುದಕ್ಕೆ ಸಂಬಂಧಿಸಿದಂತೆ ಹಲವು ಮಹತ್ವದ ಪ್ರಕ್ರಿಯೆಗಳ ಬಗ್ಗೆ ಸ್ಪಷ್ಟನೆ ಬೇಕಾಗಿದೆ. ಹೀಗಾಗಿ, ಅಮೆರಿಕಕ್ಕೆ ವಿಮಾನ ಸೇವೆ ಒದಗಿಸುವ ಕಂಪನಿಗಳು ಆಗಸ್ಟ್ 25ರ ನಂತರ ಅಂಚೆ ಸರಕುಗಳನ್ನು ಸ್ವೀಕರಿಸಲು ಆಗದು ಎಂದು ಹೇಳಿವೆ’ ಎಂದು ಸಚಿವಾಲಯದ ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ಈ ಬೆಳವಣಿಗೆಯ ನಂತರದಲ್ಲಿ ಪತ್ರಗಳು, ಕಡತಗಳು ಮತ್ತು 100 ಡಾಲರ್ ಒಳಗಿನ ಉಡುಗೊರೆಗಳನ್ನು ಹೊರತುಪಡಿಸಿ ಇತರ ಯಾವುದೇ ವಸ್ತುಗಳನ್ನು ಆಗಸ್ಟ್ 25ರ ನಂತರ ಅಮೆರಿಕಕ್ಕೆ ಸಾಗಿಸುವ ಬುಕಿಂಗ್‌ಗಳನ್ನು ಸ್ವೀಕರಿಸದೆ ಇರಲು ಅಂಚೆ ಇಲಾಖೆಯು ತೀರ್ಮಾನಿಸಿದೆ ಎಂದು ಸಚಿವಾಲಯ ಹೇಳಿದೆ.

ಯಾರ ಸರಕುಗಳನ್ನು ಸಾಗಿಸಲು ಸಾಧ್ಯವಿಲ್ಲವೋ ಅವರಿಗೆ ಶುಲ್ಕವನ್ನು ಅಂಚೆ ಇಲಾಖೆಯು ಮರಳಿಸುತ್ತಿದೆ. ‘ಸರಕುಗಳನ್ನು ಅಮೆರಿಕಕ್ಕೆ ರವಾನಿಸಲು ಈಗಾಗಲೇ ಬುಕ್ ಮಾಡಿದ್ದರೆ, ಅವುಗಳನ್ನು ಅಲ್ಲಿಗೆ ಕಳುಹಿಸಲು ಈ ಕಾರಣಗಳಿಂದಾಗಿ ಸಾಧ್ಯವಾಗದೆ ಇದ್ದರೆ ಶುಲ್ಕವನ್ನು ಮರಳಿಸುವಂತೆ ಗ್ರಾಹಕರು ಕೋರಬಹುದು’ ಎಂದು ಇಲಾಖೆ ಹೇಳಿದೆ. ಅಮೆರಿಕಕ್ಕೆ ಸೇವೆಗಳನ್ನು ಆದಷ್ಟುಬೇಗ ಪೂರ್ಣ ಪ್ರಮಾಣದಲ್ಲಿ ಪುನರಾರಂಭಿಸಲು ಸಾಧ್ಯವಿರುವ ಎಲ್ಲ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ ಎಂದು ತಿಳಿಸಿದೆ.

ಸುದ್ದಿ 2 ನಿಮಿಷ

ಯೆಸ್ ಬ್ಯಾಂಕ್‌ನ ಶೇ 24ರಷ್ಟು ಷೇರು ಖರೀದಿಗೆ ಒಪ್ಪಿಗೆ

ಮುಂಬೈ (ರಾಯಿಟರ್ಸ್): ಯೆಸ್ ಬ್ಯಾಂಕ್‌ನ ಶೇಕಡ 24.99ರಷ್ಟು ಷೇರುಗಳನ್ನು ಖರೀದಿಸಲು ಜಪಾನ್‌ನ ಸುಮಿಟೊಮೊ ಮಿಟ್ಸುಯಿ ಬ್ಯಾಂಕಿಂಗ್ ಕಾರ್ಪೊರೇಷನ್‌ಗೆ (ಎಸ್‌ಎಂಬಿಸಿ) ರಿಸರ್ವ್ ಬ್ಯಾಂಕ್ ಆಫ್ ಇಂಡಿಯಾ (ಆರ್‌ಬಿಐ) ಅನುಮತಿ ನೀಡಿದೆ.

ಆದರೆ ಷೇರು ಖರೀದಿ ನಂತರ, ಎಸ್‌ಎಂಬಿಸಿಯನ್ನು ಯೆಸ್ ಬ್ಯಾಂಕ್‌ನ ಪ್ರವರ್ತಕ ಎಂಬುದಾಗಿ ಪರಿಗಣಿಸಬಾರದು ಎಂದು ಆರ್‌ಬಿಐ ಹೇಳಿದೆ. ಈ ಸಂಗತಿಯನ್ನು ಯೆಸ್ ಬ್ಯಾಂಕ್ ಷೇರುಪೇಟೆಗೆ ಶನಿವಾರ ತಿಳಿಸಿದೆ.

ಎಸ್‌ಎಂಬಿಸಿಯು ₹13,968 ಕೋಟಿಗೆ ಯೆಸ್ ಬ್ಯಾಂಕ್‌ನ ಶೇ 20ರಷ್ಟು ಷೇರುಗಳನ್ನು ಖರೀದಿಸಲು ಒಪ್ಪಂದ ಮಾಡಿಕೊಂಡಿದೆ ಎಂದು ಬ್ಯಾಂಕ್ ಮೇ ತಿಂಗಳಿನಲ್ಲಿ ಷೇರುಪೇಟೆಗೆ ತಿಳಿಸಿತ್ತು. ಇದು ದೇಶದ ಹಣಕಾಸು ವಲಯದಲ್ಲಿನ ಅತಿದೊಡ್ಡ ಮೊತ್ತದ ಗಡಿಯಾಚೆಗಿನ ವಿಲೀನ ಮತ್ತು ಸ್ವಾಧೀನ ಒಪ್ಪಂದವಾಗಿದೆ. ಇದೀಗ ಹೆಚ್ಚುವರಿಯಾಗಿ ಶೇ 4.9ರಷ್ಟು ಷೇರನ್ನು ಖರೀದಿಸಲು ಒಪ್ಪಿಗೆ ನೀಡಿದೆ.



ಭಾರತಕ್ಕೆ ಅಮೆರಿಕ ರಾಯಭಾರಿಯಾಗಿ ಗೋರ್ ನಾಮನಿರ್ದೇಶನ

ವಾಷಿಂಗ್ಟನ್ (ಪಿಟಿಐ): ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ತಮ್ಮ ಆಪ್ತ ಸರ್ಗಿಯೊ ಗೋರ್ ಅವರನ್ನು ಭಾರತಕ್ಕೆ ಅಮೆರಿಕದ ಮುಂದಿನ ರಾಯಭಾರಿಯನ್ನಾಗಿ ನಾಮನಿರ್ದೇಶನ ಮಾಡಿದ್ದಾರೆ. ಪ್ರತಿಸುಂಕದ ವಿಚಾರವಾಗಿ ಭಾರತ ಮತ್ತು ಅಮೆರಿಕದ ನಡುವೆ ಬಿಕ್ಕಟ್ಟು ಮುಂದುವರಿದಿರುವ ನಡುವೆಯೇ ಈ ಬೆಳವಣಿಗೆ ನಡೆದಿರುವುದು ಗಮನಾರ್ಹ.

ಪ್ರಸ್ತುತ, ಗೋರ್ ಅವರು ಶ್ವೇತಭವನದ ಅಧ್ಯಕ್ಷೀಯ ಸಿಬ್ಬಂದಿ ಕಚೇರಿಯ ನಿರ್ದೇಶಕರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. ನೂತನ ಹುದ್ದೆಗೆ ಸೆನೆಟ್ ಅನುಮೋದನೆ ಅಗತ್ಯ.

ಸೆನೆಟ್ ಅನುಮೋದನೆ ದೊರೆತ ಬಳಿಕ ಭಾರತಕ್ಕೆ ಅಮೆರಿಕದ ರಾಯಭಾರಿಯಾಗುವುದರ ಜತೆಗೆ ದಕ್ಷಿಣ ಮತ್ತು ಕೇಂದ್ರ ಏಷ್ಯಾ ವ್ಯವಹಾರಗಳ ವಿಶೇಷ ರಾಯಭಾರಿಯಾಗಿಯೂ ಅವರು ಕಾರ್ಯ ನಿರ್ವಹಿಸಲಿದ್ದಾರೆ ಎಂದು ಟ್ರಂಪ್ ಅವರು ಸಾಮಾಜಿಕ ಮಾಧ್ಯಮ ‘ಟ್ರುತ್ ಸೋಷಿಯಲ್’ನಲ್ಲಿ ಪೋಸ್ಟ್ ಮಾಡಿದ್ದಾರೆ.

2003ರಿಂದ ಭಾರತದಲ್ಲಿ ಅಮೆರಿಕ ರಾಯಭಾರಿಯಾಗಿದ್ದ ಎರಿಕ್ ಗಾರ್ಸೆಟ್ಟಿ ಅವರ ಅಧಿಕಾರಾವಧಿ ಇದೇ ವರ್ಷದ ಜನವರಿಯಲ್ಲಿ ಮುಕ್ತಾಯಗೊಂಡಿದೆ.

ಸೆರ್ಗಿಯೊ ಯಾರು?: ಟ್ರಂಪ್ ಸರ್ಕಾರದ ವಿವಿಧ ಇಲಾಖೆಗಳಿಗೆ ಕಡಿಮೆ ಸಮಯದಲ್ಲೇ 4,000 ಮಂದಿ ಅಧಿಕಾರಿಗಳನ್ನು ನೇಮಿಸಿ ದಾಖಲೆ ಸೃಷ್ಟಿಸುವ ಮೂಲಕ ಸೆರ್ಗಿಯೊ ಮತ್ತು ಅವರ ತಂಡ ಪ್ರಶಂಸೆಗಳಿಸಿತ್ತು. ಟ್ರಂಪ್ ಅವರ ಅಧ್ಯಕ್ಷೀಯ ಚುನಾವಣೆಯಲ್ಲೂ ಸೆರ್ಗಿಯೊ ಕಾರ್ಯನಿರ್ವಹಿಸಿದ್ದರು. ಟ್ರಂಪ್ ಅವರ ಪುಸ್ತಕಗಳನ್ನು ಪ್ರಕಟಿಸಿ, ಚುನಾವಣೆ ವೇಳೆ ಪ್ರಚಾರ ಕಾರ್ಯಕ್ಕೆ ಚುರುಕು ನೀಡಿದ್ದರು.

‘ಹಲವು ದೇಶಗಳ ಜೊತೆ ವ್ಯಾಪಾರ ಮಾತುಕತೆ’



ನವದೆಹಲಿ (ಪಿಟಿಐ): ಐರೋಪ್ಯ ಒಕ್ಕೂಟ, ಅಮೆರಿಕ, ಚಿಲಿ ಮತ್ತು ಪೆರು ಸೇರಿದಂತೆ ಹಲವು ದೇಶಗಳ ಜೊತೆ ಮುಕ್ತ ವ್ಯಾಪಾರ ಒಪ್ಪಂದ ಮಾಡಿಕೊಳ್ಳಲು ಕೇಂದ್ರ ಸರ್ಕಾರವು ಮಾತುಕತೆ ನಡೆಸುತ್ತಿದೆ ಎಂದು ವಾಣಿಜ್ಯ ಮತ್ತು ಕೈಗಾರಿಕಾ ಸಚಿವ ಪೀಯೂಷ್ ಗೋಯಲ್ ಶನಿವಾರ ಹೇಳಿದ್ದಾರೆ.

‘ಜಗತ್ತು ಭಾರತದತ್ತ ನೋಡುತ್ತಿದೆ, ಜಗತ್ತಿನ ಹಲವು ಮುಂದುವರಿದ ದೇಶಗಳು ಮುಕ್ತ ವ್ಯಾಪಾರ ಒಪ್ಪಂದಕ್ಕಾಗಿ ನಮ್ಮ ಜೊತೆ ಮಾತುಕತೆ ನಡೆಸುತ್ತಿವೆ’ ಎಂದು ಅವರು ಹೇಳಿದ್ದಾರೆ.

ಸಚಿವರು ಇಲ್ಲಿ ಕಾರ್ಯಕ್ರಮವೊಂದರಲ್ಲಿ ಮಾತನಾಡುವ ಸಂದರ್ಭದಲ್ಲಿ ಈ ಮಾತು ಹೇಳಿದ್ದಾರೆ.

ಆಸ್ಟ್ರೇಲಿಯಾ ಜೊತೆ ಮಾತುಕತೆ: ಆರ್ಥಿಕ ಸಂಬಂಧವನ್ನು ಬಲಪಡಿಸುವ ಉದ್ದೇಶದ ಸಮಗ್ರ ಮುಕ್ತ ವ್ಯಾಪಾರ ಒಪ್ಪಂದಕ್ಕೆ ಸಂಬಂಧಿಸಿದ ಇನ್ನೊಂದು ಸುತ್ತಿನ ಮಾತುಕತೆಯನ್ನು ಭಾರತ ಮತ್ತು ಆಸ್ಟ್ರೇಲಿಯಾ ಶನಿವಾರ ಪೂರ್ಣಗೊಳಿಸಿವೆ.

ಎರಡೂ ದೇಶಗಳು 2022ರ ಡಿಸೆಂಬರ್‌ನಲ್ಲಿ ಮಧ್ಯಂತರ ವ್ಯಾಪಾರ ಒಪ್ಪಂದವೊಂದನ್ನು ಜಾರಿಗೆ ತಂದಿವೆ. ಈ ಒಪ್ಪಂದದ ವ್ಯಾಪ್ತಿಯನ್ನು ಸಮಗ್ರ ಆರ್ಥಿಕ ಸಹಕಾರ ಒಪ್ಪಂದದ ಸ್ವರೂಪಕ್ಕೆ ಹಿಗ್ಗಿಸುವ ಮಾತುಕತೆ ಈಗ ನಡೆದಿದೆ.

ಸರಕುಗಳು, ಸೇವೆಗಳು, ಡಿಜಿಟಲ್ ವ್ಯಾಪಾರ, ಕಾನೂನಿನ ಅವಕಾಶಗಳು, ಪರಿಸರ, ಕಾರ್ಮಿಕರ ವಿಚಾರ ಸೇರಿದಂತೆ ಹಲವು ಸಂಗತಿಗಳ ಬಗ್ಗೆ ಮಾತುಕತೆಯಲ್ಲಿ ಚರ್ಚೆ ಆಗಿದೆ ಎಂದು ಪ್ರಕಟಣೆ ತಿಳಿಸಿದೆ.

ಅಮೆರಿಕವು ಭಾರತದ ಅತಿದೊಡ್ಡ ಆಮದುದಾರ

ಸಾಗರೋತ್ಪನ್ನ ರಫ್ತು ಇಳಿಕೆ

ನವದೆಹಲಿ (ಪಿಟಿಐ): ಕಳೆದ ಆರ್ಥಿಕ ವರ್ಷದಲ್ಲಿ ದೇಶದಿಂದ 16.98 ಲಕ್ಷ ಟನ್ ಸಾಗರೋತ್ಪನ್ನ ರಫ್ತಾಗಿದ್ದು, ಇದರ ಮೌಲ್ಯ ₹62,408 ಕೋಟಿಯಷ್ಟಾಗಿದೆ ಎಂದು ಕೇಂದ್ರ ವಾಣಿಜ್ಯ ಸಚಿವಾಲಯ ಶನಿವಾರ ತಿಳಿಸಿದೆ.



2023–24ರ ಆರ್ಥಿಕ ವರ್ಷದಲ್ಲಿ 17.81 ಲಕ್ಷ ಟನ್ ಸಾಗರೋತ್ಪನ್ನಗಳ ರಫ್ತು ಆಗಿತ್ತು. ಅದರ ಮೌಲ್ಯವು ₹60,523 ಕೋಟಿಯಾಗಿತ್ತು. ಕಳೆದ ಬಾರಿಯ ರಫ್ತು ಪ್ರಮಾಣಕ್ಕೆ ಹೋಲಿಸಿದರೆ ಈ ಬಾರಿಯ ರಫ್ತು ಪ್ರಮಾಣ ಕಡಿಮೆ ಎಂದು ತಿಳಿಸಿದೆ.

ಭಾರತದ ಸಾಗರೋತ್ಪನ್ನಗಳು ಹಾಗೂ ಫ್ರೋಜನ್ ಸಿಗಡಿಗೆ ಅಮೆರಿಕ ಮತ್ತು ಚೀನಾ ಪ್ರಮುಖ ಮಾರುಕಟ್ಟೆಗಳು. ಈ ಮಾರುಕಟ್ಟೆಗಳಿಗೆ ಕಳೆದ ಬಾರಿ ಒಟ್ಟು ₹45,137 ಕೋಟಿ ಮೌಲ್ಯ ಉತ್ಪನ್ನಗಳ ರಫ್ತು ಆಗಿತ್ತು. ರಫ್ತು ಪ್ರಮಾಣದಲ್ಲಿ ಅಮೆರಿಕ ಮತ್ತು ಚೀನಾ ಶೇ 43ರಷ್ಟು ಪಾಲನ್ನು ಹೊಂದಿದ್ದು, ಮೌಲ್ಯದಲ್ಲಿ ಶೇ 69ರಷ್ಟು ಪಾಲು ಹೊಂದಿದೆ.

ಅಮೆರಿಕವು ಗಾತ್ರ ಮತ್ತು ಮೌಲ್ಯದಲ್ಲಿ ಭಾರತದ ಸಾಗರೋತ್ಪನ್ನಗಳ ಅತಿದೊಡ್ಡ ಆಮದುಗಾರ ದೇಶ.

ವಿಶಾಖಪಟ್ಟಣ ಮತ್ತು ನವಿ ಮುಂಬೈನ ಜವಾಹರ್‌ಲಾಲ್ ನೆಹರೂ ಬಂದರು ಪ್ರಾಧಿಕಾರ (ಜೆಎನ್‌ಪಿಟಿ) ಸಾಗರೋತ್ಪನ್ನ ಗಳ ರಫ್ತಿನ ಪ್ರಮುಖ ಬಂದರುಗಳಾಗಿವೆ.

ಸುಂಕ: ಪರ್ಯಾಯ ಮಾರುಕಟ್ಟೆಗೆ ಅನ್ವೇಷಣೆ

ಕೊಚ್ಚಿ (ಪಿಟಿಐ): ಅಮೆರಿಕವು ಭಾರತದ ಸರಕುಗಳ ಮೇಲೆ ಹೆಚ್ಚಿನ ಪ್ರಮಾಣದಲ್ಲಿ ಸುಂಕ ಹೇರಿರುವುದು ದೇಶದ ಸಾಗರೋತ್ಪನ್ನಗಳ ಉದ್ಯಮದ ಮೇಲೆ ಪ್ರಭಾವ ಬೀರಿದ್ದು, ಪರ್ಯಾಯ ಮಾರುಕಟ್ಟೆಗಳನ್ನು ಹುಡುಕಲಾಗುತ್ತಿದೆ ಎಂದು ಸಾಗರೋತ್ಪನ್ನ ರಫ್ತು ಅಭಿವೃದ್ಧಿ ಪ್ರಾಧಿಕಾರದ (ಎಂಪಿಇಡಿಎ) ಅಧ್ಯಕ್ಷ ಡಿ.ವಿ. ಸ್ವಾಮಿ ಹೇಳಿದ್ದಾರೆ.

ಕೇಂದ್ರ ಸರ್ಕಾರವು ರಷ್ಯಾ, ಬ್ರಿಟನ್, ಐರೋಪ್ಯ ಒಕ್ಕೂಟ, ನಾರ್ವೆ, ಸ್ವಿಟ್ಜರ್ಲೆಂಡ್, ಪಶ್ಚಿಮ ಏಷ್ಯಾ, ದಕ್ಷಿಣ ಕೊರಿಯಾವನ್ನು ಸಾಗರೋತ್ಪನ್ನಗಳ ಪಾಲಿನ ಹೊಸ ಆದ್ಯತಾ ಮಾರುಕಟ್ಟೆಗಳು ಎಂದು ಗುರುತಿಸಿದೆ ಎಂದು ಎಂಪಿಇಡಿಎ ಕಾರ್ಯಕ್ರಮದಲ್ಲಿ ಶನಿವಾರ ಹೇಳಿದ್ದಾರೆ.

ಈಕ್ವೆಡಾರ್, ಮುಂಬರುವ ದಿನಗಳಲ್ಲಿ ಭಾರತದ ಸಾಗರೋತ್ಪನ್ನಗಳ ಮಾರುಕಟ್ಟೆಗೆ ತೀವ್ರ ಸ್ಪರ್ಧೆ ನೀಡಬಹುದು ಎಂದು ಹೇಳಿದ್ದಾರೆ.

ಅಮೆರಿಕಕ್ಕೆ 3,11,948 ಟನ್ ಫ್ರೋಜನ್ ಸಿಗಡಿ ರಫ್ತಾಗಿದ್ದರೆ, ಚೀನಾಗೆ 1,36,164 ಟನ್ ರಫ್ತಾಗಿದೆ. ರಾಜ್ಯಗಳ ಪೈಕಿ ಆಂಧ್ರಪ್ರದೇಶದಿಂದ ಸಾಗರೋತ್ಪನ್ನಗಳ ರಫ್ತು ಹೆಚ್ಚಿದೆ. ನಂತರದ ಸ್ಥಾನದಲ್ಲಿ ತಮಿಳುನಾಡು, ಕೇರಳ, ಗುಜರಾತ್, ಪಶ್ಚಿಮ ಬಂಗಾಳ ಮತ್ತು ತೆಲಂಗಾಣ ಇದೆ.

‘ಶೀಘ್ರ ಮಹಿಳಾ ಸಹಕಾರ ಸಮಾಜದ ನೋಂದಣಿ’

ಮುಂಬೈ (ಪಿಟಿಐ): ಮಹಿಳಾ ಸಹಕಾರ ಸಮಾಜಗಳನ್ನು ಶೀಘ್ರವೇ ರಚಿಸಿ, ನೋಂದಾಯಿಸಲಾಗುವುದು ಮತ್ತು ಅವುಗಳಿಗೆ ಸರ್ಕಾರಿ ಗುತ್ತಿಗೆಗಳನ್ನು ನೀಡಲಾಗುವುದು ಎಂದು ಮಹಾರಾಷ್ಟ್ರ ಮುಖ್ಯಮಂತ್ರಿ ದೇವೇಂದ್ರ ಫಡಣವೀಸ್ ಅವರು ಶನಿವಾರ ತಿಳಿಸಿದರು.

ಕೈಗಾರಿಕೆ, ವಾಣಿಜ್ಯ ಮತ್ತು ವ್ಯಾಪಾರ ಕ್ಷೇತ್ರಗಳಲ್ಲಿ ಮಹಿಳೆಯರ ಪಾಲ್ಗೊಳ್ಳುವಿಕೆಯನ್ನು ಹೆಚ್ಚಿಸಲು ಸರ್ಕಾರಿ ಗುತ್ತಿಗೆಗಳನ್ನು ನೀಡಲಾಗುವುದು ಎಂದರು.

ಕಾರ್ಯಕ್ರಮವೊಂದರಲ್ಲಿ ಮಾತನಾಡಿದ ಅವರು, 2024ರ ವಿಧಾನಸಭೆ ಚುನಾವಣೆಗೂ ಮುನ್ನ ಘೋಷಿಸಿದ ಯಾವುದೇ ಯೋಜನೆಗಳನ್ನೂ ನಿಲ್ಲಿಸುವುದಿಲ್ಲ ಎಂದು ಸ್ಪಷ್ಟಪಡಿಸಿದರು.

ಮುಂದಿನ 20 ವರ್ಷಗಳಲ್ಲಿ ಭಾರತವು ಮೊದಲ ಅಥವಾ ಎರಡನೇ ಅತಿದೊಡ್ಡ ಆರ್ಥಿಕತೆ ಹೊಂದಿರುವ ರಾಷ್ಟ್ರವಾಗಲಿದೆ. ಈ ಹಾದಿಯಲ್ಲಿ ಮಹಿಳೆ ಪಾತ್ರ ಮುಖ್ಯವಾಗಲಿದೆ ಎಂದರು.

ಸಂಪತ್ತಿನ ಮೌಲ್ಯ ₹936 ಕೋಟಿ

ನಾಯ್ಡು ದೇಶದ ಶ್ರೀಮಂತ ಮುಖ್ಯಮಂತ್ರಿ

ಪ್ರಜಾವಾಣಿ ವಾರ್ತೆ



ಚಂದ್ರಬಾಬು ನಾಯ್ಡು

ಮುಖ್ಯಾಂಶಗಳು
- 30 ಮುಖ್ಯಮಂತ್ರಿಗಳ ಪೈಕಿ ಇಬ್ಬರು (ಶೇ 7ರಷ್ಟು) ಶತ ಕೋಟ್ಯಧಿಪತಿಗಳು
- ಈ ಇಬ್ಬರ ಒಟ್ಟಾರೆ ಸಂಪತ್ತಿನ ಮೌಲ್ಯ ₹1632 ಕೋಟಿ

ಹೈದರಾಬಾದ್: ಆಂಧ್ರಪ್ರದೇಶ ಮುಖ್ಯಮಂತ್ರಿ ಎನ್. ಚಂದ್ರಬಾಬು ನಾಯ್ಡು ಅವರು ₹936 ಕೋಟಿ ಮೌಲ್ಯದ ಸಂಪತ್ತಿನೊಂದಿಗೆ ದೇಶದಲ್ಲೇ ಅತಿ ಶ್ರೀಮಂತ ಮುಖ್ಯಮಂತ್ರಿ ಎನಿಸಿ ಕೊಂಡಿದ್ದಾರೆ. ಅಸೋಸಿಯೇಷನ್ ಫಾರ್ ಡೆಮಾಕ್ರಟಿಕ್ ರಿಫಾರ್ಮ್ಸ್ (ಎಡಿಆರ್) ಇತ್ತೀಚಿನ ವರದಿಯಲ್ಲಿ ಈ ಮಾಹಿತಿ ನೀಡಿದೆ.

ನಾಯ್ಡು ಅವರ ಸಂಪತ್ತಿನ ಸಿಂಹಪಾಲು ಅವರು ಪಾಲುದಾರಿಕೆ ಹೊಂದಿರುವ ಹೆರಿಟೇಜ್ ಫುಡ್ಸ್ ಲಿಮಿಟೆಡ್‌ನಿಂದಲೇ ಬಂದಿದೆ. 1992ರಲ್ಲಿ ಡೇರಿ ಕಂಪನಿಯನ್ನು (ಐಪಿಒ– ಸಾರ್ವಜನಿಕ ಷೇರು ಹಂಚಿಕೆ) ನಾಯ್ಡು ಅವರು ಸ್ಥಾಪನೆ ಮಾಡಿದ್ದರು.

ರಾಜ್ಯ ಮತ್ತು ಕೇಂದ್ರಾಡಳಿತ ಪ್ರದೇಶಗಳ 30 ಮುಖ್ಯಮಂತ್ರಿಗಳು ಕಳೆದ ಚುನಾವಣೆ ವೇಳೆ ಸಲ್ಲಿಸಿದ್ದ ಪ್ರಮಾಣಪತ್ರಗಳಲ್ಲಿನ (ಅಫಿಡವಿಟ್) ಮಾಹಿತಿಯನ್ನು ಅವಲೋಕಿಸಿ ದೆಹಲಿ ಮೂಲದ ಎಡಿಆರ್ ಮತ್ತು ನ್ಯಾಷನಲ್ ಎಲೆಕ್ಷನ್ ವಾಚ್ (ಎನ್‌ಇಡಬ್ಲ್ಯು) ಸಂಸ್ಥೆಗಳು ವರದಿ ಸಿದ್ಧಪಡಿಸಿವೆ.

ನಾಯ್ಡು ಅವರು ಹೆರಿಟೇಜ್ ಕಂಪನಿಯಲ್ಲಿ ₹2.26 ಕೋಟಿಗೂ ಹೆಚ್ಚು ಮೌಲ್ಯದ ಷೇರುಗಳನ್ನು ಹೊಂದಿದ್ದಾರೆ. ಕಳೆದ ವಿಧಾನಸಭಾ ಚುನಾವಣೆ ವೇಳೆ ಕಂಪನಿಯ ಒಂದು ಷೇರಿನ ಮೌಲ್ಯ ₹337.85 ರಷ್ಟಿತ್ತು.

ನಾಯ್ಡು ಅವರ ಷೇರುಗಳ ಮೌಲ್ಯವೇ ₹763.93 ಕೋಟಿ. ವೈಯಕ್ತಿಕ ಸಾಲ, ಹೆರಿಟೇಜ್ ಉಪಾಧ್ಯಕ್ಷೆಯೂ ಆಗಿರುವ ಅವರ ಪತ್ನಿ ಹೆಸರಿನಲ್ಲಿ ಇರುವ ಚಿನ್ನ,ಬೆಳ್ಳಿ ಆಭರಣ, ಕುಪ್ಪಂ, ಚಿತ್ತೂರು, ಹೈದರಾಬಾದ್‌ನಲ್ಲಿ ನಾಯ್ಡು ಕುಟುಂಬಕ್ಕೆ ಸೇರಿದ ಆಸ್ತಿಗಳ ಮೌಲ್ಯ ಉಳಿದ ಸಂಪತ್ತಿನ ಭಾಗವಾಗಿದೆ.

1995ರಲ್ಲಿ ಹೆರಿಟೇಜ್ ಮಾರುಕಟ್ಟೆ ಬಂಡವಾಳ ಗಾತ್ರ ₹25 ಕೋಟಿ ಇತ್ತು. 2025ರಲ್ಲಿ ಅದು ₹4,500 ಕೋಟಿಗೆ ತಲುಪಿದೆ. 2024ರಲ್ಲಿ ಅದು ₹6,755 ಕೋಟಿಗೆ ಮುಟ್ಟಿತ್ತು.

ಗಾಜಾ ಮೇಲೆ ಇಸ್ರೇಲ್ ದಾಳಿ: 25 ಸಾವು

ಖಾನ್ ಯೂನಿಸ್ (ಎಪಿ): ಗಾಜಾ ಪಟ್ಟಿಯ ವಿವಿಧ ಸ್ಥಳಗಳ ಮೇಲೆ ಇಸ್ರೇಲ್ ಪಡೆಗಳು ಶನಿವಾರ ದಾಳಿ ನಡೆಸಿದ್ದು, ನಿರಾಶ್ರಿತರ ಶಿಬಿರಗಳಲ್ಲಿ ಆಹಾರ ನೆರವಿಗಾಗಿ ಕಾಯುತ್ತಿದ್ದ ಕನಿಷ್ಠ 25 ಮಂದಿ ಸಾವಿಗೀಡಾಗಿದ್ದಾರೆ ಎಂದು ಸ್ಥಳೀಯ ಆಸ್ಪತ್ರೆ ಮೂಲಗಳು ತಿಳಿಸಿವೆ.

ದಕ್ಷಿಣ ಗಾಜಾದಲ್ಲಿ ಮಹಿಳೆಯರು, ಮಕ್ಕಳು ಸೇರಿ 14 ಮಂದಿ, ಉತ್ತರ ಗಾಜಾದಲ್ಲಿ ಐದು ಮಂದಿ ಹಾಗೂ ಇತರೆ ಪ್ರದೇಶಗಳ ಮೇಲೆ ನಡೆದ ದಾಳಿಯಲ್ಲಿ ಆರು ಮಂದಿ ಸಾವಿಗೀಡಾಗಿದ್ದಾರೆ.

ಯುದ್ಧ ಮತ್ತು ಆಹಾರ ಪೂರೈಕೆಗೆ ಇಸ್ರೇಲ್ ಒಡ್ಡುತ್ತಿರುವ ಅಡ್ಡಿಯು ಗಾಜಾದಲ್ಲಿ ಹಸಿವಿನ ತೀವ್ರತೆ ಸೃಷ್ಟಿಸಲಿದೆ ಎಂದು ತಿಂಗಳ ಹಿಂದೆಯೇ ನೆರವು ಸಂಸ್ಥೆಗಳು ಘೋಷಿಸಿದ್ದವು. ಗಾಜಾದಲ್ಲಿ ಕ್ಷಾಮ ತಲೆದೋರಿದೆ ಎಂಬುದು ಸುಳ್ಳು ಎಂದಿರುವ ಇಸ್ರೇಲ್ ಸೇನೆಯು, ಗಾಜಾವನ್ನು ಶೀಘ್ರವಶಕ್ಕೆ ಪಡೆಯಲಾಗುವುದು ಎಂದು ಹೇಳಿದೆ. ಗಾಜಾದ ಸುತ್ತಮುತ್ತಲ ಪ್ರದೇಶಗಳಲ್ಲಿ ಇಸ್ರೇಲ್ ಯೋಧರ ನಿಯೋಜಿಸಿದೆ.

ಮೆರವಣಿಗೆ

ಪಿಟಿಐ ಚಿತ್ರ



ಮಹಾರಾಷ್ಟ್ರದ ನಾಗ್ಪುರದಲ್ಲಿ ಶನಿವಾರ ಪೋಲಾ ಹಬ್ಬದ ಭಾಗವಾಗಿ ‘ಕಾಳಿ ಮತ್ತು ಪೀಲಿ ಮಾರಬತ್’ ಮೆರವಣಿಗೆಯಲ್ಲಿ ಭಾಗವಹಿಸಿದ್ದ ಜನಸ್ತೋಮ

‘ಆಧುನಿಕ ವಿಧಾನ: ಕೃಷಿಯಲ್ಲಿ ಸ್ವಾವಲಂಬನೆ’

ಛತ್ರಪತಿ ಸಂಭಾಜಿನಗರ (ಪಿಟಿಐ): ಆಧುನಿಕ ವಿಧಾನಗಳನ್ನು ಭಾರತೀಯ ಕೃಷಿ ಮತ್ತು ಪಶುಸಂಗೋಪನೆಯಲ್ಲಿ ಅಳವಡಿಸಿಕೊಳ್ಳುವುದರಿಂದ ದೇಶವು ಕೃಷಿ ಕ್ಷೇತ್ರದಲ್ಲಿ ಸ್ವಾವಲಂಬನೆ ಸಾಧಿಸಬಹುದು ಎಂದು ರಾಷ್ಟ್ರೀಯ ಸ್ವಯಂ ಸೇವಕ ಸಂಘದ ಮುಖ್ಯಸ್ಥ ಮೋಹನ್ ಭಾಗವತ್ ತಿಳಿಸಿದ್ದಾರೆ.

ಜ್ಯೇಷ್ಠ ಪಶುವೈದ್ಯ ಪ್ರತಿಷ್ಠಾನದ 28ನೇ ಸಂಸ್ಥಾಪನಾ ದಿನಾಚರಣೆ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ‘ಸಾಂಪ್ರದಾಯಿಕ ಪದ್ಧತಿಯೊಂದಿಗೆ ಆಧುನಿಕ ತಂತ್ರಜ್ಞಾನವನ್ನು ಬಳಸಿಕೊಂಡರೆ ರೈತರು ಹೆಚ್ಚು ಪ್ರಯೋಜನ ಪಡೆಯಬಹುದು’ ಎಂದು ಶನಿವಾರ ಹೇಳಿದರು.

ಮೂಕಪ್ರಾಣಿಗಳ ನೋವನ್ನು ಅರ್ಥಮಾಡಿಕೊಂಡು ಅವುಗಳಿಗೆ ಚಿಕಿತ್ಸೆ ನೀಡಿ ಗುಣಪಡಿಸುವ ಕಲೆ ಪಶುವೈದ್ಯರಿಗೆ ತಿಳಿದಿದೆ. ದೇಸೀ ಜಾನುವಾರುಗಳ ಸಾಕಾಣಿಕೆ ಮತ್ತು ಸಾಂಪ್ರದಾಯಿಕ ಕೃಷಿ ಪದ್ಧತಿಗಳಲ್ಲಿ ಜನರ ವಿಶ್ವಾಸ ಹೆಚ್ಚುತ್ತಿದೆ ಎಂದು ಪ್ರತಿಪಾದಿಸಿದರು.

ಈ ವೇಳೆ, ಪಶುಸಂಗೋಪನಾ ಕ್ಷೇತ್ರದಲ್ಲಿ ಗಮನಾರ್ಹ ಕೊಡುಗೆ ನೀಡಿದ ಕೃಷಿಕರಿಗೆ ‘ಆದರ್ಶ ರೈತ’, ‘ಆದರ್ಶ ಗೋ ಸಂಗೋಪಕ’ ಮತ್ತು ಪಶುವೈದ್ಯಕೀಯ ಪದವೀಧರರಿಗೆ ‘ಅತ್ಯುತ್ತಮ ಪಶುವೈದ್ಯ’ ಮತ್ತು ‘ಆದರ್ಶ ಪ್ರಾಧ್ಯಾಪಕ’ ಎಂಬ ಪ್ರಶಸ್ತಿಗಳನ್ನು ನೀಡಿ ಗೌರವಿಸಲಾಯಿತು ಮತ್ತು ಪಶುವೈದ್ಯಕೀಯ ವಿಜ್ಞಾನದಲ್ಲಿ ಉತ್ತಮ ಸಾಧನೆ ಮಾಡಿದ ವಿದ್ಯಾರ್ಥಿಗಳನ್ನು ಸನ್ಮಾನಿಸಲಾಯಿತು.

ಸೇತುವೆ ಕುಸಿತ: 12 ಕಾರ್ಮಿಕರು ಸಾವು

ಬೀಜಿಂಗ್ (ಎಪಿ): ಚೀನಾದ ಪ್ರಮುಖ ನದಿಯೊಂದರಲ್ಲಿ ನಿರ್ಮಿಸಲಾಗುತ್ತಿದ್ದ ರೈಲ್ವೆ ಮೇಲುಸೇತುವೆ ಕುಸಿದು 12 ಕಾರ್ಮಿಕರು ಮೃತಪಟ್ಟಿದ್ದಾರೆ ಮತ್ತು ನಾಲ್ವರು ಕಾಣೆಯಾಗಿದ್ದಾರೆ ಎಂದು ಸರ್ಕಾರಿ ಒಡೆತನದ ಮಾಧ್ಯಮ ಷಿನ್‌ಹುವಾ ವರದಿ ಮಾಡಿದೆ.

ವಾಯವ್ಯ ಚೀನಾದ ಕಿಂಘೈ ಪ್ರಾಂತ್ಯದಲ್ಲಿ ಮುಂಜಾನೆ 3 ಗಂಟೆ ವೇಳೆಗೆ ಸೇತುವೆ ಮುರಿದುಬಿದ್ದಿದೆ. ಈ ವೇಳೆ 16 ಕಾರ್ಮಿಕರು ಸೇತುವೆ ಮೇಲೆ ಇದ್ದರು.

ನಾಪತ್ತೆಯಾದವರು ಪತ್ತೆಗಾಗಿ ದೋಣಿ, ಹೆಲಿಕಾಪ್ಟರ್, ರೋಬೊ ಬಳಸಿ ಶೋಧ ಕಾರ್ಯಾಚರಣೆ ನಡೆಸಲಾಗುತ್ತಿದೆ.

ಸೇತುವೆಯು 1.6 ಕಿ.ಮೀ ಉದ್ದವಿದ್ದು, ನೀರಿನ ಮಟ್ಟದಿಂದ 55 ಮೀಟರ್ ಎತ್ತರದಲ್ಲಿದೆ ಎಂದು ಪತ್ರಿಕೆ ವರದಿ ಮಾಡಿದೆ.

ಶ್ರೀಲಂಕಾ: ತೀವ್ರ ನಿಗಾ ಘಟಕದಲ್ಲಿ ರನಿಲ್



ರನಿಲ್ ವಿಕ್ರಮಸಿಂಘೆ

ಕೊಲಂಬೊ (ಪಿಟಿಐ): ಭ್ರಷ್ಟಾಚಾರ ಆರೋಪದಲ್ಲಿ ಬಂಧನಕ್ಕೆ ಒಳಗಾಗಿರುವ ಶ್ರೀಲಂಕಾದ ಮಾಜಿ ಅಧ್ಯಕ್ಷ ರನಿಲ್ ವಿಕ್ರಮಸಿಂಘೆ (76) ಆರೋಗ್ಯ ಏರುಪೇರಾದ ಕಾರಣ, ಅವರನ್ನು ಕೊಲಂಬೊ ನ್ಯಾಷನಲ್ ಆಸ್ಪತ್ರೆಯ ತೀವ್ರ ನಿಗಾ ಘಟಕದಲ್ಲಿ ದಾಖಲಿಸಲಾಗಿದೆ.

‘ರನಿಲ್ ಅವರು ಅಧಿಕ ರಕ್ತದೊತ್ತಡದಿಂದ ಬಳಲುತ್ತಿದ್ದು, ರಕ್ತದಲ್ಲಿ ಸಕ್ಕರೆಯ ಅಂಶ ಹೆಚ್ಚಾಗಿದೆ. ತೀವ್ರ ನಿರ್ಜಲೀಕರಣದಿಂದಾಗಿ ಅಸ್ವಸ್ಥಗೊಂಡಿದ್ದು, ಅವರ ಆರೋಗ್ಯದ ಮೇಲೆ ನಿಗಾ ಇಡಲಾಗಿದೆ. ಸದ್ಯ ಅವರ ಆರೋಗ್ಯ ಸ್ಥಿರವಾಗಿದೆ’ ಎಂದು ಆಸ್ಪತ್ರೆಯ ಉಪಮಹಾ ನಿರ್ದೇಶಕ ಡಾ.ರುಕ್ಷನ್ ಬೆಲ್ಲನಾ ಹೇಳಿದ್ದಾರೆ.

ತಮ್ಮ ವಿದೇಶ ಪ್ರವಾಸಕ್ಕಾಗಿ ಸರ್ಕಾರದ ಹಣ ದುರ್ಬಳಕೆ ಮಾಡಿಕೊಂಡ ಆರೋಪದಡಿ ಅವರನ್ನು ಬಂಧಿಸಲಾಗಿದೆ.

ರನಿಲ್ ಅವರಿಗೆ ಜಾಮೀನು ನೀಡಲು ನಿರಾಕರಿಸಿದ್ದ ಕೊಲಂಬೊ ಫೋರ್ಟ್ ಮ್ಯಾಜಿಸ್ಟ್ರೇಟ್ ನ್ಯಾಯಾಲಯ, ಅವರಿಗೆ ಆಗಸ್ಟ್ 26ರ ವರೆಗೆ ನ್ಯಾಯಾಂಗ ಬಂಧನ ವಿಧಿಸಿ ಆದೇಶಿಸಿತ್ತು. ಹೀಗಾಗಿ, ಶುಕ್ರವಾರ ಮಧ್ಯರಾತ್ರಿಯೇ ಅವರನ್ನು ಜೈಲಿಗೆ ಕರೆದೊಯ್ಯಲಾಗಿತ್ತು. ನಂತರ, ಆರೋಗ್ಯದಲ್ಲಿ ಏರುಪೇರಾದ ಕಾರಣ, ಆಸ್ಪತ್ರೆಗೆ ದಾಖಲಾಗಿದೆ.

ಭಾರತ- ಅಮೆರಿಕ ವ್ಯಾಪಾರ ಒಪ್ಪಂದ ಮಾತುಕತೆ: ಭಾರತದ ಹಿತ ಕಾಯಲು ಬದ್ಧ

‘ರೈತರ ಹಿತಾಸಕ್ತಿ–ರಾಜಿ ಪ್ರಶ್ನೆಯಿಲ್ಲ’



ಜೈಶಂಕರ್

ನವದೆಹಲಿ (ಪಿಟಿಐ): ದೇಶದ ರೈತರು ಮತ್ತು ಸಣ್ಣ ಉದ್ದಿಮೆದಾರರ ಹಿತಾಸಕ್ತಿ ವಿಚಾರದಲ್ಲಿ ರಾಜಿ ಮಾಡಿಕೊಳ್ಳದೆ, ಅಮೆರಿಕದ ಜತೆ ಮಾತುಕತೆ ನಡೆಸುತ್ತಿದ್ದೇವೆ ಎಂದು ವಿದೇಶಾಂಗ ವ್ಯವಹಾರಗಳ ಸಚಿವ ಎಸ್. ಜೈಶಂಕರ್ ಶನಿವಾರ ತಿಳಿಸಿದರು.

ಭಾರತ ಮತ್ತು ಅಮೆರಿಕ ನಡುವೆ ವ್ಯಾಪಾರ ಒಪ್ಪಂದಕ್ಕೆ ಸಂಬಂಧಿಸಿದಂತೆ ಮಾತುಕತೆಗಳು ನಿರಂತರವಾಗಿ ನಡೆಯುತ್ತಿದ್ದು, ದೇಶದ ಹಿತಾಸಕ್ತಿಯನ್ನು ಕಾಯ್ದುಕೊಳ್ಳಲು ಭಾರತ ಬದ್ಧವಾಗಿದೆ ಎಂದು ಹೇಳಿದರು.

‘ಎಕನಾಮಿಕ್ ಟೈಮ್ಸ್ ವರ್ಲ್ಡ್ ಲೀಡರ್ಸ್ ಫೋರಂ’ನಲ್ಲಿ ಮಾತನಾಡಿದ ಜೈಶಂಕರ್, ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ಜಗತ್ತಿನೊಂದಿಗೆ ಸಾಂಪ್ರದಾಯಿಕ ವಿಧಾನದಲ್ಲಿ ವ್ಯವಹರಿಸುತ್ತಿಲ್ಲ. ಇದರಿಂದ ಭಾರತ ಸೇರಿದಂತೆ ಇಡೀ ಜಗತ್ತು ತೊಂದರೆ ಎದುರಿಸುತ್ತಿದೆ ಎಂದು ತಿಳಿಸಿದರು.

‘ವ್ಯಾಪಾರ ಸಂಬಂಧ ಭಾರತ ಮತ್ತು ಅಮೆರಿಕದ ನಡುವೆ ಮಾತುಕತೆಗಳು ನಡೆಯುತ್ತಿವೆ. ನಮ್ಮ ರೈತರು ಮತ್ತು ಸಣ್ಣ ಉದ್ದಿಮೆದಾರರ ಹಿತ ಕಾಯುವುದು ನಮಗೆ ಮುಖ್ಯವಾಗಿದ್ದು, ಈ ವಿಷಯದಲ್ಲಿ ರಾಜಿಯಾಗುವ ಪ್ರಶ್ನೆಯೇ ಇಲ್ಲ’ ಎಂದು ಅವರು ಹೇಳಿದರು.

ಭಾರತವು ರಷ್ಯಾದಿಂದ ರಿಯಾಯಿತಿ ದರದಲ್ಲಿ ಕಚ್ಚಾ ತೈಲ ಖರೀದಿಸಿ ಲಾಭ ಗಳಿಸುತ್ತಿದೆ ಎಂದು ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಆಡಳಿತ ಮಾಡಿರುವ ಆರೋಪಕ್ಕೆ ಪ್ರತಿಕ್ರಿಯಿಸಿದ ಅವರು, ‘ಇದು ತಮಾಷೆಯಂತೆ ಕಾಣುತ್ತದೆ. ಏಕೆಂದರೆ, ಅಮೆರಿಕ ಹಿತಾಸಕ್ತಿಯೇ ಮುಖ್ಯ ಎಂದು ಹೇಳಿಕೊಳ್ಳುವ ಅಮೆರಿಕದ ಆಡಳಿತವು, ಇತರ ದೇಶದವರಿಗೆ ಹಾಗೆ ಮಾಡಬೇಡಿ ಎನ್ನುವುದು ಎಷ್ಟು ಸರಿ’ ಎಂದು ಅವರು ಪ್ರಶ್ನಿಸಿದರು.

ಆಸಕ್ತಿ ಇಲ್ಲದಿದ್ದರೆ ಖರೀದಿಸಬೇಡಿ: ‘ಭಾರತದಿಂದ ತೈಲ ಅಥವಾ ಸಂಸ್ಕರಿಸಿದ ಉತ್ಪನ್ನಗಳನ್ನು ಖರೀದಿಸಲು ನಿಮಗೆ ಆಸಕ್ತಿ ಇಲ್ಲದಿದ್ದರೆ, ಅದನ್ನು ಖರೀದಿಸಬೇಡಿ. ಖರೀದಿಸುವಂತೆ ಯಾರೂ ನಿಮ್ಮನ್ನೂ ಒತ್ತಾಯಿಸುವುದಿಲ್ಲ. ಆದರೆ ಯುರೋಪ್ ಖರೀದಿಸುತ್ತಿದೆ’ ಎಂದು ಅವರು ಉತ್ತರಿಸಿದರು.

ಭಾರತ ಮತ್ತು ಅಮೆರಿಕ ನಡುವಿನ ಸಂಬಂಧ ಹಳಸುತ್ತಿರುವುದನ್ನು ಗಮನದಲ್ಲಿಟ್ಟುಕೊಂಡು ಚೀನಾದ ಜತೆಗೆ ಭಾರತದ ಸಂಬಂಧ ಸುಧಾರಿಸುತ್ತಿದೆಯಾ ಎಂಬ ಪ್ರಶ್ನೆಗೆ, ‘ಅದು ತಪ್ಪು ವಿಶ್ಲೇಷಣೆ’ ಎಂದು ಅವರು ಪ್ರತಿಕ್ರಿಯಿಸಿದರು.

ಲಾಡೆನ್ ಎಲ್ಲಿ ಪತ್ತೆಯಾದ ಗೊತ್ತಲ್ಲ: ಜೈಶಂಕರ್

‘ಅಮೆರಿಕ ಮತ್ತು ಪಾಕಿಸ್ತಾನವು ಚರಿತ್ರೆಯನ್ನೇ ಮರೆತುಬಿಡುವ ಚಾಳಿ ಹೊಂದಿವೆ. ಅದನ್ನು ನಾವು ಹಿಂದಿನಿಂದ ನೋಡಿಕೊಂಡು ಬಂದಿದ್ದೇವೆ’ ಎಂದು ವಿದೇಶಾಂಗ ವ್ಯವಹಾರಗಳ ಸಚಿವ ಎಸ್. ಜೈಶಂಕರ್ ಟೀಕಿಸಿದರು.

ಅಮೆರಿಕವು ಪಾಕಿಸ್ತಾನದ ಜತೆಗೆ ಸ್ನೇಹವನ್ನು ಹೆಚ್ಚಿಸಿಕೊಂಡಿರುವ ಕುರಿತು ಅವರು ಪ್ರತಿಕ್ರಿಯಿಸಿದರು.

‘ವಿಶ್ವಕ್ಕೆ ಅತ್ಯಂತ ಬೇಕಾದ ಭಯೋತ್ಪಾದಕರಲ್ಲಿ ಒಬ್ಬನಾಗಿದ್ದ ಒಸಾಮಾ ಬಿನ್ ಲಾಡೆನ್ 2011ರಲ್ಲಿ ಪಾಕಿಸ್ತಾನದ ಅಬೋಟಾಬಾದ್ ಸೇನಾ ಪಟ್ಟಣದಲ್ಲಿ ಪತ್ತೆಯಾಗಿದ್ದ ಎಂಬುದನ್ನು ನೆನಪಿಸಬಯಸುತ್ತೇನೆ’ ಎಂದರು.

ಆಪರೇಷನ್ ಸಿಂಧೂರ ವೇಳೆಯಲ್ಲಿ ಭಾರತ ಮತ್ತು ಪಾಕಿಸ್ತಾನದ ನಡುವೆ ಸೇನಾ ಸಂಘರ್ಷ ನಡೆಯುವಾಗ ಅಮೆರಿಕ ಸೇರಿದಂತೆ ಹಲವು ದೇಶಗಳ ನಾಯಕರು ದೂರವಾಣಿ ಕರೆ ಮಾಡಿದ್ದರು. ಸೇನಾ ಸಂಘರ್ಷಗಳು ನಡೆಯುವಾಗ ಸಹಜವಾಗಿಯೇ ಹಲವು ದೇಶಗಳ ನಾಯಕರು ಈ ರೀತಿ ಕರೆಗಳನ್ನು ಮಾಡುತ್ತಾರೆ. ಅದೇ ರೀತಿ ಭಾರತ ಸಹ ರಷ್ಯಾ- ಉಕ್ರೇನ್ ಮತ್ತು ಇಸ್ರೇಲ್- ಇರಾನ್ ಸಂಘರ್ಷದ ಸಂದರ್ಭದಲ್ಲಿ ಆ ದೇಶಗಳ ನಾಯಕರ ಜತೆ ದೂರವಾಣಿ ಮೂಲಕ ಮಾತುಕತೆ ನಡೆಸಿದೆ. ಇದು ಅಂತರರಾಷ್ಟ್ರೀಯ ಸಂಬಂಧದ ಭಾಗ ಎಂದು ಅವರು ಹೇಳಿದರು.

‘ಭಾರತ– ಪಾಕ್ ಸೇನಾ ಸಂಘರ್ಷದ ವೇಳೆ ಅಮೆರಿಕ ನಮ್ಮೊಂದಿಗೆ ಮಾತುಕತೆ ನಡೆಸಿದ್ದರೂ, ಕದನ ವಿರಾಮವನ್ನು ನಿರ್ಧರಿಸಿದ್ದು ನವದೆಹಲಿ ಮತ್ತು ಇಸ್ಲಾಮಾಬಾದ್’ ಎಂದು ಅವರು ಸ್ಪಷ್ಟಪಡಿಸಿದರು.

ಹುಬ್ಬಳ್ಳಿ ಪ್ಲೇಆಫ್‌ಗೆ; ಮೈಸೂರು ಹೊರಕ್ಕೆ

ಮಹಾರಾಜ ಟ್ರೋಫಿ: ಟೈಗರ್ಸ್ ಪರ ಕಾರ್ತಿಕೇಯ ಅಜೇಯ ಅರ್ಧಶತಕ

● ಆರ್. ಜಿತೇಂದ್ರ

ಮೈಸೂರು: ಹುಬ್ಬಳ್ಳಿ ಟೈಗರ್ಸ್‌ಗೆ ಸುಲಭದ ತುತ್ತಾದ ಹಾಲಿ ಚಾಂಪಿಯನ್ ಮೈಸೂರು ವಾರಿಯರ್ಸ್ 'ಮಹಾರಾಜ ಟ್ರೋಫಿ' ಪ್ಲೇಆಫ್ ರೇಸ್‌ನಿಂದ ಹೊರಬಿತ್ತು.

ಇಲ್ಲಿನ ಶ್ರೀಕಂಠದತ್ತ ನರಸಿಂಹರಾಜ ಒಡೆಯರ್ ಕ್ರೀಡಾಂಗಣದಲ್ಲಿ ನಡೆಯುತ್ತಿರುವ ಟಿ20 ಟೂರ್ನಿಯ ಶನಿವಾರದ ಪಂದ್ಯದಲ್ಲಿ ಹುಬ್ಬಳ್ಳಿ ಟೈಗರ್ಸ್ 5 ವಿಕೆಟ್‌ಗಳಿಂದ ಮೈಸೂರನ್ನು ಮಣಿಸುವ ಮೂಲಕ ಪ್ಲೇಆಫ್‌ನಲ್ಲಿ ಸ್ಥಾನ ಭದ್ರಪಡಿಸಿಕೊಂಡಿತು.

130 ರನ್‌ಗಳ ಗುರಿ ಬೆನ್ನುಹತ್ತಿದ ಹುಬ್ಬಳ್ಳಿ ಪರ ನಾಯಕ ದೇವದತ್ತ ಪಡಿಕ್ಕಲ್ 44 ರನ್(19ಎ, 4X5, 6X3) ಹಾಗೂ ಕೆ.ಪಿ. ಕಾರ್ತಿಕೇಯ ಔಟಾಗದೆ 52 ರನ್ (32 ಎ, 4X6, 6X2) ಸಿಡಿಸಿದರು. ಪ್ರಖರ ಕೃಷ್ಣ ಎಸೆದ ಮೊದಲ ಓವರ್‌ನಿಂದಲೇ ಆಕ್ರಮಣಕ್ಕಿಳಿದ ಪಡಿಕ್ಕಲ್, ಮೊಹಮ್ಮದ್ ತಾಹಾ (7) ನಿರ್ಗಮನದ ಬಳಿಕ ಕಾರ್ತಿಕೇಯ ಜೊತೆಗೂಡಿ 35 ರನ್‌ಗಳ (15 ಎಸೆತ) ಉಪಯುಕ್ತ ಜೊತೆಯಾಟ ನೀಡಿದರು. ಅರ್ಧಶತಕದ ಹೊಸ್ತಿಲಲ್ಲಿ ಎಡವಿದ ಅವರು, ಕೆ. ಗೌತಮ್ ಎಸೆತದಲ್ಲಿ ವೆಂಕಟೇಶ್‌ಗೆ ಕ್ಯಾಚಿತ್ತರು. ಕ್ರೀಸ್‌ನಲ್ಲಿ ಬೇರೂರಿದ ಕಾರ್ತಿಕೇಯ ತಂಡವನ್ನು ಗೆಲುವಿನ ದಡ ಸೇರಿಸಿದರು.

ಕಾರ್ತಿಕ್ ಆಸರೆ: ಮೊದಲು ಬ್ಯಾಟ್ ಮಾಡಿದ ಮೈಸೂರು ತಂಡಕ್ಕೆ ಸ್ಥಳೀಯ ಪ್ರತಿಭೆ ಎಸ್.ಯು. ಕಾರ್ತಿಕ್ 53 ರನ್ (36 ಎ, 4X2, 6X5) ಆಸರೆಯಾದರು.

ವಾರಿಯರ್ಸ್‌ಗೆ ಉತ್ತಮ ಆರಂಭ ದೊರೆಯಲಿಲ್ಲ. ಆರಂಭಿಕರಾಗಿ ಬಂದ ನಾಯಕ ಮನೀಷ್ ಪಾಂಡೆ (2) ನಿರಾಸೆ ಮೂಡಿಸಿದರು. ಕಡೆಯಲ್ಲಿ ಹರ್ಷಿಲ್ (20) ಹಾಗೂ ಶರತ್ ಶ್ರೀನಿವಾಸ್ (27) ತಂಡದ ಸ್ಕೋರ್ ಹೆಚ್ಚಿಸಲು ನೆರವಾದರು.

ಹುಬ್ಬಳ್ಳಿ ಜೊತೆಗೆ ಮಂಗಳೂರು ಡ್ರ್ಯಾಗನ್ಸ್, ಬೆಂಗಳೂರು ಬ್ಲಾಸ್ಟರ್ಸ್ ಹಾಗೂ ಗುಲ್ಬರ್ಗ ಮಿಸ್ಟಿಕ್ಸ್ ಸಹ ಪ್ಲೇಆಫ್‌ನಲ್ಲಿ ಸ್ಥಾನ ಖಾತ್ರಿ ಪಡಿಸಿಕೊಂಡಿವೆ. ಆ. 25ರಂದು ಲೀಗ್ ಹಂತದ ಕೊನೆಯ ಪಂದ್ಯಗಳು ನಡೆಯಲಿವೆ.

ಸಂಕ್ಷಿಪ್ತ ಸ್ಕೋರು: ಮೈಸೂರು ವಾರಿಯರ್ಸ್: 20 ಓವರ್‌ಗಳಲ್ಲಿ 8 ವಿಕೆಟ್‌ಗೆ 129 (ಎಸ್.ಯು. ಕಾರ್ತಿಕ್ 53, ಶ್ರೀಶ ಆಚಾರ್ 11ಕ್ಕೆ 3, ಯಶರಾಜ್ ಪೂಂಜ 19ಕ್ಕೆ 2)

ಹುಬ್ಬಳ್ಳಿ ಟೈಗರ್ಸ್: 14.2 ಓವರ್‌ಗಳಲ್ಲಿ 5 ವಿಕೆಟ್‌ಗೆ 132 (ಕೆ.ಪಿ. ಕಾರ್ತಿಕೇಯ ಔಟಾಗದೇ 52, ದೇವದತ್ತ ಪಡಿಕ್ಕಲ್ 44, ಕೆ. ಗೌತಮ್ 21ಕ್ಕೆ 3)

ಪಂದ್ಯದ ಆಟಗಾರ: ಕೆ.ಪಿ. ಕಾರ್ತಿಕೇಯ



ಹುಬ್ಬಳ್ಳಿ ಟೈಗರ್ಸ್ ಪರ ಅಜೇಯ ಅರ್ಧಶತಕ (52) ಸಿಡಿಸಿದ ಕೆ.ಪಿ. ಕಾರ್ತಿಕೇಯ ಬ್ಯಾಟಿಂಗ್ ವೈಖರಿ ಚಿತ್ರ: ಅನೂಪ್ ರಾಘ ಟಿ.

ಮಹಾರಾಜ ಟ್ರೋಫಿ: ಅಂಕ ಪಟ್ಟಿ

ತಂಡ	ಪಂದ್ಯ	ಗೆಲುವು	ಸೋಲು	ಅಂಕ
ಹುಬ್ಬಳ್ಳಿ ಟೈಗರ್ಸ್	9	6	3	12
ಗುಲ್ಬರ್ಗ ಮಿಸ್ಟಿಕ್ಸ್	9	6	3	12
ಮಂಗಳೂರು ಡ್ರ್ಯಾಗನ್ಸ್	8	5	2	11
ಬೆಂಗಳೂರು ಬ್ಲಾಸ್ಟರ್ಸ್	9	5	4	10
ಮೈಸೂರು ವಾರಿಯರ್ಸ್	9	2	5	6
ಶಿವಮೊಗ್ಗ ಲಯನ್ಸ್	8	0	7	1

ಸ್ಮರಣ್ ಅಬ್ಬರ: ಗುಲ್ಬರ್ಗಕ್ಕೆ ಗೆಲುವು

ಮೈಸೂರು: ಆರ್. ಸ್ಮರಣ್ ಅವರ ಅಜೇಯ ಅರ್ಧಶತಕದ (89, 52 ಎ, 4X8, 6X4) ಬಲದಿಂದ ಗುಲ್ಬರ್ಗ ಮಿಸ್ಟಿಕ್ಸ್ ತಂಡವು ಬೆಂಗಳೂರು ಬ್ಲಾಸ್ಟರ್ಸ್ ಅನ್ನು 7 ವಿಕೆಟ್‌ಗಳಿಂದ ಮಣಿಸಿತು.

ಶನಿವಾರ ನಡೆದ ಎರಡನೇ ಪಂದ್ಯದಲ್ಲಿ ಬೆಂಗಳೂರು ನೀಡಿದ 165 ರನ್‌ಗಳ ಸ್ಪರ್ಧಾತ್ಮಕ ಮೊತ್ತ ಬೆನ್ನತ್ತಿದ ಗುಲ್ಬರ್ಗ ಪರ ಸ್ಮರಣ್ ಅವರು ಸ್ಫೋಟಕ ಇನಿಂಗ್ಸ್ ಕಟ್ಟಿದರು. ನಾಲ್ಕನೇ ವಿಕೆಟ್‌ಗೆ ಪ್ರವೀಣ್ ದುಬೆ (29) ಜೊತೆ 51 ರನ್‌ಗಳ ಅಜೇಯ ಜೊತೆಯಾಟದ ಮೂಲಕ ತಂಡವನ್ನು ಗೆಲುವಿನ ದಡ ಸೇರಿಸಿದರು.

ಸಂಕ್ಷಿಪ್ತ ಸ್ಕೋರ್: ಬೆಂಗಳೂರು ಬ್ಲಾಸ್ಟರ್ಸ್: 20 ಓವರ್‌ಗಳಲ್ಲಿ 6 ವಿಕೆಟ್‌ಗೆ 164 (ಸೂರಜ್ ಅಹುಜಾ 54, ಎಸ್. ರೋಹನ್ ಔಟಾಗದೇ 34, ವಿ. ವೈಶಾಖ್ 34ಕ್ಕೆ 3)

ಗುಲ್ಬರ್ಗ ಮಿಸ್ಟಿಕ್ಸ್: 19.2 ಓವರ್‌ಗಳಲ್ಲಿ 3 ವಿಕೆಟ್‌ಗೆ 167 (ಆರ್. ಸ್ಮರಣ್ ಔಟಾಗದೇ 89 ಶುಭಾಂಗ್ ಹೆಗಡೆ 31ಕ್ಕೆ2)

ಪಂದ್ಯದ ಆಟಗಾರ: ಆರ್. ಸ್ಮರಣ್

ರಾಜ್ಯ ಜೂನಿಯರ್, 23 ವರ್ಷದೊಳಗಿನವರ ಅಥ್ಲೆಟಿಕ್ಸ್

ಪ್ರಸನ್ನ, ವೈಷ್ಣವಿ, ಓಂಕಾರ್ ದಾಖಲೆ

ಪ್ರಜಾವಾಣಿ ವಾರ್ತೆ

ಉಡುಪಿ: ಟ್ರ್ಯಾಕ್‌ನಲ್ಲಿ ಮಿಂಚು ಹರಿಸಿದ ಧಾರವಾಡದ ಪ್ರಸನ್ನ ಕುಮಾರ್, ಬೆಳಗಾವಿಯ ವೈಷ್ಣವಿ ಮತ್ತು ಬೆಂಗಳೂರಿನ ಓಂಕಾರ್ ಇಲ್ಲಿ ಶನಿವಾರ ಆರಂಭಗೊಂಡ ರಾಜ್ಯ ಜೂನಿಯರ್ ಮತ್ತು 23 ವರ್ಷದೊಳಗಿನವರ ಅಥ್ಲೆಟಿಕ್ ಕೂಟದಲ್ಲಿ ದಾಖಲೆಯೊಂದಿಗೆ ಚಿನ್ನ ಗೆದ್ದರು.



ಪ್ರಸನ್ನ ಕುಮಾರ್

23 ವರ್ಷದೊಳಗಿನ ಪುರುಷರ 100 ಮೀಟರ್ಸ್ ಓಟದಲ್ಲಿ ಪ್ರಸನ್ನ 10.52 ಸೆಕೆಂಡುಗಳಲ್ಲಿ ಗುರಿ ತಲುಪಿದರು. 2022ರಲ್ಲಿ ಶಶಿಕಾಂತ್ ವಿ.ಎ (10.55) ಬರೆದ ದಾಖಲೆಯನ್ನು ಪ್ರಸನ್ನ ಮುರಿದರು.

20 ವರ್ಷದೊಳಗಿನ ಬಾಲಕಿಯರ 800 ಮೀ. ಓಟದಲ್ಲಿ ವೈಷ್ಣವಿ ರಾವಲ್ 2 ನಿಮಿಷ 12.42 ಸೆಕೆಂಡುಗಳಲ್ಲಿ ಗುರಿ ತಲುಪಿ, 1995ರಲ್ಲಿ ಫೆಮಿ ಥಾಮಸ್ (2:13.8) ಸ್ಥಾಪಿಸಿದ ದಾಖಲೆ ಮುರಿದರು. ಪುರುಷರ 10 ಸಾವಿರ ಮೀ. ಓಟದಲ್ಲಿ ಬೆಂಗಳೂರಿನ ಓಂಕಾರ್ 2023ರಲ್ಲಿ ಶಿವಾಜಿ ಎಂ.ಪಿ ಮಾಡಿದ್ದ ದಾಖಲೆ ಮುರಿದರು. ಓಂಕಾರ್ 29 ನಿಮಿಷ 48.04 ಸೆಕೆಂಡುಗಳಲ್ಲಿ ಅಂತಿಮ ಗೆರೆ ದಾಟಿದರು. ಶಿವಾಜಿ 32ನಿ 17 ಸೆಕೆಂಡುಗಳ ಸಾಧನೆ ಮಾಡಿದ್ದರು.

23 ವರ್ಷದೊಳಗಿನ ಪುರುಷರ ಹೈಜಂಪ್‌ನಲ್ಲಿ 2.08 ಮೀಟರ್ಸ್ ಸಾಧನೆಯೊಂದಿಗೆ ಶಿವಮೊಗ್ಗದ ಸುದೀಪ್ ಕಳೆದ ವರ್ಷ ತಮ್ಮದೇ ಹೆಸರಿನಲ್ಲಿ ಸ್ಥಾಪಿಸಿದ್ದ ದಾಖಲೆ ಉತ್ತಮ ಪಡಿಸಿಕೊಂಡರು. ಆತಿಥೇಯ ಉಡುಪಿ ಜಿಲ್ಲೆಯ 20 ವರ್ಷದೊಳಗಿನ ಬಾಲಕಿಯರ ಡಿಸ್ಕಸ್ ಥ್ರೋದಲ್ಲಿ ಮಾಧುರ್ಯ ಹೊಸ ದಾಖಲೆ ಗುರಿ ಮುಟ್ಟಿಸಿದರು. 43.50 ಮೀ ದೂರ ಎಸೆದ ಅವರು 2014ರಲ್ಲಿ ಪ್ರಿಯಾಂಕಾ ಜಿ.ಎಸ್ (41.93 ಮೀ.) ಮಾಡಿದ್ದ ದಾಖಲೆ ಹಿಂದಿಕ್ಕಿದರು. 20 ವರ್ಷದೊಳಗಿನ ಬಾಲಕರ ಜಾವೆಲಿನ್ ಥ್ರೋದಲ್ಲಿ ಬೆಳಗಾವಿಯ ಕಲ್ಲೋಲೆಪ್ಪ 70.21 ಮೀ. ದೂರ ಎಸೆದು 2023ರಲ್ಲಿ ಶಶಾಂಕ್ ಪಾಟೀಲ (66.82ಮೀ.) ಮಾಡಿದ್ದ ದಾಖಲೆ ಮುರಿದರು.



ವೈಷ್ಣವಿ



ಮಾಧುರ್ಯ

20 ವರ್ಷದೊಳಗಿನ ಬಾಲಕರ 800 ಮೀ. ಓಟದಲ್ಲಿ ದಾಖಲೆ ಸೃಷ್ಟಿಯಾಯಿತು. 1ನಿಮಿಷ 51.83 ಸೆಕೆಂಡುಗಳಲ್ಲಿ ಗುರಿ ತಲುಪಿದ ಬೆಂಗಳೂರಿನ ಕಲ್ಯಾಣ್ ಜಿ.ಆರ್ 2023ರಲ್ಲಿ ಲೋಕೇಶ್ (1:52.45) ನಿರ್ಮಿಸಿದ್ದ ದಾಖಲೆ ಮುರಿದರು. 16 ವರ್ಷದೊಳಗಿನ ಬಾಲಕರ 80 ಮೀ. ಹರ್ಡಲ್ಸ್‌ನಲ್ಲಿ ದಕ್ಷಿಣ ಕನ್ನಡದ ಜ್ಞಾನದೀಪ್ (10.99ಸೆ.) 2023ರಲ್ಲಿ ವೀರೇಶ್ ಪಿ (11.00ಸೆ) ಮಾಡಿದ ದಾಖಲೆ ಮುರಿದರು. 18 ವರ್ಷದೊಳಗಿನ ಬಾಲಕರ 1000 ಮೀ ಓಟದಲ್ಲಿ ಚಿತ್ರದುರ್ಗದ ಪ್ರಥಮ್ ಎಚ್.ಪಿ (2ನಿ. 26.76ಸೆ.) ತಮ್ಮದೇ ದಾಖಲೆ ಉತ್ತಮ ಪಡಿಸಿಕೊಂಡರು. 18 ವರ್ಷದೊಳಗಿನ ಬಾಲಕಿಯರ 1000 ಮೀ. ಓಟದಲ್ಲಿ ದಕ್ಷಿಣ ಕನ್ನಡದ ನಾಗಿಣಿ ನಾಯಕ್ (2ನಿ. 51.52ಸೆ.) ಕಳೆದ ವರ್ಷ ಪ್ರಣತಿ (2ನಿ. 57.0ಸೆ.) ಮಾಡಿದ ದಾಖಲೆ ಮುರಿದರು.

ಡುರಾಂಡ್ ಕಪ್: ನಾರ್ತ್‌ಈಸ್ಟ್‌ಗೆ ಕಿರೀಟ

ಕೋಲ್ಕತ್ತ (ಪಿಟಿಐ): ಪೂರ್ಣ ಪ್ರಾಬಲ್ಯ ಸಾಧಿಸಿದ ನಾರ್ತ್ ಈಸ್ಟ್ ಯುನೈಟೆಡ್ ತಂಡ, 134ನೇ ಡುರಾಂಡ್ ಕಪ್ ಫುಟ್‌ಬಾಲ್ ಟೂರ್ನಿಯ ಫೈನಲ್‌ನಲ್ಲಿ ಡೈಮಂಡ್ ಹಾರ್ಬರ್ ತಂಡವನ್ನು 6–1 ಗೋಲುಗಳಿಂದ ಸೋಲಿಸಿ ಸತತ ಎರಡನೇ ಬಾರಿ ಚಾಂಪಿಯನ್ ಆಗಿ ಮೆರೆದಾಡಿತು.

ವಿವೇಕಾನಂದ ಯುವಭಾರತಿ ಕ್ರೀಡಾಂಗಣದಲ್ಲಿ ಶನಿವಾರ ಹೊನಲು ಬೆಳಕಿನಡಿ ನಾರ್ತ್‌ಈಸ್ಟ್ ತಂಡ ಆಕ್ರಮಣಕಾರಿ ಆಟವಾಡಿತು. ಪದಾರ್ಪಣೆಯಲ್ಲೇ ಪ್ರಬಲ ತಂಡಗಳನ್ನು ಸೋಲಿಸುತ್ತ ಬಂದ ಡೈಮಂಡ್ ಹಾರ್ಬರ್ ತಂಡ ಅಂತಿಮ ಪಂದ್ಯದಲ್ಲಿ ನಿರೀಕ್ಷಿತ ಹೋರಾಟ ತೋರಲಿಲ್ಲ. ವಿರಾಮದ ವೇಳೆಗೆ 'ಹೈಲ್ಯಾಂಡರ್ಸ್' (ನಾರ್ತ್‌ಈಸ್ಟ್) 2–0 ಗೋಲುಗಳಿಂದ ಮುಂದಿತ್ತು.

ಸೆಂಟರ್ ಬ್ಯಾಕ್ ಆಟಗಾರ ಅಶೀರ್ ಅಖ್ತರ್ (30ನೇ ನಿಮಿಷ), ಪಾರ್ಥಿಬ್ ಗೊಗೊಯಿ (45 + 1), ಹುಯಿದೊಮ್ ಥೋಯಿ ಸಿಂಗ್ (50ನೇ ನಿಮಿಷ), ಜೈರೊ (81ನೇ ನಿಮಿಷ), ಆ್ಯಂಡಿ ಗೈತಾನ್ (85ನೇ ನಿಮಿಷ) ಮತ್ತು ಅಜರಾಯೆ (90 + 3) ಅವರು 'ನಾರ್ತ್‌ಈಸ್ಟ್' ತಂಡದ ಗೋಲುಗಳನ್ನು ಗಳಿಸಿದರು. ಹಾರ್ಬರ್ ತಂಡದ ಏಕೈಕ ಗೋಲನ್ನು 68ನೇ ನಿಮಿಷ ಸ್ಲೊವೇನಿಯಾದ ಲುಕಾ ಮೇಯ್ಸನ್ ಗಳಿಸಿದರು.




ಫೈನಲ್ ಗೆಲುವಿನ ನಂತರ ನಾರ್ತ್ ಈಸ್ಟ್ ತಂಡದ ಆಟಗಾರರು ಮುಖ್ಯಕೋಚ್ ಜುವಾನ್ ಪೆಡ್ರೊ ಬೆನಾಲಿ ಅವರನ್ನು ಮೇಲಕ್ಕೆತ್ತಿ ಹರುಷಪಟ್ಟರು

ಕಳೆದ 25 ವರ್ಷಗಳ ಅವಧಿಯಲ್ಲಿ ಸತತವಾಗಿ ಎರಡು ಬಾರಿ ಪ್ರಶಸ್ತಿ ಗೆದ್ದ ಮೊದಲ ತಂಡವೆಂಬ ಹಿರಿಮೆಯೂ ನಾರ್ತ್‌ಈಸ್ಟ್ ತಂಡದ್ದಾಯಿತು. 1896ರ ನಂತರ ಫೈನಲ್‌ನಲ್ಲಿ ಅತಿ ಹೆಚ್ಚು ಅಂತರದ ಗೆಲುವು ಸರಿಗಟ್ಟಿದ ಸಾಧನೆಯೂ ಸಹ ಈ ತಂಡದ ಪಾಲಾಯಿತು. ಆ ವರ್ಷ ಸಾಮರ್ಸೆಟ್ ತಂಡ ಫೈನಲ್‌ನಲ್ಲಿ ಇಷ್ಟೇ ಅಂತರದಿಂದ ಬ್ಲ್ಯಾಕ್‌ವೈಟ್ ತಂಡವನ್ನು ಮಣಿಸಿತ್ತು.

ವೈಯಕ್ತಿಕ ಪ್ರಶಸ್ತಿ: ನಾರ್ತ್ ಈಸ್ಟ್ ತಂಡದಲ್ಲಿರುವ ಮೊರಾಕೊದ ಫಾರ್ವರ್ಡ್ ಅಲಾದ್ದೀನ್ ಅಜರಾಯೆ ಅವರು ಟೂರ್ನಿಯ ಆಟಗಾರನಾಗಿ ಗಮನ ಸೆಳೆದರಲ್ಲದೇ, ಅತಿ ಹೆಚ್ಚು (ಎಂಟು) ಗೋಲು ಗಳಿಸಿದ್ದಕ್ಕೆ ಗೋಲ್ಡನ್ ಬೂಟ್ ಮತ್ತು ಅತ್ಯುತ್ತಮ ಆಟಕ್ಕಾಗಿ ಗೋಲ್ಡನ್ ಬಾಲ್ ಪ್ರಶಸ್ತಿಗಳನ್ನು ಗೆದ್ದುಕೊಂಡರು. ಗೋಲ್ಡನ್ ಗ್ಲೋವ್ ಪ್ರಶಸ್ತಿ ಗೌರವ ಇದೇ ತಂಡದ ಗೋಲ್ ಕೀಪರ್ ಗುರ್ಮೀತ್ ಅವರ ಪಾಲಾಯಿತು.

ಕೇರಳದಲ್ಲಿ ಆಡಲಿದೆ ಅರ್ಜೆಂಟೀನಾ

ಕೊಚ್ಚಿ (ಪಿಟಿಐ): ಕೇರಳದಲ್ಲಿ ಇದೇ ವರ್ಷದ ನವೆಂಬರ್‌ನಲ್ಲಿ ಇನ್ನೂ ಹೆಸರಿಸದ ತಂಡದ ಎದುರು ಫಿಫಾ ಸ್ನೇಹಪರ ಪಂದ್ಯ ಆಡುವುದಾಗಿ ಹಾಲಿ ವಿಶ್ವ ಚಾಂಪಿಯನ್ ಅರ್ಜೆಂಟೀನಾ ತಂಡ ಘೋಷಿಸುವ ಮೂಲಕ ಈ ಬಗ್ಗೆ ಎದ್ದಿದ್ದ ಊಹಾಪೋಹಗಳಿಗೆ ತೆರೆಯೆಳೆಯಿತು.



ಮೆಸ್ಸಿ

ಈ ಪಂದ್ಯ ನವೆಂಬರ್ 10 ರಿಂದ 18ರ ಮಧ್ಯೆ ಒಂದೊ ಕೊಚ್ಚಿ, ಇಲ್ಲವೇ ತಿರುವನಂತಪುರದಲ್ಲಿ ನಡೆಯಲಿದೆ.

'ಲಯೊನೆಲ್ ಸ್ಕಾಲೊನಿ ತರಬೇತಿಯ ಅರ್ಜೆಂಟೀನಾ ರಾಷ್ಟ್ರೀಯ ತಂಡ 2025ರ ಉಳಿದ ಅವಧಿಯಲ್ಲಿ ಎರಡು ಸ್ನೇಹಪರ ಪಂದ್ಯಗಳನ್ನು ಆಡಲಿದೆ. ಮೊದಲನೆಯದು ಅಕ್ಟೋಬರ್ 6 ರಿಂದ 14 ರಂದು ಅಮೆರಿಕದಲ್ಲಿ (ಎದುರಾಳಿ ಮತ್ತು ತಾಣ ಇನ್ನೂ ನಿರ್ಧಾರವಾಗಬೇಕಿದೆ) ಆಡಲಿದೆ' ಎಂದು ಅರ್ಜೆಂಟೀನಾ ಫುಟ್‌ಬಾಲ್ ಸಂಸ್ಥೆ 'ಎಕ್ಸ್'ನಲ್ಲಿ ಬರೆದಿದೆ.

'ಎರಡನೇ ಫಿಫಾ ಸ್ನೇಹಪರ ಪಂದ್ಯಗಳು ನವೆಂಬರ್ 10 ರಿಂದ 18ರ ನಡುವೆ ನಡೆಯಲಿದೆ. ಈ ಪಂದ್ಯಗಳು ಅಂಗೋಲಾದ ಲುವಾಂಡ ಮತ್ತು ಭಾರತದ ಕೊಚ್ಚಿಯಲ್ಲಿ (ಎದುರಾಳಿ ನಿರ್ಧಾರವಾಗಬೇಕಿದೆ) ನಡೆಯಲಿದೆ' ಎಂದೂ ಹೇಳಿಕೆಯಲ್ಲಿ ತಿಳಿಸಿದೆ.

ಸಚಿವರ ಪ್ರತಿಕ್ರಿಯೆ: ಕೇರಳದ ಕ್ರೀಡಾ ಸಚಿವ ವಿ.ಅಬ್ದುರಹಿಮಾನ್ ಅವರೂ ಈ ಬೆಳವಣಿಗೆಯನ್ನು ದೃಢಪಡಿಸಿದರು. ನಾಯಕ ಲಯೊನೆಲ್ ಮೆಸ್ಸಿ ಅವರನ್ನೂ ಒಳಗೊಂಡಂತೆ ಅರ್ಜೆಂಟೀನಾ ತಂಡ ನವೆಂಬರ್‌ನಲ್ಲಿ ಬರಲಿದೆ ಎಂದು ಖಚಿತಪಡಿಸಿದರು.

ಆದರೆ ಅರ್ಜೆಂಟೀನಾ ಫುಟ್‌ಬಾಲ್ ಸಂಸ್ಥೆಯ ಹೇಳಿಕೆಯಲ್ಲಿ, ಕೇರಳದಲ್ಲಿ ನಡೆಯುವ ಪಂದ್ಯದಲ್ಲಿ ಮೆಸ್ಸಿ ಆಡುವರೇ ಅಥವಾ ಇಡೀ ರಾಷ್ಟ್ರೀಯ ತಂಡ ಆಡುವುದೇ ಎಂಬ ಬಗ್ಗೆ ಯಾವುದೇ ಸ್ಪಷ್ಟ ವಿವರ ನೀಡಿಲ್ಲ.

ಸಂಕ್ಷಿಪ್ತ ಸುದ್ದಿ

ಭಾರತ 'ಎ' ತಂಡಕ್ಕೆ ಮುನ್ನಡೆ

ಬ್ರಿಸ್ಬೇನ್ (ಪಿಟಿಐ): ಶಫಾಲಿ ವರ್ಮಾ ಮತ್ತು ರಾಘವಿ ಬಿಷ್ಟ್ ಅವರಿಬ್ಬರ ಉಪಯುಕ್ತ ಅರ್ಧಶತಕಗಳ ಬಲದಿಂದ ಭಾರತ ಎ ತಂಡವು ಆಸ್ಟ್ರೇಲಿಯಾ ಎ ವಿರುದ್ಧದ ಏಕೈಕ 'ಟೆಸ್ಟ್' ಪಂದ್ಯದಲ್ಲಿ ದಿಟ್ಟ ಪ್ರತಿಕ್ರಿಯೆ ನೀಡಿದೆ. ಎಮಿ ಎಡ್ಗರ್ (53ಕ್ಕೆ4) ಅವರ ಚುರುಕಿನ ದಾಳಿಯ ಎದುರಿಸಿದ ಭಾರತ ಎ ತಂಡವು ಪಂದ್ಯದ ಮೂರನೇ ದಿನದಾಟದ ಮುಕ್ತಾಯಕ್ಕೆ 254 ರನ್‌ಗಳ ಮುನ್ನಡೆ ಸಾಧಿಸಿದೆ.

ಕರ್ನಾಟಕ ಬಾಲಕಿಯರ ತಂಡಕ್ಕೆ ಸುಲಭ ಜಯ

ಬೆಂಗಳೂರು: ಕರ್ನಾಟಕ ತಂಡ, ಅಸ್ಸಾಮಿನ ಜೋರ್ಹಟ್‌ನಲ್ಲಿ ನಡೆಯುತ್ತಿರುವ ಸಬ್ ಜೂನಿಯರ್ ಬಾಲಕಿಯರ ರಾಷ್ಟ್ರೀಯ ಫುಟ್‌ಬಾಲ್ ಚಾಂಪಿಯನ್‌ಷಿಪ್‌ನ 'ಡಿ' ಗುಂಪಿನ ಪಂದ್ಯದಲ್ಲಿ ಶನಿವಾರ ಪಂಜಾಬ್ ತಂಡವನ್ನು 6–0 ಗೋಲುಗಳಿಂದ ಸೋಲಿಸಿತು.

ತುಷಾರ್‌ಗೆ ಬೆಳ್ಳಿ

ಬೆಂಗಳೂರು: ಕರ್ನಾಟಕದ ತುಷಾರ್ ಬಿ. ಅವರು ಚೆನ್ನೈನಲ್ಲಿ ನಡೆಯುತ್ತಿರುವ ರಾಷ್ಟ್ರೀಯ ಅಂತರರಾಜ್ಯ ಸೀನಿಯರ್ ಅಥ್ಲೆಟಿಕ್ಸ್ ಚಾಂಪಿಯನ್‌ಷಿಪ್‌ನ ಪುರುಷರ 800ಮೀ. ಓಟದಲ್ಲಿ ಶನಿವಾರ ಬೆಳ್ಳಿ ಪದಕ ಗೆದ್ದುಕೊಂಡರು.

ತುಷಾರ್ ಅವರು 1ನಿ.48.82ಸೆ. ಗಳಲ್ಲಿ ಗುರಿ ಮುಟ್ಟಿದರು. ಹರಿಯಾಣದ ಕೃಷ್ಣಕುಮಾರ್ (1ನಿ.48.41ಸೆ.) ಚಿನ್ನ ಗೆದ್ದರು. ಮಹಿಳೆಯರ ಜಾವೆಲಿನ್ ಥ್ರೋ ಸ್ಪರ್ಧೆಯಲ್ಲಿ ಕರೀಷ್ಮಾ ಎಸ್. ಅವರು 51.30ಮೀ. ಎಸೆಯುವುದರೊಂದಿಗೆ ಕಂಚಿನ ಪದಕ ಜಯಿಸಿದರು. 400 ಮೀ. ಹರ್ಡಲ್ಸ್‌ನಲ್ಲಿ ದೀಕ್ಷಿತಾ ಆರ್. (1ನಿ.0.09ಸೆ.) ಕಂಚಿಗೆ ತೃಪ್ತಿಪಟ್ಟರು.

ಟಿ.ಟಿ: ಆರ್ಣವ್, ಶಿವಾನಿಗೆ ಪ್ರಶಸ್ತಿ

ಹೊಸಪೇಟೆ: ಆರ್ಣವ್.ಎನ್ ಮತ್ತು ಶಿವಾನಿ ಮಹೇಂದ್ರನ್ ಅವರು ಶನಿವಾರ ಇಲ್ಲಿ ನಡೆದ ರಾಜ್ಯ ರ್‍ಯಾಂಕಿಂಗ್ ಟೇಬಲ್ ಟೆನಿಸ್ ಟೂರ್ನಿಯ 17 ವರ್ಷದೊಳಗಿನ ಬಾಲಕ ಮತ್ತು ಬಾಲಕಿಯರ ಸಿಂಗಲ್ಸ್ ಪ್ರಶಸ್ತಿ ಗೆದ್ದುಕೊಂಡರು.

ವಿಜಯನಗರ ಜಿಲ್ಲಾ ಟೇಬಲ್ ಟೆನಿಸ್ ಸಂಸ್ಥೆ ಆಶ್ರಯದಲ್ಲಿ ಇಲ್ಲಿನ ತುಂಗಭದ್ರಾ ಬೋರ್ಡ್ ಸ್ಪೋರ್ಟ್ಸ್ ಸೆಂಟರ್‌ನಲ್ಲಿ ನಡೆದ ಬಾಲಕರ ಫೈನಲ್‌ನಲ್ಲಿ ಆರ್ಣವ್ ಅವರು 11-5, 8-11, 5-11, 11-6, 11-6 ರಿಂದ ಗೌರವ್ ಗೌಡ ಅವರನ್ನು ಸೋಲಿಸಿದರು.

ಸೆಮಿಫೈನಲ್‌ನಲ್ಲಿ ಆರ್ಣವ್ 11-8, 10-12, 11-2, 11-6 ರಿಂದ ಸಿದ್ಧಾರ್ಥ ಎಂ. ವಿರುದ್ಧ; ಗೌರವ್ 12-10, 9-11, 11-5, 11-6 ರಿಂದ ಸಿದ್ಧಾರ್ಥ್ ಧಾರಿವಾಲ್ ವಿರುದ್ಧ ಜಯ ಗಳಿಸಿದ್ದರು.

ಬಾಲಕಿಯರ ಫೈನಲ್‌ನಲ್ಲಿ ಶಿವಾನಿ ಅವರು 12-10, 11-9, 11-8 ರಿಂದ ರಾಶಿ ವಿ.ರಾವ್ ಅವರನ್ನು ಸೋಲಿಸಿದರು.

ಸೆಮಿಫೈನಲ್‌ನಲ್ಲಿ ರಾಶಿ 11-7, 11-3, 11-6 ರಿಂದ ಹಿಯಾ ಸಿಂಗ್ ವಿರುದ್ಧ; ಶಿವಾನಿ 12-10, 12-10, 8-11, 11-6 ರಿಂದ ಕೈರಾ ಬಾಳಿಗಾ ವಿರುದ್ಧ ಜಯ ಗಳಿಸಿದ್ದರು.

ಡ್ರಾ ಪಂದ್ಯಗಳಲ್ಲಿ ಗುಕೇಶ್, ಪ್ರಜ್ಞಾನಂದ

ಸೇಂಟ್‌ಲೂಯಿ (ಅಮೆರಿಕ) (ಪಿಟಿಐ): ಗ್ರ್ಯಾಂಡ್‌ಮಾಸ್ಟರ್ ಆರ್.ಪ್ರಜ್ಞಾನಂದ ಅವರು ಸಿಂಕ್‌ಫೀಲ್ಡ್ ಕಪ್ ಚೆಸ್ ಟೂರ್ನಿಯ ಐದನೇ ಸುತ್ತಿನಲ್ಲಿ ಫ್ರಾನ್ಸ್‌ನ ಮ್ಯಾಕ್ಸಿಂ ವೇಷಿಯರ್ ಲಗ್ರಾವ್ ಜೊತೆ ಸುಲಭ ಡ್ರಾ ಮಾಡಿಕೊಂಡರು. ಆದರೆ ವಿಶ್ವ ಚಾಂಪಿಯನ್ ಡಿ.ಗುಕೇಶ್, ಪೋಲೆಂಡ್‌ನ ಡೂಡಾ ಯಾನ್ ಕ್ರಿಸ್ಟೋಫ್ ವಿರುದ್ಧ ಡ್ರಾ ಮಾಡಿಕೊಳ್ಳುವ ಮೊದಲು ಆತಂಕದ ಕ್ಷಣಗಳನ್ನು ಎದುರಿಸಬೇಕಾಯಿತು.

ಶುಕ್ರವಾರ ಐದನೇ ಸುತ್ತಿನಲ್ಲಿ ಎಲ್ಲಾ ಐದೂ ಪಂದ್ಯಗಳು ಡ್ರಾ ಆದವು. ಒಂಬತ್ತು ಸುತ್ತುಗಳ ಈ ಟೂರ್ನಿಯು ಅರ್ಧದಷ್ಟು ಮುಗಿದಿದ್ದು, ಫ್ಯಾಬಿಯಾನೊ ಕರುವಾನ ಅವರು 3.5 ಪಾಯಿಂಟ್ಸ್ ಸಂಗ್ರಹಿಸಿ ಅಗ್ರಸ್ಥಾನದಲ್ಲಿದ್ದಾರೆ. ಅವರು ಐದನೇ ಸುತ್ತಿನಲ್ಲಿ ಅಮೆರಿಕದ ವೆಸ್ಲಿ ಸೊ ಜೊತೆ ಡ್ರಾ ಮಾಡಿಕೊಂಡರು.

ಪ್ರಜ್ಞಾನಂದ ಮತ್ತು ಲಗ್ರಾವ್ ನಡುವಣ ಪಂದ್ಯ ಕೇವಲ 26 ನಡೆಗಳಲ್ಲಿ ಡ್ರಾ ಆಯಿತು. ಗುಕೇಶ್ ಮತ್ತು ಡೂಡಾ ಪಂದ್ಯ 45 ನಡೆಗಳವರೆಗೆ ನಡೆಯಿತು.

ಅಮೆರಿಕದ ಸಾಮ್ಯುಯೆಲ್ ಸೆವಿಯನ್ ಅವರು ಉಜ್ಬೇಕಿಸ್ತಾನದ ನದಿರ್ಬೆಕ್ ಅಬ್ದುಸತ್ತಾರೋವ್ ಜೊತೆ ಡ್ರಾ ಮಾಡಿಕೊಂಡರು. ಅಮೆರಿಕದ ಇನ್ನೊಬ್ಬ ಆಟಗಾರ ಲೆವೋನ್ ಅರೋನಿಯನ್, ಫ್ರಾನ್ಸ್‌ನ ಅಲಿರೇಜಾ ಫಿರೋಜ ಜೊತೆ ಪಾಯಿಂಟ್ ಹಂಚಿಕೊಂಡರು.

ಹಾಲ್ ಆಫ್ ಫೇಮ್‌ಗೆ ಶರಪೋವಾ

ಬ್ರಯನ್ ಬ್ರದರ್ಸ್ ಜೋಡಿಗೂ ಗೌರವ

ಲಂಡನ್ (ಎಪಿ): ರಷ್ಯಾದ ಮರಿಯಾ ಶರಪೋವಾ ಹಾಗೂ ಅಮೆರಿಕದ ಡಬಲ್ಸ್ ಬ್ರದರ್ಸ್ ಖ್ಯಾತಿಯ ಬಾಬ್ ಮತ್ತು ಮೈಕ್ ಬ್ರಯನ್ ಅವರಿಗೆ ಅವರು ಅಂತರರಾಷ್ಟ್ರೀಯ ಟೆನಿಸ್ ಹಾಲ್ ಆಫ್ ಫೇಮ್ ಗೌರವ ನೀಡಲಾಯಿತು.



ಶರಪೋವಾ

ಈ ಸಂದರ್ಭದಲ್ಲಿ 'ವಾವ್, ಬಹಳಷ್ಟು ತ್ಯಾಗ ಮತ್ತು ಅಪಾರವಾದ ಕಠಿಣ ಪರಿಶ್ರಮ ಇದೆ' ಎಂದು ಶರಪೋವಾ ಶುಕ್ರವಾರ ಸಂತಸ ವ್ಯಕ್ತಪಡಿಸಿದರು.

ಅವರಿಗೆ ಶುಕ್ರವಾರ ರೋಡ್ ಐಲ್ಯಾಂಡ್‌ನ ನ್ಯೂಪೋರ್ಟ್‌ನಲ್ಲಿರುವ ಹಾಲ್ ಆಫ್ ಫೇಮ್ ಗೌರವ ಪಡೆದರು.

ಶರಪೋವಾ 2004ರಲ್ಲಿ ಅವರು ವಿಂಬಲ್ಡನ್ ಫೈನಲ್‌ನಲ್ಲಿ 'ಚಾಂಪಿಯನ್' ಸೆರೆನಾ ವಿಲಿಯಮ್ಸ್ ಅವರನ್ನು ಸೋಲಿಸಿ ಪ್ರಶಸ್ತಿ ಜಯಿಸಿದ್ದರು. ಅದರೊಂದಿಗೆ ಅವರ ತಾರಾವರ್ಚಸ್ಸು ಬೆಳೆಯಲು ಆರಂಭಿಸಿತು. 2006ರಲ್ಲಿ ಅಮೆರಿಕ ಓಪನ್, 2008ರಲ್ಲಿ ಆಸ್ಟ್ರೇಲಿಯನ್ ಓಪನ್, 2012 ಹಾಗೂ 2014ರಲ್ಲಿ ಫ್ರೆಂಚ್ ಓಪನ್ ಪ್ರಶಸ್ತಿ ಗೆದ್ದರು. ಡಬ್ಲ್ಯುಟಿಎ ಸಿಂಗಲ್ಸ್ ರ್‍ಯಾಂಕಿಂಗ್‌ನಲ್ಲಿ ಅಗ್ರಸ್ಥಾನಕ್ಕೇರಿದ ರಷ್ಯಾದ ಮೊದಲ ಆಟಗಾರ್ತಿಯಾದರು.




ಬಾಬ್ ಬ್ರಯನ್



ಮೈಕ್ ಬ್ರಯನ್

2008ರಲ್ಲಿ ಶರಪೋವಾ ಅವರ ನೆರವಿನಿಂದ ರಷ್ಯಾ ತಂಡವು ಬಿಲ್ಲಿ ಜೀನ್ ಕಿಂಗ್ ಕಪ್ ಗೆದ್ದಿತು. 2012ರ ಒಲಿಂಪಿಕ್ಸ್ ಟೆನಿಸ್ ಸಿಂಗಲ್ಸ್‌ನಲ್ಲಿ ಬೆಳ್ಳಿ ಪದಕ ಗಳಿಸಿದರು. ಅವರು ಟೆನಿಸ್ ಲೋಕದ ತಾರಾ ಆಟಗಾರ್ತಿಯಾಗಿ ಹಲವಾರು ಪ್ರತಿಷ್ಠಿತ ಉತ್ಪನ್ನಗಳ ಪ್ರಚಾರ ರಾಯಭಾರಿಯಾದರು. ತಮ್ಮ 15 ವರ್ಷಗಳ ವೃತ್ತಿ ಜೀವನದಲ್ಲಿ ಅವರು ಗಾಯದ ಸಮಸ್ಯೆಯನ್ನೂ ಅನುಭವಿಸಿದರು. ಉದ್ದೀಪನ ಮದ್ದು ಸೇವನೆ ಆರೋಪದಲ್ಲಿ 15 ತಿಂಗಳ ನಿಷೇಧ ಶಿಕ್ಷೆ ಅನುಭವಿಸಿದ್ದರು. 2020ರಲ್ಲಿ ಟೆನಿಸ್‌ಗೆ ವಿದಾಯ ಘೋಷಿಸಿದ್ದರು.

ಅಮೆರಿಕದ ಅವಳಿ ಸಹೋದರರಾದ ಬಾಬ್ ಮತ್ತು ಮೈಕ್ ಬ್ರಯನ್ ಅವರು ಪುರುಷರ ಡಬಲ್ಸ್‌ನಲ್ಲಿ 16 ಗ್ರ್ಯಾನ್‌ಸ್ಲಾಂ ಕಿರೀಟಗಳನ್ನು ಮುಡಿಗೇರಿಸಿಕೊಂಡ ದಾಖಲೆ ಹೊಂದಿದ್ದಾರೆ. ಸತತ 438 ವಾರಗಳವರೆಗೆ ವಿಶ್ವ ರ್‍ಯಾಂಕಿಂಗ್‌ನಲ್ಲಿ ಅಗ್ರಸ್ಥಾನದಲ್ಲಿದ್ದ ಜೋಡಿ ಇದು.



ಭಾರತದ ಅರ್ಜುನ್ ಬಬುತಾ–ಇಳವೆನಿಲ್ ವಳರಿವನ್ ಜೋಡಿ

ಬಬುತಾ–ಇಳವೆನಿಲ್ ಜೋಡಿಗೆ ಚಿನ್ನ

ಶಿಮ್ಕೆಟ್ (ಕಜಾಕಸ್ತಾನ) (ಪಿಟಿಐ): ಭಾರತದ ಅರ್ಜುನ್ ಬಬುತಾ–ಇಳವೆನಿಲ್ ವಳರಿವನ್ ಜೋಡಿಯು ಇಲ್ಲಿ ನಡೆಯುತ್ತಿರುವ 16ನೇ ಏಷ್ಯನ್ ಶೂಟಿಂಗ್ ಚಾಂಪಿಯನ್‌ಷಿಪ್‌ನ 10 ಮೀಟರ್ ಏರ್ ರೈಫಲ್ ಮಿಶ್ರ ತಂಡ ವಿಭಾಗದಲ್ಲಿ ಚಿನ್ನದ ಪದಕ ಗೆದ್ದರು.

ಶನಿವಾರ ನಡೆದ ಫೈನಲ್‌ನಲ್ಲಿ ಭಾರತದ ಜೋಡಿಯು ಚೀನಾದ ಡಿಂಗ್‌ಕೆ ಲು ಮತ್ತು ಶಿನ್‌ಲು ಪೆಂಗ್ ಅವರನ್ನು 17–10ರಿಂದ ಸೋಲಿಸಿತು. ಚೀನಾದ ಜೋಡಿ ಆರಂಭಿಕ ಮುನ್ನಡೆ ಸಾಧಿಸಿತ್ತು. ಬಳಿಕ ಗುರಿಯನ್ನು ಸುಧಾರಿಸಿಕೊಂಡ ಅರ್ಜುನ್–ಇಳವೆನಿಲ್, ಪ್ರಶಸ್ತಿ ಗೆಲ್ಲುವಲ್ಲಿ ಯಶಸ್ವಿಯಾದರು. ಅದರೊಂದಿಗೆ ಈ ಇಬ್ಬರೂ ಶೂಟರ್‌ಗಳು ಟೂರ್ನಿಯಲ್ಲಿ ತಲಾ ಎರಡು ಚಿನ್ನದ ಪದಕ ಗೆದ್ದ ಗೌರವಕ್ಕೆ ಪಾತ್ರರಾದರು.

ಜೂನಿಯರ್ ವಿಭಾಗದ 10 ಮೀಟರ್ ಏರ್ ರೈಫಲ್ ಮಿಶ್ರ ತಂಡ ಸ್ಪರ್ಧೆಯಲ್ಲಿ ಶಾಂಭವಿ ಶ್ರವಣ್ ಹಾಗೂ ನರೇನ್ ಪ್ರಣವ್ ಜೋಡಿಯು ಚಿನ್ನದ ಪದಕಕ್ಕೆ ಗುರಿಯಿಟ್ಟಿತು.

ಅಮೆರಿಕ ಓಪನ್ ಟೆನಿಸ್ ಇಂದಿನಿಂದ

ಸಿನ್ನರ್, ಅಲ್ಕರಾಜ್ ಮೇಲೆ ಕಣ್ಣು

ನ್ಯೂಯಾರ್ಕ್ (ಎಪಿ): ಕೊನೆಯ ಕೆಲವು ಗ್ರ್ಯಾನ್‌ಸ್ಲಾಮ್ ಟೂರ್ನಿಗಳ ಫಲಿತಾಂಶ ಗಮನಿಸಿದರೆ ಅಮೆರಿಕ ಓಪನ್ ಟೂರ್ನಿಯನ್ನು ಪೂರ್ಣವಾಗಿ ನಡೆಸಬೇಕೇ ಎಂಬ ಪ್ರಶ್ನೆ ಏಳುವುದು ಸಹಜ. ಏಕೆಂದರೆ ಫೈನಲ್ ತಲುಪುವವರು ಬಹುತೇಕ ಮೊದಲ ಎರಡು ಕ್ರಮಾಂಕ ಪಡೆದಿರುವ ಯಾನಿಕ್ ಸಿನ್ನರ್ ಮತ್ತು ಕಾರ್ಲೋಸ್ ಅಲ್ಕರಾಜ್ ಅವರೇ.

ವರ್ಷದ ಕೊನೆಯ ಗ್ರ್ಯಾನ್‌ಸ್ಲಾಮ್ ಟೂರ್ನಿಯಾದ ಅಮೆರಿಕ ಓಪನ್ ಭಾನುವಾರ ಫ್ಲಶಿಂಗ್ ಮಿಡೋಸ್‌ನಲ್ಲಿ ಆರಂಭವಾಗಲಿದೆ. ಈ ಬಾರಿಯ ಫೈನಲ್ ಸೆ 7ರಂದು ನಡೆಯಲಿದ್ದು ಇಟಲಿಯ ಸಿನ್ನರ್ ಮತ್ತು ಸ್ಪೇನ್‌ನ ಅಲ್ಕರಾಜ್ ಮುಖಾಮುಖಿಯಾಗುವ ಸಂಭವ ಮೇಲ್ನೋಟಕ್ಕೆ ಉಜ್ವಲವಾಗಿದೆ.

'ನಮಗೂ ಗೊತ್ತಿದೆ. ಪ್ರಸ್ತುತ ಅವರಿಬ್ಬರು ಪ್ರಬಲ ಶಕ್ತಿಯಾಗಿದ್ದಾರೆ' ಎಂದು ಒಪ್ಪಿಕೊಳ್ಳುತ್ತಾರೆ 24 ಗ್ರ್ಯಾನ್‌ಸ್ಲಾಮ್ ಪ್ರಶಸ್ತಿಗಳ ಒಡೆಯ ನೊವಾಕ್ ಜೊಕೊವಿಚ್.

26 ವರ್ಷ ವಯಸ್ಸಿನ ಸಿನ್ನರ್ ಮತ್ತು 33 ವರ್ಷ ವಯಸ್ಸಿನ ಅಲ್ಕರಾಜ್ ಕೊನೆಯ ಏಳು ಗ್ರ್ಯಾನ್‌ಸ್ಲಾಮ್ ಪ್ರಶಸ್ತಿಗಳನ್ನು ಹಂಚಿಕೊಂಡಿದ್ದಾರೆ. ಕೊನೆಯ 12 ಗ್ರ್ಯಾನ್‌ಸ್ಲಾಮ್ ಟೂರ್ನಿಗಳಲ್ಲಿ 9ರಲ್ಲಿ ಸಿನ್ನರ್ ಅಥವಾ ಅಲ್ಕರಾಜ್ ಚಾಂಪಿಯನ್ ಆಗಿದ್ದಾರೆ. ಉಳಿದ ಮೂರು ಜೊಕೊವಿಚ್ ಪಾಲಾಗಿವೆ.



ಯಾನಿಕ್ ಸಿನ್ನರ್

ಐದು ದಿನಗಳ ಹಿಂದೆ ಸಿನ್ಸಿನಾಟಿ ಓಪನ್ ಟೂರ್ನಿಯಲ್ಲೂ ಸಿನ್ನರ್– ಅಲ್ಕರಾಜ್ ಫೈನಲ್ ಪ್ರವೇಶಿಸಿದ್ದರು. ಸಿನ್ನರ್ ಅಸ್ವಸ್ಥರಾಗಿ ಹಿಂದೆಸರಿದಾಗ ಅಲ್ಕರಾಜ್ 5–0 ಮುಂದಿದ್ದರು.

ಮಹಿಳೆಯರ ವಿಭಾಗದಲ್ಲಿ ಇದೇ ಪ್ರಾಬಲ್ಯ ಕಾಣಿಸುತ್ತಿಲ್ಲ. ಕಳೆದ ಐದು ಗ್ರ್ಯಾನ್‌ಸ್ಲಾಮ್ ಟೂರ್ನಿಗಳಲ್ಲಿ ಐದು ಮಂದಿ ಚಾಂಪಿಯನ್ ಆಗಿದ್ದಾರೆ. 2024ರ ವಿಂಬಲ್ಡನ್‌ನಲ್ಲಿ ಬಾರ್ಬರಾ ಕ್ರಾಚಿಕೊವಾ, ಅಮೆರಿಕ ಓಪನ್‌ನಲ್ಲಿ ಅರಿನಾ ಸಬಲೆಂಕಾ, 2025ರ ಆಸ್ಟ್ರೇಲಿಯಾ ಓಪನ್‌ನಲ್ಲಿ ಮ್ಯಾಡಿಸನ್ ಕೀಸ್, ಫ್ರೆಂಚ್ ಓಪನ್‌ನಲ್ಲಿ ಕೊಕೊ ಗಾಫ್, ವಿಂಬಲ್ಡನ್‌ನಲ್ಲಿ ಇಗಾ ಶ್ವಾಂಟೆಕ್ ಚಾಂಪಿಯನ್ ಆಗಿದ್ದಾರೆ.



ಕಾರ್ಲೋಸ್ ಅಲ್ಕರಾಜ್

ಕುದಿಯುವ ದೇಶದಲ್ಲಿ ತಣ್ಣನೆಯ ಸುತ್ತಾಟ

ತನ್ನ ಒಡಲಿನಲ್ಲಿ ಹಲವು ವಿಸ್ಮಯಗಳನ್ನು ಅಡಗಿಸಿಟ್ಟುಕೊಂಡಿರುವ ಅಝರ್‌ಬೈಜಾನ್ ನೆಲದಲ್ಲಿ ಹೆಜ್ಜೆ ಹಾಕುತ್ತಾ... 13



ಬೇಡುವ ಜೋಗತಿಯ ಉದಾತ್ತ ಮನಸು

ಜೋಗತಿ ಪಿ.ರಾಜಮ್ಮ ಅವರು ಸಮಾಜ ಖುಷಿಪಡುವ, ಮೆಚ್ಚುವ ಮತ್ತು ಅನುಕರಿಸುವ ಕೆಲಸವೊಂದನ್ನು ಮಾಡಿದ್ದಾರೆ.



ರಾಜಮ್ಮ ಜೋಗತಿ

• ಹರಿಶಂಕರ್ ಆರ್.

ಅವರು ಶಾಲೆಯ ಅಂಗಳಕ್ಕೆ ಕಾಲಿಟ್ಟರು. ಅಲ್ಲಿ ಆಟವಾಡುತ್ತಿದ್ದ ಮಕ್ಕಳು ಅವರನ್ನು ಗುರುತಿಸಿ ಜೋರಾಗಿ ಚಪ್ಪಾಳೆ ತಟ್ಟುತ್ತಾ, ಮುಗಿಬಿದ್ದು ಕೈಕುಲುಕುತ್ತಾ, ಕೇಕೆ ಹಾಕಿ ಸಂಭ್ರಮಿಸಿದರು. ಹೀಗೆ ಆ ಮಕ್ಕಳು ಮುತ್ತಿಗೆ ಹಾಕಿದ್ದು ಸಿನಿಮಾ ಸೆಲಿಬ್ರಿಟಿಯನ್ನಲ್ಲ, ತಮಗೆ ಸಮವಸ್ತ್ರ, ನೋಟ್‌ಬುಕ್, ಪೆನ್, ಪೆನ್ಸಿಲ್‌ಗಳನ್ನು ಕೊಡಿಸಿದ ಜೋಗತಿ ಪಿ.ರಾಜಮ್ಮ ಅವರನ್ನು!

'ಇವರು ಯಾರು ಗೊತ್ತಾ' ಎಂದು ಕೇಳಿದ ಕೂಡಲೇ 'ನಮಗೆ ಯೂನಿಫಾರಮ್ಮು ಗಿಫ್ಟ್ ಕೊಟ್ಟವರು' ಎಂದು ಒಂದೇ ಸ್ವರದಲ್ಲಿ ಕೂಗಿದರು. ತಾವು ಧರಿಸಿದ್ದ ಸಮವಸ್ತ್ರವನ್ನು ಅವರಿಗೆ ತೋರಿಸಿ ಖುಷಿಪಟ್ಟರು. ತಮ್ಮ ಅಜ್ಜಿಯೇ ಶಾಲೆಗೆ ಬಂದಿದ್ದಾಳೆ ಅನ್ನುವಷ್ಟು ಅಕ್ಕರೆಯಿಂದ ಮಾತನಾಡಿದರು.

ನಾನು ಬಳ್ಳಾರಿ ಜಿಲ್ಲೆಯ ಕಂಪ್ಲಿ ತಾಲ್ಲೂಕಿನ ಸುಗ್ಗೇನಹಳ್ಳಿ ಸರ್ಕಾರಿ ಪ್ರಾಥಮಿಕ ಶಾಲೆಯಲ್ಲಿ ರಾಜಮ್ಮ ಅವರನ್ನು ಭೇಟಿ ಮಾಡಿದಾಗ ಇಂಥ ಅಪರೂಪದ ಸನ್ನಿವೇಶಕ್ಕೆ ಸಾಕ್ಷಿಯಾದೆ.

ಜೋಗತಿ ರಾಜಮ್ಮ ಅವರು ಏಕಾಂಗಿ. ಬೇಡಿ ಬದುವುದೇ ಕಾಯಕ. ನಿತ್ಯಜೀವನಕ್ಕೆ ಖರ್ಚಾಗಿ ಉಳಿದ ಹಣವನ್ನು ಕೂಡಿಟ್ಟರು. ಜೋಪಾನ ಮಾಡಿದ ಈ ಹಣವನ್ನು ಸದುಪಯೋಗ ಮಾಡಬೇಕು ಎನ್ನುವ ಯೋಚನೆ ಮನಸ್ಸಿನಲ್ಲಿ ಮೊಳಕೆಯೊಡೆದಿತ್ತು. ಕಳೆದ ವರ್ಷ ತನ್ನೂರಿನ ಪಕ್ಕದಲ್ಲಿರುವ ಶಾರದಾ ನಗರ ಸರ್ಕಾರಿ ಪ್ರಾಥಮಿಕ ಶಾಲೆ ಮಕ್ಕಳಿಗೆ ಸಮವಸ್ತ್ರ, ನೋಟ್‌ಬುಕ್, ಪೆನ್, ಪೆನ್ಸಿಲ್ ಕೊಡಿಸಿದರು. ಇದಕ್ಕಾಗಿ ₹ 40 ಸಾವಿರ ಖರ್ಚಾಯಿತು. ಈ ವರ್ಷ ಹುಟ್ಟೂರಿನ ಶಾಲೆ ಮಕ್ಕಳಿಗೆ ₹65 ಸಾವಿರ ಖರ್ಚು ಮಾಡಿದ್ದಾರೆ.

'ಭಿಕ್ಷೆ ಬೇಡ್ಬೇಕು. ನನ್ನ ಬದ್ಕು ನಡಿಬೇಕು. ನನ್ನ ಬದ್ಕಿಗೆ ಆಗಿ ಉಳಿದಿದ್ದು ಮಕ್ಕಳಿಗೆ ಕೊಡ್ಬೇಕು ಅನ್ನಿಸ್ತು. ನನ್ನ ಆತ್ಮಕ್ಕೂ ಇಂಥದ್ದೊಂದು ಮಾಡಬೇಕು ಅನಿಸ್ತಿತ್ತು. ಅದಕ್ಕಾ ಬಟ್ಟೆ ಕೊಡುಸುದ್ನ್ಯಾ. ಮಕ್ಕಳೂ ಸಂತೋಷದಿಂದ ಬಟ್ಟೆ ತಗೊಂಡ್ಯಾರ. ನಾನಿರೋವರ್ಗು ಇದನ್ನು ಮಾಡ್ಕೆಂತಾ ಬರ್ತಿನಿ' ಎಂದು ರಾಜಮ್ಮ ಹೇಳಿದರು.



ರಾಜಮ್ಮನ ಜೊತೆಗೆ ಮಕ್ಕಳ ಸಂಭ್ರಮ ಚಿತ್ರಗಳು: ಮುರಳಿಕಾಂತ ರಾವ್

ಕೂಡಿಟ್ಟ ಹಣವನ್ನು ಹೀಗೆ ಖರ್ಚು ಮಾಡದಂತೆ, ಮುಪ್ಪಿನ ಕಾಲಕ್ಕೆ ಬಳಸಿಕೊಳ್ಳುವಂತೆಯೂ ಹಲವರು ಇವರಿಗೆ ಕಿವಿಮಾತು ಹೇಳಿದ್ದಾರೆ. ಕೆಲವರು 'ಇಷ್ಟು ಹಣ ಎಲ್ಲಿಂದ ಬಂತು?' ಎಂದು ಅನುಮಾನದಿಂದಲೇ ಕೇಳಿದ್ದಾರೆ. ಆದರೆ, ಅದ್ಯಾವುದನ್ನೂ ಇವರು ತಲೆಗೇ ಹಾಕಿಕೊಂಡಿಲ್ಲ. 'ಜನ ಏನಾದರೂ ಹೇಳಲಿ, ಮನಸ್ಸಿಗೆ ಸಮಾಧಾನ ಎನಿಸಿದ್ದನ್ನು ಮಾಡುತ್ತಿರುತ್ತೇನೆ' ಎಂದು ದೃಢವಾಗಿ ಹೇಳಿದರು.

ಮುಖ್ಯಮಂತ್ರಿಯ ಶ್ಲಾಘನೆ

'ಪಿ.ರಾಜಮ್ಮ ಅವರ ಸಾಮಾಜಿಕ ಕಳಕಳಿ ಅನನ್ಯವಾದುದು. ಲಿಂಗತ್ವ ಅಲ್ಪಸಂಖ್ಯಾತರು ಎದುರಿಸುವ ಸವಾಲುಗಳು ಮತ್ತು ಹೋರಾಟದ ಬದುಕಿನ ನಡುವೆಯೂ ಅವರು ಮಾಡಿರುವ ಸಮಾಜ ಸೇವೆ ಆದರ್ಶಪ್ರಾಯವಾಗಿದೆ. ಮಕ್ಕಳ ವಿದ್ಯಾಭ್ಯಾಸಕ್ಕೆ ಅನುಕೂಲವಾಗುವಂತೆ ಸಮವಸ್ತ್ರ, ಬಟ್ಟೆ, ಪುಸ್ತಕ ಹಾಗೂ ಲೇಖನ ಸಾಮಗ್ರಿಗಳನ್ನು ನೀಡುತ್ತಿರುವ ಉದಾತ್ತ ಚಿಂತನೆ ಶ್ಲಾಘನೀಯ. ಸಮಾಜದಲ್ಲಿ ಸಕಾರಾತ್ಮಕ ಬದಲಾವಣೆಯನ್ನು ತರುವ ರಾಜಮ್ಮ ಅವರ ನಿಸ್ವಾರ್ಥ ಸೇವೆ ಸಮಾಜಕ್ಕೆ ಮಾದರಿಯಾಗಿದೆ. ರಾಜಮ್ಮನವರ ಸಮಾಜಮುಖಿ ಕಾರ್ಯಕ್ಕೆ ಅಭಿನಂದನೆ' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಪತ್ರದಲ್ಲಿ ಬರೆದಿದ್ದಾರೆ.

'ಹುಟ್ಟಿದಾಗ ನನಗ ಆರೋಗ್ಯ ಇದ್ದಿಲ್ಲಂತ ಅಪ್ಪ–ಅವ್ವ ಬಾಳ ಖರ್ಚು ಮಾಡ್ಯಾರ. ಹೊಲ, ಭೂಮಿ ಮಾರ್ಯಾರ. ಕೂಲಿ ಕೆಲಸ ಮಾಡಿ ಬದುಕ್ತಿದ್ದ ಅವರು ನನ್ನ ಸಾಲಿಗೇ ಕಳ್ಸಿಲ್ಲ. ನನ್ನೂರಿನ ಮಕ್ಕಳಾದರೂ ಸಾಲಿಲಿ ಚೆನ್ನಾಗಿ ಕಲಿಲೀ ಅಂತ ಬಟ್ಟೆ ಕೊಡುಸುದ್ನ್ಯಾ...' ಎಂದು ಮುಗ್ಧವಾಗಿಯೇ ಹೇಳಿದರು.

12ನೇ ಪುಟಕ್ಕೆ...



ಬದಲಾದ ಹೆಜ್ಜೆ ಗುರುತುಗಳು...

• ರಶ್ಮಿ ಎಸ್

ಆಲಾರೆ... ಆಲಾ... ಗಣಪತಿ ಆಲಾ
ಏಕ್ ದೊ ತೀನ್ ಚಾರ್
ಗಣಪತಿ ಕಾ ಜೈಜೈಕಾರ್

ಹೀಗೆ ಜೋರು ಧ್ವನಿಯಲ್ಲಿ ಜಯಘೋಷ ಕೇಳುತ್ತಿದ್ದರೆ; ಜೊತೆಗೆ ಜಾಗಟೆ, ಗಂಟೆಯ ಸದ್ದೂನು ಕೇಳುತ್ತಿದ್ದರೆ ಬೀದರ್, ಕಲಬುರಗಿಯಲ್ಲಿ ಮನೆಮಂದಿಯೆಲ್ಲ ಬಾಗಿಲಿಗೆ ಬಂದು ನಿಲ್ಲುತ್ತಾರೆ. ಯಾರ ಮನೆಗೆ ಎಂಥ ಗಣಪತಿ ಹೊರಟಿದೆ ಎಂದು ನೋಡುವ ಉತ್ಸಾಹ. ತೆಗೆದುಕೊಂಡು ಹೋಗುವವರೂ ಅದೇ ಉತ್ಸಾಹದಲ್ಲಿ ಬಿಳಿ ಮತ್ತು ಕಾವಿ ಪಂಚೆ ತೊಟ್ಟು, ಶಲ್ಯ ಹೊದ್ದು, ಮಣೆ ಮೇಲೆ ಗಣಪನನ್ನು ಕೂರಿಸಿ, ಹೊತ್ತು ತರುತ್ತಾರೆ. ಮನೆ ಮಗಳು, ಕಳಸ ಹೊತ್ತಿದ್ದರೆ, ಗಂಡು ಮಕ್ಕಳು ಗಂಟೆ, ಜಾಗಟೆ, ಚಳ್ಳಂಗಳನ್ನು ಬಾರಿಸುತ್ತ, ಘೋಷಣೆ ಕೂಗುತ್ತಾರೆ. ಚುಲ್ಬಾರಿಗಳಿದ್ದರೆ ಹಾದಿಗುಂಟ ಹೂ ಹಾರಿಸುತ್ತ ಬರುತ್ತಾರೆ. ಗಣಪನನ್ನು ಮನೆಗೆ ಕರೆತರುವುದೇ ಸಂಭ್ರಮ. ಗುಲಾಲು ಎರಚುತ್ತ, ಆ ಬಣ್ಣದಲ್ಲಿ ಮಿಂದೇಳುತ್ತ ಬರುವುದೇ ದೊಡ್ಡ ಸಂಭ್ರಮ.

ಈಗ ಕಾರೊಳಗೆ ಗಣಪನ ಭಜನೆಗಳನ್ನು ಹಚ್ಚಿಟ್ಟುಕೊಂಡು, ಮುಂದಿನ ಸೀಟಿನ ಮೇಲೆ ಒಂದು ಅಂಗವಸ್ತ್ರ ಹಾಸಿ ಅದರ ಮೇಲೆ ಕುಳಿತು, ತಮ್ಮ ತೊಡೆಯ ಮೇಲೂ ಹೊಸದೊಂದು ವಸ್ತ್ರ ಹಾಕಿಕೊಂಡು, ಗಣಪನನ್ನು ಎತ್ತಿಕೊಂಡು ಬರುತ್ತಾರೆ.

ಮೊದಲಿನಂತೆ ಎಲ್ಲೋ ಒಂದೆರಡು ಕುಟುಂಬಗಳು, ಕೆಸರಿರುವ, ಮಣ್ಣಿನ ರಸ್ತೆಯಲ್ಲಿ ಗಿಜಿಬಿಜಿ ಗಿಜಿಬಿಜಿಲಿ ಬರಿಗಾಲಲ್ಲಿ ಹೆಜ್ಜೆ ಇಡ್ತಾ, ಕೆಸರು ಸಿಡಿಸಿಕೊಳ್ಳುತ್ತ ಗಣಪನನ್ನು ಕರೆತರುವ ರೂಢಿ ಬೀದರ್, ಕಲಬುರಗಿ ಜಿಲ್ಲೆಗಳಲ್ಲಿದೆ. ಕೆಲವರು ಹೈಬ್ರೀಡ್ ವ್ರತಾಚರಣೆಯಂತೆ, ಮನೆಯ ಓಣಿ ಬರುವವರೆಗೂ ಕಾರಲ್ಲಿಯೋ, ಗಾಡಿ ಮೇಲೆಯೋ ಬರುತ್ತಾರೆ. ನಂತರ ಬರಿಗಾಲಲ್ಲಿ ನಡೆದುಕೊಂಡು ಮನೆವರೆಗೂ ಮೆರವಣಿಗೆಯಲ್ಲಿ ತರುತ್ತಾರೆ. ಹೀಗೆ ತರುವಾಗ 'ಆಲಾರೆ ಆಲಾ ಗಣಪತಿ ಆಲಾ.. ಗಣಪತಿ ಬಪ್ಪಾ ಮೋರಯಾ..' ಅಂತ್ಹೇಳ್ತಾರೆ.

ಬೀದರಿನಲ್ಲಿ ಐದು ದಿನಗಳ ಆಚರಣೆ. ಕಲಬುರಗಿಯಲ್ಲಿ ಅವರವರ ಸಾಮರ್ಥ್ಯಕ್ಕೆ ತಕ್ಕಂತೆ. ಹುಬ್ಬಳ್ಳಿಯಲ್ಲಿ ಒಂಬತ್ತು ದಿನ, ಬೆಳಗಾವಿಯಲ್ಲಿ ಹನ್ನೊಂದು ದಿನ. ಮುಂಬೈನಲ್ಲಿ 21 ದಿನ. ಒಂದೊಂದು ಕಡೆ ಹಬ್ಬ ಮುಗಿಸಿದವರೂ ಉಳಿದ ಕಡೆ ಗಣೇಶನನ್ನು ನೋಡಲು ಹೊರಡುತ್ತಾರೆ.

ಒಂದ್ಸೈದಾದರೂ ಗಣೇಶ ಮಂಡಲಗಳ ಗಣಪತಿ ದರ್ಶನ ಮಾಡಬೇಕು. ಗಣಪನ ಮುಂದೆ ಐದ್ಸೈದು ಬಸ್ಕಿಯಾದರೂ ಹಾಕಬೇಕು ಎಂಬುದು ನಿಯಮ. ಪ್ರತಿ ಗಣಪನ ಮುಂದೆ ಬಸ್ಕಿ ಹಾಕುವಾಗಲೂ ಕೆಲವರು ಸವಾಲು ಹಾಕಿ, 11ರಿಂದ 51ರವರೆಗೂ ಹೋಗುತ್ತಿತ್ತು. ಕೆಲ ಪಲ್ವಾನರು 111 ಬಸ್ಕಿ ಹಾಕಿ ಸೈ ಅನಿಸಿಕೊಳ್ಳುತ್ತಿದ್ದರು.

ರಾಜಾ... ರಾಜಾ...

ಹುಬ್ಬಳ್ಳಿ ಕಾ ರಾಜಾ, ಬೆಳಗಾವಿ ಕಾ ರಾಜಾ, ಬೀದರ್ ಕಾ ರಾಜಾ.. ಹುಬ್ಬಳ್ಳಿ ಕಾ ರಾಜಾ, ಬೆಳಗಾವಿ ಕಾ ರಾಜಾ, ಬೀದರ್ ಕಾ ರಾಜಾ.. ರಾಜಾ ಹೆಸರಿನ ಗಣೇಶ ಬರಲು ಕಾರಣ ಮುಂಬೈನ ನವಸಾಲ ಪವಣಾರ ವಿಶ್ವಾಚಾ ರಾಜಾ ಹೆಸರಿನ ಗಣೇಶ. ಜಿಎಸ್‌ಬಿ ಸಮಾಜದ ಈ ಗಣಪತಿಗೆ ನಿಜವಾದ ಚಿನ್ನ, ಬೆಳ್ಳಿ ಆಭರಣದಿಂದಲೇ ಅಲಂಕರಿಸುತ್ತಾರೆ. ಪ್ರತಿ ವರ್ಷವೂ ಒಂದೊಂದು ಕಾರಣಕ್ಕೆ ದಾಖಲೆ ಸೃಷ್ಟಿಸುವ ಖ್ಯಾತಿ ಈ ರಾಜಾ ಗಣೇಶನದ್ದು. ಈ ವರ್ಷ ₹ 474.46 ಕೋಟಿ ಮೌಲ್ಯದ ವಿಮೆ ಮಾಡಿಸಿ, ತನ್ನದೇ ಸುಮಾರು ₹ 400 ಕೋಟಿ ಮೌಲ್ಯದ ವಿಮೆಯ ದಾಖಲೆಯನ್ನು ಮುರಿದಿದೆ. ಆಭರಣ, ಪೆಂಡಾಲ್, ಪಾರ್ಕಿಂಗ್ ಮತ್ತು ಸುತ್ತಲಿನ ಮಳಿಗೆಗಳೂ ಸೇರಿದಂತೆ ಹನ್ನೊಂದು ದಿನಗಳು ಅಡುಗೆ ಮಾಡುವ, ಸ್ವಯಂ ಸೇವಕರಿಗೂ ವಿಮೆ ಮಾಡಿಸುತ್ತದೆ. ಈ ರಾಜಾನ 24 ಗಂಟೆ ನಿರಂತರವಾಗಿ ಋಗ್ವೇದದ ಪ್ರಕಾರ ಪೂಜೆ ನೆರವೇರಿಸಲಾಗುತ್ತದೆ. ಈ ರಾಜಾನ ಖ್ಯಾತಿಯಿಂದಾಗಿಯೇ ನಮ್ಮಲ್ಲಿಯೂ ರಾಜಾ ಗಣೇಶ ಮಂಡಳಿಗಳು ಜನಪ್ರಿಯವಾದವು.



ಈ ಐದು ದಿನಗಳಲ್ಲಿ ಮೊದಲ ದಿನದ ಮಧ್ಯಾಹ್ನದವರೆಗೂ ಪ್ರತಿಷ್ಠಾಪನೆ, ಪೂಜೆಗಳದ್ದೇ ಮೇಲುಗೈ. ಅಂದು ಓಣಿಯ ಮಹಿಳೆಯರಿಗೆ ರಂಗೋಲಿ ಸ್ಪರ್ಧೆ ಮಾತ್ರ ಮಾಡುವರು. ಬಪ್ಪಾ ಬರುವಾಗ ರಂಗೋಲಿಯ ಸ್ವಾಗತ ಇರಲಿ ಎಂಬ ಸ್ವಾರ್ಥವೂ ಇರುತ್ತಿತ್ತು. ಎರಡನೆಯ ದಿನ ಓಣಿಯ ಮಕ್ಕಳ ಪ್ರತಿಭಾ ಪ್ರದರ್ಶನ. ಹಾಡು, ಡಾನ್ಸು, ಸಣ್ಣ ಪ್ರಹಸನಗಳು, ಮಕ್ಕಳು ವಚನ, ಜೋಕು ಏನೇ ಹೇಳುವಂತಿದ್ದರೂ ಅವರಿಗೆ ವೇದಿಕೆ ಸಿಗುತ್ತಿತ್ತು. ಹಿರಿಯರೆಲ್ಲ ಕುರ್ಚಿ ಮೇಲೆ ಕುಳಿತರೆ ಮಕ್ಕಳೆಲ್ಲ ಚಾಪೆ ಹಾಸಿ, ಕೂರಬೇಕಿತ್ತು. ಒಂದೊಂದು ಮಗುವಿಗೂ ಪ್ರೋತ್ಸಾಹಕರ ಧನವಾಗಿ ಒಂದು ರೂಪಾಯಿಯಿಂದ ಹತ್ತು ರೂಪಾಯಿವರೆಗೂ ಆಯೇರಿ ಮಾಡುತ್ತಿದ್ದರು. ಹಣ ಪಡೆದ ಮಗುವಿನ ಮುಖ ಮೊರದಗಲವಾಗಿ, ಕಿವಿಯಿಂದ ಕಿವಿವರೆಗೂ ನಕ್ಕೊಂಡು ವೇದಿಕೆ ಇಳಿಯುತ್ತಿತ್ತು.

ಮೂರನೆಯ ದಿನ ಹೊರ ಊರುಗಳಿಂದ ಆರ್ಕೆಸ್ಟ್ರಾ ಕರೆಸುತ್ತಿದ್ದರು. ಇದರಲ್ಲಿಯೂ ಕೆಲವು ಗಣೇಶ ಮಂಡಳಿಗಳು ಒಪ್ಪಂದ ಮಾಡಿಕೊಂಡು, ಒಂದೇ ತಂಡವನ್ನು ಕರೆಯಿಸಿ, ಎರಡು ಮೂರನೆಯ ದಿನಗಳಿಗೆ ತಮ್ಮ ಕಾರ್ಯಕ್ರಮಗಳನ್ನು ಅದಲಿ ಬದಲಿ ಮಾಡಿಕೊಳ್ಳುತ್ತಿದ್ದರು. ಊರ ಜನರೂ ಒಂದೆಡೆ ಹೋಗಲಾಗದಿದ್ದಲ್ಲಿ ಇನ್ನೊಂದು ಕಡೆಯಾದರೂ ಹೋಗಿ ಆ ಹಾಡುಗಳನ್ನು, ರಸಮಂಜರಿಯನ್ನು ಆಸ್ವಾದಿಸುತ್ತಿದ್ದರು. ನಾಲ್ಕನೆಯ ದಿನ ನಾಟಕ, ನೃತ್ಯಗಳಿಗೆ ಮೀಸಲು. ಐದನೆಯ ದಿನ ವಿಸರ್ಜನೆಯ ಮೆರವಣಿಗೆ.

ಕೋಲಾಟ, ಲೇಜಿಂ, ತಲ್ವಾರ್‌ಬಾಜಿ (ಖಡ್ಗ ಝಳಪಿಸುತ್ತ ನರ್ತಿಸುವವರ ತಂಡ), ಡೊಳ್ಳು, ಡಂಬಲ್ಸ್, ಮುಂತಾದ ತಂಡಗಳೆಲ್ಲ ತಮ್ಮ ಪ್ರದರ್ಶನವನ್ನು ಒಂದೊಂದು ಗಣೇಶ ಮಂಡಳಿಯ ಮುಂದೆಯೂ ಮಾಡುತ್ತ ಹೋಗುತ್ತಿದ್ದವು.

ಬೀದರಿನ ನೇವಿ ಗಣೇಶ ಮಂಡಳಿ, ಶಿವಸೇನಾ ಮತ್ತು ಕ್ರಾಂತಿ ಗಣೇಶ ಮಂಡಳಿ ಜೊತೆಗೆ ಗ್ರಂಥಾಲಯದ್ದು ಬಲು ಖ್ಯಾತಿ ಪಡೆದಿದ್ದವು. ಪಾಠಕ್ ಗಲ್ಲಿಯ (ದರ್ಜಿ ಗಲ್ಲಿ) ಗಣೇಶನಂತೂ ಅಲಂಕಾರದಲ್ಲಿ ಸದಾ ದೊಡ್ಡ ದೊಡ್ಡ ಮಂಡಳಿಗಳೊಂದಿಗೆ ಸೆಡ್ಡು ಹೊಡೆಯುತಿತ್ತು. ಇದೀಗ ನೇವಿ ಮತ್ತು ಶಿವಸೇನಾ ಮಂಡಳಿಗಳು ನೇಪಥ್ಯಕ್ಕೆ ಸರಿದಿವೆ. ಬೀದರ್ ಕಾ ರಾಜಾ ಎನ್ನುವುದು ಖ್ಯಾತಿ ಪಡೆಯುತ್ತಿದೆ.

ಬಾಲಗಂಗಾಧರ ತಿಲಕರು ಸಾಮೂಹಿಕ ಗಣೇಶ ಪ್ರತಿಷ್ಠಾಪನೆಗೆ ಕರೆ ಕೊಟ್ಟ ಮೇಲೆ, ಇಲ್ಲಿಯ ಕೆಲವು ಗಣೇಶ ಮಂಡಳಿಗಳು ತಿಲಕರ ಚಿತ್ರವನ್ನೂ ಜೊತೆಗಿರಿಸಿ ಪೂಜೆ ಮಾಡುತ್ತವೆ. ರಾಷ್ಟ್ರೀಯತೆ ಮತ್ತು ಬಹುತ್ವಕ್ಕೆ ಹೇಳಿ ಮಾಡಿಸಿದ ಮಂಡಳಿಗಳಿವು ಎಂಬಂತೆ ಒಂದೆರಡು ದಶಕಗಳ ಮೊದಲು ಆಚರಣೆ ನಡೆಯುತ್ತಿತ್ತು. ಬೆಳಗ್ಗೆ ಕಬೀರರ ದೋಹೆ, ಮೀರಾ ದೋಹೆಗಳಿರುವ ಭಜನೆಗಳು, ಕನ್ನಡದ ಗಣಪತಿ ಸ್ತೋತ್ರಗಳು, ಹಾಡುಗಳು ಕೇಳಿಬರುತ್ತಿದ್ದರೆ ಮಧ್ಯಾಹ್ನ ಮತ್ತು ಸಂಜೆಗೆಲ್ಲ ದೇಶಭಕ್ತಿ ಮತ್ತು ದೇಶಪ್ರೀತಿಯ ಗೀತೆಗಳನ್ನು ಪ್ರಸಾರ ಮಾಡುತ್ತಿದ್ದರು. ಬೀದರಿನಲ್ಲಿ 'ಮೇರೆ ದೇಶ್ ಕೆ ಧರ್ತಿ..' ಹಾಡಿಗೆ ಹೆಜ್ಜೆ ಹಾಕದ ಯುವಕರಿಲ್ಲ. 'ನನ್ಹಾ ಮುನ್ನಾ ರಾಹಿ ಹೂಂ' ಹಾಡಿಗೆ ಕೈ ಕಾಲಾಡಿಸದ ಮಕ್ಕಳಿಲ್ಲ. ಆ ಜಮಾನಾ ಹಾಗಿತ್ತು. ಆಚರಣೆಗಳಲ್ಲಿ ಭಕ್ತಿ, ಪ್ರೀತಿ ಪರಸ್ಪರ ಗೌರವ ಎಲ್ಲವೂ ಗುಲಾಲಿನ ಬಣ್ಣದಲ್ಲಿ ಒಂದಾಗುತ್ತಿತ್ತು.

ಈಗ ಹಲವಾರು ಏನು ಬಂತು, ಓಣಿಗೊಂದು ಗಣೇಶ ಮಂಡಳಿ. ಪ್ರತಿ ಮಂಡಳಿಯ ಹಾಡೂ ಇನ್ನೊಂದು ಮಂಡಳಿಗೆ ಕೇಳುವಷ್ಟು ಜೋರು.

11ನೇ ಪುಟಕ್ಕೆ...



ಗಣೇಶ ಮಂಡಳಿಗಳು

ಬೀದರ್ ಗಣೇಶ ಮಹಾಮಂಡಳ ನಾಲ್ಕು ದಶಕಗಳಿಗಿಂತಲೂ ಹೆಚ್ಚು ಚಾಲ್ತಿಯಲ್ಲಿದೆ. ಸಾರ್ವಜನಿಕ ಗಣೇಶ ಕೂರಿಸಲು ಆಸಕ್ತಿ ಇರುವವರು ತಮ್ಮ ತಮ್ಮ ಮಂಡಳಿಗಳ ಹೆಸರು, ಓಣಿಯನ್ನು ಈ ಮಹಾ ಗಣೇಶ ಮಂಡಳಿಯಲ್ಲಿ ಹೆಸರು ನೊಂದಾಯಿಸಬೇಕು. ಐದು ದಿನಗಳ ಕಾರ್ಯಕ್ರಮ ವಿವರವನ್ನೂ ನೀಡಬೇಕು.

ಗಣಪ ಸೌಹಾರ್ದ ಸಂಭ್ರಮ...



ಕೊಪ್ಪಳದಲ್ಲಿ ಕಳೆದ ವರ್ಷ ಸೆಪ್ಟೆಂಬರ್‌ನಲ್ಲಿ ಹಿಂದೂ–ಮುಸ್ಲಿಮರು ಗಣೇಶ ಮೂರ್ತಿ ಎದುರು ಈದ್ ಮಿಲಾದ್ ಹಬ್ಬದ ಶುಭಾಶಯ ವಿನಿಮಯ ಮಾಡಿಕೊಂಡರು (ಸಂಗ್ರಹ ಚಿತ್ರ)

• ರಾಹುಲ ಬೆಳಗಲಿ

ಜೀವನಶೈಲಿ, ಆಹಾರ ಪದ್ಧತಿ, ಧಾರ್ಮಿಕ ಆಚರಣೆ, ಉಡುಗೆ–ತೊಡುಗೆ, ಜಾತಿ, ಧರ್ಮ ಸೇರಿ ಎಲ್ಲವೂ ಭಿನ್ನ. ಆದರೆ, ಗಣೇಶೋತ್ಸವ ಸಮೀಪಿಸುತ್ತಿದ್ದಂತೆಯೇ, ಎಲ್ಲವೂ ಒಂದೊಂದಾಗಿ ಮೇಳೈಸುತ್ತವೆ. ಗಣೇಶ ಮೂರ್ತಿಯ ಮೆರವಣಿಗೆ, ಪ್ರತಿಷ್ಠಾಪನೆ, ಪೂಜೆಯಿಂದ ಆರಂಭಿಸಿ ವಿಸರ್ಜನೆಯವರೆಗೆ ಪ್ರತಿಯೊಬ್ಬರೂ ಜವಾಬ್ದಾರಿ ವಹಿಸಿಕೊಳ್ಳುತ್ತಾರೆ. 'ಇದು ಬರೀ ಹಿಂದೂಗಳದ್ದಲ್ಲ, ನಮ್ಮ ಹಬ್ಬ ಕೂಡ' ಎಂಬಂತೆ ಮುಸ್ಲಿಮರು, ಕ್ರಿಶ್ಚಿಯನ್ನರೂ ಪಾಲ್ಗೊಳ್ಳುತ್ತಾರೆ.

ಗಣೇಶೋತ್ಸವ ಒಂದು ಜಾತಿ ಅಥವಾ ಧರ್ಮಕ್ಕೆ ಸೀಮಿತವಾಗಿಲ್ಲ. ಅದರ ಸಂಭ್ರಮಾಚರಣೆ ಎಲ್ಲಾ ರೀತಿಯ ಸಂಪದ್ರಾಯ, ಕಟ್ಟುಪಾಡುಗಳನ್ನು ಮೀರಿದ್ದು ಎಂಬುದನ್ನು ಕಣ್ಣಾರೆ ನೋಡಲು ಉತ್ತರ ಕರ್ನಾಟಕದಲ್ಲಿ ಸುತ್ತಾಡಬೇಕು. ಅದರಲ್ಲೂ ಧಾರವಾಡ, ಬೆಳಗಾವಿ, ಹಾವೇರಿ, ಗದಗ, ಉತ್ತರ ಕನ್ನಡ, ವಿಜಯಪುರ ಜಿಲ್ಲೆಗಳಲ್ಲಿ ಸುತ್ತು ಹಾಕಬೇಕು. ಗಣೇಶನ ಹಬ್ಬ, ಈದ್ ಮಿಲಾದ್, ಮೊಹರಂ ಎಲ್ಲವೂ ಒಂದೇ ದಿನ ಬಂದರಂತೂ, ಗಣೇಶೋತ್ಸವ ಇನ್ನೂ ರಂಗೇರುತ್ತದೆ. ಎಲ್ಲರೂ ಜೊತೆಗೂಡಿ ಎಲ್ಲಾ ಹಬ್ಬಗಳನ್ನು ಆಚರಿಸುತ್ತಾರೆ.

ಹಬ್ಬದ ಸಿದ್ಧತೆಯಲ್ಲಿ ಮಗ್ನರಾಗಿದ್ದ ಹಾವೇರಿ ಜಿಲ್ಲೆಯ ನೆಗಳೂರಿನ ಹುಚ್ಚುಸಾಬ್ ನದಾಫ್ ಅವರನ್ನು ಕೇಳಿದಾಗ, 'ಪ್ರತಿ ಸಲದಂತೆ ಈ ವರ್ಷವೂ ನಮ್ಮೂರಿನ ದೊಡ್ಡ ಮಸೀದಿ ಎದುರು ಸರ್ವಧರ್ಮ ಗಣೇಶ ಮೂರ್ತಿ ಕೂರಿಸುತ್ತೇವೆ. ದೇಣಿಗೆ ಸಂಗ್ರಹ, ಸಾಂಸ್ಕೃತಿಕ ಕಾರ್ಯಕ್ರಮ ಆಯೋಜನೆ, ಅನ್ನ ಸಂತರ್ಪಣೆ ಸೇರಿ ಎಲ್ಲದರ ವ್ಯವಸ್ಥೆ ನಡೆದಿದೆ' ಎಂದರು. ಅಂಜುಮನ್ ಸಮಿತಿ ಉಪಾಧ್ಯಕ್ಷರೂ ಆಗಿರುವ ನದಾಫ್ ಅವರು ಗಜಾನನ ಮಹಾಮಂಡಳಿಯ ಪ್ರಮುಖ ವ್ಯಕ್ತಿಗಳಲ್ಲಿ ಒಬ್ಬರು.

'ನಮ್ಮ ಈದ್ ಮಿಲಾದ್, ಬಕ್ರೀದ್ ಹಬ್ಬಗಳಲ್ಲಿ ಹಿಂದೂಗಳು ಭಾಗಿಯಾದರೆ, ಹಿಂದೂಗಳ ಗಣೇಶ ಹಬ್ಬ, ದೀಪಾವಳಿ ಹಬ್ಬದಲ್ಲಿ ನಾವು ಪಾಲ್ಗೊಳ್ಳುತ್ತೇವೆ. ನಮ್ಮ ಅಜ್ಜ, ತಂದೆಯವರ ಕಾಲದಿಂದಲೂ ಯಾವುದೇ ಉತ್ಸವ, ಹಬ್ಬವಿದ್ದರೂ ಪರಸ್ಪರ ಜೊತೆಗೂಡುತ್ತೇವೆ. ನಮ್ಮೂರಲ್ಲಿ ಜಾತಿ, ಧರ್ಮದ ಹೆಸರಿನಲ್ಲಿ ಒಡಕು, ತಾರತಮ್ಯ ಇಲ್ಲ' ಎಂದು ಹೆಮ್ಮೆಯಿಂದ ಹೇಳಿದರು.

ಕರುನಾಡು ಸರ್ವಜನಾಂಗದ ಶಾಂತಿಯ ತೋಟ. ಇಲ್ಲಿ ಎಲ್ಲರೂ ಸಂಭ್ರಮದಿಂದ ಆಚರಿಸುವ ಹಬ್ಬಗಳಿವೆ. ಅವುಗಳಲ್ಲಿ ಗಣೇಶ ಹಬ್ಬ ಕೂಡ ಒಂದು. ಈ ಹಬ್ಬವನ್ನು ಕೆಲವೆಡೆ ಹಿಂದೂ–ಮುಸ್ಲಿಂ–ಕ್ರೈಸ್ತರು ಒಟ್ಟಿಗೆ ಸೇರಿ ಆಚರಿಸುವ ಮೂಲಕ ಸೌಹಾರ್ದ ಸಂದೇಶವನ್ನು ಸಾರುತ್ತಾರೆ.

15 ಕಡೆ ಪ್ರತಿಷ್ಠಾಪನೆ ಹೊಣೆ

ವಿಜಯಪುರ ಜಿಲ್ಲೆಯ ಆಲಮೇಲದ ಮೆಹಬೂಬ ಮಸಳಿ ಅವರು ತಮ್ಮೂರಿನಲ್ಲಿ ಹದಿನೈದು ಕಡೆ ಗಣೇಶ ಮೂರ್ತಿಗಳನ್ನು ಪ್ರತಿಷ್ಠಾಪಿಸುವ ಹೊಣೆ ಹೊತ್ತವರು. 'ನಮ್ಮೂರು ಸೌಹಾರ್ದ ಪರಂಪರೆಗೆ ಮಾದರಿ. ಹದಿನೇಳು ವರ್ಷಗಳಿಂದ ಆಲಮೇಲ ಗಜಾನನ ಮಹಾಮಂಡಳಿಯ ಅಧ್ಯಕ್ಷನಾಗಿ ಅವಿರೋಧವಾಗಿ ಆಯ್ಕೆಯಾಗುತ್ತಿದ್ದೇನೆ. ಎಲ್ಲಾ ಜಾತಿ, ಧರ್ಮದವರು ಸಭೆ ನಡೆಸಿ, ಗಣೇಶನ ಪೂಜೆ ಸೇರಿಸಿ ಎಲ್ಲದರ ಜವಾಬ್ದಾರಿ ವಹಿಸಿಕೊಳ್ಳುತ್ತೇವೆ. ಹದಿನೈದು ಕಡೆ ಮೂರ್ತಿಗಳನ್ನು ಪ್ರತಿಷ್ಠಾಪಿಸಿ, ಅದ್ದೂರಿಯಾಗಿ ಕಾರ್ಯಕ್ರಮ ನಡೆಸಲು ₹ 50 ಲಕ್ಷದವರೆಗೆ ಖರ್ಚು ಮಾಡುತ್ತೇವೆ' ಎಂದು ವಿವರ ನೀಡಿದರು.

ಐದು ದಿನ ಮಹಾರಾಷ್ಟ್ರದ ಮಾದರಿಯಲ್ಲಿ ಆಲಮೇಲದಲ್ಲಿ ಆಚರಿಸಲಾಗುವ ಗಣೇಶೋತ್ಸವಕ್ಕೆ ನಲವತ್ತು ವರ್ಷಗಳ ಇತಿಹಾಸವಿದೆ. ಪ್ರತಿ ದಿನವೂ ನಡೆಯುವ ವೈವಿಧ್ಯಮಯ ಕಾರ್ಯಕ್ರಮಗಳಲ್ಲಿ ಎಲ್ಲರೂ ಭಾಗವಹಿಸುತ್ತಾರೆ.

ದರ್ಗಾ ಎದುರೇ ಗಣೇಶ ಮೂರ್ತಿ

ಬೆಳಗಾವಿ ಜಿಲ್ಲೆಯ ಬೈಲಹೊಂಗಲದ ಕಂಠಿ ಗಲ್ಲಿಯಲ್ಲಿನ ಆಲಕಟ್ಟಿ ಫಕೀರಸ್ವಾಮಿ ದರ್ಗಾಕ್ಕೆ ಭೇಟಿ ನೀಡಬೇಕು. ದರ್ಗಾ ಎದುರೇ ಹಿಂದೂ ಮತ್ತು ಮುಸ್ಲಿಮರು ಜೊತೆಗೂಡಿ ಗಣೇಶ ಮೂರ್ತಿಯನ್ನು ಪ್ರತಿಷ್ಠಾಪಿಸುತ್ತಾರೆ. ಇದು ದೇಶವು ಸ್ವಾತಂತ್ರ್ಯ ಪಡೆಯುವ ಮೊದಲಿನ ದಿನಗಳಿಂದಲೂ ನಡೆದುಕೊಂಡು ಬಂದಿದೆ. ಈ ವರ್ಷವೂ ವಿನಾಯಕನ ಪ್ರತಿಷ್ಠಾಪನೆಗಾಗಿ ದರ್ಗಾವನ್ನು ಸಜ್ಜುಗೊಳಿಸಲಾಗಿದೆ.

ಮುಸ್ಲಿಮರು ಗಣಪನಿಗೆ ಹೂವು ಮಾಲೆ ಹಾಕಿ ಕಾಯಿ ಕರ್ಪೂರ ಬೆಳಗಿದರೆ, ಹಿಂದೂಗಳು ಆರತಿ ಮಾಡಿ ನೈವೇದ್ಯ ಸಲ್ಲಿಸುತ್ತಾರೆ. 11ನೇ ದಿನಕ್ಕೆ ಒಂದಾಗಿ ಮೆರವಣಿಗೆ ಮೂಲಕ ಹೋಗಿ ಮೂರ್ತಿ ವಿಸರ್ಜನೆ ಕೂಡ ಮಾಡುತ್ತಾರೆ. ಹಿರಿಯರಾದ ಬಾಬುಸಾಬ ಅಡಿಮನಿ, ಶಫೀಕ್ ಅಹ್ಮದ್ ಅಡಿಮನಿ, ಫಕೀರಸಾಬ್ ಅಡಿಮನಿ, ಶೌಕತ್ ಬುಡರಕಟ್ಟಿ, ಪ್ರಕಾಶ ಪಾಗಾದ, ಸೋಮು ಪಾಗಾದ, ಸಚೀನ ಹಣಮೇಟ್, ನಿಖಿಲ ತಟವಟಿ, ವಿಶಾಲ ರೊಡಬಸನವರ, ಸಂತೋಷ ಬೆಂಡಿಗೇರಿ ನೇತೃತ್ವ ವಹಿಸುತ್ತಾರೆ.

ಧಾರವಾಡ ಜಿಲ್ಲೆ ಹುಬ್ಬಳ್ಳಿ ತಾಲ್ಲೂಕಿನ ಬಿಡ್ನಾಳದ ಗ್ರಾಮಸ್ಥರ ಸಾಮರಸ್ಯವೇ ವಿಶಿಷ್ಟವಾದದ್ದು. ಮೊಹರಂ ಮತ್ತು ಗಣೇಶ ಹಬ್ಬ ಒಂದೇ ದಿನದಂದು ಬಂದುಬಿಟ್ಟರೆ, ಇಲ್ಲಿ ಸಂಭ್ರಮ ಮೇರೆಮೀರುತ್ತದೆ. ಒಂದೇ ಪೆಂಡಾಲ್‌ನಲ್ಲಿ ಗಣೇಶ ಮೂರ್ತಿಯನ್ನು ಮತ್ತು ಪಾಂಜಾಗಳನ್ನು ಇಟ್ಟು ಶ್ರದ್ಧಾಭಕ್ತಿಯಿಂದ ಪೂಜಿಸುತ್ತಾರೆ.

'ಗಣೇಶ ಮೂರ್ತಿ ಪ್ರತಿಷ್ಠಾಪಿಸಿದ ದಿನದಿಂದ 9 ದಿನ ವೈವಿಧ್ಯಮಯ ಸಾಂಸ್ಕೃತಿಕ ಕಾರ್ಯಕ್ರಮ ನಡೆಸುತ್ತೇವೆ. ಪ್ರತಿ ದಿನವೂ ಮಹಿಳಾ ಮಂಡಳ, ಯುವಕ ಸಂಘ ಸೇರಿ ವಿವಿಧ ಸಂಘಸಂಸ್ಥೆಯವರು ಮೂರ್ತಿಯ ದರ್ಶನ ಮಾಡಿ, ಕಾಣಿಕೆ ಅರ್ಪಿಸುತ್ತಾರೆ. ವಿಶೇಷ ಪೂಜೆ ಸಲ್ಲಿಸುತ್ತಾರೆ. ಮುಸ್ಲಿಮರಿಗೂ ಕೂಡ ಒಂದು ದಿನ ಮೀಸಲು ಇಟ್ಟಿರುತ್ತೇವೆ. ಕೆಲವಷ್ಟು ಮುಸ್ಲಿಮರು ದೇಣಿಗೆ ರೂಪದಲ್ಲಿ ಹಣ ನೀಡಿದರೆ, ಇನ್ನೂ ಕೆಲವರು ಪೂಜಾ ಸಾಮಗ್ರಿಗಳನ್ನು ಕೊಡುತ್ತಾರೆ. ಇನ್ನೂ ಕೆಲವರು ಅನ್ನ ಸಂತರ್ಪಣೆ ಜವಾಬ್ದಾರಿ ವಹಿಸಿಕೊಳ್ಳುತ್ತಾರೆ' ಎಂದು ಬಿಡ್ನಾಳದ ಮುಖಂಡ ಮೋಹನ ಅಸುಂಡಿ ತಿಳಿಸಿದರು.

ನರೇಗಲ್‌ನಲ್ಲಿ ವಿಶಿಷ್ಟ ಆಚರಣೆ

ಗದಗ ಜಿಲ್ಲೆಯ ನರೇಗಲ್‌ನ 3ನೇ ವಾರ್ಡ್‌ನ ಜಕ್ಕಲಿ ರೋಡ್ ಆಶ್ರಯ ಕಾಲೋನಿಯಲ್ಲಿ ನಡೆಯುವ ಗಣೇಶೋತ್ಸವ ಎಲ್ಲಕ್ಕಿಂತ ವಿಭಿನ್ನ. ಇಲ್ಲಿ ಉತ್ಸವಕ್ಕೆ ಓಣಿಯ ಪ್ರತಿ ಮನೆಯಿಂದ ದೇಣಿಗೆ ಸಂಗ್ರಹಿಸಿ, ಮೂರ್ತಿ ವಿಸರ್ಜನೆ ಬಳಿಕ ಲೆಕ್ಕಪತ್ರ ಒಪ್ಪಿಸುತ್ತಾರೆ. ಅದರಲ್ಲಿ ಉಳಿದ ಹಣದಲ್ಲಿ ಇಂತಿಷ್ಟು ಹಣವನ್ನು ಓಣಿಯಲ್ಲಿ ನಡೆಯುವ ಸಾವು-ನೋವಿನ ತುರ್ತು ಸಂದರ್ಭಗಳಿಗೆ ಬಳಸುತ್ತಾರೆ. ಕೆಲ ದಿನಗಳ ನಂತರ ಆ ಮನೆಯವರಿಂದ ಮರಳಿ ಪಡೆಯುತ್ತಾರೆ. ಇನ್ನುಳಿದ ಹಣದಲ್ಲಿ ಆರ್ಥಿಕವಾಗಿ ಹಿಂದುಳಿದ ಇಬ್ಬರು ಅಥವಾ ಮೂವರು ಯುವಕರಿಗೆ ನೀಡುತ್ತಾರೆ. ಅವರು ಮರು ವರ್ಷ ಗಣೇಶ ಉತ್ಸವದ ಒಂದು ತಿಂಗಳ ಮೊದಲು ಸ್ವಲ್ಪ ಹೆಚ್ಚಿನ ಹಣ ಸೇರಿಸಿ ಸಮಿತಿಗೆ ಮರಳಿ ಕೊಡುತ್ತಾರೆ. ಇದು ಯುವಕರ ಸಣ್ಣ ವ್ಯಾಪರಕ್ಕೆ, ಕಷ್ಟಕ್ಕೆ ಸಹಾಯವಾಗುತ್ತದೆ.

ಸೌಹಾರ್ದ ಹಬ್ಬಕ್ಕೆ 24 ವರ್ಷ

ಉತ್ತರ ಕನ್ನಡ ಜಿಲ್ಲೆಯ ಕಾರವಾರದ ಕೋಣೆವಾಡಾದಲ್ಲಿ ನಡೆಯುವ ಸೌಹಾರ್ದ ಹಬ್ಬಕ್ಕೆ 24 ವರ್ಷಗಳ ಇತಿಹಾಸವಿದೆ. ಗಣೇಶ ಮೂರ್ತಿಯ ಮೆರವಣಿಗೆ ವೇಳೆ ಮುಸ್ಲಿಮರು ಪಾನಕ, ಸಿಹಿ ತಿನಿಸು ವಿತರಿಸುತ್ತಾರೆ. ಹಿಂದೂ, ಮುಸ್ಲಿಮರದ್ದು ಇಲ್ಲಿ ಭಾವೈಕ್ಯದ ಪರಂಪರೆಯಿದೆ. ಗಣೇಶೋತ್ಸವ ಸಮಿತಿಯಲ್ಲಿ ನಜೀರ್ ರಾಣೆಬೆನ್ನೂರ, ಬಾಬು ಶೇಖ್ ಪ್ರಮುಖ ಪಾತ್ರವಹಿಸಿದರೆ, ಈದ್ ಮಿಲಾದ್ ಆಚರಣೆ ಸಮಿತಿಯಲ್ಲಿ ನಾಗರಾಜ್ ಬಾಬನಿ ಅವರದೇ ನಾಯಕತ್ವ.

ಚಿಕ್ಕಮಗಳೂರು ಜಿಲ್ಲೆಯ ಕಳಸದ ಅರಮನೆಮಕ್ಕಿ ಮೈದಾನದಲ್ಲಿ ಎರಡು ವರ್ಷಗಳಿಂದ ಸೌಹಾರ್ದ ಗಣೇಶೋತ್ಸವ ನಡೆಯುತ್ತಿದೆ.

11ನೇ ಪುಟಕ್ಕೆ...

ಮುಸ್ಲಿಮರ ಮನೆಯಲ್ಲಿ ಅರಳುವ ಗಣಪ

• ಚಂದ್ರಶೇಖರ ಎಸ್. ಚಿನಕೇಕರ



ಅಲ್ಲಾಭಕ್ಷ ಜಮಾದಾರ ಮೂರ್ತಿಗೆ ಅಂತಿಮ ಸ್ಪರ್ಶ ನೀಡಿದರು

ಬೆಳಗಾವಿ ಜಿಲ್ಲೆಯ ಚಿಕ್ಕೋಡಿ ತಾಲ್ಲೂಕಿನ ಮಾಂಜರಿವಾಡಿಯ ಜಮಾದಾರ ಅವರ ಮನೆಯಲ್ಲಿ ಅಲ್ಲಾಹು ಅಕ್ಬರ್ ಹಾಗೂ ವಕ್ರತುಂಡ ಮಹಾಕಾಯ ಶ್ಲೋಕಗಳು ಜೊತೆಯಾಗಿ ಕೇಳಿಬರುತ್ತವೆ.

ಅಲ್ಲಾಭಕ್ಷ–ರೇಷ್ಮಾ ದಂಪತಿ, ಮೊಹಮ್ಮದ್–ಅಫ್ಸಾನಾ ದಂಪತಿ, ಪುತ್ರರಾದ ನಿಯಾಜ್, ಅಮನ್ ಸೇರಿ ಇಡೀ ಕುಟುಂಬದವರು ಗಣಪತಿ ಮೂರ್ತಿಗಳನ್ನು ತಯಾರಿಸುತ್ತಾರೆ. ಪರಿಸರ ಪ್ರಿಯವಾದ, ಜೇಡಿ ಮಣ್ಣಿನಿಂದ ತಯಾರಿಸುವ ಅವರ ಮೂರ್ತಿಗಳಿಗೆ ಬೇಡಿಕೆ ಹೆಚ್ಚಿದೆ. ಹಿಂದೂ ಪುರಾಣಗಳಂತೆ ಶಾಸ್ತ್ರೋಕ್ತವಾಗಿ ಮೂರ್ತಿಗಳನ್ನು ತಯಾರಿಸುವುದು ಅವರ ಹೆಚ್ಚುಗಾರಿಕೆ.

ಬಡಗಿತನ ವೃತ್ತಿ ಮಾಡುತ್ತಿದ್ದ ದಾದು ಜಮಾದಾರ ಐದು ದಶಕಗಳ ಹಿಂದೆ ಗಣೇಶ ಮೂರ್ತಿ ತಯಾರಿಸಿ ಮನೆ–ಮನೆಗೆ ತೆರಳಿ ಕೊಡುತ್ತಿದ್ದರು. ತಂದೆಯ ವೃತ್ತಿಯನ್ನೇ ಪುತ್ರ ರಂಜಾನ್ ನಡೆಸಿಕೊಂಡು ಬಂದರು. ಇದೀಗ ರಂಜಾನ್ ಅವರ ಪುತ್ರರಾದ ಅಲ್ಲಾಭಕ್ಷ ಹಾಗೂ ಮೊಹಮ್ಮದ್ ಸಹೋದರರು ಪರಂಪರೆ ಮುಂದುವರಿಸಿದ್ದಾರೆ.

ಪ್ರತಿ ವರ್ಷ ಗಣೇಶ ಚತುರ್ಥಿಯ ಮೂರು ತಿಂಗಳ ಮೊದಲು ಗಣೇಶ ಮೂರ್ತಿ ತಯಾರಿಯಲ್ಲಿ ಜಮಾದಾರ ಕುಟುಂಬ ತೊಡಗಿಕೊಳ್ಳುತ್ತದೆ. ಈ ಅವಧಿಯಲ್ಲಿ ಇವರ ಮನೆಯಲ್ಲಿ ಮಾಂಸಾಹಾರ ಸೇವನೆ ಸಂಪೂರ್ಣ ನಿಷಿದ್ಧ. 50ಕ್ಕೂ ಹೆಚ್ಚು ಮನೆಗಳಲ್ಲಿ ಜಮಾದಾರ ಕುಟುಂಬದವರು ತಯಾರಿಸಿದ ಮೂರ್ತಿಗಳನ್ನೇ ಪ್ರತಿಷ್ಠಾಪಿಸಿ ಪೂಜಿಸಲಾಗುತ್ತದೆ.

ಮೂಡಲಪಾಯ ಯಕ್ಷಗಾನ ಕಲೆಗೆ ಜೀವ ತುಂಬುವ ಚಿಣ್ಣರು!

ನಶಿಸಿ ಹೋಗುತ್ತಿರುವ ಮೂಡಲಪಾಯ ಯಕ್ಷಗಾನ ಕಲೆಯನ್ನು ಉಳಿಸುವ ಯತ್ನ ಪಾಂಡವಪುರ ತಾಲ್ಲೂಕಿನ ದೊಡ್ಡಬ್ಯಾಡರಹಳ್ಳಿ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಯಲ್ಲಿ ಸದ್ದಿಲ್ಲದೆ ನಡೆಯುತ್ತಿದೆ. ಇಲ್ಲಿನ ಮಕ್ಕಳು 'ಕರ್ಣ ಅರ್ಜುನರ ಕಾಳಗ' ಪ್ರಸಂಗವನ್ನು ನಾಡಿನ ವಿವಿಧೆಡೆ ಪ್ರದರ್ಶಿಸುತ್ತಿದ್ದಾರೆ.


ಸಾರಥಿ ಪಾತ್ರದಲ್ಲಿ ಸುದೀಕ್ಷಾ

• ಗಣಂಗೂರು ನಂಜೇಗೌಡ

ಈ ಮಕ್ಕಳಿಗೆ ಇನ್ನೂ ಹನ್ನೆರಡು ವರ್ಷ ಕೂಡ ತುಂಬಿಲ್ಲ. ನಶಿಸಿ ಹೋಗುವ ಹಾದಿಯಲ್ಲಿರುವ ಮೂಡಲಪಾಯ ಯಕ್ಷಗಾನ ಕಲೆಯನ್ನು ಉಳಿಸಲೇಬೇಕು ಎಂದು ಪಣ ತೊಟ್ಟವರಂತೆ ಪೌರಾಣಿಕ ಕಲೆಗೆ ಜೀವ ತುಂಬುತ್ತಿರುವ ಈ ಚಿಣ್ಣರ ಅಮಿತಾಸಕ್ತಿ ಮತ್ತು ಭಾವಾಭಿನಯ ಬೆರುಗು ಮೂಡಿಸುತ್ತದೆ.

ಮಂಡ್ಯ ಜಿಲ್ಲೆಯ ಪಾಂಡವಪುರ ತಾಲ್ಲೂಕಿನ ದೊಡ್ಡಬ್ಯಾಡರಹಳ್ಳಿ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಯ ವಿದ್ಯಾರ್ಥಿಗಳು ಐದು ವರ್ಷಗಳಿಂದ ದೇಸಿ ಕಲೆಯಾದ ಮೂಡಲಪಾಯ ಯಕ್ಷಗಾನವನ್ನು ಅನುಭವಿಸಿ ಅಭಿನಯಿಸುತ್ತಿದ್ದಾರೆ. ಅದನ್ನೇ ಉಸಿರಾಡುವವರಂತೆ ನಾಡಿನಾದ್ಯಂತ ಪ್ರದರ್ಶನ ನೀಡುತ್ತಿದ್ದಾರೆ. ಪೌರಾಣಿಕ ಕಥೆ 'ಕರ್ಣ ಅರ್ಜುನರ ಕಾಳಗ' ಪ್ರಸಂಗವನ್ನು ಮನೋಜ್ಞವಾಗಿ ಅಭಿನಯಿಸುವ ಈ ಮಕ್ಕಳ ಪ್ರೌಢಿಮೆಗೆ ಹಿರಿಯ ಕಲಾವಿದರೂ ತಲೆದೂಗುತ್ತಿದ್ದಾರೆ.

21 ಪ್ರದರ್ಶನ ಕಂಡ 'ಕಾಳಗ'

ಈ ಕಿರಿಯ ಕಲಾವಿದರ ತಂಡ ಪ್ರದರ್ಶಿಸುತ್ತಿರುವ 'ಕೃಷ್ಣ ಅರ್ಜುನರ ಕಾಳಗ' ಮೂಡಲಪಾಯ ಯಕ್ಷಗಾನ ಪ್ರಸಂಗ ವಿವಿಧ ಜಿಲ್ಲೆಗಳಲ್ಲಿ ಇದುವರೆಗೆ 21 ಪ್ರದರ್ಶನಗಳನ್ನು ಕಂಡಿದೆ.

ಮೈಸೂರು, ಬೆಂಗಳೂರು, ಮಂಡ್ಯ, ಕೋಲಾರಗಳಲ್ಲಿ ಎರಡು ಪ್ರದರ್ಶನಗಳಾಗಿವೆ. ತುಮಕೂರು, ದಾವಣಗೆರೆ, ಪಾಂಡವಪುರ ಇತರ ಕಡೆಗಳಲ್ಲೂ ಪ್ರದರ್ಶನಗೊಂಡಿದೆ.

ಮೇಲುಕೋಟೆಯಲ್ಲಿ 2025ರ ಮಾರ್ಚ್ ತಿಂಗಳಿನಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಯೋಗದಲ್ಲಿ ನಡೆದ 'ಸುಗ್ಗಿ ಮಕ್ಕಳ ನಾಟಕೋತ್ಸವ'ದಲ್ಲಿ ಕೂಡ ಈ ಮಕ್ಕಳ ನಾಟಕ ಪ್ರದರ್ಶಿಸಿದ್ದಾರೆ. ಮೈಸೂರಿನಲ್ಲಿ ನಡೆದ 'ಸುಬ್ಬಣ್ಣ ಸ್ಮರಣೆ–2024 ನಾಟಕೋತ್ಸವ'ದಲ್ಲಿ ಈ ಮಕ್ಕಳ ಪರಕಾಯ ಪ್ರವೇಶಕ್ಕೆ ಹಿರಿಯ ಕಲಾವಿದರಿಂದ ಪ್ರಶಂಸೆಯ ಮಹಾಪೂರವೇ ಹರಿದು ಬಂದಿತು.


ಮಕ್ಕಳಿಂದ 'ಕರ್ಣ ಅರ್ಜುನರ ಕಾಳಗ' ಪ್ರಸಂಗ ಪ್ರದರ್ಶನ

ಕಥಾವಸ್ತು:

ಒಂದು ಗಂಟೆ ಅವಧಿಯ ಈ ನಾಟಕ ಕರ್ಣ ಮತ್ತು ಅರ್ಜುನರ ನಡುವೆ ನಡೆಯುವ ಯುದ್ಧದ ಚಿತ್ರಣವನ್ನು ಕಟ್ಟಿಕೊಡುತ್ತದೆ. ಕೃಷ್ಣನ ಸಾರಥ್ಯದಲ್ಲಿ ಅರ್ಜುನನು ಕರ್ಣನನ್ನು ಕೊಲ್ಲುವ ಸನ್ನಿವೇಶದ ನಡುವೆ ದುರ್ಯೋಧನ, ದುಶ್ಯಾಸನ, ದ್ರೌಪದಿ, ಮಾಯಾಕೃಷ್ಣ, ಕರ್ಣನ ಸಾರಥಿ ಶಲ್ಯ ಕೂಡ ಬಂದು ಹೋಗುತ್ತಾರೆ.

ಶಾಲೆಯ ಮುಖ್ಯ ಶಿಕ್ಷಕ ಪ.ಮಾ. ನಂಜುಂಡಸ್ವಾಮಿ ಶಾಲೆಯ ಹನ್ನೆರಡು ವಿದ್ಯಾರ್ಥಿಗಳಿಗೆ ತರಬೇತಿ ನೀಡಿ ನಾಟಕಕ್ಕೆ ಅಣಿಗೊಳಿಸಿದ್ದಾರೆ. ಕರ್ಣ(ಶರತ್), ಅರ್ಜುನ (ತೇಜಸ್), ಕೃಷ್ಣ(ನವ್ಯಾ), ದುರ್ಯೋದನ(ದರ್ಶನ್), ದುಶ್ಯಾಸನ(ಪೃಥ್ವಿಕ್), ದ್ರೌಪದಿ(ಪೂರ್ವಿಕಾ), ಮಾಯಾಕೃಷ್ಣ(ಭವ್ಯಾ), ಶಲ್ಯ(ದಿವ್ಯಾ) ಅಮೋಘವಾಗಿ ಅಭಿನಯಿಸುತ್ತಾರೆ.

ಕರ್ಣ–ಅರ್ಜುನರ ಕಾಳಗ ಮೂಡಲಪಾಯ ಯಕ್ಷಗಾನ ಪ್ರಸಂಗದ ಕಥಾವಸ್ತುವನ್ನು ಮಂಜುನಾಥ ಎಲ್. ಬಡಿಗೇರ ಪರಿಷ್ಕರಣೆ ಮಾಡಿಕೊಟ್ಟಿದ್ದಾರೆ. ಭಾಗವತಿಕೆಯಲ್ಲಿ ರವೀಂದ್ರ ತಲಕಾಡು, ಮದ್ದಳೆ ವಾದನದಲ್ಲಿ ಮೈಸೂರಿನ ಶ್ರೀಕೃಷ್ಣ ಚೈತನ್ಯ ಇದ್ದಾರೆ. ಮುಖವಾಣಿ ನಾರಾಯಣಸ್ವಾಮಿ ಅವರದ್ದು. ಈ ಅನುಭವಿಗಳ ತಂಡ ಜತೆಗೂಡಿರುವುದರಿಂದ ಮಕ್ಕಳ ಅಭಿನಯ ಮನೋಜ್ಞವಾಗಿ ಮೂಡಿಬರುತ್ತಿದೆ.

ಇದೇ ವಿದ್ಯಾರ್ಥಿಗಳ ತಂಡ ಐತಿಹಾಸಿಕ ನಾಟಕಗಳಾದ ಎಚ್ಚೆಮ ನಾಯಕ, ಸಂಗೊಳ್ಳಿ ರಾಯಣ್ಣ, ಕಿತ್ತೂರು ರಾಣಿ ಚನ್ನಮ್ಮ ನಾಟಕಗಳನ್ನು ಕಲಿತು ರಾಜ್ಯ ಮಟ್ಟದ ಸ್ಪರ್ಧೆಗಳಲ್ಲಿ ಬಹುಮಾನ ಗಿಟ್ಟಿಸಿದ್ದಾರೆ. ಬಿ.ವಿ. ಕಾರಂತರ 'ಪಂಜರದ ಶಾಲೆ' ನಾಟಕದ ತಾಲೀಮು ನಡೆಸಿ ಎರಡು ಪ್ರದರ್ಶನ ನೀಡಿದ್ದಾರೆ. 'ಗೋವಿನ ಹಾಡು' ನೃತ್ಯ ರೂಪಕದಲ್ಲೂ ಸೈ ಎನಿಸಿಕೊಂಡಿದ್ದಾರೆ.


ಪ.ಮಾ. ನಂಜುಂಡಸ್ವಾಮಿ

ಪ್ರೇರಕ ಶಕ್ತಿ ಪಿಎಂಎನ್

ಮೂಡಲಪಾಯ ಯಕ್ಷಗಾನ ಕಲೆಯ ಬಗ್ಗೆ ಮಕ್ಕಳಲ್ಲಿ ಆಸಕ್ತಿ ಬೆಳೆಸಿ, ತರಬೇತಿ ನೀಡಿ, ಸಾರ್ವಜನಿಕ ವೇದಿಕೆಗಳಲ್ಲಿ ಪ್ರದರ್ಶನ ನೀಡುವ ಮಟ್ಟಿಗೆ ಮಕ್ಕಳನ್ನು ಸಜ್ಜುಗೊಳಿಸಿದವರು ಶಾಲೆಯ ಮುಖ್ಯ ಶಿಕ್ಷಕ ಪ.ಮಾ. ನಂಜುಂಡಸ್ವಾಮಿ. ಶಿಕ್ಷಣ ಮತ್ತು ಸಾಂಸ್ಕೃತಿಕ ವಲಯದಲ್ಲಿ 'ಪಿಎಂಎನ್' ಎಂದೇ ಹೆಸರಾಗಿರುವ ನಂಜುಂಡಸ್ವಾಮಿ, 2016ರಲ್ಲಿ ದೊಡ್ಡಬ್ಯಾಡರಹಳ್ಳಿ ಶಾಲೆಗೆ ವರ್ಗಾವಣೆಗೊಂಡು ಬಂದ ಬಳಿಕ ಶಾಲೆಯ ಶೈಕ್ಷಣಿಕ ಮತ್ತು ಭೌತಿಕ ಚಿತ್ರಣವೇ ಬದಲಾಗಿದೆ. ಇವರು ರಂಗಭೂಮಿ ಕಲಾವಿದ ಮತ್ತು ಗಾಯಕರೂ ಹೌದು.

ರಜಾ ದಿನಗಳಲ್ಲಿ ಮಕ್ಕಳಿಗೆ ನಾಟಕ ಮತ್ತು ಸಂಗೀತ ತರಬೇತಿ ನೀಡುತ್ತಿದ್ದು, ಮಂಡ್ಯದ ಕರ್ನಾಟಕ ಸಂಘದ ಅಧ್ಯಕ್ಷ ಪ್ರೊ.ಬಿ.ಜಯಪ್ರಕಾಶಗೌಡ ಅವರ ಸಲಹೆಯಂತೆ ಮೂಡಲಪಾಯ ಯಕ್ಷಗಾನ ಕಲೆಯ ತರಬೇತಿ ನೀಡಿ ಪ್ರದರ್ಶನಕ್ಕೆ ಅಣಿಗೊಳಿಸಿದ್ದಾರೆ. ನಾಟಕ ಪ್ರದರ್ಶನಕ್ಕೆ ಅಗತ್ಯವಾದ ರಂಗ ಸಜ್ಜಿಕೆ, ಪ್ರಯಾಣ, ಪ್ರಸಾದನ, ಊಟೋಪಚಾರದ ಬಹುಪಾಲು ಖರ್ಚನ್ನು ತಾವೇ ಭರಿಸುತ್ತಾರೆ.

'ವಿದ್ಯಾರ್ಥಿಗಳಲ್ಲಿ ನೈತಿಕತೆ ಮತ್ತು ಸಮಾಜೋದ್ಧಾರದ ಆಶಯ ಬಿತ್ತುವುದೇ ಶಿಕ್ಷಕನ ಕರ್ತವ್ಯ' ಎಂದು ಭಾವಿಸಿರುವ ಇವರು 'ಮಕ್ಕಳು ತೃಪ್ತಿದಾಯಕ ಪ್ರದರ್ಶನ ನೀಡಿದರೆ ಮತ್ತು ಜನರು ಅದನ್ನು ಮೆಚ್ಚಿಕೊಂಡರೆ ಅದೇ ದೊಡ್ಡ ಪ್ರಶಸ್ತಿ' ಎಂದು ವಿನಮ್ರವಾಗಿ ಹೇಳುತ್ತಾರೆ.

ಶಿಕ್ಷಣದಲ್ಲಿ ರಂಗಕಲೆ

ಈ ಶಾಲೆಯ ಮಕ್ಕಳ ಅದೃಷ್ಟವೋ ಎಂಬಂತೆ ಶಿಕ್ಷಣ ಇಲಾಖೆ 'ಶಿಕ್ಷಣದಲ್ಲಿ ರಂಗ ಕಲೆ' ಪರಿಕಲ್ಪನೆಯನ್ನು ಪರಿಚಯಿಸಿತು. ಆ ಅವಕಾಶವನ್ನು ಬಳಸಿಕೊಂಡು ಪ.ಮಾ. ನಂಜುಂಡಸ್ವಾಮಿ ಮಕ್ಕಳಿಗೆ ನಾಟಕ, ನೃತ್ಯ, ಹಾಡುಗಾರಿಕೆಯನ್ನು ಕಲಿಸಲಾರಂಭಿಸಿದರು. ಪಠ್ಯವನ್ನು ನಾಟಕದ ಸಂಭಾಷಣೆ, ಕಥೆ ಮತ್ತು ಹಾಡಿನ ರೂಪದಲ್ಲಿ ಕಲಿಸಲು ಆರಂಭಿಸಿದರು.

'ಆಡಿ ಕಲಿ– ನೋಡಿ ತಿಳಿ' ತತ್ವಕ್ಕೆ ಪೂರಕವಾದ ಈ ವಿಧಾನ ಪಠ್ಯ ವಿಷಯಗಳ ಕಲಿಕೆಗೆ ಪರಿಣಾಮಕಾರಿ ಮಾರ್ಗ ಎಂಬುದನ್ನು ಮನಗಂಡರು. ನಾಟಕ, ನೃತ್ಯ, ಸಂಗೀತ ಕಲಿಕೆಯು ಟಿವಿ ಮತ್ತು ಮೊಬೈಲ್ ಗೀಳಿನಿಂದ ಮಕ್ಕಳನ್ನು ದೂರ ಇಡಹುದು ಎಂಬುದನ್ನೂ ಅರಿತರು. ಹೀಗೆ ಕಲಿತ ವಿಷಯ ದೀರ್ಘಕಾಲ ನೆನಪಿನಲ್ಲಿ ಉಳಿಯುತ್ತದೆ ಎಂಬುದು ಖಚಿತವಾದ ಮೇಲೆ ಇದನ್ನೇ ಮುಂದುವರೆಸಿದರು. ನಾಟಕ ಮತ್ತು ಸಂಗೀತದತ್ತ ಮಕ್ಕಳ ಮನಸ್ಸು ಹೊರಳುವಂತೆ ಮಾಡಿ ಅದರಲ್ಲಿ ಯಶಸ್ವಿಯೂ ಆಗಿದ್ದಾರೆ.

'ನಾಟಕ, ನೃತ್ಯ ರೂಪಕ, ಹಾಡುಗಳನ್ನು ಕಲಿಯುತ್ತಿರುವ ಮಕ್ಕಳಲ್ಲಿ ಆತ್ಮವಿಶ್ವಾಸ ಹೆಚ್ಚಿದೆ. ಪಠ್ಯ ವಿಷಯದ ಕಲಿಕೆಯಲ್ಲಿ ನಿರೀಕ್ಷಿತ ಪ್ರಗತಿ ಕಾಣುತ್ತಿದೆ. ಸಂವಹನ ಕೌಶಲ ಕೂಡ ಸಿದ್ದಿಸಿದೆ' ಎಂಬುದು ಪ.ಮಾ. ನಂಜುಂಡಸ್ವಾಮಿ ಅವರ ಮಾತು.



ಮರೆಯಾಗುತ್ತಿರುವ 'ಕೈ ಚಕ್ಕುಲಿ ಕಂಬಳ'

• ಬೀರಣ್ಣ ನಾಯಕ ಮೊಗಟಾ

ಮಲೆನಾಡು, ಉತ್ತರ ಕನ್ನಡ ಭಾಗದಲ್ಲಿ ಚೌತಿ ಹಬ್ಬವನ್ನು ಬಲು ವಿಜೃಂಭಣೆಯಿಂದ ಆಚರಿಸುತ್ತಾರೆ. ಮಲೆನಾಡಿಗರಿಗೆ ದೀಪಾವಳಿ ಎಂಬುದು ದೊಡ್ಡ ಹಬ್ಬವಾದರೂ, ಗಣೇಶ ಚತುರ್ಥಿ ಕೂಡ ಬಲು ವಿಶೇಷ ಹಬ್ಬ. ಇದಕ್ಕಾಗಿ ಹದಿನೈದು ದಿನಗಳ ಮೊದಲಿನಿಂದಲೇ ಸಿದ್ಧತೆ ಪ್ರಾರಂಭವಾಗುತ್ತದೆ.

'ನಿಮ್ಮನೆ ಚಕ್ಲಿ ಕಂಬ್ಳ ಯಾವಾಗ' ಎನ್ನುವ ಮಾತು ಪರಸ್ಪರ ಸ್ನೇಹಿತರು, ಅದರಲ್ಲೂ ತಾಯಂದಿರು ಭೇಟಿಯಾದಾಗ ಕೇಳಿಬರುವುದು ಸಾಮಾನ್ಯ. ಗಣೇಶನಿಗೆ ನೈವೇದ್ಯಕ್ಕೆ ಬಗೆಬಗೆಯ ಭಕ್ಷ್ಯಗಳನ್ನು ಮಾಡುವುದು ವಾಡಿಕೆ. ಅದರಲ್ಲಿ ಚಕ್ಕುಲಿ ಬಹಳ ಮಹತ್ವದ್ದು. ಮಲೆನಾಡಿನ ಶಿರಸಿ, ಯಲ್ಲಾಪುರ ಮತ್ತು ಸಿದ್ದಾಪುರ ತಾಲ್ಲೂಕುಗಳ ಹಳ್ಳಿಗಳಲ್ಲಿ ಚೌತಿಯ ಸಂಭ್ರಮದ 'ಕೈ ಚಕ್ಕುಲಿ ಕಂಬಳ' ಹಿಂದೆ ಬಹಳ ಸಾಮಾನ್ಯವಾಗಿತ್ತು. ಕೈಯಲ್ಲಿಯೇ ಚಕ್ಕುಲಿ ಸುತ್ತುವ ಈ ಸಂಪ್ರದಾಯ ಈಗೀಗ ಮರೆಯಾಗುತ್ತಿದೆ.

ಚೌತಿ ಹಬ್ಬ ಬರುವ ಎರಡು ವಾರಗಳ ಮೊದಲಿಂದಲೇ ಕೈ ಚಕ್ಕುಲಿ ಕಂಬಳ ಪ್ರಾರಂಭವಾಗುತಿತ್ತು. ಊರಿನ ಹತ್ತಾರು ಮನೆಗಳ ಜನ ಸೇರಿ ಒಂದೊಂದು ಮನೆಯಲ್ಲಿ ಕೈ ಚಕ್ಕುಲಿ ಕಂಬಳ ನಡೆಸುತ್ತಿದ್ದರು. ಅಂದು ಅವರದೇ ಮನೆಯಲ್ಲಿ ಊಟ, ತಿಂಡಿ ಎಲ್ಲವೂ ನಡೆಯುತಿತ್ತು. ಇದರಿಂದ ಆ ಹಳ್ಳಿಯಲ್ಲಿ ಸೌಹಾರ್ದ, ಒಗ್ಗಟ್ಟು ತಾನಾಗಿಯೇ ಬೆಳೆಯುತಿತ್ತು. ಉಳಿದ ಚಕ್ಕುಲಿಗಳಿಗಿಂತ ಭಿನ್ನವಾದ, ಕೇವಲ ಕೈ ಚಳಕದಿಂದಲೇ ತಯಾರಿಸುವ ಈ ಚಕ್ಕುಲಿ ಮಾಡುವುದು ಕೂಡ ಸೂಕ್ಷ್ಮ ಕೆಲಸವಾಗಿತ್ತು. ಅಂಟಿನ ಗುಣ ಇರುವ ಮುಳ್ಳುರಿಯಾ, ಹೆಗ್ಗೆ, ಆಲೂರ ಸಣ್ಣ, ಮಟ್ಟಣಗಾ, ಪದ್ಮರೇಖಾ ಮುಂತಾದ ವಿಶೇಷ ತಳಿಯ ಅಕ್ಕಿಗಳನ್ನು ಬೀಸುವ ಕಲ್ಲಿನಿಂದ ಬೀಸಿ, ಹದವಾಗಿ ಹಿಟ್ಟನ್ನು ತಯಾರಿಸಿ ಈ ಚಕ್ಕುಲಿ ಮಾಡುತ್ತಿದ್ದರು. ಹೆಚ್ಚಾಗಿ ಕೊಬ್ಬರಿ ಎಣ್ಣೆಯಿಂದ ಕರಿಯುತ್ತಿದ್ದರಿಂದ, ಈ ಚಕ್ಕುಲಿಯನ್ನು ಒಂದೆರಡು ತಿಂಗಳವರೆಗೆ ರುಚಿಗೆಡದಂತೆ ಇಡಬಹುದಿತ್ತು.

ಚಕ್ಕುಲಿ ಮುಟ್ಟುಗಳು, ಚಕ್ಕುಲಿ ಮಾಡುವ ಯಂತ್ರಗಳು ಬಂದ ಮೇಲೆ ಕೈಸುತ್ತು ಚಕ್ಕುಲಿ ತೀರ ಅಪರೂಪವಾಗಿದೆ. ಪೇಟೆಯಿಂದ ಚಕ್ಕುಲಿ ತಂದು ನೈವೇದ್ಯ ಮಾಡುವವರೇ ಹೆಚ್ಚಾಗಿರುವ ಈ ಕಾಲದಲ್ಲಿ ಶಿರಸಿಯ ಹೆಗಡೆಕಟ್ಟಾದ ಸೇವಾ ಸಹಕಾರಿ ಸಂಘದ ಆಶ್ರಯದಲ್ಲಿ ಇತ್ತೀಚೆಗೆ ಕೈ ಚಕ್ಕುಲಿ ತಯಾರು ಮಾಡುವ, ತಿನ್ನುವ, ಕೈ ಚಕ್ಕುಲಿ ಪ್ರದರ್ಶನ ಹಾಗೂ ಮಾರಾಟ ಮಾಡುವ ಮೇಳ ನಡೆಯಿತು. ಅದರ ನೆಪದಲ್ಲಿ ಈ ಕೈಸುತ್ತಿನ ಕಥೆ ನೆನಪಾಯಿತು.

ಗಣೇಶೋತ್ಸವ ಬದಲಾದ ಹೆಜ್ಜೆ ಗುರುತುಗಳು...

10ನೇ ಪುಟದಿಂದ...

ಕೊನೆಯ ದಿನ ಡಿಜೆ ಮುಂದೆ ನಾಗಿನ್ ಡಾನ್ಸ್ ಮೊದಲು ಮಾಡಿ ಎಲ್ಲ ಬಗೆಯ ಕುಣಿತಗಳು. ಉನ್ಮಾದ, ಉದ್ವೇಗ, ಪ್ರೀತಿ ಮತ್ತು ಭಕ್ತಿಯ ಬದಲಿಗೆ ವಿಜೃಂಭಿಸುತ್ತಿವೆ. ಮೊದಲಿನಂತೆ ಪ್ರತಿಭಾ ಪ್ರದರ್ಶನವೇನೂ ಇರುವುದಿಲ್ಲ. ಸಂಗ್ರಹಿಸಿದ ದುಡ್ಡಿನಲ್ಲಿ ಯಾರು ಎಷ್ಟು ದೊಡ್ಡ ಗಣೇಶ ತರುತ್ತಾರೆ ಎಂಬುದೇ ಸ್ಪರ್ಧೆ.

ಹಿಂದೆ ಗಣೇಶನನ್ನು ಕೂರಿಸಲು ಮಾಡುವ ಪೆಂಡಾಲುಗಳಲ್ಲಿಯೂ ಅಲಂಕಾರ ಸರಳವಾಗಿದ್ದು, ಪ್ರಸಾದ ಹೆಚ್ಚಿರುತ್ತಿತ್ತು. ಖಾಂಡದ ಅಂತ ಕರೆಯುತ್ತಿದ್ದರು. ಖಾಂಡ್ ಎಂಬುದು ಮರಾಠಿ ಮೂಲದ ಪದ. ದಾಸೋಹ ಎಂಬರ್ಥದಲ್ಲಿ. ಕುಟುಂಬದವರೆಲ್ಲ ಗಣಪನನ್ನು ನೋಡಲು ಹೊರಬಂದರೆ ಸಂಜೆಯಿಡೀ ಗಣೇಶನನ್ನು ನೋಡಿ, ಯಾವುದಾದರೂ ದಾಸೋಹದಲ್ಲಿ ಪ್ರಸಾದ ಮಾಡಿ ಮನೆಗೆ ತಲುಪುತ್ತಿದ್ದರು.

ಇದೀಗ ಪೆಂಡಾಲಿನ ಅಲಂಕಾರಕ್ಕೇ ಹೆಚ್ಚು ಹಣ ವಿನಿಯೋಗವಾಗುತ್ತಿದೆ. ಪ್ರಸಾದ ಹಂಚಲೇಬೇಕೆಂಬ ಅನಿವಾರ್ಯಕ್ಕೆ ಕಟ್ಟುಬಿದ್ದು ಚುರುಮುರಿ, ಉಂಡೆಗಳಿಗೆ ಸೀಮಿತವಾಗಿದೆ. ಈಗಲೂ ಒಂದೆರಡು ಮಂಡಳಿಗಳು ಪ್ರಸಾದರೂಪದಲ್ಲಿ 'ಖಾಂಡ್' ಮಾಡುತ್ತಿವೆ.

ಮೊದಲಿನಂತೆ ಅಲ್ಲಲ್ಲಿ ಆರ್ಕೆಸ್ಟ್ರಾ ತಂಡಗಳು ಬರುತ್ತಿವೆ. ಕರೋಕೆಯೊಂದಿಗೆ ಹಾಡುವ ಈ ತಂಡಗಳು ಮೊದಲಿನ ಉತ್ಸಾಹ ತುಂಬುತ್ತಿಲ್ಲ. ಮನೆಯಿಂದ ಚಾಪೆ ತಂದು ಹಾಸಿಕೊಂಡು ಕೂರುತ್ತಿದ್ದವರೀಗ ಇಲ್ಲಿಲ್ಲ. ಕಾರು, ಗಾಡಿಗಳ ಮೇಲೆ ಬಂದು, ಕುಳಿತಲ್ಲೇ ಎರಡೂ ಕೈ ಕತ್ತರಿ ಮಾಡಿ, ಕಿವಿ ಹಿಡಿದುಕೊಂಡು, ಕತ್ತು ಅಲುಗಾಡಿಸಿ ಬಸ್ಕಿ ಹಾಕಿ ಮುಂದೆ ಹೋಗುತ್ತಾರೆ. ಹಾಗೆ ಹೋಗುವ ಮುನ್ನ ಒಂದು ಫೋಟೊ ತೆಗೆಯುವುದು ಮರೆಯುವುದಿಲ್ಲ. ಕೆಳಗಿಳಿದರೆ ಸೆಲ್ಫಿ ತೊಗೊಳೋದು ಮರೆಯೋದಿಲ್ಲ. ತಂತ್ರಜ್ಞಾನ ಮತ್ತು ಮೊಬೈಲ್ ಫೋನುಗಳು ಮನರಂಜನೆಯ ಭಾಷ್ಯವನ್ನೇ ಬದಲಿಸಿವೆ. ಮೊದಲಿನಂತೆ ಬೆರೆಯುವುದು, ಕೂರುವುದು, ಪರಸ್ಪರ ಮೆಚ್ಚುವುದು, ಶ್ಲಾಘಿಸುವುದು ಇವೆಲ್ಲ ನೇಪಥ್ಯಕ್ಕೆ ಸರಿದಿವೆ. ಈಗ ಏನಿದ್ದರೂ ಇನ್‌ಫ್ಲುಯೆನ್ಸರ್‌ಗಳ ಕಾಲ. ಯಾರು ಎಲ್ಲಿ ರೀಲು ಮಾಡಿದರು ಎಂಬುದೇ ಸುದ್ದಿ.

ವಿಸರ್ಜನೆಯ ದಿವಸದ ಸಂಭ್ರಮವೇ ಬೇರೆ. ಚೌಬಾರಾದ ಹಿಂದಿನ ರಸ್ತೆಯಲ್ಲಿ ಎಲ್ಲ ಮಂಡಳಿಗಳೂ ಸಾಲುಗಟ್ಟುತ್ತವೆ. ಅವು ಮೆರವಣಿಗೆಯಲ್ಲಿ ಮುಖ್ಯ ರಸ್ತೆಗೆ ಬರುವ ಹೊತ್ತಿಗೆ ರಸ್ತೆಯ ಎರಡೂ ಬದಿಯಲ್ಲಿ ಪಾನಕ, ಮಜ್ಜಿಗೆ, ಸಿರಾ, ಪುಲಾವು, ಸಜ್ಜಿಗೆ, ಚುರುಮುರಿ ಮುಂತಾದವನ್ನೆಲ್ಲ ಹಂಚ್ತಾರೆ. ಬಂದವರಿಗೆಲ್ಲ ದೊನ್ನೆಯಲ್ಲಿ ಪ್ರಸಾದ ತುಂಬಿ ತುಂಬಿ ಕೊಡುವುದು ಇದ್ದೇ ಇರುತ್ತದೆ. ಮುಸ್ಲಿಮರು ಪಾನಕ ಹಂಚುವುದರಲ್ಲಿ ನಿಸ್ಸೀಮರು. ತ್ರಿವರ್ಣದಲ್ಲಿ ಕೇಸರಿ, ಬಿಳಿ ಮತ್ತು ಹಸಿರು ಬಣ್ಣದ ಪಾನಕ ಮಾಡಿ ಅವನ್ನು ಹಾಗೆಯೇ ಜೋಡಿಸಿಡುತ್ತಾರೆ. ಚಾಚಾ, ಮಾಮು, ಭಯ್ಯಾ.. ಭಾಯ್.. ಎಲ್ಲ ಸಂಬಂಧ ಸೂಚಕಗಳಿಂದಲೇ ಕರೆಯುವುದಿಲ್ಲಿ. ಈ ವರೆಗೂ 'ಬ್ರೊ' ಪದ ಅಲ್ಲಿ ಹೊಕ್ಕಿಲ್ಲ. ನುಸುಳಲು ಬಿಟ್ಟಿಲ್ಲ. ಕಾಕಾ, ಮಾಮಾ, ಜೀಜಾಗಳೇ ಇಲ್ಲಿ ಕೇಳಿಸುವುದು. ಈ ಉತ್ಸಾಹದಲ್ಲೇನೂ ಕುಂದಾಗಿಲ್ಲ. ಬೀದರ್ ಜಿಲ್ಲೆಯಲ್ಲಿ ಕಳೆದ ವರ್ಷದಿಂದ ಡಿಜೆಗೆ ನಿರ್ಬಂಧ ಹೇರಿದ್ದಾರೆ. ಶಬ್ದ ಮಾಲಿನ್ಯಕ್ಕೆ ಕಡಿವಾಣ ಬಿದ್ದಿದೆ.

ನಾವು ಸಣ್ಣವರಿದ್ದಾಗ ಮಶಾಲ್ ಮೆರವಣಿಗೆ ಮಾಡುತ್ತಿದ್ದರು. ಪಂಜು ಹಿಡಿದ ತಂಡ ಮುಖ್ಯ ರಸ್ತೆಗೆ ಬಂದರೆ ಎಲ್ಲ ಲೈಟುಗಳನ್ನೂ ಆರಿಸುತ್ತಿದ್ದರು. ಪಂಜಿನ ಕವಾಯತು ಅದೆಷ್ಟು ಚಂದ ಕಾಣಿಸುತ್ತಿತ್ತು. ಅಂಥ ಕತ್ತಲೆಯಲ್ಲಿಯೂ ಅಹಿತಕರ ಘಟನೆ ನಡೆಯದೇ ಇರಲು ಅಲ್ಲಿಯ ಸೌಹಾರ್ದ ತುಂಬಿದ ವಾತಾವರಣವೇ ಕಾರಣವಾಗಿತ್ತು.

ಇದೀಗ ಎಲ್ಲವೂ ಬದಲಾಗಿದೆ. ದೊಡ್ಡ ದೊಡ್ಡ ಗಣಪತಿಯನ್ನು ತಂದು ಪ್ರತಿಷ್ಠಾಪಿಸುವುದರಲ್ಲಿ, ದೊಡ್ಡ ದೇವಸ್ಥಾನಗಳ ಪ್ರತಿಕೃತಿ ನಿರ್ಮಿಸುವುದರಲ್ಲಿ, ಫ್ಯಾನ್ಸಿ, ಥೀಮ್ಡ್ ಗಣಪತಿ ಪ್ರತಿಷ್ಠಾಪಿಸಿ ಎಲ್ಲ ಕಡೆಯೂ ತಮ್ಮ ತಮ್ಮ ಹೆಗ್ಗಳಿಕೆಯನ್ನು ತೋರಿಸುವುದರಲ್ಲಿ ಜನರು ನಿರತರಾಗಿದ್ದಾರೆ.

ಹಿಂದಿನಂತೆ ಎಲ್ಲರೂ ಒಂದೆಡೆ ನೆರೆಯುವ, ಕೂರುವ, ಬೆರೆಯುವ ಪರಸ್ಪರ ಮೆಚ್ಚುವ ಗುಣಗಳು ನೇಪಥ್ಯಕ್ಕೆ ಸರಿದಿವೆ. ಸೆಲ್ಫಿಯ ಜಮಾನಾದಲ್ಲಿ ತಾನು ಚಂದ, ತಾನೇ ಚಂದ, ತಾನು ಶ್ರೇಷ್ಠ, ತಾನೇ ಶ್ರೇಷ್ಠ ಎಂಬ ಚೌತಿಯ ಚಂದ್ರನ ಗುಣಗಳೇ ಹೆಚ್ಚಾಗಿವೆ. ಬಾಲಗಂಗಾಧರ ತಿಲಕರ ಚೌತಿ ಹೀಗೆ ಬದಲಾಗಿದೆ. 'ಹ್ಯಾಪ್ಪಿ ಗಣೇಶ' ಎಂಬಲ್ಲಿಗೆ ಹಬ್ಬದ ಶುಭಾಶಯಗಳು ಪೂರ್ಣವಿರಾಮ ಕಾಣುತ್ತಿವೆ.

ವಿಸರ್ಜನೆ ಮೆರವಣಿಗೆಯಲ್ಲಿ ಸೌಹಾರ್ದ

ಚೌಬಾರಾದಿಂದ ಸಾಗುವ ಮೆರವಣಿಗೆಗೆ ಚೌಬಾರಾ ಎಂಬ ಐತಿಹಾಸಿಕ ಸ್ಮಾರಕದ ಮೇಲೆ ಉಸ್ತುವಾರಿ ಸಚಿವರು, ಸ್ಥಳೀಯ ಶಾಸಕರು, ಎಲ್ಲ ಧಾರ್ಮಿಕ ಗುರುಗಳು ಎಲ್ಲ ಗಣೇಶ ವಿಗ್ರಹಗಳಿಗೆ ಪೂಜೆ ಸಲ್ಲಿಸುತ್ತಾರೆ. ಈ ಸಂಪ್ರದಾಯವೂ ನಾಲ್ಕೈದು ದಶಕಗಳಿಂದ ಸಾಗಿಕೊಂಡು ಬಂದಿದೆ. ಒಮ್ಮೆ ಮಾತ್ರ ಸಿಖ್ಖರ ಗಲಭೆಯಾಗಿದ್ದು ಇಷ್ಟೂ ವರ್ಷಗಳ ಆಚರಣೆಗೆ ದೃಷ್ಟಿಬೊಟ್ಟು ಇದ್ದಂತಿದೆ.


ಬಣ್ಣ–ಬಣ್ಣದ ಗಣಪ
ಚಿತ್ರ: ತಾಜುದ್ದೀನ್ ಆಜಾದ್

ಗಣಪ ಸೌಹಾರ್ದ ಸಂಭ್ರಮ...

10ನೇ ಪುಟದಿಂದ...

ಇಲ್ಲಿನ ಕಾರ್ಯಕ್ರಮದಲ್ಲಿ ಹಿಂದೂ, ಮುಸ್ಲಿಮರಲ್ಲದೇ ಕ್ರೈಸ್ತರು ಮತ್ತು ಜೈನರು ಪಾಲ್ಗೊಳ್ಳುತ್ತಾರೆ. ಗಣೇಶೋತ್ಸವ ನೆಪದಲ್ಲಿ ಇಲ್ಲಿ ವಿವಿಧ ಅಭಿವೃದ್ಧಿ ಕಾರ್ಯಗಳು ನಡೆಯುತ್ತವೆ. ವಿವಿಧ ಸಂಘಸಂಸ್ಥೆಗಳು ಜನರಿಗೆ ಅಗತ್ಯವಿರುವ ಸೌಲಭ್ಯಗಳನ್ನು ಒದಗಿಸಲು ಮುಂದಾಗುತ್ತಾರೆ.

ಕೊಡಗು ಜಿಲ್ಲೆಯ ಕುಶಾಲನಗರ ತಾಲ್ಲೂಕಿನ ನೆಲ್ಯಹುದಿಕೇರಿಯ ಸಿದ್ಧಿ ವಿನಾಯಕ ಮಿತ್ರ ಮಂಡಲಿಗೆ ಕ್ರೈಸ್ತ ಧರ್ಮದ ವಿಜೇಶ್ ಕ್ಸೇವಿಯರ್ ಅಧ್ಯಕ್ಷರಾಗಿದ್ದಾರೆ. ಮುಸ್ಲಿಂ ಮುಖಂಡ ನೌಫಲ್ ಮಂಡಲಿಯ ಪ್ರಮುಖ ಸದಸ್ಯರಲ್ಲಿ ಒಬ್ಬರು. 13 ವರ್ಷಗಳಿಂದ ಇಲ್ಲಿ ಸೌಹಾರ್ದಯುತವಾಗಿ ಎಲ್ಲ ಧರ್ಮದವರೂ ಸೇರಿ ಗೌರಿ, ಗಣೇಶೋತ್ಸವ ಆಚರಿಸುತ್ತಾರೆ.

ದೇಶದಲ್ಲಿ ಜಾತಿ, ಧರ್ಮ, ದೇವರ ಹೆಸರಿನಲ್ಲಿ ಎಷ್ಟೇ ಗಲಾಟೆ ನಡೆಯಲಿ ಅಥವಾ ದ್ವೇಷ ಹೊಗೆಯಾಡಿದರೂ ಕರುನಾಡಿನಲ್ಲಿ ಅದರಲ್ಲೂ ಗ್ರಾಮೀಣ ಪರಿಸರದಲ್ಲಿ ಬಾಂಧವ್ಯ ಗಟ್ಟಿಯಾಗಿ ಉಳಿದಿದೆ. ಗಣೇಶ ಹಬ್ಬದ ಸಂದರ್ಭದಲ್ಲಿ ಈ ಭಾವೈಕ್ಯ ವಿಶೇಷ ಕಳೆ ಪಡೆಯುತ್ತದೆ ಎಂಬುದಕ್ಕೆ ಆಯಾ ಊರುಗಳಲ್ಲಿನ ಪ್ರೀತಿ, ವಿಶ್ವಾಸ, ನಂಬಿಕೆಯೇ ಸಾಕ್ಷಿ.

(ಪೂರಕ ಮಾಹಿತಿ : ಬಸವರಾಜ್ ಸಂಪಳ್ಳಿ, ಸಂತೋಷ ಜಿಗಳಿಕೊಪ್ಪ, ಗಣಪತಿ ಹೆಗಡೆ, ನಾಗರಾಜ್ ಬಿ.ಎನ್, ಚಂದ್ರಪ್ಪ ಎಂ.ರಾಠೋಡ, ರವಿಕುಮಾರ ಹುಲಕುಂದ, ಕೆ.ಎಸ್.ಗಿರೀಶ)

ಮುನ್ನೋಟ 24-08-2025 ರಿಂದ 30-08-2025

ಎಂ.ಎನ್. ಲಕ್ಷ್ಮೀನರಸಿಂಹಸ್ವಾಮಿ, ಮಾದಾಪುರ
ಜ್ಯೋತಿಷ್ಯ ವಿಶಾರದ, ಸಂಪರ್ಕಕ್ಕೆ: 8197304680

ಈ ಭವಿಷ್ಯ ರಾಶಿಯನ್ನು ಅವಲಂಬಿಸಿದೆ

ಮೇಷ — ಅಶ್ವಿನಿ, ಭರಣಿ, ಕೃತ್ತಿಕಾ 1
ಕೆಲವು ಕಠಿಣ ನಿರ್ಧಾರಗಳನ್ನು ತೆಗೆದುಕೊಳ್ಳುವಿರಿ. ಆದಾಯವು ನಿರೀಕ್ಷೆಯ ಹತ್ತಿರ ಬರುತ್ತದೆ. ನಿಮ್ಮ ಬಂಧುಗಳ ಸಹಕಾರ ನಿಮಗೆ ದೊರೆಯುವುದಿಲ್ಲ. ಭೂಮಿ ವ್ಯವಹಾರ ಮಾಡುವವರ ಆದಾಯ ಹೆಚ್ಚುತ್ತದೆ. ವಿದ್ಯಾರ್ಥಿಗಳಿಗೆ ಶ್ರಮಕ್ಕೆ ತಕ್ಕ ಫಲವಿದೆ. ಸಂಗಾತಿಯ ವಿಪರೀತ ಖರ್ಚುಗಳು ಗಾಬರಿ ಹುಟ್ಟಿಸುತ್ತವೆ.

ವೃಷಭ — ಕೃತ್ತಿಕಾ 2,3,4 ರೋಹಿಣಿ, ಮೃಗಶಿರಾ 1,2
ಗೌರವಯುತವಾದ ನಡವಳಿಕೆಯನ್ನು ಅಳವಡಿಸಿಕೊಳ್ಳುವಿರಿ. ಆದಾಯವು ನಿಮ್ಮ ನಿರೀಕ್ಷೆಯ ಹತ್ತಿರ ಬರುತ್ತದೆ. ಎಲ್ಲರ ಸಹಕಾರ ನಿಮಗೆ ದೊರೆಯುತ್ತದೆ. ಕೃಷಿಭೂಮಿಯನ್ನು ಕೊಳ್ಳಬಹುದು. ವಿದ್ಯಾರ್ಥಿಗಳಿಗೆ ಶ್ರಮಕ್ಕೆ ತಕ್ಕ ಫಲವಿರುತ್ತದೆ. ಕೆಲವರಿಗೆ ಅನಿರೀಕ್ಷಿತ ಆದಾಯ ಲಭಿಸುತ್ತದೆ. ಹಿರಿಯರ ಆರೋಗ್ಯಕ್ಕಾಗಿ ಹಣ ಖರ್ಚಾಗುತ್ತದೆ. ವೃತ್ತಿಯಲ್ಲಿ ಅಭಿವೃದ್ಧಿಯನ್ನು ಕಾಣಬಹುದು.

ಮಿಥುನ — ಮೃಗಶಿರಾ 3,4 ಆರಿದ್ರಾ, ಪುನರ್ವಸು 1,2,3
ಕೃಷಿಯಿಂದ ಆದಾಯವಿರುತ್ತದೆ. ನಿಮ್ಮ ಬಂಧುಗಳ ಸಹಕಾರ ನಿಮಗೆ ದೊರೆಯುತ್ತದೆ. ಪಶುಸಂಗೋಪನೆ ಮಾಡುವವರಿಗೆ ಲಾಭವಿದೆ. ವೃತ್ತಿಯಲ್ಲಿ ಸಂಪಾದನೆ ಹೆಚ್ಚಾಗುವ ಸಾಧ್ಯತೆ ಇದೆ. ಕೆಲವರಿಗೆ ಬಾಯಿ ಹುಣ್ಣು ಕಾಡಬಹುದು. ಶಾಲಾ ಕಾಲೇಜುಗಳನ್ನು ನಡೆಸುವವರಿಗೆ ಕಾನೂನಿನ ತೊಡಕುಗಳು ಎದುರಾಗಬಹುದು. ಕಬ್ಬಿಣದ ವ್ಯಾಪಾರಿಗಳಿಗೆ ಅನಿರೀಕ್ಷಿತ ಲಾಭ ಬರುತ್ತದೆ.

ಕಟಕ — ಪುನರ್ವಸು 4 ಪುಷ್ಯ, ಆಶ್ಲೇಷ
ಆದಾಯವು ಸಾಮಾನ್ಯಗತಿಯಲ್ಲಿರುತ್ತದೆ. ಮಹಿಳೆಯರಿಂದ ಕೆಲಸ ಕಾರ್ಯಗಳಿಗೆ ಅಡ್ಡಿಯಾಗಬಹುದು. ಆಸ್ತಿ ಖರೀದಿ ತಯಾರಿ ನಡೆಸಬಹುದು. ಕ್ರೀಡಾಪಟುಗಳಿಗೆ ನಮ್ಮ ಸಾಮರ್ಥ್ಯವನ್ನು ತೋರಿಸಲು ಉತ್ತಮ ಅವಕಾಶ ದೊರೆಯುತ್ತದೆ. ಹಣಕಾಸಿನ ವ್ಯವಹಾರಗಳಲ್ಲಿ ಅಷ್ಟು ಲಾಭವಿರುವುದಿಲ್ಲ. ಸಂಗಾತಿಯು ಸಂಪಾದನೆಯಲ್ಲಿ ಹೆಚ್ಚು ಭಾಗವನ್ನು ಸಂಸಾರಕ್ಕೆ ಬಳಸುವವರು. ವೃತ್ತಿಯಲ್ಲಿ ಹಿತ ಶತ್ರುಗಳನ್ನು ಕಾಣಬಹುದು.

ಸಿಂಹ — ಮಖಾ, ಪೂರ್ವ ಫಲ್ಗುಣಿ, ಉತ್ತರ ಫಲ್ಗುಣಿ 1
ಅಧಿಕ ಒತ್ತಡದ ನಡುವೆ ಕೆಲಸ ಮಾಡುವಿರಿ. ಆದಾಯವು ಸಾಮಾನ್ಯ ಗತಿಯಲ್ಲಿರುತ್ತದೆ. ಭೂಮಿ ಸಂಬಂಧಿತ ವ್ಯವಹಾರಗಳಲ್ಲಿ ಅಷ್ಟು ಲಾಭವಿರುವುದಿಲ್ಲ. ವಿದ್ಯಾರ್ಥಿಗಳಿಗೆ ಉತ್ತಮ ಫಲಿತಾಂಶ ಪಡೆಯುವ ಯೋಗವಿದೆ. ರಾಜಕೀಯ ನಾಯಕರುಗಳಿಗೆ ಕಳೆದುಹೋಗಿದ್ದ ಜನ ಬೆಂಬಲ ಪುನಃ ದೊರೆಯುತ್ತದೆ. ವಿದೇಶಿ ವ್ಯವಹಾರ ಮಾಡುವವರಿಗೆ ಅಭಿವೃದ್ಧಿ ಕಡಿಮೆ. ಆರೋಗ್ಯಕ್ಕಾಗಿ ಹೆಚ್ಚು ಹಣ ಖರ್ಚಾಗುತ್ತದೆ.

ಕನ್ಯಾ — ಉತ್ತರಫಲ್ಗುಣಿ 2,3,4 ಹಸ್ತ, ಚಿತ್ತಾ 1,2
ಮನಸ್ಸಿನಲ್ಲಿ ಸ್ಥಿರ ಭಾವನೆಗಳಿರುವುದಿಲ್ಲ. ಆದಾಯವು ಮಧ್ಯಮಗತಿಯಲ್ಲಿರುತ್ತದೆ. ಕೃಷಿಯಿಂದ ಸಾಕಷ್ಟು ಲಾಭವನ್ನು ಪಡೆಯಬಹುದು. ಪುಸ್ತಕ ವ್ಯಾಪಾರಿಗಳಿಗೆ ಉತ್ತಮ ವ್ಯಾಪಾರವಾಗುತ್ತದೆ. ಮಕ್ಕಳ ಬಗ್ಗೆ ಶುಭವಾರ್ತೆಗಳನ್ನು ಕೇಳಬಹುದು. ಸಂಗಾತಿಯ ಆದಾಯದಲ್ಲಿ ಹೆಚ್ಚಳವನ್ನು ಕಾಣಬಹುದು.

ತುಲಾ — ಚಿತ್ತಾ 3,4 ಸ್ವಾತಿ, ವಿಶಾಖಾ 1,2,3
ಸರಿಯಾದ ನಿರ್ಧಾರಗಳಿಲ್ಲದೆ ಮನಸ್ಸು ಗೊಂದಲದ ಗೂಡಾಗುತ್ತದೆ. ಆದಾಯವು ಮಧ್ಯಮಗತಿಯಲ್ಲಿರುತ್ತದೆ. ನಿಮ್ಮ ಕೆಲವು ಕೆಲಸಗಳಿಗೆ ಹಿರಿಯರಿಂದ ವಿರೋಧ ಬರಬಹುದು. ವಿದ್ಯಾರ್ಥಿಗಳಿಗೆ ಹೆಚ್ಚಿನ ಫಲಿತಾಂಶ ಪಡೆಯುವುದು ಕಷ್ಟವಾಗಬಹುದು. ಹಳೆಯ ಕೀಲು ನೋವುಗಳು ಕೆಲವರನ್ನು ಕಾಡಬಹುದು. ಪಾಲುದಾರಿಕೆ ವ್ಯವಹಾರಗಳಲ್ಲಿ ನಿಮಗೆ ಲಾಭವಿರುತ್ತದೆ. ವೃತ್ತಿಯಲ್ಲಿದ್ದ ಕೆಲವು ಗೊಂದಲಗಳು ಪರಿಹಾರವಾಗುತ್ತವೆ.

ವೃಶ್ಚಿಕ — ವಿಶಾಖಾ 4 ಅನೂರಾಧ, ಜ್ಯೇಷ್ಠ
ಕೆಲವು ಕಠಿಣ ನಿರ್ಧಾರಗಳನ್ನು ತೆಗೆದುಕೊಳ್ಳಲೇಬೇಕಾದ ಪರಿಸ್ಥಿತಿ ಇರುತ್ತದೆ. ಆದಾಯವು ಮಧ್ಯಮಗತಿಯಲ್ಲಿರುತ್ತದೆ. ನಿಮ್ಮ ಕೆಲಸ ಕಾರ್ಯಗಳಿಗೆ ಜನ ಬೆಂಬಲ ದೊರೆಯುತ್ತದೆ. ಕೃಷಿ ಸಂಶೋಧನಾಕಾರರಿಗೆ ಸಾಕಷ್ಟು ಪ್ರಗತಿ ಇರುತ್ತದೆ. ವಿದ್ಯಾರ್ಥಿಗಳು ಶ್ರಮಪಟ್ಟು ಉತ್ತಮ ಫಲಿತಾಂಶ ಪಡೆಯಬಹುದು. ಬೆಂಕಿಯ ಜೊತೆ ಕೆಲಸ ಮಾಡುವವರು ಹೆಚ್ಚು ಎಚ್ಚರದಿಂದ ಕೆಲಸ ಮಾಡಿ. ಕೃಷಿಯಿಂದ ಸಾಕಷ್ಟು ಲಾಭವನ್ನು ನಿರೀಕ್ಷೆ ಮಾಡಬಹುದು.

ಧನುಸ್ಸು — ಮೂಲಾ, ಪೂರ್ವಾಷಾಢ, ಉತ್ತರಾಷಾಢ 1
ನಿಮ್ಮ ಶತ್ರುಗಳಿಗೂ ಕೂಡ ಸಹಾಯ ಮಾಡುವಿರಿ. ಆದಾಯವು ಕಡಿಮೆ ಇದ್ದು, ಅದರಲ್ಲೇ ನಿರ್ವಹಣೆ ಮಾಡುವಿರಿ. ವಿದೇಶದಲ್ಲಿರುವವರು ಅಲ್ಲಿಯೇ ಸ್ಥಿರಾಸ್ತಿ ಮಾಡಿಕೊಳ್ಳಬಹುದು. ವಿದ್ಯಾರ್ಥಿಗಳು ಸಾಕಷ್ಟು ಪರಿಶ್ರಮ ಹಾಕಿ ಉತ್ತಮ ಫಲಿತಾಂಶ ಪಡೆಯಬಹುದು. ಬಡ್ಡಿ ವ್ಯವಹಾರಗಳು ಅಷ್ಟು ಒಳಿತಲ್ಲ. ಕೃಷಿಯಿಂದ ನಿರೀಕ್ಷಿತ ಆದಾಯ ಇರುವುದಿಲ್ಲ. ಹಿರಿಯರ ಆರೋಗ್ಯಕ್ಕಾಗಿ ಹಣ ಖರ್ಚಾಗುತ್ತದೆ.

ಮಕರ — ಉತ್ತರಾಷಾಢ 2,3,4 ಶ್ರವಣ, ಧನಿಷ್ಠ 1,2
ನಿಮ್ಮ ಪರಿಶ್ರಮದಿಂದ ವೃತ್ತಿಯಲ್ಲಿ ಒಳ್ಳೆಯ ಹೆಸರನ್ನು ಪಡೆಯುವಿರಿ. ಆದಾಯವು ಕಡಿಮೆ ಇರುತ್ತದೆ. ಕಟ್ಟಡ ನಿರ್ಮಾಣಕಾರರಿಗೆ ಉತ್ತಮ ಕೆಲಸ ದೊರೆತು ಆದಾಯ ಹೆಚ್ಚುತ್ತದೆ. ವಿದ್ಯಾರ್ಥಿಗಳಿಗೆ ಅತಿ ಹೆಚ್ಚು ಫಲಿತಾಂಶ ಪಡೆಯುವ ಯೋಗವಿದೆ. ಸ್ವಂತ ಆರೋಗ್ಯದ ಕಡೆ ಗಮನವಿರಲಿ. ಸರ್ಕಾರಿ ಕೆಲಸ ಕಾರ್ಯಗಳಲ್ಲಿ ನಿಧಾನ ಗತಿ ಇರುತ್ತದೆ. ಹಿರಿಯರ ಮಾರ್ಗದರ್ಶನದಿಂದ ಕೃಷಿಯಲ್ಲಿ ಉತ್ತಮ ಸಾಧನೆ ಮಾಡಬಹುದು.

ಕುಂಭ — ಧನಿಷ್ಠ 3,4 ಶತಭಿಷಾ, ಪೂರ್ವಾಭಾದ್ರ 1,2,3
ಸಮಾಜಮುಖಿಯಾಗಿ ಕೆಲಸ ಮಾಡುವಿರಿ. ಆದಾಯವು ನಿರೀಕ್ಷೆಯಷ್ಟಿರುತ್ತದೆ. ಸಂಬಂಧಿಕರಿಗೆ ಕೊಟ್ಟ ಸಾಲ ಮರಳಿ ಬರುವುದಿಲ್ಲ. ಸ್ಥಿರಾಸ್ತಿಯನ್ನು ಕೊಳ್ಳುವ ಯೋಚನೆ ಮಾಡಬಹುದು. ಹೊಸ ವ್ಯವಹಾರಗಳಲ್ಲಿ ನಿಮಗೆ ಅವಕಾಶ ದೊರೆಯುತ್ತದೆ. ಹರಿತವಾದ ಆಯುಧಗಳ ಜೊತೆ ಕೆಲಸ ಮಾಡುವವರು ಎಚ್ಚರದಿಂದ ಮಾಡಿರಿ. ಸಂಗಾತಿಯ ಸಹಾಯದಿಂದ ಸರ್ಕಾರಿ ಅನುದಾನಗಳು ಸುಲಭವಾಗಿ ದೊರೆಯುತ್ತವೆ.

ಮೀನ — ಪೂರ್ವಾಭಾದ್ರ 4 ಉತ್ತರಭಾದ್ರ, ರೇವತಿ
ಅತಿಯಾದ ಆತ್ಮವಿಶ್ವಾಸ ನಿಮ್ಮಲ್ಲಿ ಇರುತ್ತದೆ. ಆದಾಯವು ಮಧ್ಯಮಗತಿಯಲ್ಲಿರುತ್ತದೆ. ಧರ್ಮದ ಕಡೆಗೆ ಮನಸ್ಸು ಹೆಚ್ಚು ವಾಲುತ್ತದೆ. ಬಯಸಿದ ಒಡವೆ, ವಸ್ತುಗಳನ್ನು ಕೊಳ್ಳಬಹುದು. ಮಕ್ಕಳಿಂದ ಸೂಕ್ತ ಗೌರವ ದೊರೆಯುವುದಿಲ್ಲ. ಹಿರಿಯರ ಆರೋಗ್ಯದಲ್ಲಿ ಸಾಕಷ್ಟು ಸುಧಾರಣೆಯನ್ನು ಕಾಣಬಹುದು. ಆಭರಣ ತಯಾರಕರಿಗೆ ಹಿನ್ನಡೆಯಾಗುತ್ತದೆ.


ಪದಬಂಧ 2906

ಮೇಲಿನಿಂದ ಕೆಳಕ್ಕೆ

1.ಒಲವು ನಲಿವಿನ ಒಗ್ಗೂಡುವಿಕೆ ಸೇರುವಿಕೆ 5
2. ಫಲಕಾರಿಯಾಗದ ಮಹಾಪ್ರಯತ್ನ 5
3. ಯಾವಾಗಲೂ ಮನಸ್ಸನ್ನು ಉಲ್ಲಾಸಗೊಳಿಸಿದ ರಂಗನಾಟಕ 4
4. ಬಂಡಾಯವೆಬ್ಬಿಸುವ ಅಸಮ್ಮತಿಯ ಬೃಹತ್ ಪ್ರತಿಭಟನೆ 4
7. ಜೀವನ ವಿಕಾಸ ಕಾಡಿನಲ್ಲಿ ಅರಳುವ ಈ ಹೂವಿನಂತಿರಲಿ ಎಂಬುದು ಕವಿಯ ಬಯಕೆ 4
9. ಅನುಭವಕ್ಕೆ ಬರುವ ದ್ರವ್ಯದ ರುಚಿ 4
10. ಊರ್ವಶಿ, ಮೇನಕೆ, ತಿಲೋತ್ತಮೆಯರ ಜೊತೆ ನರ್ತಿಸಿದ ಅಪ್ಸರೆ ಮುಖ ಮೇಲೆ ಮಾಡಿದ್ದಾಳೆ 2
12. ಎಲ್ಲದಕ್ಕೂ ಬೇಕು ಒಂದು ಕಾರಣ 2
14. ಗುಣವಾಗಿ ಬೆಳೆದ ದುಷ್ಟ ಸ್ವಭಾವ 5
15. ರಾಮಲಕ್ಷ್ಮಣರ ಸೋದರನ ನೆಲವಿದು 5
16. ಮಂದಿಯ ಕೋಪದ ಕಠೋರ ಪಲುಕು 4
17. ನರನಲ್ಲಿ ತಗ್ಗಿದ ತಲೆ 4

ಎಡದಿಂದ ಬಲಕ್ಕೆ

1.ಕವಿಯ ಒಲವಿನಿಂದ ಮೂಡಿದ ಪದ್ಯ ಸಾಹಿತ್ಯ 4
3. ದೇವ ದೇವಿಯರನ್ನು ವರ್ಣಿಸುವ ಒಂದು ಸಾವಿರ ಹೆಸರು 5
5. ಬಡ್ಡಿ ಚಕ್ರಬಡ್ಡಿಗೆ ಹಣ ಕೊಟ್ಟು ವಸೂಲಿಗೆ ಬಾಗಿಲಲ್ಲಿ ನಿಲ್ಲುವವ 4
6. ಬೀದಿಯಲ್ಲಿ ಹೊರಡುವ ವೈಭವದ ಪ್ರದರ್ಶನಾ ಯಾತ್ರೆ 5
8. ಮಹಾ ಪಟ್ಟಣದ ಆಡಳಿತಕ್ಕೆ ಕೂಟ ವ್ಯವಸ್ಥೆ 5
11. ಮನಸ್ಸಿಗೆ ಮುದನೀಡುವಂತಹ ವಸ್ತು ವಿಷಯ 3
13. ಈ ಪರಮಪುರುಷ ಪುರಂದರ ವಿಠಲನೇ ಸರಿ! 5
16. ಪುಣ್ಯಪ್ರಾಪ್ತಿಗಾಗಿ ನೀರಿನ ನೋಟ 5
18. ಉದ್ರೇಕ, ಉದ್ವೇಗಗಳಿಂದ ದೇಹದಲ್ಲಾಗುವ ಸಂಕಟ 4
19. ವಿಶ್ವವಿದ್ಯಾಲಯದ ಡಿಗ್ರೀ ಪಡೆದುಕೊಂಡವ 5
20. ಒಂಬತ್ತರ ಹೊಸ ದೃಷ್ಟಿಯುಳ್ಳವ 4



ಪದಬಂಧ ಉತ್ತರ -2905

ಮೇಲಿಂದ ಕೆಳಕ್ಕೆ


1.ನಂದಿನಿ 2.ಪತಾಕ 3.ತಂತ್ರಜ್ಞಾನ 4.ದಲಿತ 7.ತಂದಾನ 9.ವಂಶೋದ್ಧಾರಕ 10.ಪಾತರಗಿತ್ತಿ 12.ವರೋಪಚಾರ 16.ಶಂತನು 17.ನಿರಾಕಾರ 18.ಹವನ 19.ಅಗೆತ 20.ತಳಿರು

ಎಡದಿಂದ ಬಲಕ್ಕೆ

1.ನಂದಾದೀಪ 3.ತಂತೀನಾದ 5.ತಾರಕಮಂತ್ರ 6.ನಿರಾತಂಕ 8.ಜ್ಞಾನವಂತ 10.ಪಾಲನ 11.ಪಾವನಚರಿತ 13.ದ್ಧಾಸಿ 14.ಪಾಪ 15.ಗಿರಿಜಾಶಂಕರ 17.ನಿವೃತ್ತಿ 18.ಹರಹರಾ 19.ಅನುಚಿತ 21.ಕಾಯಿಹೋಳಿಗೆ 22.ನವದ್ವಾರ 23.ತವರೂರು

ಏಕಾಂತಕ್ಕೆ ಸರಿದ ಸುರಬಹಾರ್ ನಾದ

• ಸುಮಂಗಲಾ



ಅನ್ನಪೂರ್ಣಾ ದೇವಿ

ಮೈಹರ್ ಘರಾನೆಯನ್ನು ಹುಟ್ಟುಹಾಕಿದ ಉಸ್ತಾದ್ ಅಲ್ಲಾವುದ್ದೀನ್ ಖಾನರ ಮಗಳು ವಿದುಷಿ ಅನ್ನಪೂರ್ಣಾ ದೇವಿ ಶ್ರೇಷ್ಠ ಸುರಬಹಾರ್ ವಾದಕಿಯಾಗಿದ್ದರು. ಸಾಮಾಜಿಕ ಬದುಕಿನಿಂದ ದೂರವುಳಿದ ನಿಸ್ಸಂಗಿಯಂತೆ, ನಿಗೂಢತೆಯನ್ನು ಹೊದ್ದ ಏಕಾಂಗಿಯಂತೆ ಇದ್ದ ಅವರು ಶಿಷ್ಯರಿಗೆ ಮಾತ್ರ ಪ್ರೀತಿ, ಭಯ ಹಾಗೂ ಭಕ್ತಿ ಮೇಳೈಸಿದ್ದ 'ಗುರುಮಾ' ಆಗಿದ್ದರು.

ಸರೋದ್ ವಾದಕರಾದ ಆಶೀಷ್ ಖಾನ್, ರಾಜೀವ ತಾರಾನಾಥ, ಬಸಂತ್ ಕಾಬ್ರಾ, ಸುರೇಶ್ ವ್ಯಾಸ್, ಪ್ರದೀಪ್ ಬರೋಟ್, ಅಮಿತ್ ಭಟ್ಟಾಚಾರ್ಯ, ಬಾನ್ಸುರಿ ವಾದಕರಾದ ಹರಿಪ್ರಸಾದ್ ಚೌರಾಸಿಯಾ ಮತ್ತು ನಿತ್ಯಾನಂದ ಹಳದೀಪುರ, ಸಿತಾರ್ ವಾದಕರಾದ ನಿಖಿಲ್ ಬ್ಯಾನರ್ಜಿ, ಸುಧೀರ್ ಫಾಡ್ಕೆ, ಸಂಧ್ಯಾ ಫಾಡ್ಕೆ, ಶಾಶ್ವತೀ ಸಹಾ, ಹಿರಿಯ ಹಿಂದೂಸ್ತಾನಿ ಗಾಯಕ ವಿನಯ ಭರತ್ ರಾಮ್... ವಿವಿಧ ತಲೆಮಾರಿನ, ವಿಭಿನ್ನ ವಾದ್ಯಗಳ ವಾದಕರಾಗಿದ್ದ ಈ ಎಲ್ಲರಿಗೂ ಸಾಮಾನ್ಯವಾಗಿದ್ದ ಒಂದು ಅಂಶವಿತ್ತು. ಇವರೆಲ್ಲರಿಗೂ ಒಂದಲ್ಲ ಒಂದು ಕಾಲಘಟ್ಟದಲ್ಲಿ ಗುರುವಾಗಿ ಕಲಿಸಿದ್ದು ಅನ್ನಪೂರ್ಣಾ ದೇವಿಯವರು. ಇವರೆಲ್ಲರಿಗೆ ಕಲಿಸಿದ್ದು, ವಿವಿಧ ವಾದ್ಯಗಳಲ್ಲಿ ತಮ್ಮದೇ ಚಹರೆಯನ್ನು ಕಂಡುಕೊಳ್ಳುವುದಕ್ಕೆ ಸಾಧ್ಯಗೊಳಿಸಿದ್ದು ಮಾತ್ರ ತಮ್ಮ ಗಾಯನದ ಮೂಲಕವೇ. ಅನ್ನಪೂರ್ಣಾ ಅವರು ಎಷ್ಟು ಶ್ರೇಷ್ಠ ವಾದಕಿಯಾಗಿದ್ದರೋ ಅಷ್ಟೇ ಎತ್ತರದ ಗುರುವಾಗಿದ್ದರು.

ಪ್ರತಿಯೊಬ್ಬ ಶಿಷ್ಯರನ್ನೂ ಅವರಿಗೆ ನಿಜಕ್ಕೂ ಕಲಿಯುವ ಆಸಕ್ತಿ ಎಷ್ಟು ತೀವ್ರವಾಗಿದೆ ಎಂಬುದನ್ನು ಪರೀಕ್ಷಿಸಿಯೇ ತೆಗೆದುಕೊಳ್ಳುತ್ತಿದ್ದರು. ಆ ಶಿಷ್ಯರು ಮೊದಲು ಎಷ್ಟೇ ಕಲಿತಿದ್ದರೂ ಕೂಡ, ಅದನ್ನೆಲ್ಲ ಕೈಬಿಟ್ಟು, ಆರಂಭದಿಂದ ಕಲಿಯಬೇಕೆಂಬ ಷರತ್ತನ್ನೂ ವಿಧಿಸುತ್ತಿದ್ದರು. ಯಾವುದಾದರೂ ಸಂಗತಿಯನ್ನು ಹಾಡಿ ಕಲಿಸಿದ ನಂತರ, ಅದು ಪರಿಪೂರ್ಣವಾಗಿ ಶಿಷ್ಯರ ಕೈಬೆರಳುಗಳಿಗೆ ಇಳಿದು, ವಾದ್ಯದಲ್ಲಿ ಪರಿಪೂರ್ಣವಾಗಿ ಹೊರಹೊಮ್ಮುವವರೆಗೆ ಅಭ್ಯಾಸ ಮಾಡಿ ಎನ್ನುತ್ತಿದ್ದರು.

ಬಾಬಾ ಎಂದೇ ಹೆಸರಾಗಿದ್ದ ಉಸ್ತಾದ್ ಅಲಾವುದ್ದೀನ್ ಖಾನರು ಮಗಳು ಅನ್ನಪೂರ್ಣಾ ಚಿಕ್ಕವರಿದ್ದಾಗ ಆರಂಭದಲ್ಲಿ ಸಂಗೀತ ಕಲಿಸುವುದಕ್ಕೆ ಹಿಂಜರಿದಿದ್ದರು. ತನ್ನಣ್ಣ ಅಲಿ ಅಕ್ಬರ್ ಖಾನರಿಗೆ ಬಾಬಾ ಸರೋದ್ ಕಲಿಸುವುದನ್ನು ಮರೆಯಲ್ಲಿ ನಿಂತು ಕೇಳಿ, ಪ್ರತಿಯೊಂದು ಅಂಶವನ್ನು ಅನ್ನಪೂರ್ಣಾ ಮೈಗೂಡಿಸಿಕೊಂಡಿದ್ದರು. ಅಲಿ ಅಕ್ಬರ್ ಖಾನ್ ರಿಯಾಜ್ ಮಾಡುತ್ತಿರುವಾಗ ತಪ್ಪಿದ್ದನ್ನು ಪುಟ್ಟ ಹುಡುಗಿ ಅನ್ನಪೂರ್ಣಾ ಸರಿಪಡಿಸುವುದನ್ನು ಕಂಡ ಬಾಬಾ ಆಕೆಗೆ ಕಲಿಸುವ ನಿರ್ಧಾರ ಮಾಡುತ್ತಾರೆ. ತಮ್ಮ ನಂತರ ಸುರಬಹಾರ್ ಉಳಿಯುವುದಿದ್ದರೆ ಅದು ಈಕೆಯಿಂದಲೇ ಎಂದು ಬಾಬಾಗೆ ಆಳದಲ್ಲಿ ಅನ್ನಿಸಿದ್ದಿರಬಹುದು. ಹೀಗಾಗಿ ಅಲಿ ಅಕ್ಬರ್ ಖಾನರಿಗೆ ಸರೋದ್, ರವಿಶಂಕರ್‌ಗೆ ಸಿತಾರ್ ಕಲಿಸಲು ಶುರು ಮಾಡಿದರೆ, ಅನ್ನಪೂರ್ಣಾ ಅವರಿಗೆ ಸುರಬಹಾರ್ ಕಲಿಸಿದರು.

'ಅನ್ನಪೂರ್ಣಾ ದೇವಿಯವರು ಉಸ್ತಾದ್ ಅಲ್ಲಾವುದ್ದೀನ್ ಖಾನ್‌ರ (ಬಾಬಾ) ಸಂಗೀತವನ್ನು ಶೇಕಡ 80 ರಷ್ಟನ್ನು ಮೈಗೂಡಿಸಿಕೊಂಡಿದ್ದರು, ಅಲಿ ಅಕ್ಬರ್ ಖಾನ್ ಶೇಕಡ 70ರಷ್ಟು ಮತ್ತು ರವಿಶಂಕರ್ ಶೇಕಡ 40ರಷ್ಟನ್ನು ಮೈಗೂಡಿಸಿಕೊಂಡಿದ್ದರು' ಎಂದು ಖ್ಯಾತ ಹಿಂದೂಸ್ತಾನಿ ಗಾಯಕ ಉಸ್ತಾದ್ ಅಮೀರ್ ಖಾನ್ ತಮ್ಮ ಹತ್ತಿರದ ಶಿಷ್ಯಂದಿರಲ್ಲಿ ಹೇಳುತ್ತಿದ್ದರಂತೆ.

ಇದನ್ನು ಅರಿತಿದ್ದ ಅಲಿ ಅಕ್ಬರ್ ಖಾನರೇ ಒಂದು ಕಡೆ 'ರವಿಶಂಕರ್, ನಾನು ಮತ್ತು ಪನ್ನಾಲಾಲ್ ಘೋಷ್‌ರನ್ನು ತಕ್ಕಡಿಯ ಒಂದು ಕಡೆ ಇಡಿ, ಇನ್ನೊಂದು ಕಡೆ ಅನ್ನಪೂರ್ಣಾರನ್ನು ಇಡಿ, ಆಗಲೂ ತಕ್ಕಡಿ ಅನ್ನಪೂರ್ಣಾ ಅವರ ಕಡೆಗೇ ಭಾರವಾಗಿ ವಾಲುತ್ತೆ' ಎಂದಿದ್ದರು.

ವೇದಿಕೆಯ ಮೇಲೆ ವಿದುಷಿ ಅನ್ನಪೂರ್ಣಾ ದೇವಿಯವರು ನೀಡಿದ ಸಂಗೀತ ಕಛೇರಿ ಬೆರಳೆಣಿಕೆಯಷ್ಟು. ಯಾರು ಎಷ್ಟೇ ಮನವೊಲಿಸಲು ಯತ್ನಿಸಿದರೂ, ಅವರು ಸುರಬಹಾರ್ ನುಡಿಸಾಣಿಕೆಯನ್ನು ರೆಕಾರ್ಡ್ ಮಾಡುವುದಕ್ಕೆ ಒಪ್ಪಿರಲಿಲ್ಲ. ಈಗ ಅವರ ನಾಲ್ಕಾರು ಧ್ವನಿಮುದ್ರಿಕೆಗಳಷ್ಟೇ ಯುಟ್ಯೂಬ್‌ನಲ್ಲಿ ಲಭ್ಯವಿವೆ. ಅವರೊಬ್ಬರೇ ನುಡಿಸಿರುವ ಮಾಂಜ್ ಕಮಾಜ್, ಕೌಂಸಿ ಕಾನಡಾ, ಮತ್ತು ರವಿಶಂಕರ್ ಜೊತೆಗೂಡಿ ಯಮನ್ ಕಲ್ಯಾಣ್ ನುಡಿಸಿರುವ ಒಂದು ಜುಗಲಬಂದಿ ಕಛೇರಿಯ ಧ್ವನಿಮುದ್ರಿಕೆ ಲಭ್ಯವಿವೆ.

ವೈವಾಹಿಕ ಬದುಕಿನಲ್ಲಿ ಗಂಡ-ಹೆಂಡತಿಯ ನಡುವೆ ಯಾಕೆ, ಎಲ್ಲಿ ತಪ್ಪುಗಂಟಾಗುತ್ತದೆ, ಯಾವುದು ಸರಿಹೋಗುವುದಿಲ್ಲ ಎಂದು ಹೇಳುವುದು ಕಷ್ಟ. ರವಿಶಂಕರ್ ಮತ್ತು ಅನ್ನಪೂರ್ಣಾ ದೇವಿಯವರ ವೈವಾಹಿಕ ಜೀವನ ಮುರಿದು ಬಿದ್ದ ನಂತರ ದೇವಿಯವರು ತೀರಾ ಏಕಾಂತಕ್ಕೆ ಸರಿದು ಹೋದರು. ತದನಂತರದ ವರ್ಷಗಳಲ್ಲಿ ಬಾಬಾ ಹಾಗೂ ಇದ್ದ ಒಬ್ಬನೇ ಮಗ ಶುಭೋ ತೀರಿಕೊಂಡ ನಂತರ ಅವರು ಮತ್ತಷ್ಟು ಮೌನಿಯಾದರು.


ಪ್ರೇಕ್ಷಕರನ್ನು ಸಂತೋಷಗೊಳಿಸಲು ಸಂಗೀತವನ್ನು ಸ್ವಲ್ಪ ಲಘುವಾಗಿಸಬೇಕು, ತುಸು ಪಾಶ್ಚಾತ್ಯಗೊಳಿಸಬೇಕು, ಅವರ ಮನಸ್ಸಿಗೆ ಹಿತವಾಗುವಂತೆ ಇರಬೇಕು ಎನ್ನೋದು ರವಿಶಂಕರ್ ಅವರ ಅಭಿಪ್ರಾಯವಾಗಿತ್ತು. ಆದರೆ ಅನ್ನಪೂರ್ಣಾ ದೇವಿಯವರು ಶಾಸ್ತ್ರೀಯ ಪರಂಪರೆಯೊಂದಿಗೆ ಅನುರೂಪವಾಗಿರಬೇಕೆಂದು ಬಯಸಿದ್ದರು. ಪ್ರೇಕ್ಷಕರು ನಮ್ಮ ಈ ಶಾಸ್ತ್ರೀಯ ಸಂಗೀತದ ಪರಂಪರೆಯನ್ನು ಅದರ ಶುದ್ಧತೆಯಲ್ಲಿ ರಸಾಸ್ವಾದನೆ ಮಾಡುವ ಮಟ್ಟಕ್ಕೆ ಬೆಳೆಯಬೇಕೇ ವಿನಃ ಕಲಾವಿದರು ಕೆಳಗಿಳಿಯುವುದಲ್ಲ ಅನ್ನೋದು ಅನ್ನಪೂರ್ಣಾ ಅವರ ಅಭಿಪ್ರಾಯವಾಗಿತ್ತು.

ಇವರಿಬ್ಬರೂ ನೀಡಿದ ಜುಗಲಬಂದಿ ಕಛೇರಿಗಳಲ್ಲಿ ಪ್ರೇಕ್ಷಕರು ಅನ್ನಪೂರ್ಣಾ ಅವರ ವಾದನವನ್ನು ಬಹಳವಾಗಿ ಮೆಚ್ಚಿಕೊಂಡಿದ್ದರು. ಅನ್ನಪೂರ್ಣಾ ಅವರು ನೀಡಿದ ಕೆಲವೇ ಸೋಲೋ ಕಛೇರಿಗಳಲ್ಲಿಯೂ ಅವರಿಗೆ ಅಪಾರ ಮೆಚ್ಚುಗೆ ವ್ಯಕ್ತವಾಗಿತ್ತು. ಇದೂ ಕೂಡ ರವಿಶಂಕರರ ಮನಸ್ಸಿನಲ್ಲಿ ಅಸಮಾಧಾನ ಹೊಗೆಯಾಡಲು ಕಾರಣವಾಗಿತ್ತು; ಮದುವೆಯನ್ನು ಉಳಿಸಿಕೊಳ್ಳಬೇಕೆಂದು, ಈ ಯಾವುದೂ ಬಾಬಾಗೆ ಗೊತ್ತಾಗುವುದು ಬೇಡವೆಂದು ಅನ್ನಪೂರ್ಣಾ ಅವರು ಹೊರಗೆ ಕಛೇರಿ ಕೊಡುವುದನ್ನೇ ನಿಲ್ಲಿಸಲು ನಿರ್ಧರಿಸಿದರು ಎನ್ನಲಾಗುತ್ತದೆ.

ನೈಜ ಕಾರಣಗಳು ಏನೇ ಇರಬಹುದು. ಆದರೆ ಜಗತ್ತು ಏಕೈಕ ಶ್ರೇಷ್ಠ ಸುರಬಹಾರ್ ವಾದನವನ್ನು ಕೇಳುವ ಅವಕಾಶದಿಂದ ಶಾಶ್ವತವಾಗಿ ವಂಚಿಸಿಕೊಂಡಿತು. ಒಂದು ಅವಕಾಶವಿತ್ತು. ಆ ಒಂದೇ ಅವಕಾಶ ಕೂಡ ಯಾವುದೋ ಕಾರಣಕ್ಕೆ ಅನಂತ ಬ್ರಹ್ಮಾಂಡದಲ್ಲಿ ಕಳೆದೇ ಹೋಯಿತು.

ಮಾಧ್ಯಮಗಳು, ಪ್ರಚಾರ, ಥಳುಕುಬಳಕು, ಅಬ್ಬರ-ಆಡಂಬರ ಎಲ್ಲದರಿಂದ ದೂರವುಳಿದ ಅವರು ಪದ್ಮಭೂಷಣ ಪ್ರಶಸ್ತಿ ಬಂದಾಗಲೂ ಆಪ್ತರೊಬ್ಬರನ್ನು ಸ್ವೀಕರಿಸಲು ಕಳಿಸಿದರು. ಎಂದೂ ಯಾರಲ್ಲಿಯೂ ತೋಡಿಕೊಳ್ಳದ ಮನದಾಳದ ನೋವನ್ನು ಮರೆಯುವುದಕ್ಕೆ ಅವರಿಗೆ ಆಸರೆಯಾಗಿದ್ದು ಏಕಾಂತದ ಸುರಬಹಾರ್ ಸಾಧನೆ. ಮೈಹರ್ ಘರಾನೆಯ ಖಜಾನೆಯನ್ನು ತೆರೆದು ಶಿಷ್ಯರಿಗೆ ಕಲಿಸುವುದನ್ನು ಮತ್ತು ಏಕಾಂತ ಸಾಧನೆಯನ್ನು ಮಾತ್ರ ಗುರಿಯಾಗಿಸಿಕೊಂಡು, ನಿಸ್ಸಂಗವನ್ನು ತಮಗೆ ತಾವೇ ಹೇರಿಕೊಂಡ ಸಂತಳ ಬದುಕು ಅವರದು. ಅವರ ಜನ್ಮದಿನದ ಕುರಿತೂ ಸರಿಯಾದ ಮಾಹಿತಿಗಳಿಲ್ಲ. ಉಸ್ತಾದ್ ಅಲಿ ಅಕ್ಬರ್ ಖಾನರು ಆಕೆ ತಮಗಿಂತ ಐದು ವರ್ಷ ಚಿಕ್ಕವರೆಂದು ಹೇಳುತ್ತಿದ್ದರಂತೆ. ಅದರ ಆಧಾರದ ಮೇಲೆ ಅವರ ಶಿಷ್ಯಂದಿರು ಸೇರಿ, ಈ ವರ್ಷವನ್ನು ಅವರ ಜನ್ಮ ಶತಮಾನೋತ್ಸವ ಸ್ಮರಣೆಕೆಯ ವರ್ಷನ್ನಾಗಿ ಸಂಭ್ರಮಿಸಲು ನಿರ್ಧರಿಸಿದ್ದೇವೆ ಎನ್ನುತ್ತಾರೆ ನಿತ್ಯಾನಂದ ಹಳದೀಪುರ್.

ಮೊದಲ ಓದು



ಅದೆಲ್ಲಾ ಬಿಟ್ಟು
ಲೇ: ಶ್ರೀನಿವಾಸ ಜೋಕಟ್ಟೆ
ಪ್ರ: ಸಾಹಿತ್ಯ ಸುಗ್ಗಿ
ಸಂ: 9740066842

ಕರಾವಳಿಯ ಸುತ್ತಾಟ

ಲೇಖಕ ಶ್ರೀನಿವಾಸ ಜೋಕಟ್ಟೆ ಅವರು ನಾಲ್ಕು ದಶಕಗಳಿಂದ ಕಥೆಗಳನ್ನು ಬರೆಯುತ್ತಿದ್ದಾರೆ. ನಿಯಮಿತವಾಗಿ ಬೇರೆ ಬೇರೆ ಪತ್ರಿಕೆ, ವಿಶೇಷಾಂಕಗಳಿಗೆ ಬರೆದ ಕಥೆಗಳು 'ಅದೆಲ್ಲಾ ಬಿಟ್ಟು' ಸಂಕಲನದಲ್ಲಿ ಇವೆ. ಇಲ್ಲಿನ ಕಥೆಗಳಲ್ಲಿ ಮಂಗಳೂರಿನಿಂದ ಮುಂಬೈವರೆಗಿನ ಪಯಣದ ಅನುಭವ ದಟ್ಟವಾಗಿ ಕಾಣಿಸುತ್ತದೆ. ಕರಾವಳಿ ಬದುಕು ಮತ್ತು ವಲಸಿಗನ ಭಾವ ಸಂವೇದನೆ ಇಲ್ಲಿ ಹರಳುಗಟ್ಟಿದೆ. ಜೀವನ ಒಂದೇ ಊರಲ್ಲಿ ನೆಲೆ ನಿಲ್ಲಲು ಆಗುವುದಿಲ್ಲ. ಹುಟ್ಟಿ ಬೆಳೆದ ಮನೆ ಮಾರುವ ಅನಿವಾರ್ಯತೆ ಉಂಟು ಮಾಡುವ ವೇದನೆ ಕೂಡ ಕಾಣಸಿಗುತ್ತಿದೆ. ಬಹುತೇಕ ಕಥೆಗಳಲ್ಲಿ 'ಮತ್ಸ್ಯಗಂಧ' ವಿದೆ.

ಮಂಗಳೂರು ಬಳಿಯ ಸುರತ್ಕಲಿನಿಂದ ಮುಂಬೈಗೆ ಬಸ್ಸಿನಲ್ಲಿ ಹೊರಟರೆ ಉಡುಪಿ, ಸಾಲಿಗ್ರಾಮ ಕೋಟಗಳ ದರ್ಶನ ಮಾಡಿಸುತ್ತಿತ್ತು. ಕೊಂಕಣ ರೈಲು ಆರಂಭವಾದ ನಂತರ ಮತ್ಸ್ಯಗಂಧ ರೈಲಿನಲ್ಲಿ ನಿರೂಪಕನಿಗೆ ಸಾಲಿಗ್ರಾಮದ ಆಂಜನೇಯ ದೇವಸ್ಥಾನ, ಕೋಟ ಹೈಸ್ಕೂಲ್... ಕಾಣುತ್ತಿರಲಿಲ್ಲ. ಆ ಕೊರತೆ ನೀಗಬೇಕೆಂದರೆ ಯಶೋಧಕ್ಕನ ಮನೆಗೆ ಬರಬೇಕಿತ್ತು. ಅಚ್ಚರಿ ಮೂಡಿಸಲು ಆ ಮನೆಗೆ ದಿಢೀರೆಂದು ಒಮ್ಮೆ ಆತ ಭೇಟಿ ನೀಡುತ್ತಾನೆ. ಅಲ್ಲಿ ಯಶೋಧಕ್ಕ ಇಲ್ಲ. ಅವರು ಮನೆ ಮಾರಿ ಪೂನಾವನ್ನು ಸೇರಿದ್ದಾರೆ. ಲ್ಯಾಂಡ್ ಲೈನ್ ಫೋನ್ ಫಜೀತಿ, ಅದಕ್ಕೆ ನೆರೆಹೊರೆಯ ಮನೆಗಳಿಗೆ ಕರೆ ಮಾಡುವುದು ಅಲ್ಲಿ ಆದ ಆಕರ್ಷಣೆ 'ಅದೆಲ್ಲಾ ಬಿಟ್ಟು' ಕಥೆಯಲ್ಲಿ ಭಾರವಾದ ನೆನಪಾಗಿ ಕಾಡುತ್ತವೆ.

ಬಹುರಾಷ್ಟ್ರೀಯ ಕಂಪನಿಗಳ ಆಗಮನದಿಂದ ಮಂಗಳೂರಿನಲ್ಲಿ ಹಿಂದಿ ಆವರಿಸಿರುವ ಬಗ್ಗೆ 'ಕನಸಿನ ಬೀಜ ಹಸಿರಾಗಿ ಚಿಗುರೊಡೆದು' ಕಥೆಯಲ್ಲಿ ಗಿರೀಶ ವಿಷಾದದಿಂದಲೇ ನುಡಿಯುತ್ತಾನೆ. ಇಲ್ಲೂ ಆಸ್ತಿ ಮಾರುವ ವಿಷಯ ಬಂದಾಗ 'ಅಮ್ಮಾ, ಅನ್ಯಧರ್ಮದವರಿಗೆ ಮಾರಬೇಡಿ ಅವರು ಮನೆ ಖರೀದಿಸಿದರೆ ಮೊದಲಿಗೆ ನಿಮ್ಮ ತುಳಸೀ ಕಟ್ಟೆಯನ್ನು ಒಡೆದು ಹಾಕಬಹುದು...' ಮಂಗಳೂರು ನಗರದ ಬಸ್ಸಿನಲ್ಲಿ 'ಕಿಸೆಗಳ್ಳರಿದ್ದಾರೆ ಎಚ್ಚರಿಕೆ' ಎಂಬ ಬರಹ ಸಮುದಾಯದಲ್ಲಿ ಅಪರಿಚಿತರ ಪ್ರಮಾಣ ಹೆಚ್ಚುತ್ತಲೇ ಇದ್ದು, ಪರಸ್ಪರರ ಬಗ್ಗೆ ಶಂಕೆ, ಅನುಮಾನದಲ್ಲಿ ಕಾಲ ನೂಕುತ್ತಿರುವ ವಾಸ್ತವವನ್ನು ಧ್ವನಿಸುತ್ತದೆ.

ಪುಟ: 268 ₹275

ಬೇಡುವ ಜೋಗತಿ...

10ನೇ ಪುಟದಿಂದ...

ರಾಜಮ್ಮ ಅವರ ಈ ಉದಾತ್ತ ಕೆಲಸವನ್ನು ಮೆಚ್ಚಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಪ್ರಶಂಸೆ ಪತ್ರ ಕೊಟ್ಟಿದ್ದೇ ತಡ, ಈಗ ಹಲವರು ಅವರನ್ನು ಸನ್ಮಾನಿಸುತ್ತಿದ್ದಾರೆ. ಹಲವು ಶಾಲೆಗಳ ಶಿಕ್ಷಕರು ಸಂಪರ್ಕಿಸಿ ತಮ್ಮ ಮಕ್ಕಳಿಗೂ ಬಟ್ಟೆ ಕೊಡಿಸುವಂತೆ ಕೇಳುತ್ತಿದ್ದಾರೆ. ಆದರೆ, ತಮ್ಮ ಬಳಿ ಸದ್ಯಕ್ಕೆ ಹಣವಿಲ್ಲ ಎಂದು ಹೇಳಿರುವ ರಾಜಮ್ಮ, ಮುಂದಿನ ವರ್ಷ ಬಟ್ಟೆ ಕೊಡಿಸಲು ಪ್ರಯತ್ನಿಸುವುದಾಗಿ ಭರವಸೆ ನೀಡಿದ್ದಾರೆ.

> **ಸಾಮಾಜಿಕ ಮಾಧ್ಯಮಗಳಲ್ಲಿ ಏನೇನೋ ವಿಚಾರಗಳು ಹರಿದಾಡುತ್ತವೆ. ಆದರೆ, ಇಂಥವರ ಸಮಾಜ ಸೇವೆ ಮುನ್ನೆಲೆಗೆ ಬರುವುದೇ ಇಲ್ಲ. ಆದರೂ ರಾಜಮ್ಮ ಅವರ ಸೇವೆಯನ್ನು ಮುಖ್ಯಮಂತ್ರಿ ಗುರುತಿಸಿದ್ದಾರೆ. ಈ ವಿಚಾರ ಸಾಮಾಜಿಕ ಮಾಧ್ಯಮಗಳಲ್ಲಿ ಹರಿದಾಡಬೇಕು. ಜನರಲ್ಲಿ ಪರಿವರ್ತನೆ ತರಬೇಕು. ಇವರನ್ನು ನೋಡಿಯಾದರೂ ಒಂದಷ್ಟು ಜನ ಶಿಕ್ಷಣ ಕ್ಷೇತ್ರಕ್ಕೆ ಕೊಡುಗೆ ನೀಡಬೇಕು. ಆಗ ನಮ್ಮ ಶೈಕ್ಷಣಿಕ ವ್ಯವಸ್ಥೆ ಬದಲಾಗುತ್ತದೆ.**
> **ಭೂಮೇಶ್ವರ,** ಕ್ಲಸ್ಟರ್ ಸಂಪನ್ಮೂಲ ವ್ಯಕ್ತಿ, ಕಂಪ್ಲಿ

ತಮ್ಮ ಉಳಿತಾಯದ ಹಣವನ್ನು ಮಕ್ಕಳ ಶಿಕ್ಷಣಕ್ಕಾಗಿ ವಿನಿಯೋಗಿಸಿರುವ ಇವರಿಗೆ ಸ್ವಂತ ಸೂರಿಲ್ಲ. ಸರ್ಕಾರಿ ಜಾಗದಲ್ಲಿ ಶೆಡ್ ಹಾಕಿಕೊಂಡು ಜೀವನ ನಡೆಸುತ್ತಿದ್ದಾರೆ. ಹೂ, ಕುಂಕುಮ, ಮೂರ್ತಿಯುಳ್ಳ ಪಡ್ಲಿಗಿ ಹಿಡಿದು, ರಸ್ತೆಬದಿಯಲ್ಲಿ ನಿಲ್ಲುವ ರಾಜಮ್ಮ, ದಾರಿ ಹೋಕರ ಬಳಿ ಭಿಕ್ಷೆ ಬೇಡುತ್ತಾರೆ. 'ದಿನಕ್ಕೆ ₹250–₹300 ಸಿಗುತ್ತದೆ. ಇಷ್ಟೇ ನನ್ನ ಬದುಕು' ಎಂದು ಖುಷಿಯಿಂದಲೇ ಹೇಳಿದರು.

ಜೋಗತಿಯಾಗಿದ್ದು ಹೇಗೆ?

ರಾಜಮ್ಮ ಅವರಿಗೆ ಹುಟ್ಟಿದಾಗಿನಿಂದಲೂ ಸಣ್ಣಪುಟ್ಟ ಅನಾರೋಗ್ಯ ಇತ್ತು. ಇದಕ್ಕಾಗಿಯೇ ತಂದೆ–ತಾಯಿ ಸಾಕಷ್ಟು ಖರ್ಚು ಮಾಡಿಕೊಂಡಿದ್ದರು. ಜತೆಗೆ, ಮನೆಯಲ್ಲಿ ಕಿತ್ತು ತಿನ್ನುವ ಬಡತನ. ಇದರ ನಿವಾರಣೆಗೆ ಜ್ಯೋತಿಷಿಯೊಬ್ಬರ ಸಲಹೆ ಕೇಳಿದ್ದ ತಂದೆ–ತಾಯಿಗೆ, 'ನಿಮ್ಮ ಮನೆಯಲ್ಲಿ ದೇವಿ ಇದ್ದಾಳೆ, ಹುಲಿಗಿ ಮಾರೆಮ್ಮನಿಗೆ ಹೋಗಿ ದೀಕ್ಷೆ ಪಡೆದು ಬನ್ನಿ' ಎಂದು ಸಲಹೆ ನೀಡಿದ್ದರು. ಅದರಂತೆ ಹದಿಮೂರು ವರ್ಷದವರಾಗಿದ್ದಾಗ ಇವರಿಗೆ ದೀಕ್ಷೆ ಕೊಡಿಸಿದ್ದರು.

ರಾಜಮ್ಮ ಮುತ್ತಜ್ಜನೂ ಹೀಗೆಯೇ ಜೋಗತಿಯಾಗಿದ್ದರು. ಅವರದ್ದೇ ಛಾಯೆ ಇವರಲ್ಲೂ ಇದೆ ಎಂದು ಕುಟುಂಬ ಭಾವಿಸಿತ್ತು. ಅದಕ್ಕೂ ಮಿಗಿಲಾಗಿ, ತಮ್ಮಲ್ಲಿಯೂ ಹೆಣ್ಣಿನ ಭಾವನೆಗಳು ಗಾಢವಾಗಿದ್ದವು ಎಂದು ರಾಜಮ್ಮ ಹೇಳಿದರು.

'ನಾನು ಹಿಂಗ ಸೀರೆಯುಟ್ಟು ಐವತ್ತು ವರ್ಷವಾತು' ಎಂದ 63 ವರ್ಷದ ರಾಜಮ್ಮ, ಅರ್ಧಶತಮಾನದ ತಮ್ಮ ಜೋಗತಿ ಬದುಕನ್ನು ಅತ್ಯಂತ ಸರಳವಾಗಿ ಬಣ್ಣಿಸಿದರು.

ಜೋಗತಿಯರು ತಮ್ಮ ಇಡೀ ಜೀವನವನ್ನು ದೀಕ್ಷೆ ಪಡೆದ ದೇವಿಗೆ ಮುಡುಪಾಗಿಡುತ್ತಾರೆ. ಪಡ್ಲಿಗಿ (ಸಣ್ಣ ಬುಟ್ಟಿ) ಹಿಡಿದು ಬೇಡಿ ಬದುಕುತ್ತಾರೆ. ಜನರ ಸಮಸ್ಯೆಗಳನ್ನು ಅವರು ತಮ್ಮವೇ ಎಂದು ಭಾವಿಸುತ್ತಾರೆ. ಹಸಿದವರಿಗೆ ಅನ್ನ ಕೊಡಬೇಕು, ಕಷ್ಟದಲ್ಲಿರುವವರಿಗೆ ನೆರವಾಗಬೇಕು, ನೆರಳಾಗಬೇಕು ಎನ್ನುವುದನ್ನು ಪಾಲಿಸಿಕೊಂಡು ಬರುತ್ತಾರೆ. ಜೋಗತಿಯರು ವ್ರತದಂತೆ ಪಾಲಿಸಿಕೊಂಡು ಬರುವ ಈ ಗುಣವೇ ರಾಜಮ್ಮ ಅವರ ಸಮಾಜಮುಖಿ ಕಾಯಕದ ಮೂಲ ಎನ್ನಬಹುದೇನೋ.

ಕುವೆಂಪು ಪದ ಸೃಷ್ಟಿ

ಜಿ.ಕೃಷ್ಣಪ್ಪ

ಸುಟ್ಟಿದೋರ್ಕೆ

ಸುಟ್ಟಿದೋರ್ಕೆ (ಕ್ರಿ). ಬೆರಳನ್ನು ತೋರುವುದರ ಮೂಲಕ ಸೂಚಿಸುವಿಕೆ.

ಸುಗ್ರೀವನಿಗೆ ಹಾಸ್ಯ ಕೋವಿದನಾದ ಗಜನು ಒಂದು ಪ್ರಸಂಗವನ್ನು ಹೇಳುವನು. ತಮಗೆ ಓರ್ವನು ಸಿಗಲು ಅವನಿಗೆ ಮದಿರೆ ಕುಡಿಸಿ, ಲಂಕೆ ಎಲ್ಲಿದೆ ಎಂದು ಪೀಡಿಸಲು ಅವನು ಬೆರಳಿಂದ ತೋರಿಸಿದ ದಿಕ್ಕಿಗೆ, ಮಹೇಂದ್ರಾಚಲಕ್ಕೆ ಬಂದೆವು. ಆ ಘಟನೆಯಲ್ಲಿ ಬೆರಳು ತೋರಿ ಸೂಚಿಸುವುದನ್ನು 'ಸುಟ್ಟಿದೋರ್ಕೆ' ಪದದಿಂದ ಹೀಗೆ ಅಭಿವ್ಯಕ್ತಿಸಿದ್ದಾರೆ:

'ಬೀಸಾಟಮನೆ ಸುಟ್ಟಿದೋರ್ಕೆಗೆ ಗೆತ್ತು ನಾಮ್
ಬಂದೆವಿಲ್ಲಿಗೆ ಮಹೇಂದ್ರಾಚಲಕೆ!'

ಸಿಡಿರೋಷ

ಸಿಡಿರೋಷ (ನಾ). ಅತಿಯಾದ ರೋಷ; ಅಧಿಕವಾದ ಕ್ರೋಧ

ಒಂದು ಮಹೋಪಮೆಯಲ್ಲಿ ಬೇಡರ ಪಡೆ ಸಿಂಹಿಣಿಯನ್ನು ಹಿಡಿದಿರುವುದನ್ನು ಅದರ ಗೋಳಿನ ಅರಚುವಿಕೆಯಿಂದ ಸಿಂಹ ಅರಿಯುತ್ತದೆ. ಅದರ ಉಕ್ಕಿ ಬಂದ ಕ್ರೋಧವನ್ನು ಕುವೆಂಪು 'ಸಿಡಿರೋಷ' ಪದ ರೂಪಿಸಿ ಹೀಗೆ ಬಣ್ಣಿಸಿದ್ದಾರೆ:

'ಗುಡುಗುಡಿಪ
ಸಿಡಿರೋಷಮುಕ್ಕಿ, ತಾಂ ನಿಂತ ಬಂಡೆಯನಾನೆಯೊರ್
ಮಮಡೆಯಂಗೆತ್ತು, ನಖದಿಂದವ್ವಳಿಸೆ

ಪಕ್ಷಿಯಕ್ಷತೆ

ಪಕ್ಷಿಯಕ್ಷತೆ (ನಾ). ಪಕ್ಷಿಗಳ ಅಕ್ಷತೆ

ಕುವೆಂಪು ಅವರು ಅಶೋಕವನದ ಒಂದು ಬೆಳಗನ್ನು ಉಪಮಾನದಲ್ಲಿ ಚಿತ್ರಿಸುವಾಗ 'ಪಕ್ಷಿಯಕ್ಷತೆ' ಪದ ರೂಪಿಸಿ ಹೀಗೆ ಪ್ರಯೋಗಿಸಿದ್ದಾರೆ:

'ಮೂಡಲೆತ್ತಿದಾ ಉಷೆಯ ಆರತಿಗೆ ಮಂಗಳಗಾನಮಂ ಪಾಡಿ
ಸೇಸೆಯಂ ತಳಿವಂತೆ, ಲಕ್ಷಪಲ್ಲವಿಯುಲಿವ
ಪಕ್ಷಿಯಕ್ಷತೆಯೆರಚಿದಳು ಅಶೋಕವನಿಕಾ ಲಕ್ಷ್ಮಿ"

ಕಥೆ
ಶ್ರೀದೇವಿ ಕಳಸದ ಅವರ **ಮಿನುಗುತಾರೆ**
prajavani.net/short-story

ಕವನ
ರಾಜ್ ಆಚಾರ್ಯ ಅವರ **ಮೊಹಬ್ಬತಿನ ಮೊಹರು**
www.prajavani.net/poetry

ಸಾದರ ಸ್ವೀಕಾರ
ಹೊಸ ಪುಸ್ತಕಗಳ ಮಾಹಿತಿಗೆ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ
ಪ್ರತಿಕ್ರಿಯೆಗಳನ್ನು ಕಳಿಸಲು
bhanuvara@prajavani.co.in

ತಿದ್ದುಪಡಿ

ಆಗಸ್ಟ್ 17, 2025 ರಂದು 'ಭಾನುವಾರದ ಪುರವಣಿ'ಯಲ್ಲಿ ಪ್ರಕಟವಾದ ದಾವಣಗೆರೆಯ ವೃತ್ತಿ ರಂಗಭೂಮಿ ರಂಗಾಯಣ ನಿರ್ದೇಶಕ ಮಲ್ಲಿಕಾರ್ಜುನ ಕಡಕೋಳ ಅವರ ಹೇಳಿಕೆ ಇದೆ. ಇದರಲ್ಲಿ 'ರಾಜ್ಯದ ಆರುಸಾವಿರಕ್ಕೂ ಹೆಚ್ಚು ಗ್ರಾಮಗಳಿದ್ದು ವರ್ಷಕ್ಕೆ ಹದಿನೈದು ಸಾವಿರಕ್ಕೂ ಹೆಚ್ಚು ಗ್ರಾಮೀಣ ನಾಟಕಗಳು ಪ್ರದರ್ಶನವಾಗುತ್ತವೆ' ಎಂದು ಬರೆಯಲಾಗಿದೆ. ಇದನ್ನು ಆರುಸಾವಿರದಷ್ಟು ಗ್ರಾಮ ಪಂಚಾಯಿತಿಗಳಿದ್ದು, ಹದಿನೈದು ಸಾವಿರದಿಂದ ಹದಿನೆಂಟು ಸಾವಿರ ನಾಟಕಗಳ ಪ್ರದರ್ಶನವಾಗುತ್ತವೆ. ಇವು ಹವ್ಯಾಸಿಗಳೇ ಆಡುವ ಕಂಪನಿ ಶೈಲಿಯ ವೃತ್ತಿರಂಗಭೂಮಿ ನಾಟಕಗಳು' ಎಂದು ಓದಿಕೊಳ್ಳಬೇಕು.

ಮಜ ಮಜ ಮಜಕೂರ

ಎಂ.ಎಸ್.ಪೂಜಾರ

ಗಣಿತದಲ್ಲಿ ಗರ್ದಿ ಗಮ್ಮತ್ತು

ವರ್ಗಸಂಖ್ಯಾ ಗರ್ವ

ಇಲ್ಲೊಂದು ವರ್ಗ ಸಂಖ್ಯೆ ಇದೆ. ಇದರ ಸ್ವಾರಸ್ಯವೇನೆಂದರೆ ಮೂಲ ಸಂಖ್ಯೆಯಲ್ಲಿ ಒಂದು ಅಂಕಿ ಹೊಡೆದು ಹಾಕಿ ಉಳಿದ ಅಂಕಿಗಳನ್ನು ಮರುಜೋಡಿಸಿದರೆ ಅದೂ ಒಂದು ವರ್ಗ ಸಂಖ್ಯೆಯೇ ಆಗುತ್ತದೆ. ಹೀಗೆ ಪ್ರತಿ ಬಾರಿ ಒಂದೊಂದು ಅಂಕಿ ತೆಗೆಯುತ್ತಾ ಹೋದಾಗ್ಯೂ ಉಳಿಯುವ ಅಂಕಿಗಳನ್ನು ಮರುಜೋಡಿಸಿದರೆ ಅವೆಲ್ಲವೂ ವರ್ಗ ಸಂಖ್ಯೆಗಳಾಗುತ್ತವೆ.

$6471398025=80445^2$
$537219684=23178^2$
$13498276=3674^2$
$1238769=1113^2$
$139876=374^2$
$13689=117^2$
$1936=44^2$
$961=31^2$



ಪದ–ಹುಡುಕಾಟ

ಇಲ್ಲಿ ಕೊಟ್ಟಿರುವ ಪದಗಳಲ್ಲಿ ಒಂದೊಂದು ಅಕ್ಷರ ಆಯ್ಕೆ ಮಾಡಿಕೊಂಡು ಓರ್ವ ಸಾಹಿತಿಯ ಹೆಸರನ್ನು ಹುಡುಕಿ.

1. ಪೂಜಾವಿಧಾನ
2. ವರ್ಣನಾತೀತ
3. ಚಂದ್ರನಕಲೆ
4. ಇಂದ್ರಧನಸ್ಸು
5. ತೇಲುವವಸ್ತು
6. ನಿಜಸ್ವರೂಪ
7. ಸ್ವಿಫ್ಟ್ ಕಾರ್

ಉತ್ತರ:
....

ಡಶ್ಗ ಚಕ್ಕು ಕ್ಷೀಶ್ರೃಷ್ಟ ಕಥೆಯ

ಕಲೆ–ಪರಿಕಲ್ಪನೆ: ಸಂತೋಷ್ ಸಸಿಹಿತ್ಲು

ಜಾನಪದ ಆಟ

ಇಲ್ಲಿ ಕೊಟ್ಟಿರುವ ಅಪೂರ್ಣ ವಾಕ್ಯಗಳಲ್ಲಿ ಯಾವುದಾದರೊಂದು ಪ್ರಾಣಿಯ ಹೆಸರು ತುಂಬಿ ಅರ್ಥಪೂರ್ಣ ವಾಕ್ಯ ಮಾಡಿ

1			ತ್ತರ ಕಂಡು ಭಯಗೊಂಡೆ
2	ಆತ		ಸ್ಸಿ ಪದವೀಧರ
3			ವಿನ ಮಾಲು ಕೊಳ್ಳಬೇಡಿ
4	ವಿ		ತಿ ದರದಲ್ಲಿ ಬಟ್ಟೆಗಳು ಸಿಗುತ್ತವೆ
5			ತ್ತ ಕಲಿ ನೋಡುತ್ತಾ ನಲಿ
6	ಎಲ್ಲವೂ ನೀರಿನಲ್ಲಿ ಕೊಚ್ಚಿಕೊಂಡು		
7			ತ್ತಿ ನೋಡಿದೆ. ಆತ ನನ್ನ ಗೆಳೆಯ
8	ಜ		ಗಾಗಿಯೇ ಈ ಸೌಲಭ್ಯಗಳು
9	ಶಂ		ಕ್ಕಿ ಹೊಡೆದದ್ದು ಯಾರಿಗೆ?
10			ಊರು ಕರ್ನಾಟಕದಲ್ಲಿದೆ.


ಪದ ಸಂಕಲನ

ಇಲ್ಲಿ ಕೊಟ್ಟಿರುವ ಎರಡು ಪದ ಹಾಗೂ ಒಂದು ಅಕ್ಷರವನ್ನು ಕೂಡಿಸಿ ಅರ್ಥಬದ್ಧ ಒಂದೇ ಪದ ಮಾಡಿರಿ

1	ಕದ	+	ಕಂಡ	+	ನ್ನ	=	
2	ನರಿ	+	ಸಾರು	+	ಚಿ	=	
3	ಕಡ	+	ನರ	+	ತಾ	=	
4	ನಗ	+	ಯಾನ	+	ಗ	=	
5	ರವಿ	+	ದನ	+	ಮಾ	=	

ರಾಕಿಂಗ್ ಶಾಕಿಂಗ್!

ಗುಂಡ ಮರದಿಂದ ತಯಾರಿಸಿದ ರಾಕಿಂಗ್ ಹಾರ್ಸ್‌ನಲ್ಲಿ ಆಟವಾಡುತ್ತಿದ್ದ. ಅವನ ಮುಂದೆ ಒಂದು ಹೂಕುಂಡವಿತ್ತು. ಕುದುರೆ ಹಿಂದೆ ಮುಂದೆ ಹೋಗುತ್ತಾ, ಏಕಾಏಕಿ ಆ ಹೂಕುಂಡದತ್ತ ಜಿಗಿಯಿತು. ಆ ಮರದ ಕುದುರೆಗೆ ಜೀವಬಂದಿತ್ತು! ಆ ಕುಂಡದಲ್ಲಿದ್ದ ಹೂವಿನ ಗಿಡದ ಎಲೆಗಳನ್ನು ತಿನ್ನತೊಡಗಿತು. ಇದನ್ನು ಕಂಡ ಗುಂಡ ಆಶ್ಚರ್ಯದಿಂದಲೇ ಅದನ್ನು ನೋಡಿದ.



ಮಜ ಮಜ ಮಜಕೂರದ ಕಳೆದ ಸಂಚಿಕೆಯ ಪ್ರಶ್ನೆಗಳಿಗೆ ಸರಿ ಉತ್ತರ ನೀಡಿದ ಮಕ್ಕಳ ಹೆಸರುಗಳನ್ನು ನೋಡಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಮೋಜಿನ ಇಂಗ್ಲಿಷ್

ಇಲ್ಲಿ ಕೊಟ್ಟಿರುವ EL ಅಕ್ಷರಗಳ ಹಿಂದೆ ಇನ್ನೆರಡಕ್ಷರ ಅಕ್ಷರ ಸೇರಿಸಿ ನಾಲ್ಕಕ್ಷರದ ಪದ ರಚಿಸಿ

1			E	L
2			E	L
1			E	L
4			E	L
5			E	L

ಸರಿ ಉತ್ತರ ಮುಂದಿನ ವಾರ..

ಸರಿ ಉತ್ತರ ನೀಡಿದ ಮಕ್ಕಳ ವಿವರವನ್ನು ಪ್ರಜಾವಾಣಿ ವೆಬ್‌ಸೈಟ್‌ನಲ್ಲಿ ಹಾಗೂ ಆಯ್ದ ಆರು ಮಕ್ಕಳ ಚಿತ್ರಗಳನ್ನು ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲಾಗುವುದು. ಸರಿ ಉತ್ತರಗಳ ಜತೆಗೆ ಮಗುವಿನ ಹೆಸರು, ತರಗತಿ, ಶಾಲೆಯ ಹೆಸರು, ಊರು ಹಾಗೂ ವಿಳಾಸವನ್ನು ಕಳುಹಿಸಬೇಕು. ಉತ್ತರವನ್ನು ಕೆಳಗಿರುವ ಇಮೇಲ್‌ಗೆ ಕಳುಹಿಸಿ...

majakoora@prajavani.co.in



ಕಳೆದ ಸಂಚಿಕೆಯ ಸರಿ ಉತ್ತರಗಳು

ಪದಸಂಕಲನ:
1. ನಾಡಕಚೇರಿ 2. ಕೇರಳಗಡಿ
3. ಕೆಲಸಮಾಡು 4. ಅರೆಬೆತ್ತಲೆ
5. ನಾಗರಹಾವು

ಮೋಜಿನ ಇಂಗ್ಲಿಷ್:
1. CAMP 2. HUMP
3. JUMP 4. LAMP 5. PUM

ಪದಚೌಕ:

ಗ	ರ	ತಿ
ರ	ಕ್ಷ	ಕ
ತಿ	ಕ	ಳಿ



ಸರಿ ಉತ್ತರ ನೀಡಿದ ಆಯ್ದ ಆರು ಪುಟಾಣಿಗಳು



ಶ್ರಾವ್ಯ ಧತ್ರಿ
ರಾಣೆಬೆನ್ನೂರು


ಸೃಜನಾ ಟಿ.ಆರ್.
ಹೊಸಪೇಟೆ


ಚೇತನ್ ಎಂ.ಬಿ.
ಸವಣೂರು


ಸಂಚಿತ್ ಎಸ್.
ಕೆ.ಆರ್.ಪುರ


ಸಾನ್ವಿಕ ಕೆ.ಎಸ್.
ಅರಕಲಗೂಡು


ತನ್ಮನ ಎಂ.ಆರ್.
ಕೃಷ್ಣರಾಜಪೇಟೆ

ಅಝರ್‌ಬೈಜಾನ್ ತನ್ನ ಒಡಲಿನಲ್ಲಿ ಹಲವು ವಿಸ್ಮಯಗಳನ್ನು ಅಡಗಿಸಿಟ್ಟುಕೊಂಡಿರುವ ದೇಶ. ಈ ದೇಶದ ಹೆಸರಿನ ಅರ್ಥಕ್ಕೂ ಅಲ್ಲಿರುವ ವಾತಾವರಣಕ್ಕೂ ಸಂಬಂಧವೇ ಇಲ್ಲ! ಹಲವು ಸ್ಮಾರಕಗಳು, ಪಾರಂಪರಿಕ ತಾಣಗಳನ್ನು ಹೊಂದಿರುವ ಈ ದೇಶದಲ್ಲಿ ಕೆಸರನ್ನುಗುಳುವ ಪುಟ್ಟ ಪುಟ್ಟ ಜ್ವಾಲಾಮುಖಿಗಳು ಆಕರ್ಷಕವಾಗಿವೆ.



ಅಝರ್‌ಬೈಜಾನ್‌ನಲ್ಲಿರುವ 190 ಮೀ. ಎತ್ತರದ ಬಾಕು ಫ್ಲೇಮ್ ಟವರ್

ಪ್ರವಾಸ




ಅಝರ್‌ಬೈಜಾನ್‌ನ ಗೊಬುಸ್ತಾನ್‌ನಲ್ಲಿರುವ ಕೆಸರುಜ್ವಾಲಾಮುಖಿಗಳು

ಕುದಿಯುವ ದೇಶದಲ್ಲಿ ತಣ್ಣನೆಯ ಸುತ್ತಾಟ



ಬಾಕುವಿನ ಹಳೆಯ ನಗರದಲ್ಲಿರುವ ಮೆಯ್ಡನ್ ಟವರ್



ಶರ್‌ವನ್‌ಶಾಹ್ ಅರಮನೆ

• ಜೆ.ಕೆ.ರಮೇಶ

ಯುರೋಪ್ ಮತ್ತು ಏಷ್ಯಾ ಖಂಡ ಎರಡರಲ್ಲೂ ಹಂಚಿಹೋಗಿರುವ ಯೂರೇಷಿಯಾ ದೇಶದ ಅಝರ್‌ಬೈಜಾನ್ ರಾಜಧಾನಿ ಬಾಕುವಿನ ಹೈದರ್ ಅಲಿಯೇವ್ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ನಾವು ಇಳಿದಾಗ ಮಧ್ಯಾಹ್ನ ಆಗಿತ್ತು. ನಮಗಾಗಿ ಕಾದಿದ್ದ ಬಸ್ಸಿನ ಕಡೆ ಹೊರಟಾಗ ಆ ನಡು ಮಧ್ಯಾಹ್ನವೂ ಕಡು ತಂಪಾಗಿತ್ತು. ಆಗಷ್ಟೆ ಅಲ್ಲ, ನಾವು ಅಲ್ಲಿದ್ದ ಐದಾರು ದಿನವೂ ವಾತಾವರಣ ಬಿರುಬಿಸಿಲಿಲ್ಲದ ಹದವಾದ, ಕೆಲವೊಮ್ಮೆ ಮಂಜು ಮುಸುಕಿ ನಡುಕ ಹುಟ್ಟಿಸುವ ಶೀತದಿಂದ ಕೂಡಿತ್ತು. ಇಲ್ಲಿ ಆಗಾಗ ಹಿಮಪಾತವೂ ಆಗುತ್ತಂತೆ. ಹೀಗಿರುವ ಈ ದೇಶದ ಹೆಸರು ಅಝರ್‌ಬೈಜಾನ್ (ಉರಿಯ ಜ್ವಾಲೆ) ಎಂಬುದು ಕುತೂಹಲಕಾರಿ ವ್ಯಂಗೋಕ್ತಿಯಾಗಿ ತೋರಿತು.

ಬಾಕುವಿನಲ್ಲಿ ನಾವು ತಂಗಬೇಕಿದ್ದ ಹೋಟೆಲಿನತ್ತ ಹೊರಟಾಗ ಕಂಡದ್ದು ಆಚೀಚೆ ಹಸುರು ಹಾಸಿನ ಅಂಚನ್ನುಳ್ಳ ವಿಶಾಲ ರಸ್ತೆಗಳು. ಇಡೀ ಬೀದಿಗಳಲ್ಲಿ ಒಂದೇ ರೀತಿಯ ಪಾರಂಪರಿಕ ಶೈಲಿಯ ಕಟ್ಟಡಗಳು, ಕೆಲವು ಮಾರ್ಗಗಳಲ್ಲಿ ಅತ್ಯಾಧುನಿಕ ತಾಂತ್ರಿಕತೆಯ ಗಗನಚುಂಬಿ ಮಹಲುಗಳು. ಜನಜಂಗುಳಿಯೇ ಕಾಣದ, ವಾಹನ ಸಂಚಾರದ ಸದ್ದುಗದ್ದಲಗಳಿಲ್ಲದ ಕ್ರಿಯಾಶೀಲತೆಯನ್ನೊಳಗೊಂಡೂ ನಿದ್ರಿಸುತ್ತಿದೆಯೇನೋ ಎನಿಸುವಂಥ ಪ್ರಶಾಂತತೆಯ, ಮಾಲಿನ್ಯರಹಿತ, ಸೌಂದರ್ಯಭರಿತ ನಗರವದು. ಬಾಕು ಎಂದರೆ ಗಾಳಿ–ಬೆಳಕಿನ ಊರಂತೆ. ಆಗಾಗ ಬಿರುಸಾದ ಬೀಸುಗಾಳಿ ಇಲ್ಲಿ ಸುಳಿದುಹೋಗುತ್ತದೆ. ಬೀದಿ ಬೀದಿಯ ಪ್ರತಿ ಸೌಧವೂ ವಿದ್ಯುದ್ದೀಪಗಳಿಂದ ಜಗಜಗಿಸಿ ಇಲ್ಲಿನ ರಾತ್ರಿಗಳನ್ನು ಬೆಳಗಿಸುತ್ತವೆ.

ಹಲವು ವರ್ಷಗಳು ಪರ್ಷಿಯಾದ ರಾಜವಂಶಸ್ಥರ ಆಡಳಿತಕ್ಕೊಳಪಟ್ಟಿದ್ದ ಅಝರ್‌ಬೈಜಾನ್ 70 ವರ್ಷ ಸೋವಿಯತ್ ಸೋಷಿಯಲಿಸ್ಟ್ ಒಕ್ಕೂಟ ರಾಷ್ಟ್ರದ ಭಾಗವಾಗಿತ್ತು. 1991ರಲ್ಲಿ ಸ್ವತಂತ್ರ ರಾಷ್ಟ್ರವಾಗಿ ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ಹೊಂದಿ ಅಭಿವೃದ್ಧಿ ಸಾಧಿಸಿದೆ. ಇದರ ವಿಸ್ತೀರ್ಣ 86,600 ಚದರ ಕಿಲೋಮೀಟರ್, ಜನಸಂಖ್ಯೆ ಕೇವಲ ಒಂದು ಕೋಟಿ ಚಿಲ್ಲರೆ. ಇವರಲ್ಲಿ ಶೇಕಡ 97 ಇಸ್ಲಾಂ ಧರ್ಮೀಯರು. ಆದರೂ ನಿತ್ಯ ಜೀವನದಲ್ಲಿ ಧರ್ಮಾಚರಣೆಗಳಿಗೆ ಇಲ್ಲಿ ಪ್ರಾಧಾನ್ಯತೆ ಇಲ್ಲ. ಬುರ್ಕಾ, ಹಿಜಾಬ್, ಬಿಳಿಗೌನುಗಳು ಕಣ್ಣಿಗೆ ಬೀಳುವುದಿಲ್ಲ. ಚಹರೆಯಲ್ಲಿ ಇರಾನಿಯನ್ನರನ್ನು ಹೋಲುವ ಇವರದು ಸ್ಫುರದ್ರೂಪ. ಪಾಶ್ಚಾತ್ಯ ಶೈಲಿಯ ಉಡುಗೆ ತೊಡುಗೆ. ಸದೃಢ ಶರೀರ, ಸುಂದರ ಮೈಬಣ್ಣ, ಕಪ್ಪು ದಟ್ಟ ಬಿಚ್ಚುಕೂದಲ ಸ್ತ್ರೀ, ಪುರುಷರು ಎಲ್ಲೆಲ್ಲೂ ಕಂಗೊಳಿಸುತ್ತಾರೆ. ಇವರ ನಡೆನುಡಿ ನಾಗರಿಕ, ಸುಸಂಸ್ಕೃತ.

ರಾಜಕೀಯವಾಗಿ ಏಳುಬೀಳುಗಳನ್ನು ಕಂಡಿರುವ ಅಝರ್‌ಬೈಜಾನ್‌ನಲ್ಲಿ ನಮ್ಮ ಕಾಶ್ಮೀರ ಸಮಸ್ಯೆಯಂಥ ಕಗ್ಗಂಟೊಂದು ಇದೆ. ಗಡಿಭಾಗದಲ್ಲಿರುವ ಕರಬಖ್ ಎಂಬ ಪ್ರದೇಶಕ್ಕಾಗಿ ಪಕ್ಕದ ಅರ್ಮೇನಿಯಾದೊಂದಿಗಿನ ಪೈಪೋಟಿ, ಯುದ್ಧಗಳಿಗೆ ಕಾರಣವಾಗಿದೆ. ಈಚೆಗೆ ಎಂದರೆ, 2020ರಲ್ಲಿ ಈ ದೇಶಗಳ ನಡುವೆ ನಡೆದ ಸಮರದಲ್ಲಿ ಸಾವಿರಾರು ಸೈನಿಕರು ಮಡಿದರಂತೆ. ಈ ವೀರ ಯೋಧರ ಬಗೆಗೆ ಅಪಾರ ಗೌರವ ಹೊಂದಿರುವ ಇಲ್ಲಿನ ಜನ ರಸ್ತೆ, ಮಾಲ್, ಮತ್ತಿತರ ಸ್ಥಳಗಳಲ್ಲಿ ಅವರ ಚಿತ್ರಪಟಗಳನ್ನು ಪ್ರದರ್ಶಿಸಿದ್ದಾರೆ, ಅವರಿಗೆ ದೊಡ್ಡದೊಂದು ಸಮಾಧಿಯ ಆವರಣ ನಿರ್ಮಿಸಿದ್ದಾರೆ. ವಾಸ್ತವವಾಗಿ ಈ ಸಮಾಧಿಗಳ ದರ್ಶನದಿಂದಲೇ ನಮ್ಮ ಪ್ರವಾಸ ಆರಂಭವಾಯಿತು.

ಮೊದಲ ದಿನ, ಬಾಕುವಿನ ತೀರದ ಅಪ್‌ಲ್ಯಾಂಡ್, ಹೈಲ್ಯಾಂಡ್ ಪಾರ್ಕುಗಳಲ್ಲಿರುವ ಕಪ್ಪು ಗ್ರಾನೈಟ್‌ಗಳ ಮೇಲೆ ಪ್ರತಿಯೊಬ್ಬ ಯೋಧನ ಚಿತ್ರಗಳಿದ್ದು, ಎದುರಿನ ಹಾಸುಗಲ್ಲ ಮೇಲೆ ಪುಷ್ಪಗುಚ್ಛಗಳನ್ನಿಟ್ಟ, ಸಾಲುಸಾಲು ಸಮಾಧಿಗಳನ್ನು ನಮಗೆ ತೋರಿಸಿದರು. ಅಲ್ಲಿಂದಲೇ ಕ್ಯಾಸ್ಪಿಯನ್ ಕೊಲ್ಲಿಯ ಮನೋಹರ ನೋಟ ಕಂಡೆವು. ಕೊಲ್ಲಿಗೆ ಎದುರಾಗಿ ಅಝರ್‌ಬೈಜಾನ್‌ನ ಐಕಾನ್‌ಗಳಾದ ಫ್ಲೇಮ್ ಟವರ್‌ಗಳಿವೆ. ಆ ಮೂರು ಜ್ವಾಲಾಗೋಪುರಗಳು ಉರಿಯ ಓಲಾಟದಂತೆಯೇ ಬಾಗು ಬಳುಕಿನ ವಿನ್ಯಾಸದ ವಿಶಿಷ್ಟ ಸೌಧಗಳಾಗಿವೆ. ರಾತ್ರಿ ಹೊತ್ತು ವಿದ್ಯುತ್ ಬೆಳಕಿನ ವರ್ಣಗಳಿಂದಲಂಕೃತವಾಗಿ ಜೀವಂತ ಜ್ವಾಲೆಗಳಂತೆಯೇ ರಾರಾಜಿಸುತವಂತೆ. ಬೆಟ್ಟದ ದೂರದಿಂದ ಅವುಗಳನ್ನು ನೋಡಿ ಬಳಿಬಂದು ಎದುರಿನ ವೃತ್ತಗಳ ಸುತ್ತಲಿರುವ ಇತರ ಸ್ಮಾರಕಗಳನ್ನು ವೀಕ್ಷಿಸಿದೆವು.

ಅಝರ್‌ಬೈಜಾನ್ ತನ್ನಲ್ಲಿರುವ ಐತಿಹಾಸಿಕ ಸಾಂಸ್ಕೃತಿಕ ಪಳೆಯುಳಿಕೆಗಳಿಂದಾಗಿ ಪ್ರಸಿದ್ಧವಾಗಿದೆ. ಅಂಥದೊಂದು ಮುಖ್ಯ ತಾಣ ಬಾಕು ನಗರದ ಒಡಲಲ್ಲೇ ಅಡಗಿರುವ ಇಚೆರಿ ಶಹರ್ ಎಂದು ಕರೆಯಲ್ಪಡುವ ಓಲ್ಡ್ ಸಿಟಿ. ಸಣ್ಣ ಗುಡ್ಡದ ಮೇಲಿರುವ ಈ ಪಟ್ಟಣದ ಸುತ್ತ ಕೋಟೆಯೊಂದು ಸುತ್ತುವರಿದಂತಿದೆ. ಮಧ್ಯಕಾಲೀನ ಮುಸಲ್ಮಾನ್ ದೊರೆಗಳು ಕಟ್ಟಿಸಿರಬಹುದಾದ ಇದರೊಳಗೆ ಅನೇಕ ಸ್ಮಾರಕಗಳು ಇಡಿಕಿರಿದಿವೆ. ಇವುಗಳಲ್ಲಿ ಕಾಣುವಂಥದ್ದು 'ಮೆಯ್ಡನ್ ಟವರ್' ಎಂಬ ಸಿಲಿಂಡರಿನಾಕಾರದ, ಸುಣ್ಣಕಲ್ಲು ಇಟ್ಟಿಗೆಗಳಿಂದಾದ ಎತ್ತರದ ಗೋಪುರ. ಪೂಜಾ ಸ್ಥಳವೆಂದೂ ಬತೇರಿಯೆಂದೂ ಹೇಳಲಾಗುವ ಇದು ರಾಜಕುಮಾರಿಯರ ಪ್ರೇಮ, ಬಲಿದಾನದ ರೋಮಾಂಚಕ ಕಥೆಗಳಿಗೆ ಕಾರಣವಾಗಿದೆ. ಅಲ್ಲದೇ ಕಾವ್ಯ, ನಾಟಕ, ನೃತ್ಯಗಳಿಗೆ ಪ್ರೇರಣೆ ನೀಡಿದೆ. ಹೀಗಾಗಿ ಐತಿಹಾಸಿಕವಾಗಿ ಅಷ್ಟೇ ಅಲ್ಲದೆ ಸಾಂಸ್ಕೃತಿಕವಾಗಿಯೂ ಮಹತ್ವದ್ದಾಗಿದೆ.

ಇನ್ನರ್‌ಸಿಟಿಯ ಇನ್ನೊಂದು ಮುಖ್ಯ ಪಳೆಯುಳಿಕೆ ಶರ್‌ವನ್‌ಶಾಹ್ ಅರಮನೆ. ಇದು ದಿವಾನಖಾನೆ, ಮಸೀದಿ, ಸಮಾಧಿ ಸ್ಥಳ ಮುಂತಾದವನ್ನೊಳಗೊಂಡು ಪ್ರವಾಸಿಗರ, ಇತಿಹಾಸ ಶೋಧಕರ ಗಮನ ಸೆಳೆಯುತ್ತದೆ. ಉಳಿದಂತೆ ಈ ಪ್ರಾಚೀನ ನಗರಿಯಲ್ಲಿ ಭವ್ಯ ಕಟ್ಟಡಗಳು, ಕಲಾಮಂದಿರಗಳು, ಮಾರುಕಟ್ಟೆಗಳು, ಹೋಟೆಲುಗಳು, ಸ್ನಾನಗೃಹಗಳಿದ್ದು ಅವನ್ನೆಲ್ಲ ಯಥಾವತ್ ರಕ್ಷಿಸಲು ಯತ್ನಿಸಲಾಗಿದೆ. ಪ್ರವಾಸಿಗರ ದಟ್ಟಣೆಯಿಂದ ಗತಕಾಲದ ನಗರ ಜೀವಂತವಾಗಿದೆ. ಅಲ್ಲಿನ ಕಿರುಬೀದಿಗಳಲ್ಲಿ ಅಲೆದು ಎದುರಾದ ವಿವಿಧ ಸ್ವರೂಪದ ಜನರು, ಸಂಗೀತ ಸಭೆಗಳು, ಮದುವೆಯ ಮೆರವಣಿಗೆ, ವ್ಯಾಪಾರ ವ್ಯವಹಾರ ಮುಂತಾದವುಗಳನ್ನು ವೀಕ್ಷಿಸುತ್ತಾ ಮಧ್ಯಯುಗಕ್ಕೆ ಸಂದು ನಾವು ಹೊರಬಂದಾಗ ಮುಸ್ಸಂಜೆಯಾಗಿತ್ತು.

ಹಳೆ ನಗರದ ಕೋಟೆ ಹೆಬ್ಬಾಗಿಲ ಹತ್ತಿರದಲ್ಲೇ ನಿಜಾಮೀ ರಸ್ತೆ. ಬಾಕುಗೆ ಬರುವವರೆಲ್ಲ ಒಮ್ಮೆ ಭೇಟಿ ಕೊಡಲೇಬೇಕಾದ ಮುಖ್ಯಸ್ಥಳ. ಅಝರ್‌ಬೈಜಾನ್‌ನ ಉನ್ನತಿಕೆ, ವೈಭವಗಳನ್ನು ಪ್ರದರ್ಶಿಸುವ ಇಮಾರತು, ಕಚೇರಿ, ಮಾರುಕಟ್ಟೆ, ಹೋಟೆಲ್ ಇತ್ಯಾದಿಗಳು ಇಲ್ಲಿವೆ. ರಸ್ತೆಯ ಆರಂಭ ವಿಶಾಲ, ಸುಂದರ ನಿಜಾಮೀ ವೃತ್ತದಿಂದ. ಇಲ್ಲೇ ನಿಜಾಮೀ ಸಾಹಿತ್ಯ ವಸ್ತು ಸಂಗ್ರಹಾಲಯವಿದೆ. ಅನೇಕ ಕವಿ ಕಲಾವಿದರ ಚಿತ್ರಗಳನ್ನೂ, ಮೂರ್ತಿಗಳನ್ನೂ ಹೊರಗೋಡೆಯಲ್ಲಿ ಹೊಂದಿ ಆಕರ್ಷಿಸುವ ಈ ಭವನದ ಎದುರಿನ ಎತ್ತರದ ಸ್ಥಳದಲ್ಲಿ ನಿಜಾಮೀ ಜಾಂಗ್ವಿಯ ವಿಶಿಷ್ಟ ಭಂಗಿಯ ಬೃಹತ್ ಪ್ರತಿಮೆ ಸ್ಥಾಪಿತವಾಗಿದೆ. ಕ್ರಿ.ಶ. 12 ನೇ ಶತಮಾನದ ಪರ್ಸಿಯನ್ ದಾರ್ಶನಿಕ, ಮಹಾಕವಿ ಈ ನಿಜಾಮೀ ಜಾಂಗ್ವಿ. ಈತ ಅಝರ್‌ಬೈಜಾನ್‌ನ ರಾಷ್ಟ್ರಕವಿಯೂ ಹೌದು. ಈ ಯುಗಪುರುಷ ಇಲ್ಲಿ ಬಹು ಗೌರವಾನ್ವಿತನಾದ್ದರಿಂದಾಗಿ, ಆತನ ಹೆಸರಲ್ಲಿ ಹತ್ತು ಹಲವು ಸ್ಮಾರಕಗಳು ಇಲ್ಲಿದ್ದು ದೇಶದ ಸಾಂಸ್ಕೃತಿಕ ಶ್ರೀಮಂತಿಕೆಯ ದ್ಯೋತಕವಾಗಿವೆ.

ಮರುದಿನ ನಾವು ಕೈಗೊಂಡ ಬಾಲಾ (ಕಾಕಸಸ್) ಪರ್ವತ ಪ್ರದೇಶದ ಪ್ರವಾಸ ಈ ದೇಶದ ಭೂ ಪ್ರದೇಶದ ವಿಭಿನ್ನತೆಯನ್ನು ದರ್ಶಿಸಿತು. ನಗರ ದಾಟುತ್ತಿದ್ದಂತೆ ಮರಳುಗಾಡಿನಂತಿದ್ದ ನೆಲ ದೂರ ಹೋದಂತೆಲ್ಲ ತೆಳು ಹಸಿರಿನ ಹೊದಿಕೆಯಾಗುತ್ತ ಕ್ರಮೇಣ ಫಲವತ್ತಾದ ಕೃಷಿ ಕ್ಷೇತ್ರವಾಗಿ ಇನ್ನೂ ಮುಂದೆ ಹೋದಾಗ ಗುಡ್ಡಬೆಟ್ಟ, ದಟ್ಟ ಕಾಡಾಗುತ್ತಾ ಮಳೆಯೂ ಸುರಿದು ಮಲೆನಾಡಿನ ನಮಗೆ ಊರ ನೆನಪು ತಂದಿತು. ಗಬಾಲಾ ತಪ್ಪಲಿನ ನೋಹರ್ ಸರೋವರದ ನೋಟ, ಕಡಿದಾದ ಬೆಟ್ಟದೋರೆಯ ಕೇಬಲ್ ಕಾರ್ ಪ್ರಯಾಣ ಇಂದಿನ ನಮ್ಮ ಕಾರ್ಯಕ್ರಮಗಳಾಗಿದ್ದವು.

ಅಝರ್‌ಬೈಜಾನ್ ಅನೇಕ ಪ್ರಾಕೃತಿಕ ವಿಸ್ಮಯಗಳನ್ನು ತನ್ನೊಡಲಲ್ಲಿ ಹುದುಗಿಸಿಕೊಂಡಿದೆ. ಯೋನಾರ್‌ದಾಗ್ ಎಂಬಲ್ಲಿ ನಾವು ಕಂಡ ನೆಲದಿಂದ ನಿರಂತರ ಬುಗಿಲೆದ್ದು ಬರುತ್ತಿರುವ ಬೆಂಕಿಯ ಜ್ವಾಲೆ ಅವುಗಳಲ್ಲೊಂದು. ಗೊಬುಸ್ತಾನ್ ಪ್ರಾಂತದ ಬೋಳು ಬೆಟ್ಟಗಳ ನೆತ್ತಿಯಲ್ಲಿನ ಅಲ್ಲಲ್ಲಿ ಕೆಸರಿನ ಬೊಬ್ಬುಳಿಗಳನ್ನು ಉಗುಳುವ ಮಣ್ಣಜ್ವಾಲಾಮುಖಿಗಳು ಇನ್ನೊಂದು.

ಇವು ಕೂಡ ಯೊನಾರ್‌ದಾಗ್ ಬೆಂಕಿಬುಗ್ಗೆಗಳಂತೆ ನೆಲದೊಳಗಿನ ಇಂಧನ ನಿಧಿಗಳ ತೋರ್ಬೆರಳುಗಳಂತೆ. ಕಡ್ಡಿ ಗೀರಿದಾಗ ಕೆಸರಿನಿಂದ ಬೆಂಕಿ ಉರಿದದ್ದು ಇದಕ್ಕೆ ಸಾಕ್ಷಿಯೊದಗಿಸಿತು. ಪ್ರಪಂಚದಲ್ಲಿರುವ ಇಂಥ ಮಣ್ಣಿನ ಜ್ವಾಲಾಮುಖಿಗಳಲ್ಲಿ ಅರ್ಧದಷ್ಟು ಇಲ್ಲೇ ಇವೆಯಂತೆ. ಇವನ್ನಲ್ಲದೆ ಈ ದೇಶದ ಉದ್ದಗಲಕ್ಕೂ ಮಾರುಮಾರಿಗೂ ಪೆಟ್ರೋಲಿಯಂ ಕಚ್ಚಾತೈಲ ಮೇಲೆತ್ತುವ ಏತಗಳನ್ನು ಕಂಡು, ಈ ದೇಶಕ್ಕೆ ಪ್ರಕೃತಿಯ ಈ ವರದಾನಕ್ಕಾಗಿ ಅಚ್ಚರಿ, ಅಸೂಯೆಪಡುತ್ತಾ ನಮ್ಮ ಪಯಣವನ್ನು ಮುಗಿಸಿದೆವು. ❖


SBI card
ನಿಮಗೆ ಫಿಟ್ ಆಗಲು ಇದು ಸಕಾಲ!
ಎಸ್‌ಬಿಐ ಕಾರ್ಡ್ ಪಲ್ಸ್‌ನೊಂದಿಗೆ
ರೂ 7,999 ಮೌಲ್ಯದ ಸ್ಮಾರ್ಟ್‌ವಾಚ್ ಪಡೆಯಿರಿ
SBI card
PULSE
KAVYA MALHOTRA
ಕೆಮಿಸ್ಟ್, ಫಾರ್ಮಸಿ, ಸ್ಪೋರ್ಟ್ಸ್, ಮೂವೀಸ್ ಮತ್ತು ಡೈನಿಂಗ್ ಮೇಲೆ 5X ರಿವಾರ್ಡ್ ಪಾಯಿಂಟ್‌ಗಳು*
ಫಿಟ್‌ಪಾಸ್ ಪ್ರೊ ಮತ್ತು ನೆಟ್‌ಮೆಡ್ಸ್ ಫಸ್ಟ್ ಮೆಂಬರ್‌ಶಿಪ್‌ಗಳು*
ಪ್ರತಿ ವರ್ಷ, 8 ದೇಶೀಯ ವಿಮಾನ ನಿಲ್ದಾಣದ ಲೌಂಜ್ ಪ್ರವೇಶ*
ಅರ್ಜಿ ಸಲ್ಲಿಸಲು ಸ್ಕ್ಯಾನ್
ಮಾಡಿ ಅಥವಾ ಭೇಟಿ ನೀಡಿ:
sbicard.com/pulse
ಪಾಲುದಾರರು
FITPASS®
netmeds.com India Ki Pharmacy
NOISE
VISA
*ನಿಯಮಗಳು ಮತ್ತು ಷರತ್ತುಗಳು ಅನ್ವಯಿಸುತ್ತವೆ. ಸೇರ್ಪಡೆ ಶುಲ್ಕ ಪಾವತಿಯ ಮೇಲೆ ಉಚಿತ ಸ್ಮಾರ್ಟ್‌ವಾಚ್ ಪಡೆಯಿರಿ.